
ಬುಧವಾರ, ಮಾರ್ಚ್ 26, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 85 | ಪುಟ 16

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ–ಅಗಲ
ಬಂದರು: ಬಿದ್ದಿದೆ ಹೋರಾಟಕ್ಕೇ ಲಂಗರು!

ರಜತ್, ವಿನಯ್‌ಗೆ ನ್ಯಾಯಾಂಗ ಬಂಧನ 3C

‘ಕುನಾಲ್ ಮಾತು ಸುಪಾರಿಗೆ ಸಮ’ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,017	23,668	₹92,540 (ಬೆಂಗಳೂರು)	₹1.04ಲಕ್ಷ (ಬೆಂಗಳೂರು)	85.72

ತನಿಖೆಗೆ ಆಗ್ರಹಿಸಿ ಗೃಹ ಸಚಿವರಿಗೆ ಪತ್ರ ಸಲ್ಲಿಕೆ ● ಮುಖ್ಯಮಂತ್ರಿ ಸಿದ್ದರಾಮಯ್ಯ–ಪರಮೇಶ್ವರ ಚರ್ಚೆ

ಮಧುಬಲೆ: ಸಚಿವ ರಾಜಣ್ಣ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮನ್ನು ‘ಮಧುಬಲೆ’ಗೆ (ಹನಿಟ್ರ್ಯಾಪ್) ಕೆಡವಲು ಯತ್ನಿಸಿದ ಪ್ರಕರಣದ ಕುರಿತು ಉನ್ನತಮಟ್ಟದ ತನಿಖೆ ನಡೆಸುವಂತೆ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ಪತ್ರವೊಂದನ್ನು ಸಲ್ಲಿಸಿದ್ದಾರೆ. ಆ ಬೆನ್ನಲ್ಲೇ, ಗೃಹ ಸಚಿವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ.



ಕೆ.ಎನ್‌.ರಾಜಣ್ಣ

ತುಮಕೂರಿನಲ್ಲೇ ಮೂರು ಪುಟಗಳ ಪತ್ರ ಸಿದ್ಧಪಡಿಸಿಕೊಂಡು ಮಂಗಳವಾರ ಮಧ್ಯಾಹ್ನ ಪತ್ರಿಕಾಗೋಷ್ಠಿ ನಡೆಸಿದ್ದ ರಾಜಣ್ಣ, ಬೆಂಗಳೂರಿನತ್ತ ಹೊರಟಿದ್ದರು. ಮಾರ್ಗಮಧ್ಯೆ ನೆಲಮಂಗಲದ ಸಮೀಪದ ಟಿ. ಬೇಗೂರಿನಲ್ಲಿ ಪರಮೇಶ್ವರ ಅವರು ಇರುವ ಮಾಹಿತಿ ತಿಳಿದು ಅಲ್ಲಿಗೆ ಹೋದರು. ಗೃಹ ಸಚಿವರ ಸೂಚನೆಯಂತೆ ಸಂಜೆ 5 ಗಂಟೆ ಸುಮಾರಿಗೆ ಸದಾಶಿವನಗರದ ಅವರ ಮನೆಯಲ್ಲಿ ಭೇಟಿಮಾಡಿ, ಪತ್ರ ಸಲ್ಲಿಸಿದರು.

ತಮ್ಮನ್ನು ‘ಹನಿಟ್ರ್ಯಾಪ್’ಗೆ ಬೀಳಿಸಲು ಗುಂಪೊಂದು ಹಲವು ಬಾರಿ ಪ್ರಯತ್ನ ನಡೆಸಿರುವ ಕುರಿತು ಸಹಕಾರ ಸಚಿವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಬೆಂಗಳೂರು ಮತ್ತು ತುಮಕೂರಿನಲ್ಲಿ ‘ಹನಿಟ್ರ್ಯಾಪ್’ ಜಾಲದ ಕೆಲವರು ತಮ್ಮನ್ನು ಭೇಟಿ ಮಾಡಿರುವ ಬಗ್ಗೆ ವಿವರಗಳನ್ನು ಹಂಚಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಜಣ್ಣ ಅವರು ತನಿಖೆಗೆ ಆಗ್ರಹಿಸಿ ಪತ್ರ ನೀಡಿದ ಬಳಿಕ ಮುಖ್ಯಮಂತ್ರಿಯವರ ನಿವಾಸಕ್ಕೆ ದೌಡಾಯಿಸಿದ ಪರಮೇಶ್ವರ ಅವರು ಸಿದ್ದರಾಮಯ್ಯ ಅವರನ್ನು ಭೇಟಿಮಾಡಿದರು. ಅರ್ಧ ಗಂಟೆ ಇಬ್ಬರೇ ರಹಸ್ಯ ಚರ್ಚೆ ನಡೆಸಿದರು. ಮಾತುಕತೆ ಬಳಿಕ ಯಾವುದೇ ಮಾಹಿತಿ ಬಹಿರಂಗಪಡಿಸದೇ ಪರಮೇಶ್ವರ ಅವರು ನಿರ್ಗಮಿಸಿದರು.

9ನೇ ಪುಟ ನೋಡಿ

‘ವಕೀಲರ ಸೋಗಿನಲ್ಲಿ ಬಂದಿದ್ದರು’

ತುಮಕೂರು: ‘ನನ್ನನ್ನು ಹನಿಟ್ರ್ಯಾಪ್ ಮಾಡಲು ಅಪರಿಚಿತರು ವಕೀಲರ ಸೋಗಿನಲ್ಲಿ ಬಂದಿದ್ದರು. ಎರಡು ಬಾರಿ ಮನೆಗೆ ಬಂದು ಭೇಟಿ ಮಾಡಿದ್ದರು’ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಬಹಿರಂಗಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಎರಡು ಬಾರಿ ಮನೆಗೆ ಬಂದಾಗಲೂ ಅವರ ಜತೆಗೆ ಒಬ್ಬ ಹುಡುಗ ಇದ್ದ. ಆದರೆ ಬೇರೆ ಬೇರೆ ಹುಡುಗಿಯರು ಬಂದಿದ್ದರು. ಜೀನ್ಸ್ ಪ್ಯಾಂಟ್, ಬ್ಲೂ ಟಾಪ್ ಹಾಕಿಕೊಂಡಿದ್ದರು. ಹೈಕೋರ್ಟ್ ವಕೀಲರು ಎಂದು ಪರಿಚಯಿಸಿಕೊಂಡಿದ್ದರು. ‘ಪರ್ಸನಲ್ಲಾಗಿ ನಿಮ್ಮ ಜತೆಗೆ ಕುಳಿತು ಬಹಳ ಮಾತನಾಡಬೇಕಿದೆ’ ಎಂದು ಹೇಳಿಕೊಂಡಿದ್ದರು’ ಎಂದು ವಿವರಿಸಿದರು.

‘ಹನಿಟ್ರ್ಯಾಪ್‌ಗೆ ಯತ್ನಿಸಿರುವುದಕ್ಕೆ ಸಂಬಂಧಿಸಿದಂತೆ ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ. ಬೆಂಗಳೂರಿನ ಸರ್ಕಾರಿ ಬಂಗಲೆಯಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳು ಇಲ್ಲ. ಹಾಗಾಗಿ ಯಾವುದೇ ವಿಡಿಯೊ ದಾಖಲಾಗಿಲ್ಲ. ಮನೆಗೆ ಯಾರು ಬಂದಿದ್ದಾರೆ ಎಂದು ಪತ್ತೆಮಾಡಲು ಪ್ರಯತ್ನಿಸಿದೆ. ಯಾವುದೇ ಮಾಹಿತಿ ಸಿಕ್ಕಿಲ್ಲ. ಅವರ ಫೋಟೊ ತೋರಿಸಿದರೆ ಗುರುತು ಹಿಡಿಯುತ್ತೇನೆ’ ಎಂದು ಹೇಳಿದರು.

‘ನ್ಯಾಯಾಧೀಶರನ್ನು ಹನಿಟ್ರ್ಯಾಪ್ ಮಾಡಲಾಗಿದೆ ಎಂದು ನಾನು ಹೇಳಿಲ್ಲ. ಎಲ್ಲ ಪಕ್ಷದ ರಾಜಕಾರಣಿಗಳ ಮೇಲೆ ಕಳಂಕ ತರಲು ಈ ರೀತಿ ಮಾಡಿದ್ದಾರೆ ಎಂದಷ್ಟೇ ಹೇಳಿದ್ದೇನೆ’ ಎಂದರು.

‘ಸಿ.ಎಂ, ಗೃಹ ಸಚಿವರಿಂದ ನ್ಯಾಯ’

‘ಗೃಹ ಸಚಿವರು ಬಹಳ ಹಿರಿಯರು. ಅವರಿಗೆ ಪಕ್ಷ ಮುನ್ನಡೆಸಿ, ಜೊತೆಗೆ ಸರ್ಕಾರದಲ್ಲೂ ಅನುಭವವಿದೆ. ಅವರು ಹಾಗೂ ಮುಖ್ಯಮಂತ್ರಿಯವರು ಎಲ್ಲ ರೀತಿಯ ತನಿಖೆ ನಡೆಸುವುದಾಗಿ ಸದನದಲ್ಲಿ ಹೇಳಿದ್ದಾರೆ. ರಾಜಣ್ಣ ಅವರಿಗೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಯಾವ ರೀತಿ ನ್ಯಾಯ ಒದಗಿಸಬೇಕೋ ಅದನ್ನು ಒದಗಿಸುತ್ತಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಹೈಕಮಾಂಡ್‌ಗೆ ಜಾರಕಿಹೊಳಿ ದೂರು

ನವದೆಹಲಿ: ‘ಸಹಕಾರ ಸಚಿವ ಕೆ.ಎನ್. ರಾಜಣ್ಣ ಮತ್ತು ಅವರ ಮಗ ಕೆ. ರಾಜೇಂದ್ರ ಅವರನ್ನು ‘ಮಧುಬಲೆ’ಗೆ ಕೆಡವಲು ಯತ್ನಿಸಿದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಇದರಲ್ಲಿ ಪಕ್ಷದ ನಾಯಕರೇ ಭಾಗಿಯಾಗಿರುವ ಅನುಮಾನವಿದೆ’ ಎಂದು ಆರೋಪಿಸಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರಿಗೆ ದೂರು ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವೇಣುಗೋಪಾಲ್ ಅವರನ್ನು ಸೋಮವಾರ ರಾತ್ರಿ ಇಲ್ಲಿ ಭೇಟಿ ಮಾಡಿದ ಅವರು, ‘ಈ ಪ್ರಕರಣದಿಂದ ಪಕ್ಷ ಮುಜುಗರಕ್ಕೆ ಒಳಗಾಗಿದೆ. ಷಡ್ಯಂತ್ರ ನಡೆಸಿ ದಲಿತ ನಾಯಕರನ್ನು ತುಳಿಯುವ ಕೆಲಸ ಆಗುತ್ತಿದೆ’ ಎಂದು ದೂರಿದ್ದಾರೆ ಎನ್ನಲಾಗಿದೆ.

ಮಂಗಳವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಜಾರಕಿಹೊಳಿ, ‘ವೇಣುಗೋಪಾಲ್ ಅವರನ್ನು ಭೇಟಿ ಮಾಡಿದ್ದೆ. ಹನಿಟ್ರ್ಯಾಪ್ ವಿಷಯದ ಬಗ್ಗೆ ಚರ್ಚಿಸಿಲ್ಲ. ಇದು ರಾಜ್ಯಕ್ಕೆ ಸಂಬಂಧಿಸಿದ ವಿಷಯ. ರಾಜ್ಯದ ಪೊಲೀಸರು ತನಿಖೆ ನಡೆಸಲಿದ್ದಾರೆ. ಈ ವಿಷಯದ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ಸಂದರ್ಭದಲ್ಲಿ ಚರ್ಚೆ ಆಗಿರಬಹುದು’ ಎಂದರು. ಜಾರಕಿಹೊಳಿ ಅವರು ಖರ್ಗೆ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಬುಧವಾರ ಭೇಟಿ ಮಾಡಲಿದ್ದಾರೆ.



ಮಿಂದೆದ್ದ ಹುಲಿ

ನಾಗರಹೊಳೆ ಅಭಯಾರಣ್ಯದ ದಮ್ಮನಕಟ್ಟೆ ಅರಣ್ಯ ವ್ಯಾಪ್ತಿಯಲ್ಲಿ ಹುಲಿಯೊಂದು ನೀರಿನಲ್ಲಿ ಮುಳುಗೆದ್ದ ಬಳಿಕ ನೋಟ ಬೀರಿದ ಪರಿ ಚಿತ್ರ: ಅನೂಪ್ ರಾಘ.ಟಿ.

1,181 ಟೋಲ್‌ಗಳಿಂದ ₹ 64,809 ಕೋಟಿ ಸಂಗ್ರಹ

ಟೋಲ್: ಏ.1 ರಿಂದ ಶೇ 5 ಏರಿಕೆ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಹೆದ್ದಾರಿಗಳಲ್ಲಿನ ಟೋಲ್ ಪ್ಲಾಜಾಗಳಲ್ಲಿ ಆಕರಿಸಲಾಗುವ ಸುಂಕವು ಏಪ್ರಿಲ್ 1ರಿಂದ ಶೇ 5ರಷ್ಟು ಹೆಚ್ಚಳವಾಗಲಿದೆ.

ರಾಷ್ಟ್ರೀಯ ಹೆದ್ದಾರಿಗಳ ಮೇಲಿನ ಸುಂಕಗಳಿಗೆ ಕೇಂದ್ರ ಸರ್ಕಾರ ಶೀಘ್ರವೇ ಹೊಸ ನೀತಿ ಪ್ರಕಟಿಸಲಿದೆ. ಇದರಲ್ಲಿ ಗ್ರಾಹಕರಿಗೆ ಕೆಲವು ರಿಯಾಯಿತಿ ದೊರೆಯಲಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದರೂ ಅದಿನ್ನೂ ಜಾರಿಯಾಗಿಲ್ಲ. 2008ರ ನೀತಿಯೇ ಅನ್ವಯವಾಗಲಿದೆ.

323 ರಾಜ್ಯ ಹೆದ್ದಾರಿ ಟೋಲ್ ಪ್ಲಾಜಾ ಸೇರಿ ದೇಶದಲ್ಲಿ ಒಟ್ಟು 1,181 ಇವೆ. 2023-24ರಲ್ಲಿ ₹42,196 ಕೋಟಿ ಟೋಲ್ ಶುಲ್ಕ ಸಂಗ್ರಹವಾಗಿದೆ.

10ನೇ ಪುಟ ನೋಡಿ

ವಾಣಿಜ್ಯ ವಾಹನಗಳೂ ದುಬಾರಿ

ವಾಹನ ತಯಾರಿಕಾ ವಸ್ತುಗಳಿಗೆ ಕೇಂದ್ರ ಸರ್ಕಾರ ತೆರಿಗೆ ಹೆಚ್ಚಳ ಮಾಡಿರುವುದರಿಂದ ಫೆಡರೇಷನ್ ಆಫ್ ಆಟೊಮೊಬೈಲ್ ಡೀಲರ್ಸ್ ಅಸೋಸಿಯೇಶನ್ (ಫಾಡ) ವಾಹನಗಳ ಬೆಲೆಯನ್ನು ಏ.1ರಿಂದ ಹೆಚ್ಚಳ ಮಾಡಲು ನಿರ್ಧರಿಸಿವೆ.

ಮಾರುತಿ ಸುಜುಕಿ ಕಂಪನಿಯು ಶೇ 4, ಕಿಯಾ ಇಂಡಿಯಾ ಶೇ 3, ಟಾಟಾ ಮೋಟರ್ಸ್ ಶೇ 2ರಷ್ಟು ಹೆಚ್ಚಳ ಮಾಡುವುದಾಗಿ ಘೋಷಿಸಿವೆ. ಹುಂಡೈ ₹25 ಸಾವಿರ ವರೆಗೆ ಹೆಚ್ಚಳ ಮಾಡುವುದಾಗಿ ಹೇಳಿದೆ. ಹೋಂಡಾ, ಮಹೀಂದ್ರ, ಎಂ.ಜಿ ಮೋಟಾರ್ ಇಂಡಿಯಾ, ಸ್ಕೋಡಾ, ಮರ್ಸಿಡೀಸ್ ಬೆಂಜ್ ಮತ್ತು ಬಿಎಂಡಬ್ಲ್ಯು ಕಂಪನಿಗಳು ಕೂಡ ಕಾರುಗಳ ಬೆಲೆ ಏರಿಸುವುದಾಗಿ ಹೇಳಿವೆ.

ಫಿಟ್‌ನೆಸ್ ಸರ್ಟಿಫಿಕೇಟ್ ಶುಲ್ಕ ಹೆಚ್ಚಳ

ಹಳೆಯ ವಾಹನಗಳಿಗೆ ಸಾಮರ್ಥ್ಯ ಅರ್ಹತಾ ಪತ್ರ (ಫಿಟ್‌ನೆಸ್ ಸರ್ಟಿಫಿಕೇಟ್) ಶುಲ್ಕವನ್ನು ಹೆಚ್ಚಿಸುವುದಾಗಿ ಕೇಂದ್ರ ಹೆದ್ದಾರಿ ಸಚಿವಾಲಯ ಕರಡು ಹೊರಡಿಸಿದೆ. ಇದರಿಂದ 8 ವರ್ಷ, 15 ವರ್ಷ ಮತ್ತು 20 ವರ್ಷಗಳಾಗಿರುವ ವಾಹನಗಳಿಗೆ ಎಫ್‌ಸಿ ದುಬಾರಿಯಾಗಲಿದೆ. ರಾಜ್ಯದಲ್ಲಿ ₹ 10 ಲಕ್ಷ ಮೀರಿದ ಮೌಲ್ಯದ ವಾಣಿಜ್ಯ ವಾಹನಗಳಿಗೆ ಮಾತ್ರ ಇದ್ದ ಜೀವಿತಾವಧಿ ತೆರಿಗೆಯನ್ನು ಎಲ್ಲ ವಾಣಿಜ್ಯ ವಾಹನಗಳಿಗೂ ಅನ್ವಯಿಸಿ ರಾಜ್ಯ ಸರ್ಕಾರ ಅನುಷ್ಠಾನ ಮಾಡಿದೆ.

ಹೇಳಿಕೆ ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ: ಡಿಕೆಶಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಸಂವಿಧಾನ ಬದಲಾವಣೆ ಮಾಡುತ್ತೇನೆ ಎಂಬುದಾಗಿ ನಾನು ಹೇಳಿರುವೆ ಎಂದು ಸಾಬೀತುಪಡಿಸಿದರೆ ಆ ಕ್ಷಣವೇ ರಾಜಕೀಯ ನಿವೃತ್ತಿ ತೆಗೆದುಕೊಳ್ಳುತ್ತೇನೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

ತಮ್ಮ ಹೇಳಿಕೆಯನ್ನು ವಿರೋಧಿಸಿ ಬಿಜೆಪಿಯವರು ಪ್ರತಿಭಟನೆ ನಡೆಸುತ್ತಿರುವ ಕುರಿತು ಮಾಧ್ಯಮಗಳಿಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, ‘ಆ ರೀತಿ ಮಾತನಾಡಲು ನನಗೆ ತಲೆ ಕೆಟ್ಟಿಲ್ಲ. ಸುದ್ದಿವಾಹಿನಿಯ ಸಂದರ್ಶನದಲ್ಲಿ ನಾನು ಸತ್ಯ ಮಾತನಾಡಿದ್ದೇನೆ. ನನ್ನ ರಾಜಕೀಯ ನಿಲುವನ್ನು ಸಹಿಸಲು ಬಿಜೆಪಿಯವರಿಗೆ ಆಗುತ್ತಿಲ್ಲ. ಅದಕ್ಕಾಗಿ ಈ ರೀತಿ ಮಾಡುತ್ತಿದ್ದಾರೆ’ ಎಂದರು.

‘ನಾನು ಏನು ಹೇಳಿದ್ದೇನೆ ಎಂಬುದರ ಕುರಿತು ನಮ್ಮ ಪಕ್ಷದ ನಾಯಕರೂ ವಿವರ ಪಡೆದುಕೊಂಡಿದ್ದಾರೆ. ಸಂವಿಧಾನ ಬದಲಿಸುತ್ತೇವೆ ಎಂದು ನಾನು ಎಲ್ಲಿ ಹೇಳಿದ್ದೇನೆ? ನನ್ನ ಹೇಳಿಕೆಯನ್ನು ಮತ್ತೊಮ್ಮೆ ಪರಿಶೀಲಿಸಿ, ನೋಡಲಿ. ತಮ್ಮ ಹುಳುಕುಗಳನ್ನು ಮುಚ್ಚಿಕೊಳ್ಳಲು ಬಿಜೆಪಿಯವರು ಈ ವಿಷಯ ಪ್ರಸ್ತಾಪಿಸುತ್ತಿದ್ದಾರೆ’ ಎಂದು ದೂರಿದರು.

‘ನನ್ನ ಹೇಳಿಕೆ ಕುರಿತು ಪಕ್ಷದ ವರಿಷ್ಠರು ವಿವರ ಕೇಳಿದ್ದರು. ಸಂದರ್ಶನದ ವಿವರ ಪರಿಶೀಲಿಸುವಂತೆ ಕೇಳಿಕೊಂಡಿದ್ದೆ. ಅವರು ಅದನ್ನು ವೀಕ್ಷಿಸಿದ್ದಾರೆ. ನಾನು ಆ ರೀತಿಯ ಹೇಳಿಕೆ ನೀಡಿಲ್ಲ ಎಂಬುದು ನಮ್ಮ ಪಕ್ಷದ ನಾಯಕರಿಗೆ ಮನವರಿಕೆಯಾಗಿದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಎಸ್‌ಟಿಎಸ್, ಹೆಬ್ಬಾರ್, ಕಟ್ಟಾ, ಹರೀಶ್‌ಗೆ ವರಿಷ್ಠರ ಎಚ್ಚರಿಕೆ

ಐವರಿಗೆ ಬಿಜೆಪಿ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಆಂತರಿಕ ಭಿನ್ನಮತಕ್ಕೆ ಕಡಿವಾಣ ಹಾಕುವ ಕಾರ್ಯಕ್ಕೆ ವರಿಷ್ಠರು ಕೈ ಹಾಕಿದ್ದಾರೆ. ಪಕ್ಷದ ಆಂತರಿಕ ವಿಷಯಗಳ ಕುರಿತು ಹೇಳಿಕೆ ನೀಡಿದ್ದ ಬಿಜೆಪಿ ರಾಜ್ಯ ಘಟಕ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಬಣದ ಎಂ.ಪಿ. ರೇಣುಕಾಚಾರ್ಯ, ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣದ ಬಿ.ಪಿ. ಹರೀಶ್ ಅವರಿಗೆ ಪಕ್ಷದ ಕೇಂದ್ರ ಶಿಸ್ತು ಸಮಿತಿ ಷೋಕಾಸ್ ನೋಟಿಸ್ ನೀಡಿದೆ.



ರೇಣುಕಾಚಾರ್ಯ




ಸುಬ್ರಹ್ಮಣ್ಯ ನಾಯ್ಡು



ಬಿ.ಪಿ.ಹರೀಶ್



ಸೋಮಶೇಖರ್



ಶಿವರಾಮ ಹೆಬ್ಬಾರ್

ಜತೆಗೆ, ಕಳೆದ ಒಂದೂವರೆ ವರ್ಷಗಳಿಂದ ಕಾಂಗ್ರೆಸ್ ಜತೆಗೆ ಸುಮಧುರ ಸಂಬಂಧ ಹೊಂದಿರುವ ಭಿನ್ನಮತೀಯ ಶಾಸಕರಾದ ಎಸ್.ಟಿ. ಸೋಮಶೇಖರ್ ಹಾಗೂ ಶಿವರಾಮ್ ಹೆಬ್ಬಾರ್ ಅವರಿಗೂ ನೋಟಿಸ್ ನೀಡಲಾಗಿದೆ. ಐವರು ನಾಯಕರಿಗೆ ನೀಡಿರುವ ಪ್ರತ್ಯೇಕ ನೋಟಿಸ್‌ಗಳಲ್ಲಿ, ‘ಪಕ್ಷ ನಿಮ್ಮ ವಿರುದ್ಧ ಯಾಕೆ ಶಿಸ್ತುಕ್ರಮ ಕೈಗೊಳ್ಳಬಾರದು ಎಂಬ ಬಗ್ಗೆ 72 ಗಂಟೆಗಳೊಳಗೆ ವಿವರಣೆ ನೀಡಬೇಕು. ಇಲ್ಲದಿದ್ದರೆ ಕಠಿಣ ನಿರ್ಧಾರ ತೆಗೆದುಕೊಳ್ಳಲಿದೆ’ ಎಂದು ಕೇಂದ್ರ ಶಿಸ್ತು ಸಮಿತಿಯ ಸದಸ್ಯ ಕಾರ್ಯದರ್ಶಿ ಓಂ ಪಾಠಕ್ ಅವರು ನೋಟಿಸ್‌ನಲ್ಲಿ ಎಚ್ಚರಿಸಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಹಾಗೂ ವಿಜಯೇಂದ್ರ ವಿರುದ್ಧ ನಿರಂತರ ಟೀಕಾಪ್ರಹಾರ ನಡೆಸಿದ ಕಾರಣಕ್ಕೆ ಯತ್ನಾಳ ಅವರಿಗೆ ಶಿಸ್ತು ಸಮಿತಿಯು ಕಳೆದ ತಿಂಗಳು ಷೋಕಾಸ್ ನೋಟಿಸ್ ನೀಡಿತ್ತು. ಬಳಿಕ ಯತ್ನಾಳ ವಿವರಣೆ ನೀಡಿದ್ದರು. ಇದೀಗ, ಎರಡೂ ಬಣಗಳ ನಾಯಕರ ವಿರುದ್ಧ ವರಿಷ್ಠರು ಚಾಟಿ ಬೀಸಿದ್ದಾರೆ.

ಆಸ್ತಿಪಟ್ಟಿ ಸಲ್ಲಿಸಲು ಶಾಸಕರಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರು 2024–25 ನೇ ಸಾಲಿಗೆ ಸಂಬಂಧಿಸಿದ ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಆಸ್ತಿ ಮತ್ತು ಋಣಭಾರಗಳ ಪಟ್ಟಿಯನ್ನು ಜೂನ್ 30 ರೊಳಗೆ ಲೋಕಾಯುಕ್ತರಿಗೆ ಸಲ್ಲಿಸಬೇಕು ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಶಾಸಕರು ನಿಗದಿತ ನಮೂನೆಯಲ್ಲಿ ಪ್ರತಿ ಪುಟ ಮತ್ತುಲಗತ್ತುಗಳಿಗೂ ಸಹಿ ಮಾಡಿ ಪುಟ ಸಂಖ್ಯೆಯೊಂದಿಗೆ ನೇರವಾಗಿ ಲೋಕಾ ಯುಕ್ತರಿಗೆ ಪಟ್ಟಿ ಸಲ್ಲಿಸಬೇಕು ಎಂದಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಬ್ಯಾಂಕ್‌ಗಳಿಂದ ಸರ್ಕಾರಿ ನೌಕರರಿಗೆ ಆಕರ್ಷಕ ‘ವೇತನ ಪ್ಯಾಕೇಜ್’

₹1 ಕೋಟಿ ವಿಮೆ, ಒ.ಡಿ ಸೌಲಭ್ಯ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ನೌಕರರು ಯಾವುದೇ ಕಂತು ಪಾವತಿಸದಿದ್ದರೂ ಇನ್ನು ಮುಂದೆ ₹1 ಕೋಟಿವರೆಗೆ ಅಪಘಾತ ವಿಮಾ ಪರಿಹಾರ, ವೇತನ ವಿಳಂಬವಾದರೆ ಓವರ್ ಡ್ರಾಫ್ಟ್ ಸೌಲಭ್ಯ ಪಡೆಯಲಿದ್ದಾರೆ.

ವೇತನ ಖಾತೆ ಹೊಂದಿರುವ ಸರ್ಕಾರಿ ನೌಕರರಿಗೆ ರಾಷ್ಟ್ರೀಕೃತ ಹಾಗೂ ರಾಷ್ಟ್ರಮಟ್ಟದ ಖಾಸಗಿ ಬ್ಯಾಂಕ್‌ಗಳು ವೇತನ ಸೌಲಭ್ಯ ಪ್ಯಾಕೇಜ್ ಗಳನ್ನು ಒದಗಿಸುವುದನ್ನು ಕಡ್ಡಾಯಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಸಲ್ಲಿಸಿದ್ದ ಪ್ರಸ್ತಾವಕ್ಕೆ ಸಂಪುಟ ಸಭೆ ಈಚೆಗೆ ಅನುಮೋದನೆ ನೀಡಿತ್ತು.



ನಂತರ ‘ನೌಕರರು ಮತ್ತು ಅವರ ಅವಲಂಬಿತ ಸದಸ್ಯರ ಹಿತಾಸಕ್ತಿ ರಕ್ಷಣೆ’ ಕುರಿತು ಆರ್ಥಿಕ ಇಲಾಖೆ ಆದೇಶ ಹೊರಡಿಸಿತ್ತು. ಆದೇಶ ಹೊರಬಿದ್ದ ಬೆನ್ನಲ್ಲೇ ಹಲವು ಬ್ಯಾಂಕ್‌ಗಳು ಆಕರ್ಷಕ ವೇತನ ಪ್ಯಾಕೇಜ್ ಸೌಲಭ್ಯಗಳನ್ನು ಘೋಷಿಸಿವೆ. ನೌಕರರು ತಾವು ಪ್ರತಿ ತಿಂಗಳು ವೇತನ ಪಡೆಯುವ ಬ್ಯಾಂಕ್‌ಗಳ ಮೂಲಕ ಅಪಘಾತ ವಿಮಾ ಸೌಲಭ್ಯ ಸೇರಿದಂತೆ ವಿವಿಧ ವೇತನ ಪ್ಯಾಕೇಜ್ ಸೌಲಭ್ಯ ಪಡೆಯಬಹುದು. ಈಗ ವೇತನ ಖಾತೆ ಹೊಂದಿರುವ ಬ್ಯಾಂಕ್‌ಗಳಲ್ಲಿ ಇರುವ ಸೌಲಭ್ಯಗಳು ತೃಪ್ತಿಕರವಾಗಿರದಿದ್ದರೆ ಯಾವ ಬ್ಯಾಂಕ್‌ಗಳು ಹೆಚ್ಚಿನ ಆಕರ್ಷಕ ಪ್ಯಾಕೇಜ್‌ಗಳನ್ನು ನೀಡುತ್ತವೆಯೋ ಅಂತಹ ಬ್ಯಾಂಕ್‌ಗಳಿಗೆ ತಮ್ಮ ವೇತನ ಖಾತೆಗಳನ್ನು ವರ್ಗಾವಣೆ ಮಾಡಿಕೊಳ್ಳಬಹುದು.

ಹೊಸದಾಗಿ ವೇತನ ಖಾತೆ ತೆರೆಯುವ, ಖಾತೆ ವರ್ಗಾವಣೆ ಮಾಡಿಕೊಳ್ಳುವ ನೌಕರರು ಆ ಬ್ಯಾಂಕ್‌ಗಳು ನೀಡುವ ವೇತನ ಪ್ಯಾಕೇಜ್ ಸೌಲಭ್ಯ ಪಡೆಯಲು ಕನಿಷ್ಠ ಮೂರು ತಿಂಗಳು ಕಾಯಬೇಕು. ಈಗಾಗಲೇ ವೇತನ ಖಾತೆ ಇರುವ ಬ್ಯಾಂಕ್‌ಗಳಲ್ಲಿ ತಕ್ಷಣವೇ ಸೌಲಭ್ಯ ದೊರಕಲಿದೆ.

ವೇತನ ವಿಳಂಬಕ್ಕೆ ಸಹಾಯಹಸ್ತ: ಕೆಲವು ಇಲಾಖೆಗಳ ನೌಕರರಿಗೆ ತಿಂಗಳ ವೇತನದಲ್ಲಿ ವ್ಯತ್ಯಯವಾಗುತ್ತದೆ. ವರ್ಗಾವಣೆ, ಅನುದಾನ ಬಿಡುಗಡೆ, ಆದಾಯ ತೆರಿಗೆ ಕಟಾವಾಗುವ ಹಣಕಾಸು ವರ್ಷದ ಅಂತ್ಯದ ತಿಂಗಳು ಸೇರಿದಂತೆ ಹಲವು ಬಾರಿ ವೇತನ ವಿಳಂಬವಾಗುತ್ತದೆ. ಇಂತಹ ಸಮಯದಲ್ಲಿ ಮನೆ ಬಾಡಿಗೆ, ದಿನಸಿ ಮತ್ತಿತರ ಖರ್ಚುಗಳನ್ನು ನಿಭಾಯಿಸಲು ಪರದಾಟ ಸಾಮಾನ್ಯ. ಈ ಸಮಸ್ಯೆಗೆ ಬ್ಯಾಂಕ್‌ಗಳು ಪರಿಹಾರ ದೊರಕಿಸಿದ್ದು, ನೌಕರರು ತಾವು ಪಡೆಯುತ್ತಿರುವ ತಿಂಗಳ ನಿವ್ವಳ ವೇತನದ ಮೂರುಪಟ್ಟು ಮೊತ್ತವನ್ನು ಓವರ್ ಡ್ರಾಫ್ಟ್ ಮೂಲಕ ಪಡೆಯಬಹುದು.

ಎಲ್ಲ ನೌಕರರೂ 3 ತಿಂಗಳ ಒಳಗೆ ವೇತನ ಪ್ಯಾಕೇಜ್ ಖಾತೆ ತೆರೆಯುವುದನ್ನು ಕಡ್ಡಾಯ ಮಾಡಲಾಗಿದೆ. ಇಲ್ಲದಿದ್ದರೆ ಆಯಾ ಇಲಾಖೆಗಳ ಮುಖ್ಯಸ್ಥರೇ ಹೊಣೆ

ಆರ್.ವಿಶಾಲ್
ಕಾರ್ಯದರ್ಶಿ ಆರ್ಥಿಕ ಇಲಾಖೆ

ವೇತನ ಪ್ಯಾಕೇಜ್ ಕಡ್ಡಾಯಗೊಳಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿತ್ತು. ಈ ಆದೇಶದಿಂದ ನೌಕರರು, ನಿವೃತ್ತರೂ ಸೇರಿದಂತೆ 11 ಲಕ್ಷ ಕುಟುಂಬಗಳಿಗೆ ವರವಾಗಲಿದೆ

ಸಿ.ಎಸ್. ಷಡಾಕ್ಷರಿ,
ರಾಜ್ಯಾಧ್ಯಕ್ಷ, ಸರ್ಕಾರಿ ನೌಕರರ ಸಂಘ

ವೇತನ ಶ್ರೇಣಿಯೇ ಮಾನದಂಡ

ವಿವಿಧ ಬ್ಯಾಂಕ್‌ಗಳು ಘೋಷಿಸಿರುವ ಪ್ಯಾಕೇಜ್‌ಗಳು ಸರ್ಕಾರಿ ನೌಕರರು ಪಡೆಯುವ ವೇತನ ಶ್ರೇಣಿ ಅವಲಂಭಿಸಿವೆ. ₹1 ಲಕ್ಷಕ್ಕಿಂತ ಅಧಿಕ ವೇತನ ಪಡೆಯುವವರಿಗೆ ₹1 ಕೋಟಿ ಅಪಘಾತ ವಿಮಾ ರಕ್ಷಣೆ ದೊರಕಲಿದೆ. ರಸ್ತೆ ಅಪಘಾತ, ವಿಮಾನ ಅಪಘಾತದ ಸಾವು, ಶಾಶ್ವತ ಅಥವಾ ಭಾಗಶಃ ಅಂಗವೈಕಲ್ಯಕ್ಕೆ ಒಳಗಾದರೂ ಅಷ್ಟೇ ಮೊತ್ತದ ವಿಮಾ ಸೌಲಭ್ಯ ನೀಡಲಾಗುತ್ತದೆ. ₹50 ಸಾವಿರದವರೆಗೆ ವೇತನ ಪಡೆಯುವವರಿಗೆ ₹50 ಲಕ್ಷ ಸಿಗಲಿದೆ. ಆಂಬುಲೆನ್ಸ್ ಸೇವೆಗೆ ₹15 ಸಾವಿರ, ಮಕ್ಕಳ ಉನ್ನತ ಶಿಕ್ಷಣಕ್ಕೆ ₹5 ಲಕ್ಷ, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರತ್ಯೇಕ ₹5 ಲಕ್ಷ ನೆರವು ದೊರಕಲಿದೆ.

ಏನೇನು ಸೌಲಭ್ಯ?

- ಶೂನ್ಯ ಕನಿಷ್ಠ ಶಿಲ್ಕು
- ಸಾಲದ ಮೇಲೆ ಪ್ರಕ್ರಿಯಾ ಶುಲ್ಕವಿಲ್ಲ
- ಡೆಬಿಟ್ ಕಾರ್ಡ್‌ಗೆ ವಾರ್ಷಿಕ ನಿರ್ವಹಣಾ ಶುಲ್ಕ ಇಲ್ಲ
- ವರ್ಷಕ್ಕೆ 200 ಚೆಕ್‌ಲೀಫ್ ಉಚಿತ
- ಕ್ರೆಡಿಟ್ ಕಾರ್ಡ್ ಉಚಿತ ವಿತರಣೆ
- ಪ್ರಯಾಣದ ವೇಳೆ ಸಾಮಗ್ರಿಗಳಿಗೆ ರಕ್ಷಣೆ
- ಲಾಕರ್ ಬಾಡಿಗೆಯಲ್ಲಿ ರಿಯಾಯಿತಿ
- ದಂಪತಿ, ಮಕ್ಕಳಿಗೂ ಶೂನ್ಯ ಶಿಲ್ಕು ಸೌಲಭ್ಯ
- ಡಿಮ್ಯಾಟ್‌ನಲ್ಲಿ ಉಚಿತವಾಗಿ ಖಾತೆ
- ಹಣ ವರ್ಗಾವಣೆಯ ಶುಲ್ಕ ಮನ್ನಾ

ಬಂಜಾರ ಅಕಾಡೆಮಿ ಪ್ರಶಸ್ತಿ ಪ್ರದಾನ ನಾಳೆ

ಬೆಂಗಳೂರು: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಯು ರಾಜ್ಯ ಮಟ್ಟದ ಬಂಜಾರ ಸಾಹಿತ್ಯ ಹಾಗೂ ಸಾಂಸ್ಕೃತಿಕ ಉತ್ಸವ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭವನ್ನು ಇದೇ 27ರಂದು ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ, 'ಗುರುವಾರ ಮಧ್ಯಾಹ್ನ 2.30ರಿಂದ ವಿವಿಧ ಬಂಜಾರ ಕಲಾ ತಂಡಗಳ ಮೆರವಣಿಗೆ ಹಡ್ಸನ್ ವೃತ್ತದಿಂದ ರವೀಂದ್ರ ಕಲಾಕ್ಷೇತ್ರದವರೆಗೆ ನಡೆಯಲಿದೆ. ವೇದಿಕೆ ಕಾರ್ಯಕ್ರಮ ಸಂಜೆ 4.30ರಿಂದ ಪ್ರಾರಂಭವಾಗಲಿದ್ದು, ಸಂಜೆ 6ರಿಂದ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾರಂಭ ಉದ್ಘಾಟಿಸುತ್ತಾರೆ' ಎಂದರು.

'ಬಂಜಾರ ಸಮುದಾಯದ ರಾಜಕೀಯ ಮುಖಂಡರು ಪಾಲ್ಗೊಳ್ಳುತ್ತಾರೆ. 2024ನೇ ಸಾಲಿನ 'ಶ್ರೀ ಸಂತ ಸೇವಾಲಾಲ್ ಪ್ರಶಸ್ತಿ'ಯನ್ನು ಬಿ.ಟಿ. ಲಲಿತಾ ನಾಯಕ್ ಅವರಿಗೆ ಪ್ರದಾನ ಮಾಡಲಾಗುತ್ತದೆ. 2023 ಹಾಗೂ 2024ನೇ ಸಾಲಿನ ಗೌರವ ಹಾಗೂ ವಾರ್ಷಿಕ ಪ್ರಶಸ್ತಿ ಮತ್ತು ಮೂರು ವರ್ಷಗಳ ಪುಸ್ತಕ ಬಹುಮಾನ ಪ್ರದಾನ ಮಾಡಲಾಗುತ್ತದೆ' ಎಂದು ಮಾಹಿತಿ ನೀಡಿದರು.



ಜಾನಪದ ಅಕಾಡೆಮಿಯ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಆಶಯ

'ಸತ್ಯ ಬಿತ್ತರಿಸುವತ್ತ ನಾಟಕಗಳು ಸಾಗಲಿ'

ಪ್ರಜಾವಾಣಿ ವಾರ್ತೆ



ನಾಟಕೋತ್ಸವದಲ್ಲಿ ಪ್ರದರ್ಶನಗೊಂಡ ಜಾನ್‌ಗಾಲ್ಸ್ ವರ್ದಿ ರಚನೆಯ ಎಸ್‌.ರಾಮಕೃಷ್ಣಯ್ಯನವರ ನಿರ್ದೇಶನದ 'ಸಿಲ್ವರ್ ಬಾಕ್ಸ್' ನಾಟಕದ ದೃಶ್ಯ

ಬೆಂಗಳೂರು: ಸತ್ಯವನ್ನು ಬಿತ್ತರಿಸುವ ಕಡೆಗೆ ನಾಟಕ, ಕಲಾ ಪ್ರಕಾರಗಳು ಸಾಗಬೇಕು' ಎಂದು ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ತಿಳಿಸಿದರು.

ವಿಶ್ವರಂಗಭೂಮಿ ದಿನಾಚರಣೆ ಅಂಗವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗದವರು ಆಯೋಜಿಸಿರುವ 'ಐದು ದಿನಗಳ ನಾಟಕೋತ್ಸವ'ದಲ್ಲಿ ಪಾಲ್ಗೊಂಡು ಮಾತನಾಡಿದರು.

'ಕನ್ನಡ ನೆಲದಲ್ಲಿ ಅಪರೂಪದ ಕವಿಗಳು, ದಾಸರು, ದಾರ್ಶನಿಕರು, ಸಾಹಿತಿಗಳು, ಸಂತರು, ಸೂಫಿಗಳು ನಡೆದಾಡಿದ್ದಾರೆ. ಅಕ್ಷರ ಬಾರದವರಿಗೆ ಕಲೆ, ನಾಟಕಗಳಿಂದ ಮಾತ್ರ ಈ ನೆಲದ ಚರಿತ್ರೆ, ಇತಿಹಾಸ, ಐತಿಹ್ಯದ ಜೊತೆಗೆ ಎಲ್ಲಾ ವಿಚಾರಗಳನ್ನು ಅರಿಯಲು ಸಾಧ್ಯವಾಗಿದೆ' ಎಂದು ವಿಶ್ಲೇಷಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ 'ಬೆಂಗಳೂರು ವಿಶ್ವವಿದ್ಯಾಲಯ ಪ್ರದರ್ಶನ ಕಲಾ ವಿಭಾಗ ಸದಾ ಸಮಾಜಮುಖಿ ನಾಟಕಗಳ ಮೂಲಕ ಜನರ ಗಮನ ಸೆಳೆಯುತ್ತಿದೆ. ಈ ನಾಟಕೋತ್ಸವದಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು, ರಂಗಾಸಕ್ತರು ಹೆಚ್ಚಾಗಿ ಭಾಗವಹಿಸಿ ನಾಟಕೋತ್ಸವವನ್ನು ಯಶಸ್ವಿಗೊಳಿಸಬೇಕು' ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಪ್ರದರ್ಶನ ಕಲಾ ವಿಭಾಗದ ಮುಖ್ಯಸ್ಥರಾದ ಕೆ.ರಾಮಕೃಷ್ಣಯ್ಯ, ಸಿಂಡಿಕೇಟ್ ಸದಸ್ಯರಾದ ಕೆ.ಶರೀಫ, ಕಲಾ ನಿಕಾಯದ ಡೀನ್ ಪ್ರೊ. ಸಿ.ಸೋಮಶೇಖರ್, ಸಹಾಯಕ ಪ್ರಾಧ್ಯಾಪಕ ಶಿವಣ್ಣ ಉಪಸ್ಥಿತರಿದ್ದರು.

ನಾಟಕೋತ್ಸವಕ್ಕೆ ಪ್ರವೇಶ ಉಚಿತ

ಸೋಮವಾರದಿಂದ ನಾಟಕೋತ್ಸವ ಆರಂಭವಾಗಿದೆ. ಪ್ರತಿ ದಿನ ಸಂಜೆ 6.30ಕ್ಕೆ ನಾಟಕ ಪ್ರದರ್ಶನವಿರುತ್ತದೆ. ಮೊದಲ ದಿನ 'ಸಿಲ್ವರ್ ಬಾಕ್ಸ್', ಮಂಗಳವಾರ 'ಶ್ರೀ ಕೃಷ್ಣ ಪಾರಿಜಾತ', 'ಕರ್ಣಾಂತರಂಗ' ನಾಟಕಗಳು ಪ್ರದರ್ಶನಗೊಂಡಿವೆ. ನಾಳೆ (ಮಾ.26) ದಾರಾಶಿಕೊ, ಮಾ. 27 ರಂದು ಗೋಕುಲ ನಿರ್ಗಮನ, ಮಾ. 28 ರಂದು ಮಂಟೇಸ್ವಾಮಿ ಪ್ರಸಂಗ ನಾಟಕ ಪ್ರದರ್ಶನವಾಗುತ್ತದೆ. ನಾಟಕೋತ್ಸವದಲ್ಲಿ ರಂಗಾಸಕ್ತರಿಗೆ ಪ್ರವೇಶ ಉಚಿತ.

5 ಮಸೂದೆಗಳಿಗೆ ರಾಜ್ಯಪಾಲರ ಅಂಕಿತ

ಬೆಂಗಳೂರು: ವಿಧಾನ ಮಂಡಲದ ಉಭಯ ಸದನಗಳಲ್ಲಿ ಅಂಗೀಕಾರ ಪಡೆದಿದ್ದ ಕರ್ನಾಟಕ ಕಿರುಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ಅಧಿನಿಯಮ 2025 ಸೇರಿ ಒಟ್ಟು 5 ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.

ಕರ್ನಾಟಕ ಗಿರವಿದಾರರ (ತಿದ್ದುಪಡಿ) ಅಧಿನಿಯಮ, ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ಅಧಿನಿಯಮ, ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ (ತಿದ್ದುಪಡಿ) ಅಧಿನಿಯಮ ಹಾಗೂ ಕರ್ನಾಟಕ ಕೃಷಿ ಉತ್ಪನ್ನಗಳ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ಅಧಿನಿಯಮಗಳಿಗೂ ಅಂಕಿತ ಸಿಕ್ಕಿದೆ.

ಏ.15ಕ್ಕೆ ಸಿ.ಎಂ ನಿವಾಸಕ್ಕೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯು ಏಪ್ರಿಲ್ 15ರಂದು ಬೆಳಿಗ್ಗೆ 11ಕ್ಕೆ ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ ಹಾಕಲು ನಿರ್ಧರಿಸಿದೆ.

ಮಂಗಳವಾರ ನಡೆದ ಜಂಟಿ ಕ್ರಿಯಾ ಸಮಿತಿಯ ಸಭೆಯಲ್ಲಿ ಈ ತೀರ್ಮಾನ ಕೈಗೊಂಡಿದೆ. ಕಳೆದ ಡಿಸೆಂಬರ್‌ನಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ಸಮಿತಿ ನಿರ್ಧರಿಸಿತ್ತು. ಬೇಡಿಕೆ ಈಡೇರಿಸುವ ಬಗ್ಗೆ ಚರ್ಚಿಸಲು ಸಮಯಾವಕಾಶವನ್ನು ಸರ್ಕಾರ ಕೇಳಿ ಪತ್ರ ನೀಡಿದ್ದರಿಂದ ಮುಷ್ಕರ ಕೈಬಿಡಲಾಗಿತ್ತು. ಆದರೇ ಚರ್ಚಿಸಲು ಯಾವುದೇ ಆಹ್ವಾನ ಬಂದಿಲ್ಲ ಎಂದು ಸಭೆಯಲ್ಲಿ ಆಕ್ರೋಶ ವ್ಯಕ್ತವಾಯಿತು.

2024ರ ಜನವರಿ 1ರಿಂದ ವೇತನ ಪರಿಷ್ಕರಣೆ ಆಗಬೇಕು. 2020ರ ಜನವರಿ 1ರಿಂದ 2023ರ ಫೆಬ್ರುವರಿ 28ರವರೆಗಿನ ಹಿಂಬಾಕಿ ಪಾವತಿಸಬೇಕು. ದಿನ ಭತ್ಯೆ ಹೆಚ್ಚಿಸಬೇಕು. ಕೆಎಸ್‌ಆರ್‌ಟಿಸಿಯಲ್ಲಿ ಇರುವಂತೆ ಉಳಿದ ನಿಗಮಗಳಲ್ಲಿಯೂ ವೈದ್ಯಕೀಯ ವ್ಯವಸ್ಥೆ ಜಾರಿ ಮಾಡಬೇಕು ಎಂದು ಆಗ್ರಹಿಸಿ ಧರಣಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ. ಅನಂತ ಸುಬ್ಬರಾವ್, ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳಿ ಅಧ್ಯಕ್ಷ ಬಿ. ಜಯದೇವರಾಜೇ ಅರಸು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಫೆಡರೇಶನ್ ಅಧ್ಯಕ್ಷ ಎಚ್.ಡಿ. ರೇವಪ್ಪ, ಕೆಎಸ್‌ಆರ್‌ಟಿಸಿ ಪರಿಶಿಷ್ಟ ಜಾತಿ/ಪಂಗಡ ನೌಕರರ ಸಂಘದ ಅಧ್ಯಕ್ಷ ವೆಂಕಟರಮಣಪ್ಪ, ಕೆಎಸ್‌ಆರ್‌ಟಿಸಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಸೋಮಣ್ಣ, ಕೆಎಸ್‌ಆರ್‌ಟಿಸಿ ನೌಕರರ ಸಂಘದ ಜಗದೀಶ ಎಚ್.ಆರ್. ಭಾಗವಹಿಸಿದ್ದರು.

‘₹8.56 ಲಕ್ಷ ಕೋಟಿ ರಫ್ತು ಗುರಿ’

‘ಉತ್ಪಾದನಾ ಮಂಥನ’ ಪೂರ್ವಭಾವಿ ಸಭೆಯಲ್ಲಿ ಎಂ.ಬಿ.ಪಾಟೀಲ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕವನ್ನು ಕೈಗಾರಿಕಾ ಉತ್ಪಾದನಾ ವಲಯದ ಕೇಂದ್ರವಾಗಿಸುವ ನಿಟ್ಟಿನಲ್ಲಿ ಏಪ್ರಿಲ್‌ನಲ್ಲಿ ನಡೆಸಲು ಉದ್ದೇಶಿಸಿರುವ ಎರಡು ದಿನಗಳ ‘ಉತ್ಪಾದನಾ ಮಂಥನ’ ಕಾರ್ಯಕ್ರಮದ ಪೂರ್ವಭಾವಿ ಸಭೆ ಮಂಗಳವಾರ ನಡೆಯಿತು.



ಎಂ.ಬಿ.ಪಾಟೀಲ

ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅಧ್ಯಕ್ಷತೆಯಲ್ಲಿ ನಡೆದ ಎರಡನೇ ಸುತ್ತಿನ ಸಭೆಯಲ್ಲಿ ಉದ್ಯಮಿಗಳು ಮತ್ತು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

'ರಾಜ್ಯದ ಕೈಗಾರಿಕಾ ವಲಯವು ಈಗ ವಾರ್ಷಿಕ ₹2.32 ಲಕ್ಷ ಕೋಟಿ (27 ಬಿಲಿಯನ್ ಡಾಲರ್) ಮೌಲ್ಯದ ರಫ್ತು ವಹಿವಾಟು ನಡೆಸುತ್ತಿದೆ. ಇದನ್ನು ₹8.56 ಲಕ್ಷ ಕೋಟಿ (100 ಬಿಲಿಯನ್ ಡಾಲರ್) ಮಟ್ಟಕ್ಕೆ ಒಯ್ಯಬೇಕು ಎನ್ನುವುದು ನಮ್ಮ ಗುರಿ. ರಾಜ್ಯ ಮಟ್ಟದಲ್ಲಿ ನೀತಿ ನಿರೂಪಣೆಯಲ್ಲಿ ಆಗಬೇಕಿರುವ ಕೆಲಸಗಳು ಮತ್ತು ಕೇಂದ್ರ ಮಟ್ಟದಲ್ಲಿ ಆಗಬೇಕಿರುವ ಬದಲಾವಣೆ ಕುರಿತು ಚರ್ಚಿಸಲಾಯಿತು’ ಎಂದು ಎಂ.ಬಿ.ಪಾಟೀಲ ತಿಳಿಸಿದರು.

ರಾಜ್ಯದ ಕೈಗಾರಿಕಾ ವಲಯವು ಮುಖ್ಯವಾಗಿ ಸೇವಾಧಾರಿತ ಚಟುವಟಿಕೆಗಳನ್ನು ಹೊಂದಿದೆ. ಅಲ್ಲದೇ, ಸ್ಥಳೀಯವಾಗಿ ಉತ್ಪನ್ನಗಳ ತಯಾರಿಕೆಗೂ ಆದ್ಯತೆ ನೀಡಬೇಕು. ರಾಜ್ಯದಲ್ಲಿ ಅಪಾರ ಸಂಖ್ಯೆಯ ನವೋದ್ಯಮಗಳಿದ್ದು, ಅವುಗಳಲ್ಲಿ ಎಷ್ಟೋ ಕಂಪನಿಗಳು ₹250 ಕೋಟಿವರೆಗೆ ವಹಿವಾಟು ನಡೆಸುತ್ತಿವೆ. ಇವುಗಳನ್ನೂ ಉತ್ಪಾದನಾ ಮಂಥನದ ಭಾಗವಾಗಿ ಮಾಡಿಕೊಳ್ಳಲಾಗುವುದು ಎಂದರು. ರಾಜ್ಯದಲ್ಲಿ ಹಲವು ಬಗೆಯ ತಯಾರಿಕಾ ಕಂಪನಿಗಳು ಚದುರಿದಂತಿವೆ. ಆದ್ದರಿಂದ ಹಳೆ ಮೈಸೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ, ಕರಾವಳಿ ಮತ್ತು ಮಧ್ಯ ಕರ್ನಾಟಕ ಭಾಗಗಳಲ್ಲಿ ಏನೇನು ಉಪಕ್ರಮ ಕೈಗೊಳ್ಳಬೇಕು ಎಂಬ ಚರ್ಚೆ ನಡೆದಿದೆ. ಇದನ್ನು ಕಾರ್ಯರೂಪಕ್ಕೆ ತರಲು ನಿರ್ದಿಷ್ಟ ಕಾರ್ಯತಂತ್ರಗಳ ಅಗತ್ಯ ಮನಗಾಣಲಾಗಿದೆ. ಪರಿಣತ ಉದ್ಯಮಿಗಳ ಸಲಹೆ ಮತ್ತು ಮಾರ್ಗದರ್ಶನ ಪಡೆಯುತ್ತೇವೆ ಎಂದರು.

ಏಕಸ್ ಕಂಪನಿಯ ಅಧ್ಯಕ್ಷ ಅರವಿಂದ ಮೆಳ್ಳಿಗೇರಿ, ಉದ್ಯಮಿ ಮತ್ತು ಸ್ಟಾರ್ಟಪ್ ವಿಷನ್ ಗ್ರೂಪ್ ಮುಖ್ಯಸ್ಥ ಪ್ರಶಾಂತ್ ಪ್ರಕಾಶ್ ಮಾತನಾಡಿದರು.

ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಕೈಗಾರಿಕಾ ಇಲಾಖೆ ತಾಂತ್ರಿಕ ನಿರ್ದೇಶಕ ರಮೇಶ ಇದ್ದರು.

ಮುಖ್ಯಾಂಶಗಳು

- ಸದ್ಯ ವಾರ್ಷಿಕ ₹2.32 ಲಕ್ಷ ಕೋಟಿ ರಫ್ತು ವಹಿವಾಟು
- ಸ್ಥಳೀಯವಾಗಿ ಉತ್ಪನ್ನ ತಯಾರಿಕೆಗೆ ಮತ್ತಷ್ಟು ಆದ್ಯತೆ
- ಪರಿಣತ ಉದ್ಯಮಿಗಳ ಸಲಹೆ ಪಡೆದು ಕಾರ್ಯತಂತ್ರ

ತೆಲಂಗಾಣಕ್ಕೆ ಕೃಷ್ಣಾ ನೀರು: ಬಿ.ವೈ. ವಿಜಯೇಂದ್ರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರ ಯಾರಿಗೂ ತಿಳಿಯದಂತೆ ತೆಲಂಗಾಣಕ್ಕೆ 10 ಟಿಎಂಸಿ ಅಡಿ ನೀರು ಬಿಟ್ಟಿದೆ. ಈ ಆದೇಶದ ಹಿಂದಿನ ಕಾಣದ ಕೈಗಳು ಯಾವುವು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನಿಸಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿರುವ ಅವರು, ‘ಕೃಷ್ಣಾ ತೀರದ ನಮ್ಮ ರೈತರ ಪರಿಶ್ರಮದ ಬೆವರಿನ ಬೆಳೆಗಳನ್ನು ಒಣಗಿಸಲು ಸರ್ಕಾರ ಹೊರಟಿದೆ. ಮಾನವೀಯತೆ ಹೆಸರಿನಲ್ಲಿ ತೆಲಂಗಾಣಕ್ಕೆ 1.5 ಟಿಎಂಸಿ ಅಡಿ ನೀರು ಬಿಡಲಾಗಿದೆ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ. ಆದರೆ 10 ಟಿಎಂಸಿ ಅಡಿ ನೀರು ಬಿಟ್ಟಿದ್ದರೆ ತಪ್ಪು ಎಂದೂ ಅವರು ಹೇಳಿದ್ದಾರೆ’ ಎಂದಿದ್ದಾರೆ.

‘ಕಳೆದ ವರ್ಷ ಮಿತ್ರ ಪಕ್ಷ ಡಿಎಂಕೆಯನ್ನು ಓಲೈಸಲು ಕಾಂಗ್ರೆಸ್ ಸರ್ಕಾರ ತಮಿಳುನಾಡಿಗೆ ನೀರನ್ನು ಹರಿಸಿತ್ತು. ಆ ಮೂಲಕ ಕಾವೇರಿ ತೀರದ ನಮ್ಮ ರೈತರ ಬದುಕಿಗೆ ಕೊಳ್ಳಿ ಇಟ್ಟಿತ್ತು.

ಅಸಲಿಗೆ ಕರ್ನಾಟಕ ಸರ್ಕಾರವನ್ನು ಯಾರು ನಿಯಂತ್ರಿಸುತ್ತಿದ್ದಾರೆ? ಜಲಸಂಪನ್ಮೂಲ ಇಲಾಖೆ ಸರ್ವಾಧಿಕಾರಿ ಮುಷ್ಟಿಯಲ್ಲಿದೆಯೇ? ಕಾಂಗ್ರೆಸ್ ಹೈಕಮಾಂಡ್, ನಮ್ಮ ನದಿಗಳಿಂದ ಹರಿಯುವ ನೀರನ್ನು ತನ್ನ ಮಿತ್ರ ಪಕ್ಷಗಳು ಹಾಗೂ ತನ್ನ ಪಕ್ಷದ ಆಡಳಿತವಿರುವ ರಾಜ್ಯಗಳಿಗೆ ಹರಿಯಬಿಡುವಂತೆ ಸೂಚನೆ ನೀಡುತ್ತಿದೆ’ ಎಂದು ವಿಜಯೇಂದ್ರ ಕಿಡಿಕಾರಿದ್ದಾರೆ.

‘ಕೃಷ್ಣಾ ತೀರದ ರೈತರು ಬೆವರು ಹರಿಸಿ ಬೆಳೆದಿರುವ ಬೆಳೆಗಳು ಈಗಾಗಲೇ ಒಣಗುತ್ತಿವೆ.ಈ ಕಾರಣಕ್ಕಾಗಿಯೇ ಓರ್ವ ರೈತ ಆತ್ಮಹತ್ಯೆ ಮಾಡಿಕೊಂಡಿರುವುದು ನೋವಿನ ಸಂಗತಿ. ರೈತನ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದರು.

ಅಂಬೇಡ್ಕರ್‌ಗೆ ಅವಮಾನ: ದೂರು

ಬೆಂಗಳೂರು: ಕಲಬುರಗಿಯ ರಟಕಲ್ ಗ್ರಾಮ ಪಂಚಾಯಿತಿಯಲ್ಲಿ ಸಂವಿಧಾನ ಜಾಗೃತಿ ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಹರಿದ ಭಾವಚಿತ್ರವನ್ನು ಬಳಸಲಾಗಿದೆ. ಅದನ್ನು ಬದಲಾಯಿಸುವಂತೆ ಕೇಳಿದರೂ ಅಲ್ಲಿನ ಪಿಡಿಒ ಸ್ಪಂದಿಸಿಲ್ಲ ಎಂದು ಭಾರತ ಮುಕ್ತ ಮೋರ್ಚಾ ಸಂಘಟನೆ ರಾಜ್ಯ ಘಟಕ ಆರೋಪಿಸಿದೆ.

ರಟಕಲ್ ಪೊಲೀಸ್ ಠಾಣೆಯಲ್ಲಿ ಪಿಡಿಒ ಮಹಾನಂದ ಎನ್. ಗುತ್ತೇದಾರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಶಿಸ್ತು ಕ್ರಮ ಕೈಗೊಳ್ಳುವಂತೆ ಪಿಡಿಒ ವಿರುದ್ಧ ಜಿಲ್ಲಾ ಪಂಚಾಯಿತಿಗೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ವರದಿ ನೀಡಿದರೂ ಕ್ರಮ ಕೈಗೊಂಡಿಲ್ಲ ಎಂದು ಸಂಘಟನೆಯ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಮಾರುತಿ ಗಂಜಗಿರಿ, ಶಾಮರಾವ್ ಕಲಬುರಗಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಗರದಲ್ಲಿ ಇಂದು

ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳ ಸಭೆ ಮತ್ತು ವಿಶ್ವವಿದ್ಯಾಲಯ ಮಟ್ಟದ ಎನ್‌ಎಸ್‌ಎಸ್ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಲಿಂಗರಾಜ ಗಾಂಧಿ, ಮುಖ್ಯ ಅತಿಥಿಗಳು: ಪ್ರತಾಪ್ ಲಿಂಗಯ್ಯ, ಕಾರ್ತಿಕೇಯನ್, ಅಧ್ಯಕ್ಷತೆ: ಜವರೇಗೌಡ ಟಿ., ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 9.30

ಒಳಮೀಸಲಾತಿ ಚಳವಳಿಯ ಮುಂದಿನ ಹಂತದ ಹೋರಾಟದ ಬಗ್ಗೆ ಸಮಾಲೋಚನಾ ಸಭೆ: ಉದ್ಘಾಟನಾ ಭಾಷಣ: ಮಾರಸಂದ್ರ ಮುನಿಯಪ್ಪ, ಅಧ್ಯಕ್ಷತೆ: ಭೀಮರಾಜ್, ಆಯೋಜನೆ: ಮಾದಿಗ ಸಮುದಾಯಗಳ ಸ್ವಾಭಿಮಾನದ ಒಕ್ಕೂಟ, ಸ್ಥಳ: ಲಿಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11

ವಿಶ್ವರಂಗಭೂಮಿ ದಿನಾಚರಣೆ ಅಂಗವಾಗಿ ‘ರಂಗೋತ್ಸವ’: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ರಂಗಗೌರವ: ಎ.ಪಿ. ರಾಮಕೃಷ್ಣ, ನಾಗಭೂಷಣ, ಮಂಜುಳ, ಉಮಾ ವರದಯ್ಯ, ಶಿರೀಷ್ ಚಂದ್ರ, ನಾಟಕ ಪ್ರದರ್ಶನ: ‘ಧೀರ ಭಗತ್’, ಆಯೋಜನೆ: ಅದಮ್ಯ ರಂಗ ಸಂಸ್ಕೃತಿ ಟ್ರಸ್ಟ್, ಸ್ಥಳ: ಚನ್ನಬಸವಪ್ಪ ಸಭಾಂಗಣ, ಕೆ.ಜಿ.ಎಸ್. ಕ್ಲಬ್, ಕಬ್ಬನ್ ಉದ್ಯಾನ, ಮಧ್ಯಾಹ್ನ 1.15



ಹಂ.ಪ. ನಾಗರಾಜಯ್ಯ

ಕಣಕಟ್ಟೆ ಕೃಷ್ಣಮೂರ್ತಿರಾವ್ ಸ್ಮಾರಕ ದತ್ತಿ ಸಂಗೀತ ಕಾರ್ಯಕ್ರಮ: ನಡೆಸಿಕೊಡುವವರು: ಅನಸೂಯಾದೇವಿ, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಸಂಗೀತ ಸಂವಾದ: ಎಂ.ಡಿ. ಪಲ್ಲವಿ, ಪ್ರಮೀಳಾ ಲೋಚನ್, ಆಯೋಜನೆ: ಅನನ್ಯ ದೃಶ್ಯ, ಸ್ಥಳ: ಮ್ಯೂಸಿಯಂ ಆಫ್ ಆರ್ಟ್ಸ್ ಆ್ಯಂಡ್ ಫೋಟೊಗ್ರಫಿ, ಕಸ್ತೂರ್ ಬಾ ರಸ್ತೆ, ಸಂಜೆ 6

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED ENGLISH TEACHER for PU College and High-school. Hindi and Science Teacher for Primary 'DVS SHILPASHREE INSTITUTIONS' Magadi Main Road, Sunkadakatte. 9535305299

TEACHERS FOR LOWER PRIMARY, HIGH SCHOOL - ENGLISH HIGHER PRIMARY - MATHEMATICS ADMIN/FINANCE. COMPUTERS: 1TO7TH WILSON GARDEN: 9663355532

Om Sai Ram

NEW BALDWIN GROUP OF INSTITUTIONS

* BANASWADI * MANDUR * T.C PALYA * ANEKAL * ANEKAL TOWN * CHANDAPUR * ATTIBELE * HSR & * KODATIGATE (SARJAPURA)

About us: NBGI having 9 Schools, 4 PU Colleges, 2 Degree Colleges & Upcoming University are the Pioneers in providing quality education since 1990, Our campuses are well facilitated in providing education of International standards. We are collaborated with ICSE, CBSE & Cambridge (IGCSE) Boards. We cater to Day Schooling and on campus Boarding Facilities.

PRINCIPAL/VICE PRINCIPAL ACADEMIC COORDINATOR
Candidates possessing with brilliant academy records. Post Graduate with 5 to 10 yrs experience & leadership qualities in reputed institution.

TEACHERS- FOUNDATION COURSE
Candidates required having experience in training for Foundation course (Physics/ Chemistry/ Biology/ Maths) in reputed institutions.

LIAISON OFFICER / RECORDS EXECUTIVE
Graduate candidates having experience in records maintaining & co ordinating for Board work will be recruited immediately & trained for respective postings.

SCHOOL EVENT MANAGER
Candidates having experience in the same field.

INCHARGE TEACHERS -RESIDENTIAL
Graduate candidates having experience in relevant fields will be recruited immediately and trained for respective postings.

On Campus Accommodation available @ Mandur, Budigere Cross and Anekal, Bengaluru.

Remuneration: at par with the institutional standard. With additional facilities like food & transport in the gross package.

APPLY IMMEDIATELY
Applying candidates should clearly specify the Position Applied for, branch Opted with updated resume
Contact: 98860 84799 / 78992 27591
hrcentral.nbgi@gmail.com www.newbaldwininstitutions.org

Subramanya Education Society [R]

EAST WEST COLLEGE OF HOTEL MANAGEMENT
Affiliated to Bangalore Univerisity, Approved by AICTE & Recognized by Govt. of Karnataka

EAST WEST

63, Off Magadi Road, Vishwaneedham Post, Anjananagar, Bengaluru-560091. Phone: 080-23288242 / 8245 Mobile: 9482514447 Website: www.ewit.edu.in

RECRUITMENT NOTIFICATION
Applications are invited from accomplished professionals for the positions of
PRINCIPAL
PROFESSORS ♦ ASST. PROFESSORS ♦ LECTURERS
Qualification & Experience: As per U.G.C. Norms.
Salary: As per U.G.C. Pay Scale & Allowances as per Institution Norms.
Applications along with detailed resume for the posts should be sent by e-mail to: career@ewgi.edu.in within 10 days from the date of this advertisement.
EW-24512

HERITAGE PUBLIC SCHOOL Konanakunte requires HIGH SCHOOL TEACHERS for Maths Physics Chemistry Biology and Social. PRIMARY TEACHERS for Maths EVS English and KG TEACHERS. Salary is not a constraint for deserving candidates Resume can be sent through WhatsApp or email Mob: 9901733776. Ph:080 26322111. Email: heritagepublicschoolkk@gmail.com

SREE VENKATESHWARA PU COLLEGE Krishnarajapuram Bangalore-560036 WANTED EXPERIENCED LECTURERS for Economics, English & Physical Education Attractive Salary Attend with Original Certificates Email-ID: svs.krp.bangalore@gmail.com. Contact: 9036068144, 7411135627

Wanted Experienced Lady Teachers with excellent communication skills in English for
1. Higher Primary
Graduate with B.Ed. to teach Hindi and Mathematics.
2. High School
Post Graduate with B.Ed. to teach English and Social Science
Walk-in Interview
Friday, 28th March 2025 and Thursday,3rd April 2025
Between: 10 a.m. – 12 noon
Or Email your resume to info@florence.edu.in for an appointment
Florence High School
3rd Block, 3rd Stage, Basaveshwaranagar, Bengaluru-560 079
Tel : 080-23236160/41536695

OXFORD PUBLIC SCHOOL Hongasandra, Bangalore TEACHER'S WANTED FOR HIGH SCHOOL All Subjects Good Faculty Bangalore-68 Phone: 8277677389

WANTED LECTURERS for IIT (Mains & Advanced) NEET, K-CET, Foundation for 10th, 11th, 12th. Contact: 7411814274

JOB
To Place your Classified Ads Contact:
9886213331

HOLY Angel's High School, Hampinagar, Vijayanagar, Bengaluru-560104 Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2025-26 for Nursery, Primary, High-School, Computer Teacher & P.E.Teacher. STATE & ICSE Qualification: B.A./B.Sc., B.Ed, M.A./M.Sc., M.Ed, N.T.T. CP.Ed. Only English Medium Candidates need to apply

REQUIRED FEMALE Nursery/Primary Co-ordinator with 5 years Experience and also N.T.T./B.A., M.A./B.Ed/B.Sc., M.Sc./B.Ed. for English, Maths, Science, Hindi & Social Science. Contact Max Muller Public School, Mahalakshmi Layout, B'lore-96. Ph:23376049/50. E.mail- maxmullerpublicschool.mlayout@gmail.com

BISHOP COTTON BOYS' SCHOOL
BENGALURU
(Managed by CSI Karnataka Central Diocese)
REQUIRES

KINDERGARTEN
ART & CRAFT TEACHER : B. FA / Diploma in fine arts with good written and spoken English
ASSOCIATE TEACHER : Regular Degree in any subject with NTT / B.Ed along with good written and spoken English

JUNIOR SCHOOL
TEACHER - PHYSICAL EDUCATION: Regular Degree in any subject with C.PEd / B.PEd with good written and spoken English
JUNIOR SCHOOL TEACHER : Regular Degree in any subject, B.Ed. with good written and spoken English
MUSIC TEACHER: Should have passed music examination in Trinity College of Music, London / ABRSM / London College of Music / Experienced candidate preferred.
SPECIAL EDUCATOR: Degree / Masters in Special Education or BA / MA Psychology with Diploma in Special Education recognized by National Teachers Council or its equivalent with specializing in Special needs / learning disability. Preferably Female Candidates.

MIDDLE SCHOOL
KANNADA TEACHER : Regular B.A. / MA (Kannada) with B.Ed.
BIOLOGY TEACHER: M.Sc. (Botany / Zoology), B.Ed. with good command over English
PHYSICS TEACHER : M.Sc.,(Physics), B.Ed with good written and spoken English
SPECIAL EDUCATOR : Degree / Masters in Special Education or BA / MA Psychology with Diploma in Special Education recognized by National Teachers Council or its equivalent with specializing in Special needs / learning disability. Male Candidate.

SENIOR SCHOOL
COMMERCIAL STUDIES / COMMERCIAL APPLICATION
M.Com, B.Ed. with good command over English
KANNADA TEACHER : Regular B.A. / MA (Kannada) with B.Ed.
FRENCH TEACHER : Diploma from Indian or foreign universities or A 2 level certificate examination from Alliance Franchaise or Level 2 certificate in French from the institute of foreign languages, Hyderabad.

ADMINISTRATIVE POST
ADMINISTRATIVE ASSISTANT : Any Regular Degree with good command over English, and good knowledge of computers and managing student records
RECEPTIONIST: Any Regular Degree with excellent communication and interpersonal skills, knowledge of telephone etiquette and ability to speak multiple languages.

Apply to: The Principal,
BISHOP COTTON BOYS' SCHOOL
Residency Road, Bangalore – 560 025.
E-mail: bcbs@bishopcottonboysschool.edu.in
ROUNAQH
Last date for submission of applications: Friday, the 4th April 2025 before 3.00 p.m.

MANASA EDUCATIONAL TRUST (R)
M.S.CONVENT
Sultanpalya, R.T.Nagar, Bangalore-32
TEACHERS REQUIRED
English, Science (High School)
Kannada, Computer Science (High School & Primary)
Admission Counselor & Office Admin
Graduates with B.Ed/M.Ed, M.Sc, MCA, MBA, M.A, B.Sc, BCA, B.Com
Walk-in interview
Send your updated resume to: manasa.edu.trust@gmail.com
9844043770 / 9844456549

ST BENEDICT'S GROUP OF INSTITUTIONS
Asirvanam, Anchepalya, Kumbalgodu PO, Bengaluru - 560074
TEACHERS WANTED
English, Science, Hindi, Mathematics, Chemistry, Physics, Social Studies, Computer Science, B.Sc Nursing & Physical Education Teachers.
Call: 98868 12398 91483 26177
Please post your resumes to stbenedictscbseschool74@gmail.com

SREE VENKATESHWARA ENGLISH SCHOOL, #1, V.S Layout, Krishnarajapura, Bangalore-560036. WANTED-TEACHERS B.Sc, B.Ed (Maths, Science) B.A B.Ed (Social, English) TCH D.Ed B.P.Ed M.P.Ed, B.Lib Attractive Salary Attend with original certificates. Contact: 080-25611873, 7411135627 Email: svs.krp.bangalore@gmail.com

TEACHERS WANTED. Wanted Experienced, M.Sc B.Ed teachers to teach ICSE and PUC Maths, Physics, Chemistry and Biology. Contact Principal- S.D.A High School and PU College. Phone: 9845606243. Email: sdapucollege@gmail.com

ACHIEVE SCHOOL, 17th Main Road, Near SLV, BDA Complex, Siddanna Layout, Banashankari Stage II, Bengaluru- 560070 Mob: 91642-22288 Requires TEACHERS. 1.SANSKRIT- High school 2. CHEMISTRY & BIOLOGY- High School 3.SS- Middle school

WANTED FRESHER/ Experience Teachers/ Academic Co-ordinators ENGLISH/ MATHS/ SOCIAL/ PHYSICS/ CHEMISTRY/ BIOLOGY/ HINDI/ COMPUTER TEACHERS/ PHYSICAL EDUCATION Salary Rs. 20000 to 35000/- PM ESI, PF WALK-IN INTERVIEW ALL WORKING DAYS Between 10.30 AM TO 4.00 PM MATHA'S INTERNATIONAL SCHOOL ICSE AFFILIATION CODE KA470 (Google Map location MATHA'S ENGLISH HIGH SCHOOL) #55/2 B, 11th K.M.Hosur Main Road, Garuve Bhavipalya, Bommanahalli post, Bangalore- 560068 M: 9449814917,8277258609

SUNRISE SCHOOL Requires Experienced Lady Teachers for Nursery, Primary & High School for-all Subjects (PE-Male) Coffee Board Layout, Hebbal Contact:9008981637 Email: svsres21@gmail.com

SRI SRI ACADEMY
Broaden the Vision... Deepen the Roots
Bangalore North
WE ARE HIRING!
JOIN THE TEAM OF PASSIONATE TEACHING
Are you qualified, trained and experienced educator ready to make a lasting impact? we are on the lookout for dynamic teachers to join our esteemed institution!
Following Faculty are required.
- Pre primary
- Mathematics (Std 5 to 8)
- English (Std 5 to 8)
- Kannada (Primary)
- Hindi (Std 1 to 8)
- Science (Std 5 to 6)
- Sanskrit
- Art & Craft
- Dance & Music

Apply Now

Qualifications:
- Relevant degree or certification in the respective subject or field.
- Teaching experience in a similar capacity.
- Passion for education and a commitment to student success.

Email your resume: bangalore.ssabn@ssrvm.org
080-68352613/7483136256
bangalorenorth.ssa.org.in
Honnenahalli, Singanayakanahalli, Yelahanka(hobli), Bangalore-560064

'Igniting young minds'
Auden School
Scan for Location
(Affiliated to CBSE, New Delhi)
No. 6, 7 th Block, BSK 3rd Stage, Bangalore 560085
Ph: 080-26722888 / 9448574888
Email: audenschool@gmail.com
Applications are invited for eligible candidates for the below Posts:
1. **Primary Co-ordinator** (Grade 1 to 4)
B.Sc/BA with B.Ed having min. 5 years' experience as a Coordinator.
2. **Physics/Maths Teacher:**
M.Sc, B.Ed having 5+ years of experience handling Physics and Maths for Higher Primary and High School Classes.
3. **Sanskrit Teacher: (Part Time)**
MA in Sanskrit having relevant experience.
4. **Art and Craft Teacher:**
B.A (Fine Arts) Fresher's can apply. [Ladies Only]
5. **Dance Teacher: (Full Time)**
Having relevant experience in both Classical and Contemporary. [Ladies Only]

NOTE: Walk-in on any working day by 29th March 2025 (Monday to Friday) with your CV from 9.00am to 4.00pm. Salary not a constraint for deserving candidates.

SRI KK EDUCATION CENTRE
(Affiliated to CBSE, Aff. No. 830256)
Kadabagere, Magadi Road, Bangalore
REQUIREMRNT 2025-2026
TEACHERS
- NTT Trained
- Social
- Computer
- Maths
- Hindi
- English

OTHERS
- Librarian
- Social Media Manager
- Physical Educator
- Music & Dance

Qualification: NTT, MTT, B.Ed/M.Ed with minimum 3 years of experience in CBSE/ICSE Board .
Email: srikkec@gmail.com
Ph: 9886535292

Multiple Vacancy

ADITYA GROUP OF INSTITUTIONS
Yelahanka
Invites applications from the qualified and experienced candidates for the post of
- ADMINISTRATIVE OFFICER
- ACCOUNTS EXECUTIVES
- IT & NETWORKING
- ADMIN EXECUTIVES
- TELE-CALLERS
- RECEPTIONIST
- CANTEEN MANAGER
- HOSTEL WARDENS
- HOUSEKEEPING
- DRIVERS
- LAB ASST.
- ATTENDERS

Interested candidates may send their resumes with photograph to
hrdept.aditya@gmail.com Contact No.: 7090001946

CNC/VMC /VTL Machine Shop Situated in Peenya Needs, Assistant Manager, Inspection Boys & Programmer cum Setter. Call: 7996998820/ 8277660933 Email: hrd@bhandariforgings.com

General

LOOKING FOR female candidate who has good knowledge of Multi media marketing. Who can handle online marketing, Instagram, influencers and You Tube. Very good salary and incentive offered. Send resume on WhatsApp to 9880666773

Accounts & Finance

SHRI SHIVABALAYOGI Maharaj Trust at JP Nagar 3rd Phase is looking for a qualified Office Assistant (B.Com). Interested candidates can send their resumes to sbyashram@gmail.com

WANTED ACCOUNT ASSISTANT (Male)Bommanahalli, Bangalore, Send Resume to: starsilks@gmail.com

TRAVEL COMPANY REQUIRED Accountant Cum Office Incharge B.Com Graduate with Tally & Latest ERP Experience candidates in and Around JP.Nagar Contact: 9972269972

Graphic Designers

AD AGENCY requires GRAPHIC DESIGNER 1-2years Experience in CoralDraw, Other Designing Tools, Speed typing in Kannada, English. 9845597155 enquiry@spoorthiads.com

Drivers

V&V GROUP Behind IIM Bannerghatta Road. Wanted immediately CAR DRIVER cum EXECUTIVE. Good Salary. Call: 9900001954

Marketing & Sales

A WELL experienced mattress marketing personnel is required for a Kerala based Company for their Bangalore office. Call:7090022466

ALFA CARPETING COMPANY PRIVATE LIMITED
Pan Indian distributors of leading brands of carpets like Carpets Inter, Stiches & Gauges and Aspecta LVTS, with a turnover of 50 crores is looking for the following position in Bengaluru office.
1) BUSINESS DEVELOPMENT MANAGER: Graduates with 2-4 years of experience in Corporate Interiors Sales or Flooring Solutions.
2)SALES EXECUTIVES : Graduates with 1 years experience in Corporate Interior product Sales or flooring solutions. Fresher can apply for Trainee position.
Besides Salary we offer PF, Bonus, Gradutiy. Incentives for target achievement.
Interest candidates may send their CV to ramesh@alfacarpeting.com or call 9902016003

Architects

URGENTLY REQUIRED SITE SUPERVISORS and ARCHITECTURAL ASSISTANTS at Hunasamaranahalli near Yelahanka. Minimum Salary 15K. Send resume to rkitex@gmail.com

Engg/ Production Technical

WANTED CIVIL ENGINEER
A Leading Real Estate Developer is looking for an Independent capacity, Dynamic, Aggressive, Dedicated & Experienced Residential Layout **Development Civil Engineer** with min 10+ yrs experience, knowledge of urban planning, zoning regulations, building codes with excellent communications and project management skills.
Email your latest resume to: communications09@gmail.com

REAL ESTATE SELLING

Agricultural Land Converted

South

FOR SALE 3 acres 26 guntas fully alienated land in beautiful location in Aldur town limits, Chikkamagaluru Dist. Ideal for development of housing sites. Contact email: at0710@gmail.com.

Sites

Anjanapura

20'X30' BDA Site for sale in Anjanapura 5th 'G' Block with Cauvery water,for Immediate registration Only:9008716584,68L

Industrial & Factory

Tumkur Road

SALE/ BUILT to Suit, 10 Acres Industrial Land Suitable for Warehouse Industry Opposite KIADB. 9141326819

Farm House/ Land/ Resorts

Mysore

A & A REALTI, AUSPICIOUS
120 Acres Biggest Farmland Project & Township at Nanjangud, Mysore.
Something Excited!!! Now ,
Every person can afford the Dream farm land with house.100 X100 site, 2 BHK cottage house , 120 teak plantations, Garden with Sit -Out , Landscape & Modular fencing at Just Rs. 699/- per sq ft (5 years Easy EMI)
Hi- Fi amenities: Temple, Lake, Club house , Restaurant, School for yoga & meditation much more ..
Block your dream farmland by just paying Rs, 5lk
Connect us for more details : 98896 98826
Website : www.aandarealti.com

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business Offers

Finance

URGENT LOAN AVAIL @ 3.5% per annum Personal, Business, Housing take over all types loan. Shivganga Finance. Phone: 8826494700.

Machinery & Tools

FOR EXPORT Promotion of all kinds of Machine Tools & Accessories. Interested MSMEs send product details. T&C applicable. Email: export@machinetoolsexim.com WhatsApp (Only text) : 9590707677

EDUCATIONAL

Admission

PASS DIRECT 10th, 12th for Oct- 2025 Exam, 100% Pass. Contact: 7411814274/ 6366244758

OTHERS

Auction Sale

UNDER INSTRUCTION from National Institute of Animal Nutrition & Physiology Adugodi, Bangalore - 560030 auction will be held on 28-03-2025 at 03.00 PM Auction of Sheep in NIANP Campus by Royal Auctioneers

PERSONAL

Change of Name

CHANGE OF NAME
I, CHANDRASHEKAR H K residing at #10/10A, Someshwaranagar Main Road, Chikkabommasandra, GKVK Post, Yelahanka New Town, Bengaluru - 560065, have changed my name to **CHANDRASHEKARA H K** vide affidavit dated 25.03.2025 before Notary S.I. Balaguru Bengaluru.

MY DAUGHTER, Aastha Upadhyay, born on 22nd July 2024 , residing at 101, Maa Gokulam Apartments, Seetharampalya, Bangaluru, 560048 shall henceforth be known as Abhigya Upadhyay. Ashutosh Upadhyay (Father)

PUBLIC NOTICE

ಸಾರ್ವಜನಿಕ ಪ್ರಕಟಣೆ
ಅರ್ಜಿದಾರರ ಮುತ್ತಾತನವರಾದ ಬಿ. ಗುಂಡಪ್ಪ ಬಿನ್ ಲೇಟ್ ದೊಡ್ಡಪುಟ್ಟಯ್ಯ ರವರು ದಿನಾಂಕ: 09-07-1918 ರಂದು ಟಿ. ಬೇಗೂರು ಗ್ರಾಮ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇಲ್ಲಿ ಮರಣ ಹೊಂದಿದ್ದು ಮರಣ ದಿನಾಂಕವನ್ನು ನೊಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರವನ್ನು ಮಾಡಿಕೊಡಲು ಆದೇಶ ಕೋರಿ ಮೇಲ್ಕಂಡ ಮಾನ್ಯ ಗೌರವಾನ್ವಿತ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದು ಇದಕ್ಕೆ ಹಿತಾಸಕ್ತಿದಾರರು ಯಾರಾದರೂ ಇದ್ದರೆ ತಮ್ಮ ಅಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸಿದಲ್ಲಿ ದಿನಾಂಕ: 28-04-2025 ರಂದು 11 ಗಂಟೆಗೆ ಮಾನ್ಯ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಆಕ್ಷೇಪಣೆ ಗಳನ್ನು ಸಲ್ಲಿಸಬೇಕು ಇಲ್ಲದೇ ಹೋದರೆ ಏಕಪಕ್ಷೀಯವಾಗಿ ಪ್ರಕರಣವನ್ನು ತೀರ್ಮಾನಿಸಲಾಗುವುದು. ದಿನಾಂಕ: 25-03-2025 ರಂದು ನ್ಯಾಯಾಲಯದ ಆದೇಶದಂತೆ ಈ ಮೂಲಕ ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಅದೇಶದ ಮೇರೆಗೆ
Sd/- Sheristedar,
Prl. Civil Judge & JMFC, Nelamangala.
ಅರ್ಜಿದಾರರ ವಕೀಲರು:
N.G. Girija, Advocate,
No. 141, 5th Cross, Dadapeer Layout, Sondekoppa Road, Nelamangala-562 123

ಸಾರ್ವಜನಿಕ ಪ್ರಕಟಣೆ
ಅರ್ಜಿದಾರರ ತಾತನವರಾದ ಬಿ. ಪುಟ್ಟಯ್ಯ ಬಿನ್ ಲೇಟ್ ಗುಂಡಪ್ಪರವರು ದಿನಾಂಕ: 26-05-1937 ರಂದು ಟಿ. ಬೇಗೂರು ಗ್ರಾಮ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇಲ್ಲಿ ಮರಣ ಹೊಂದಿದ್ದು ಮರಣ ದಿನಾಂಕವನ್ನು ನೊಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರವನ್ನು ಮಾಡಿಕೊಡಲು ಆದೇಶ ಕೋರಿ ಮೇಲ್ಕಂಡ ಮಾನ್ಯ ಗೌರವಾನ್ವಿತ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದು ಇದಕ್ಕೆ ಹಿತಾಸಕ್ತಿದಾರರು ಯಾರಾದರೂ ಇದ್ದರೆ ತಮ್ಮ ಅಕ್ಷೇಪಣೆ ಗಳನ್ನು ಸಲ್ಲಿಸಲು ಇಚ್ಛಿಸಿದಲ್ಲಿ ದಿನಾಂಕ: 28-04-2025 ರಂದು 11 ಗಂಟೆಗೆ ಮಾನ್ಯ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಆಕ್ಷೇಪಣೆ ಗಳನ್ನು ಸಲ್ಲಿಸಬೇಕು ಇಲ್ಲದೇ ಹೋದರೆ ಏಕಪಕ್ಷೀಯವಾಗಿ ಪ್ರಕರಣವನ್ನು ತೀರ್ಮಾನಿಸಲಾಗುವುದು. ದಿನಾಂಕ: 25-03-2025 ರಂದು ನ್ಯಾಯಾಲಯದ ಆದೇಶದಂತೆ ಈ ಮೂಲಕ ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಅದೇಶದ ಮೇರೆಗೆ
Sd/- Sheristedar,
Prl. Civil Judge & JMFC, Nelamangala.
ಅರ್ಜಿದಾರರ ವಕೀಲರು:
N.G. Girija, Advocate,
No. 141, 5th Cross, Dadapeer Layout, Sondekoppa Road, Nelamangala-562 123

ವಿವರಣೆಗಾಗಿ ಪತ್ರ ಬರೆಯುವಂತೆ ಮುಖ್ಯ ನ್ಯಾಯಮೂರ್ತಿಗೆ ಎಎಬಿ ಆಗ್ರಹ

‘ನ್ಯಾಯಾಧೀಶರಿಗೂ ಮಧುಬಲೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾಯಾಧೀಶರನ್ನೂ ಹನಿಟ್ರ್ಯಾಪ್‌ಗೆ ಒಳಪಡಿಸಲಾಗಿದೆ ಎಂಬ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ ಸದನದಲ್ಲಿನ ಹೇಳಿಕೆಯನ್ನು ಆಧರಿಸಿ ಅವರಿಂದ ವಿವರಣೆ ಪಡೆಯಲು ವಿಧಾನ ಸಭಾಧ್ಯಕ್ಷರಿಗೆ ಪತ್ರ ಬರೆಯಬೇಕು’ ಎಂದು ಬೆಂಗಳೂರು ವಕೀಲರ ಸಂಘ (ಎಎಬಿ) ಮುಖ್ಯ ನ್ಯಾಯಮೂರ್ತಿಯವರನ್ನು ಆಗ್ರಹಿಸಿದೆ.

‘ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ ವರ್ಮ ಅವರ ಮನೆಯಲ್ಲಿ ಕೋಟ್ಯಂತರ ಮೊತ್ತದ ನಗದು ದೊರೆತಿತ್ತು ಎನ್ನಲಾದ ಪ್ರಕರಣದ ಬಗ್ಗೆ ಕರೆಯಲಾಗಿದ್ದ ಸರ್ವಸದಸ್ಯರ ವಿಶೇಷ ಸಭೆಯಲ್ಲಿ ಈ ಕುರಿತಂತೆ ನಿರ್ಣಯ ಕೈಗೊಳ್ಳಲಾಗಿದೆ’ ಎಂದು ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಸಭೆಯ ನಿರ್ಣಯಗಳನ್ನು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಮುಖ ನಿರ್ಣಯಗಳು:

- ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿ ಕೆ.ನಟರಾಜನ್ ಅವರು; ಆರ್‌ಎಸ್‌ಎ ವಿಭಾಗದಲ್ಲಿನ



ಅಸಂಖ್ಯಾತ ಅರ್ಜಿಗಳನ್ನು ಪಾರ್ಟ್ ಹರ್ಡ್ ಮಾಡಿ ಇರಿಸಿ- ಕೊಂಡಿರುವುದನ್ನು ಕೂಡಲೇ ನಿರ್ಬಂಧಿಸಬೇಕು. ಈ ಪಾರ್ಟ್ ಅರ್ಜಿಗಳ ವಿಚಾರಣೆಯನ್ನು ಅವರು ಮುಂದುವರಿಸದಂತೆ ನೋಡಿಕೊಳ್ಳಬೇಕು.

- ಹೈಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧ ಭ್ರಷ್ಟಾಚಾರದ ಆರೋಪ ಕೇಳಿಬಂದಲ್ಲಿ ಅವರನ್ನು ತವರು ರಾಜ್ಯಗಳಿಂದ ವರ್ಗ ಮಾಡಬೇಕು.
- ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಮೂರ್ತಿಗಳು, ಅವರ ಕುಟುಂಬದ ಸದಸ್ಯರ ಆಸ್ತಿ ಮತ್ತು ಆರ್ಥಿಕ ಸ್ಥಿತಿ ವಿವರಗಳು ಪ್ರತಿವರ್ಷವೂ ಅಧಿಕೃತ ವೆಬ್‌ಸೈಟ್‌ಗಳಲ್ಲಿ ಸಾರ್ವಜನಿಕ ಅವಗಾಹನೆಗಾಗಿ ಪ್ರಕಟವಾಗಬೇಕು.

‘ಕಲಂ 111 ರ ಬಳಕೆಗೂ ಮುನ್ನ ಎಚ್ಚರವಿರಲಿ’

ಬೆಂಗಳೂರು: ‘ಸಂಘಟಿತ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದಂತೆ ಭಾರತೀಯ ನ್ಯಾಯ ಸಂಹಿತೆ–2023 (ಬಿಎನ್‌ಎಸ್) ಕಲಂ 111 (1)ರ ಅಡಿಯಲ್ಲಿ ವಿಚಾರಣಾ ನ್ಯಾಯಾಲಯಗಳು ತನಿಖಾಧಿಕಾರಿಗೆ ಅನುಮತಿ ನೀಡುವಾಗ ಜಾಗ್ರತೆ ವಹಿಸಬೇಕು’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

‘ಸಂಘಟಿತ ಅಪರಾಧ ಆರೋಪಗಳ ಪ್ರಕರಣಕ್ಕೆ ಸಂಬಂಧಿಸಿ ತನಿಖೆ ನಡೆಸಲು ವಿಚಾರಣಾ ನ್ಯಾಯಾಲಯ ತನಿಖಾಧಿಕಾರಿಗೆ ಅನುಮತಿ ನೀಡುವಾಗ ಕಲಂ 111ರ ಅಡಿಯಲ್ಲಿ ಪಟ್ಟಿ ಮಾಡಲಾದ ಅಪರಾಧಗಳನ್ನು ಆರೋಪಿ ಎಸಗಿರಬೇಕು. ಸಂಘಟಿತ ಅಪರಾಧಗಳ ಸಿಂಡಿಕೇಟ್ ಸದಸ್ಯನಾಗಿರಬೇಕು. ಸಿಂಡಿಕೇಟ್ ಸದಸ್ಯನಾಗಿ ಅಥವಾ ಸಿಂಡಿಕೇಟ್ ಪರವಾಗಿ ಅಪರಾಧ ಎಸಗಿರಬೇಕು’ ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

‘ಆರೋಪಿ ವಿರುದ್ಧ 10 ವರ್ಷಗಳಲ್ಲಿ ಮೂರು ಅಥವಾ ಅದಕ್ಕಿಂತ ಹೆಚ್ಚು ವರ್ಷ ಜೈಲು ಶಿಕ್ಷೆ ವಿಧಿಸಬಹುದಾದ ಗಂಭೀರ ಸ್ವರೂಪದ ಅಪರಾಧ ಕೃತ್ಯಗಳಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿರಬೇಕು. ಇದನ್ನು ವಿಚಾರಣಾ ನ್ಯಾಯಾಲಯ ಪರಿಗಣಿಸಬೇಕು’ ಎಂದು ಪೀಠ ಹೇಳಿದೆ.

ಸ್ನೇಹಿತನ ಎಟಿಎಂ ಕಾರ್ಡ್ ಬಳಸಿ ₹1 ಲಕ್ಷ ಡ್ರಾ ಮಾಡಿದ ಆರೋಪದಡಿ ಗೋವಾದ ಅವಿನಾಶ್ ವಿರುದ್ಧ ಸಂಘಟಿತ ಅಪರಾಧ ಕೃತ್ಯದಡಿ ತನಿಖೆ ನಡೆಸಲು ಬೆಂಗಳೂರಿನ ಆಗ್ನೇಯ ಸೆನ್ ಠಾಣೆಯ ತನಿಖಾಧಿಕಾರಿಗೆ ಅನುಮತಿ ನೀಡಿದ್ದ ವಿಚಾರಣಾ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ಪೀಠ ಈ ಕುರಿತಂತೆ ಆದೇಶಿಸಿದೆ. ಅಂತೆಯೇ, ಪ್ರಕರಣದ ಅರ್ಜಿದಾರನಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

‘ಕ್ರಿಮಿನಲ್ ಪ್ರಕರಣ ಹಿಂತೆಗೆತ ಸದ್ಯಕ್ಕಿಲ್ಲ’

ಬೆಂಗಳೂರು: ‘ರಾಜ್ಯದ ವಿವಿಧ ಸಂಟನೆಗಳ ಹೋರಾಟಗಾರರು, ರಾಜಕಾರಣಿಗಳು ಹಾಗೂ ಅತ್ಯಂತ ಪ್ರಭಾವಿಗಳ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳನ್ನು ಏಪ್ರಿಲ್ 8ರವರೆಗೆ ಹಿಂಪಡೆಯು- ವುದಿಲ್ಲ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಹೋರಾಟಗಾರರು, ರಾಜಕಾರಣಿಗಳು ಹಾಗೂ ಪ್ರಭಾವಿಗಳೂ ಸೇರಿ ಮತ್ತಿತರರ ವಿರುದ್ಧ ದಾಖಲಾಗಿರುವ 43 ವಿವಿಧ ಪ್ರಕರಣಗಳನ್ನು ಹಿಂಪಡೆಯಲು ರಾಜ್ಯ ಸರ್ಕಾರ 2024ರ ಅಕ್ಟೋಬರ್ 10ರಂದು ಹೊರಡಿಸಿದ ಆದೇಶ ಪ್ರಶ್ನಿಸಿ ಹೈಕೋರ್ಟ್ ವಕೀಲ ಗಿರೀಶ್ ಭಾರದ್ವಾಜ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರಿ ವಕೀಲರು ಈ ಸಂಬಂಧ ಪ್ರಮಾಣ ಪತ್ರ ಸಲ್ಲಿಸಿದರು. ಅಂತೆಯೇ, ಅರ್ಜಿದಾರರು ಆಕ್ಷೇಪಿಸಿರುವ ಪ್ರಕರಣಗಳು ಯಾವ್ಯಾವ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿವೆ ಎಂಬ ಬಗ್ಗೆ ವಿವರಿಸಿ, ‘ಹೆಚ್ಚಿನ ಮಾಹಿತಿ ಒದಗಿಸಲು ಇನ್ನಷ್ಟು ಕಾಲಾವಕಾಶ ನೀಡಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಹೇಳಿಕೆ ದಾಖಲಿಸಿಕೊಂಡ ನ್ಯಾಯಪೀಠ ಕಾಲಾವಕಾಶ ನೀಡಿ ವಿಚಾರಣೆಯನ್ನು ಏಪ್ರಿಲ್ 8ಕ್ಕೆ ಮುಂದೂಡಿದೆ.

ಮಿಟ್ಟಲಕೋಡ್ ನೇಮಕ: ನೋಟಿಸ್

ಬೆಂಗಳೂರು: ಕರ್ನಾಟಕ ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ನೂತನ ಅಧ್ಯಕ್ಷ ಶಿದ್ಲಿಂಗಪ್ಪ ಶೇಖರಪ್ಪ ಮಿಟ್ಟಲಕೋಡ್ ಅವರ ನೇಮಕವನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಭಾರತೀಯ ವಕೀಲರ ಪರಿಷತ್‌ಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಕೆಎಸ್‌ಬಿಸಿ ಸದಸ್ಯ ಕೆ.ಕೋಟೇಶ್ವರ ರಾವ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಸ್.ಎಸ್.ಯಡ್ರಾಮಿ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿ- ಗಳಾದ ಭಾರತೀಯ ವಕೀಲರ ಪರಿಷತ್ ಪ್ರಧಾನ ಕಾರ್ಯದರ್ಶಿ, ರಾಜ್ಯ ವಕೀಲರ ಪರಿಷತ್ ಕಾರ್ಯದರ್ಶಿ ಹಾಗೂ ಅಧ್ಯಕ್ಷ ಎಸ್.ಎಸ್.ಮಿಟ್ಟಲಕೋಡ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ವಿಚಾರಣೆಯನ್ನು ಏಪ್ರಿಲ್ 7ಕ್ಕೆ ಮುಂದೂಡಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ಎಸ್.ಪೂರ್ಣಿಮಾ ವಕಾಲತ್ತು ವಹಿಸಿದ್ದಾರೆ.

‘ಮಿಟ್ಟಲಕೋಡ್ ಅವರ ನೇಮಕ ಮೇಲ್ನೋಟಕ್ಕೆ ಕಾನೂನು ಬಾಹಿರ ಮತ್ತು ಏಕಪಕ್ಷೀಯವಾಗಿದೆ. ಅಂತೆಯೇ, ವಕೀಲರ ಕಾಯ್ದೆ–1961ರ ಕಲಂ 8 ಮತ್ತು 8ಎ ಗೆ ವಿರುದ್ಧವಾಗಿದ್ದು, ಈ ನೇಮಕವನ್ನು ರದ್ದುಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಬಿಬಿಎಂಪಿ ಗುತ್ತಿಗೆ ಅವ್ಯವಹಾರ: ಮರು ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರ ಪಾಲಿಕೆ (ಬಿಎಂಪಿ) ಹಾಗೂ ಬಿಬಿಎಂಪಿಯಲ್ಲಿ 2005ರಿಂದ 2012ರ ಅವಧಿಯಲ್ಲಿ ನಡೆದ ಗುತ್ತಿಗೆ ಕಾಮಗಾರಿ ಅವ್ಯವಹಾರ ಆರೋಪದಡಿ ಬಿಬಿಎಂಪಿ ನಿವೃತ್ತ ಮುಖ್ಯ ಎಂಜಿನಿಯರ್ ಬಿ.ಟಿ. ರಮೇಶ್ ಸೇರಿದಂತೆ ಹಾಲಿ ಹಾಗೂ ನಿವೃತ್ತ ಎಂಜಿನಿಯರ್ ಮತ್ತು ಗುತ್ತಿಗೆದಾರರ ವಿರುದ್ಧದ ಆರೋಪಗಳನ್ನು ಕೈಬಿಟ್ಟು ಅವರನ್ನು ಆರೋಪಗಳಿಂದ ಬಿಡುಗಡೆ- ಗೊಳಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ 2023ರ ನವೆಂಬರ್ 8ರಂದು ಹೊರಡಿಸಿರುವ ಆದೇಶವನ್ನು ರದ್ದು- ಪಡಿಸಬೇಕು’ ಎಂದು ಕೋರಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಪುನರಾವಲೋಕನ ಅರ್ಜಿಗಳನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ಪೀಠ ಪುರಸ್ಕರಿಸಿದ್ದು, ಇಡೀ ಪ್ರಕರಣವನ್ನು ವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಿ ಆದೇಶಿಸಿದೆ.

‘ಆದೇಶದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳ ಆಧಾರದ ಮೇಲೆ ಪ್ರಕರಣವನ್ನು ಹೊಸದಾಗಿ ಪರಿಗಣಿಸಬೇಕು. ಆರೋಪಿಗಳ ವಿರುದ್ಧ ಪ್ರಾಸಿಕ್ಯೂಷನ್‌ಗೆ ಸರ್ಕಾರ ನೀಡಿರುವ ಪೂರ್ವಾನುಮತಿ ಆಧರಿಸಿ ವಿಚಾರಣಾ ಪ್ರಕಿಯೆ ಮುಂದುವರಿಸಬೇಕು’ ಎಂದು ಸೆಷನ್ಸ್ ನ್ಯಾಯಾಲಯಕ್ಕೆ ನಿರ್ದೇಶಿಸಿದೆ.

‘ಆರೋಪಗಳು ಮಲ್ಲೇಶ್ವರ, ಗಾಂಧಿನಗರ ಮತ್ತು ರಾಜರಾಜೇಶ್ವರಿನಗರದ ಎಂಜಿನಿಯರಿಂಗ್ ವಿಭಾಗಗಳಲ್ಲಿ ನಡೆದಿರುವ ವಿವಿಧ ಕಾಮಗಾರಿಗಳಲ್ಲಿನ ಅಕ್ರಮಗಳಿಗೆ ಸಂಬಂಧಿಸಿದ ಪ್ರಕರಣಗಳಾಗಿವೆ. ಎಲ್ಲಾ ಆರೋಪಗಳೂ ಕಾಮಗಾರಿ ಗುತ್ತಿಗೆ ನೀಡಿ, ಅವ್ಯವಹಾರ ನಡೆಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದಕ್ಕೆ ಸಂಬಂಧಿಸಿದಂತೆಯೇ ಇವೆ. ಹೀಗಿರುವಾಗ, ಆರೋಪಿಗಳನ್ನು ಖುಲಾಸೆಗೊಳಿಸಲು ಸಾಧ್ಯವಿಲ್ಲ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಯುಗಾದಿ ಜಾತ್ರಾ ಮಹೋತ್ಸವ

ಮಹದೇಶ್ವರ ಬೆಟ್ಟ: ಪ್ರಸಿದ್ಧ ಧಾರ್ಮಿಕ ಯಾತ್ರಾ ಸ್ಥಳವಾದ ಮಾದೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಯುಗಾದಿ ಜಾತ್ರಾ ಮಹೋತ್ಸವವು ಮಾ.27ರಿಂದ 30ರ ವರೆಗೆ ನಡೆಯಲಿದೆ.

ಮಹೋತ್ಸವದ ಪ್ರಯುಕ್ತ ರಾಜ್ಯದ ನಾನಾ ಭಾಗಗಳಿಂದ, ನೆರೆಯ ತಮಿಳುನಾಡಿನಿಂದ ಕಾಲ್ನಡಿಗೆಯಲ್ಲಿ ಸಾವಿರಾರು ಭಕ್ತರು ಮಾದಪ್ಪನ ಸನ್ನಿಧಿಗೆ ಬರುತ್ತಿದ್ದಾರೆ. ಮಂಗಳವಾರ ಸಂಜೆ ಬಂದವರಿಗೆ ರಂಗಮಂದಿರದ ಆವರಣ ಹಾಗೂ ಅಕ್ಕಪಕ್ಕದಲ್ಲಿ ಉಳಿಯಲು ವ್ಯವಸ್ಥೆ ಕಲ್ಪಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಬಿಬಿಎಂಪಿ ಬಜೆಟ್ ಇದೇ 28ಕ್ಕೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2025–26ನೇ ಸಾಲಿನ ಬಜೆಟ್ ಮಾರ್ಚ್ 28ರ ಶುಕ್ರವಾರದಂದು ಮಂಡನೆಯಾಗಲಿದೆ.


‘ಮಾರ್ಚ್ 27ರ ಗುರುವಾರ ಬೆಳಿಗ್ಗೆ 11ಕ್ಕೆ ಬಜೆಟ್ ಮಂಡನೆಯಾಗಲಿದೆ’ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದರು. ನಗರದ ಸಚಿವರು ಹಾಗೂ ಶಾಸಕರೊಂದಿಗೆ ಸೋಮವಾರ ನಡೆದ ಸಭೆಯ ನಂತರ ಕೆಲವು ಬದಲಾವಣೆ ಹಾಗೂ ಸೇರ್ಪಡೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೂಚಿಸಿದ್ದಾರೆ. ಹೀಗಾಗಿ ಬಜೆಟ್ ಮಂಡನೆ ಒಂದು ದಿನ ತಡವಾಗಲಿದೆ ಎನ್ನಲಾಗಿದೆ.

ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಕೆ. ಹರೀಶ್‌ಕುಮಾರ್ ಅವರು ಪುರಭವನದಲ್ಲಿ ಮಾರ್ಚ್ 28ರ ಬೆಳಿಗ್ಗೆ 11ಕ್ಕೆ ಬಜೆಟ್ ಮಂಡಿಸಲಿದ್ದಾರೆ.

ವರ್ಟಿಗೊ ಉಚಿತ ಪರೀಕ್ಷಾ ಶಿಬಿರ

ಬೆಂಗಳೂರು : ನಗರದ ಸಂವಾದ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್ ಸಂಸ್ಥೆಯಿಂದ ವರ್ಟಿಗೊ (ತಲೆ ಸುತ್ತುವುದು /ತಲೆ ಗಿರ್ರೆನ್ನುವುದು) ಮತ್ತು ಟಿನ್ನಿಟಸ್ ಕಾಯಿಲೆಯ ಉಚಿತ ಪರೀಕ್ಷೆ ಶಿಬಿರವನ್ನು ಆಯೋಜಿಸಲಾಗಿದೆ.

ಹೆಬ್ಬಾಳದ ಆನಂದಗಿರಿ ಬಡಾವಣೆಯ 5ನೇ ಮುಖ್ಯರಸ್ಥೆಯ, 1ನೇ ಅಡ್ಡ ರಸ್ತೆಯಲ್ಲಿರುವ ಸಂಸ್ಥೆಯ ಆವರಣದಲ್ಲಿ ಶಿಬಿರ ನಡೆಯಲಿದೆ. 24ರಿಂದ ಶಿಬಿರ ಆರಂಭವಾಗಿದ್ದು, 29ರವರೆಗೂ ನಡೆಯಲಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 9663388623 / 9480295004



ಶಸ್ತ್ರಚಿಕಿತ್ಸೆ ನಡೆಸಿದ ವೈದ್ಯರೊಂದಿಗೆ ಮಹಿಳೆ

ಸೆಪ್ಟಿಕ್ ಸಂಧಿವಾತ: ಬಂಗಾಳಿ ಮಹಿಳೆಗೆ ಶಸ್ತ್ರಚಿಕಿತ್ಸೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಪ್ಟಿಕ್ ಸಂಧಿವಾತದಿಂದ ಸಂಕೀರ್ಣ ಸಮಸ್ಯೆ ಎದುರಿಸುತ್ತಿದ್ದ 48 ವರ್ಷದ ಬಂಗಾಳಿ ಮಹಿಳೆಗೆ ಮಂಡಿಚಿಪ್ಪು ಬದಲಿ ಶಸ್ತ್ರಚಿಕಿತ್ಸೆಯನ್ನು ಇಲ್ಲಿನ ಪಿಇಎಸ್ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಮೂಳೆ ಚಿಕಿತ್ಸಾ ವಿಭಾಗ ಯಶಸ್ವಿಯಾಗಿ ನಡೆಸಿದೆ.

ಸೋಂಕಿನ ತೀವ್ರತೆಯನ್ನು ಗುರುತಿಸಿ, ಮೊದಲ ಹಂತದಲ್ಲಿ ಸೋಂಕು ನಿಯಂತ್ರಣ ಮತ್ತು ಕೀಲುಗಳ ತಯಾರಿಕೆ ಮೇಲೆ ಕೇಂದ್ರೀಕರಿಸಲಾಯಿತು.

ಎರಡನೇ ಹಂತದಲ್ಲಿ ಮಂಡಿಚಿಪ್ಪು ಬದಲಿ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಪರಿಣತಿ ಹೊಂದಿದ ವೈದ್ಯಕೀಯ ತಂಡದ ನೆರವಿನಿಂದ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಈಗ ರೋಗಿ ಚೇತರಿಸಿ- ಕೊಂಡಿದ್ದು, ಎಲ್ಲರಂತೆ ನಡೆಯಲಿದ್ದಾರೆ ಎಂದು ಆಸ್ಪತ್ರೆ ತಿಳಿಸಿದೆ.

ಮೂಳೆ ಚಿಕಿತ್ಸೆ ವಿಭಾಗದ ಪ್ರಾಧ್ಯಾಪಕ ಡಾ. ಮೌಲಿಕ್ ಬಿ. ಶಾ ಅವರ ನೇತೃತ್ವದಲ್ಲಿ ವೈದ್ಯಕೀಯ ತಂಡ ಈ ಶಸ್ತ್ರಚಿಕಿತ್ಸೆ ನಡೆಸಿದೆ.

ಈ ಕಾರ್ಯವನ್ನು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಜವಾಹರ್ ದೊರೆಸ್ವಾಮಿ, ವೈದ್ಯಕೀಯ ಸಂಸ್ಥೆಯ ನಿರ್ದೇಶಕ ಡಾ. ಸುರೇಶ್ ಕೃಷ್ಣಮೂರ್ತಿ, ಸಹ ವೈದ್ಯಕೀಯ ನಿರ್ದೇಶಕಿ ಡಾ. ರೂಪಾ ಸುರೇಶ್, ಪ್ರಾಂಶುಪಾಲ ಡಾ. ಹರಿಪ್ರಸಾದ್ ಶ್ಲಾಘಿಸಿದ್ದಾರೆ.

ಬೀಗ ಒಡೆದು ಕಳ್ಳತನ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗಳಿಗೆ ಹಾಕಲಾಗಿದ್ದ ಬೀಗ ಒಡೆದು ಕಳವು ಮಾಡುತ್ತಿದ್ದ ತಮಿಳುನಾಡು ಮೂಲದ ಆರೋಪಿಯನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಗ್ಗ ಅಲಿಯಾಸ್ ಮೆಡಿಕಲ್ ಜಗ್ಗ(35) ಬಂಧಿತ ಆರೋಪಿ. ಆರೋಪಿಯಿಂದ ₹10 ಲಕ್ಷ ಮೌಲ್ಯದ 80 ಗ್ರಾಂ ಚಿನ್ನಾಭರಣ, 1 ಕೆ.ಜಿ. ಬೆಳ್ಳಿ ಆಭರಣಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಮಾರುತಿ ನಗರದಲ್ಲಿ ವಾಸವಿದ್ದ ದೂರುದಾರರು, ಮಾರ್ಚ್ 10ರಂದು ಪತ್ನಿ ಜತೆಗೆ ಕೆಲಸಕ್ಕೆ ಹೋಗಿದ್ದರು. ಆಗ ಆರೋಪಿ ಮನೆಯ ಮುಂದಿನ ಬಾಗಿಲಿಗೆ ಹಾಕಿದ್ದ ಬೀಗವನ್ನು ಒಡೆದು 80 ಗ್ರಾಂ ಚಿನ್ನಾಭರಣ ಕದ್ದು ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದರು.

ಆರೋಪಿಯನ್ನು ರಾಜಗೋಪಾಲ ನಗರದಲ್ಲಿ ಬಂಧಿಸಲಾಗಿದೆ. ಜಗ್ಗನ ವಿರುದ್ಧ ತಮಿಳುನಾಡಿನಲ್ಲೂ ಹತ್ತಕ್ಕೂ ಹೆಚ್ಚು ಕಳವು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.

ಮಾರಕಾಸ್ತ್ರ ಹಿಡಿದು ರೀಲ್ಸ್ ಮಾಡಿದ್ದ ಪ್ರಕರಣ: ವಿಡಿಯೊದಲ್ಲಿ ಬಳಸಿದ, ಜಪ್ತಿಯಾದ ಮಚ್ಚಿಗೂ ವ್ಯತ್ಯಾಸ

ರಜತ್, ವಿನಯ್‌ಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರಕಾಸ್ತ್ರ ಹಿಡಿದು ರೀಲ್ಸ್ ಮಾಡಿದ್ದ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ಕಿರುತೆರೆ ನಟರಾದ ರಜತ್ ಕಿಶನ್ ಹಾಗೂ ವಿನಯ್‌ಗೌಡ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮಂಗಳವಾರ ತಡರಾತ್ರಿ ಕೋರಮಂಗಲದಲ್ಲಿರುವ ನ್ಯಾಯಾಧೀಶರ ಮನೆಗೆ ಆರೋಪಿಗಳನ್ನು ಹಾಜರು ಪಡಿಸಲಾಯಿತು. ಹೆಚ್ಚಿನ ವಿಚಾರಣೆಗಾಗಿ ಆರೋಪಿಗಳನ್ನು ತಮ್ಮ ಕಸ್ಟಡಿಗೆ ನೀಡುವಂತೆ ಪೊಲೀಸರು ಮನವಿ ಮಾಡಿದರು. ನ್ಯಾಯಾಧೀಶರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು.

ಇದಕ್ಕೂ ಮೊದಲು ಆರೋಪಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ರೀಲ್ಸ್ ಅನ್ನು ಇನ್‌ಸ್ಟಾಗ್ರಾಂನ 'ಬುಜ್ಜಿ' ಹೆಸರಿನ ಖಾತೆಯಲ್ಲಿ ಅಪ್ಲೋಡ್ ಮಾಡಿದ್ದಕ್ಕೆ ಎಫ್‌ಐಆರ್ ದಾಖಲಿಸಿಕೊಂಡಿದ್ದ ಬಸವೇಶ್ವರನಗರ ಠಾಣೆಯ ಪೊಲೀಸರು, ಸೋಮವಾರ ಸಂಜೆ ಇಬ್ಬರನ್ನೂ ವಶಕ್ಕೆ ಪಡೆದುಕೊಂಡಿದ್ದರು.



ಜಪ್ತಿ ಮಾಡಿರುವ ಮಚ್ಚಿನ ಮಾದರಿ

ಎಫ್‌ಎಸ್‌ಎಲ್‌ಗೆ ರವಾನೆ

ಆರೋಪಿಗಳು ನೀಡಿರುವ ಮಚ್ಚಿನ ಮಾದರಿ ಹಾಗೂ ವಿಡಿಯೊವನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿದೆ. ಅವರು ವಿಡಿಯೊವನ್ನು ಪರಿಶೀಲಿಸಿ ವರದಿ ನೀಡಲಿದ್ದಾರೆ. ಅದಾದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಸ್ಥಳ ಮಹಜರು

ಈ ಬೆಳವಣಿಗೆಯ ಬಳಿಕ ಇಬ್ಬರು ಆರೋಪಿಗಳನ್ನು ಬಸವೇಶ್ವರ ನಗರ ಠಾಣೆಯ ಪೊಲೀಸರು, ನಾಗರಬಾವಿಯ ಅಭಯ್ ಸ್ಟುಡಿಯೊ ಬಳಿಗೆ ಕರೆದೊಯ್ದು ಸ್ಥಳ ಮಹಜರು ನಡೆಸಿದರು. ಮಾರಕಾಸ್ತ್ರ ಹಿಡಿದು ರೀಲ್ಸ್ ಮಾಡಿದ್ದ ಸ್ಥಳವನ್ನು ಪೊಲೀಸರು ಪರಿಶೀಲನೆ ನಡೆಸಿದರು.



ರೀಲ್ಸ್‌ನಲ್ಲಿ ಬಳಸಿರುವ ಮಾರಕಾಸ್ತ್ರ

ರೀಲ್ಸ್‌ಗೆ ಬಳಸಿದ್ದು ಫೈಬರ್‌ನಿಂದ ತಯಾರಿಸಿದ್ದ ಮಚ್ಚಿನ ಮಾದರಿ ಎಂಬುದಾಗಿ ಆರೋಪಿಗಳು ಹೇಳಿ ಅದನ್ನು ಪೊಲೀಸರಿಗೆ ಒಪ್ಪಿಸಿದ್ದರು. ಅದಾದ ಮೇಲೆ ಇಬ್ಬರನ್ನೂ ಸೋಮವಾರ ಮಧ್ಯ ರಾತ್ರಿಯೇ ಬಿಡುಗಡೆ ಮಾಡಲಾಗಿತ್ತು.

'ರೀಲ್ಸ್‌ನಲ್ಲಿ ಆರೋಪಿಗಳು ಬಳಸಿರುವ ಮಚ್ಚಿಗೂ, ಅವರು ನಮಗೆ ಒಪ್ಪಿಸಿರುವ ಮಚ್ಚಿಗೂ ವ್ಯತ್ಯಾಸ ಕಂಡು ಬಂದಿದೆ. ಹೀಗಾಗಿ, ಇಬ್ಬರಿಗೂ ಮತ್ತೆ ನೋಟಿಸ್ ನೀಡಿ ವಿಚಾರಣೆಗೆ ಬರುವಂತೆ ಸೂಚಿಸಲಾಗಿತ್ತು. ಮಂಗಳವಾರ ಮಧ್ಯಾಹ್ನ ವಿಚಾರಣೆಗೆ ಬಂದಾಗ ವಶಕ್ಕೆ ಪಡೆದುಕೊಂಡು ಬಂಧಿಸಲಾಯಿತು. ಸ್ಥಳ ಮಹಜರು ಸಹ ನಡೆಸಲಾಗಿದೆ' ಪೊಲೀಸ್ ಮೂಲಗಳು ತಿಳಿಸಿವೆ.

ಸಾಕ್ಷ್ಯ ನಾಶದ ಆರೋಪ: ಆರೋಪಿಗಳು ಸಾಕ್ಷ್ಯ ನಾಶ ಪಡಿಸಿದ ಆರೋಪವಿದೆ. ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ವ್ಯತ್ಯಾಸ ಪತ್ತೆ?: ಮಚ್ಚುಗಳ ನಡುವಿನ ವ್ಯತ್ಯಾಸದ ಪತ್ತೆಗಾಗಿ ತಾಂತ್ರಿಕ ತಜ್ಞರಿಂದ ಪರಿಶೀಲನೆ ನಡೆಸಲಾಗುತ್ತಿದೆ ಎಂದು ತನಿಖಾಧಿಕಾರಿಯೊಬ್ಬರು ಹೇಳಿದರು.

ಜಪ್ತಿ ಮಾಡಿದ ಮಚ್ಚಿನ ಮಾದರಿಯಲ್ಲಿ ಹೊಳಪಿನ ಕೋಟಿಂಗ್ ಇದೆ. ರೀಲ್ಸ್‌ನಲ್ಲಿ ಇರುವ ಮಚ್ಚಿನಲ್ಲಿ ತುಕ್ಕು ಹಿಡಿದಿರುವಂತೆ ಕಾಣಿಸುತ್ತಿದೆ ಎಂದು ಮೂಲಗಳು ಹೇಳಿವೆ.

'ಖಾಸಗಿ ವಾಹಿನಿಯೊಂದರ ಶೋಗಾಗಿ ನಾಗರಬಾವಿಯ ಅಕ್ಷಯ ಸ್ಟುಡಿಯೊದ ಎದುರು ರೀಲ್ಸ್ ಮಾಡಿದ್ದೆವು. ಕಾರ್ಯಕ್ರಮದಲ್ಲಿ ಪುಷ್ಪ ಹಾಗೂ ದರ್ಶನ್ ಪಾತ್ರದಲ್ಲಿ ಇಬ್ಬರೂ ಕಾಣಿಸಿಕೊಂಡಿದ್ದೆವು. ಕಾರ್ಯಕ್ರಮದ ಪ್ರಚಾರಕ್ಕಾಗಿ ಫೈಬರ್‌ನ ಮಚ್ಚಿನ ಮಾದರಿಯನ್ನು ಹಿಡಿದು ರೀಲ್ಸ್ ಮಾಡಿದ್ದಾಗಿ ಆರೋಪಿಗಳು ವಿಚಾರಣೆ ವೇಳೆ ಹೇಳಿಕೆ ನೀಡಿದ್ದಾರೆ. ಅಲ್ಲದೇ ಕಾರ್ಯಕ್ರಮದ ಪ್ರೊಮೊವನ್ನು ತೋರಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿಗಳು

ಸುದ್ದಿ 2 ನಿಮಿಷ

ಮಲೇಷ್ಯಾದಿಂದ ತಂದ ಆರು ಕಾಡು ಕೋತಿಗಳ ರಕ್ಷಣೆ

ದೇವನಹಳ್ಳಿ: ಮಲೇಷ್ಯಾದ ಕ್ವಾಲಾಲಂಪುರದಿಂದ ಭಾನುವಾರ ರಾತ್ರಿ ಬೆಂಗಳೂರಿಗೆ ವಿಮಾನದಲ್ಲಿ ಬಂದಿಳಿದ ತಮಿಳುನಾಡಿನ ಪ್ರಯಾಣಿಕರೊಬ್ಬರ ಸೂಟ್‌ಕೇಸ್‌ನಲ್ಲಿ ಆರು ಜೀವಂತ ಕಾಡು ಕೋತಿಗಳು ಪತ್ತೆಯಾಗಿವೆ.

ಮಲೇಷ್ಯಾದಿಂದ ಕಳ್ಳ ಸಾಗಣೆ ಮೂಲಕ ತರಲಾಗಿದ್ದ ಆರು ಕಾಡು ಕೋತಿಗಳನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ರಕ್ಷಣೆ ಮಾಡಿ, ಒಂದೇ ದಿನದಲ್ಲಿ ಮಲೇಷ್ಯಾಕ್ಕೆ ವಾಪಸ್ ಕಳುಹಿಸಿದ್ದಾರೆ.

ಪ್ರಯಾಣಿಕರ ಲಗೇಜ್ ಬ್ಯಾಗ್ ತಪಾಸಣೆ ವೇಳೆ ಸೂಟ್‌ಕೇಸ್‌ವೊಂದರಿಂದ ಪ್ರಾಣಿಗಳ ಅರಚಾಟ ಕೇಳಿದ ಕಸ್ಟಮ್ಸ್ ಅಧಿಕಾರಿಗಳು ಸೂಟ್‌ಕೇಸ್ ತೆಗೆಸಿ ಪರಿಶೀಲನೆ ಮಾಡಿದರು. ಚಾಕೋಲೇಟ್ ಹಾಗೂ ಬಟ್ಟೆ ತುಂಬಿದ್ದ ಬ್ಯಾಗ್‌ನಲ್ಲಿ ಆರು ಕೋತಿಗಳನ್ನು ಬಚ್ಚಿಟ್ಟು ತರಲಾಗಿತ್ತು.



ನಾಲ್ಕು ಯಾಮಂಗ್ ಗಿಬ್ಬನ್ ಜಾತಿಯ ಕೋತಿ ಹಾಗೂ ಎರಡು ಹಂದಿ ಬಾಲದ ಮಕಾಕ್ ಕಾಡು ಕೋತಿಗಳು ಸೂಟ್‌ಕೇಸ್‌ನಲ್ಲಿದ್ದವು. ಈ ಕೋತಿಗಳು ಮಲೇಷ್ಯಾ, ಥಾಯ್ಲೆಂಡ್ ಹಾಗೂ ದಕ್ಷಿಣ ಏಷ್ಯಾದ ಕಾಡುಗಳಲ್ಲಿ ಮಾತ್ರ ಕಂಡು ಬರುತ್ತವೆ ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದರು.

ತಮಿಳುನಾಡಿನ ಈ ಆರೋಪಿ ಈ ಹಿಂದೆಯೂ ಇಂತಹ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಎಂದು ಕಸ್ಟಮ್ ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ರಮ ವಾಸ: ಮೂವರು ವಿದೇಶಿಯರ ಬಂಧನ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ವಾಸವಾಗಿದ್ದ ಮೂವರು ವಿದೇಶಿ ಪ್ರಜೆಗಳನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರು ಬಂಧಿಸಿದ್ದಾರೆ.

ಸುಡಾನ್‌ನ ಮೊಹಮ್ಮದ್ ಇಬ್ರಾಹಿಂ(32), ಖಲೀದ್ ಫೆಕ್ರಿ ಇಲಾಮಿನ್ ಮೊಹಮ್ಮದ್ (30) ಹಾಗೂ ನೈಜೀರಿಯಾದ ಚಿಬೂಜರ್ ಇಮ್ಯಾನ್ಯೂಯಲ್ ಇಜ್(38) ಬಂಧಿತರು.

ಆರೋಪಿಗಳ ವಿರುದ್ಧ ಬಾಣಸವಾಡಿ ಮತ್ತು ರಾಮಮೂರ್ತಿ ನಗರ ಠಾಣೆಯಲ್ಲಿ ವಿದೇಶಿ ಕಾಯ್ದೆ ಉಲ್ಲಂಘನೆ ಆರೋಪದ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ವಿದ್ಯಾರ್ಥಿ ವೀಸಾ ಪಡೆದು 2019ರಲ್ಲಿ ಇಬ್ರಾಹಿಂ ಹಾಗೂ ಖಲೀದ್ ಭಾರತಕ್ಕೆ ಬಂದಿದ್ದರು. 2022ರಲ್ಲೇ ಇವರ ವೀಸಾ ಅವಧಿ ಮುಕ್ತಾಯವಾಗಿತ್ತು. ನೈಜೀರಿಯಾ ಪ್ರಜೆ ಕೂಡ 2019ರಲ್ಲೇ ಮೂರು ತಿಂಗಳ ಪ್ರವಾಸಿ ವೀಸಾ ಪಡೆದು ಭಾರತಕ್ಕೆ ಬಂದಿದ್ದ. ವೀಸಾ ಅವಧಿ ಮುಕ್ತಾಯವಾದ ಮೇಲೂ ಅಕ್ರಮವಾಗಿ ನೆಲಸಿದ್ದ. ಮೂವರನ್ನು ಬಂಧಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಪತ್ನಿ ಕೊಲೆಗೆ ಯತ್ನ: ಪಿಎಸ್‌ಐ ವಿರುದ್ಧ ದೂರು

ವರದಕ್ಷಿಣೆಗಾಗಿ ಕಿರುಕುಳದ ಆರೋಪ, ಚಂದ್ರಾಲೇಔಟ್ ಠಾಣೆಯಲ್ಲಿ ನಾಲ್ವರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರದಕ್ಷಿಣೆಗಾಗಿ ಪತ್ನಿಗೆ ಕಿರುಕುಳ ನೀಡಿ ಕೊಲೆಗೆ ಯತ್ನಿಸಿದ ಆರೋಪದಡಿ ಧರ್ಮಸ್ಥಳ ಪೊಲೀಸ್ ಠಾಣೆಯ ಪಿಎಸ್‌ಐ ಪಿ.ಕಿಶೋರ್ ಸೇರಿದಂತೆ ನಾಲ್ವರ ವಿರುದ್ಧ ಇಲ್ಲಿನ ಚಂದ್ರಾಲೇಔಟ್ ಪೊಲೀಸ್ ಠಾಣೆಯಲ್ಲಿ ಸೋಮವಾರ ರಾತ್ರಿ ಎಫ್‌ಐಆರ್ ದಾಖಲಾಗಿದೆ.



ಪಿ.ಕಿಶೋರ್

ಕಿಶೋರ್ ಅವರ ಪತ್ನಿ, ನಾಗರಬಾವಿ ಟೀಚರ್ಸ್ ಕಾಲೊನಿಯ ಮಾನಸ ನಗರದ ನಿವಾಸಿ ಆರ್.ವರ್ಷಾ ಅವರು ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕಿಶೋರ್ ಅವರ ತಂದೆ ಪುಟ್ಟಚನ್ನಪ್ಪ, ತಾಯಿ ಸರಸ್ವತಮ್ಮ, ಸಹೋದರ ಪಿ.ಚಂದನ್ ಅವರ ವಿರುದ್ಧವೂ ಪ್ರಕರಣ ದಾಖಲಾಗಿದೆ. ಎಲ್ಲರೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದ ನಿವಾಸಿಗಳು.

'ವರದಕ್ಷಿಣೆ ತರುವಂತೆ ಪದೇ ಪದೇ ಹಿಂಸೆ ನೀಡಿ, ಕತ್ತು ಹಿಸುಕಿ ಕೊಲೆಗೆ ಯತ್ನಿಸಿದ್ದಾರೆ' ಎಂದು ಆರೋಪಿಸಿ, ವರ್ಷಾ ಅವರು ದೂರು ನೀಡಿದ್ದಾರೆ ಎಂದು ಪೊಲೀಸರು ಹೇಳಿದರು.

ದೂರಿನಲ್ಲಿ ಏನಿದೆ?: 'ಮಧ್ಯವರ್ತಿಯೊಬ್ಬರು ಹುಡುಗನನ್ನು ತೋರಿಸಿದ್ದರು. ಎರಡು ಕುಟುಂಬಗಳು ಒಪ್ಪಿ ಮದುವೆಗೆ ನಿರ್ಧಾರವಾಗಿತ್ತು. ಮಾತುಕತೆ ವೇಳೆ ಮದುವೆ ಖರ್ಚಿಗೆಂದು ₹25 ಲಕ್ಷ ಕೊಡುವಂತೆ ಪುಟ್ಟಚನ್ನಪ್ಪ ಹಾಗೂ ಕುಟುಂಬಸ್ಥರು ಕೇಳಿದ್ದರು. ಅಷ್ಟು ಹಣ ಕೊಡಲು ಸಾಧ್ಯವಿಲ್ಲ. ₹10 ಲಕ್ಷ ಕೊಡುತ್ತೇವೆ ಎಂದು ಹೇಳಿದಾಗ ಅವರು ಒಪ್ಪಿಕೊಂಡಿದ್ದರು. 2023ರ ನವೆಂಬರ್ 24ರಂದು ನಿಶ್ಚಿತಾರ್ಥ ನಡೆದಿತ್ತು. ಆಗ, 18 ಗ್ರಾಂನ ಚಿನ್ನದ ಉಂಗುರವನ್ನು ಕಿಶೋರ್‌ಗೆ ಹಾಕಿದ್ದೆವು. ಕೆಲವು ದಿನಗಳ ಬಳಿಕ ಕಾರು ಕೊಡಿಸುವಂತೆ ಕಿಶೋರ್ ಕೇಳಿದ್ದರು. ಕಾರು ಕೊಡಿಸಲು ಸಾಧ್ಯವಿಲ್ಲ ಎಂದು ಹೇಳಿದ್ದೆ. ತಂದೆಯವರಿಗೆ ವಿಷಯ ಗೊತ್ತಾಗಿ, ಕಾರು ಕೊಡಿಸುವುದಾಗಿ ಹೇಳಿದ್ದರು. ಬೆಂಗಳೂರಿನ ರಾಜಾಜಿನಗರದ ಹುಂಡೈ ಶೋರೂಂನಲ್ಲಿ ₹23 ಲಕ್ಷ ಮೌಲ್ಯದ ಕಾರು ಕೊಡಿಸಿದ್ದೆವು' ಎಂದು ವರ್ಷಾ ಅವರು ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'2024ರ ಫೆ.21ರಂದು ಮದುವೆ ನಡೆದಿತ್ತು. ಮದುವೆ ಸಂದರ್ಭದಲ್ಲಿ ₹10 ಲಕ್ಷ ನಗದು, ಹುಡುಗನಿಗೆ 135 ಗ್ರಾಂ ಚಿನ್ನದ ಆಭರಣ, ನನಗೆ 850 ಗ್ರಾಂ ಚಿನ್ನಾಭರಣ, 3 ಕೆ.ಜಿ. ಬೆಳ್ಳಿ ಆಭರಣ ನೀಡಿದ್ದರು. ಅದ್ದೂರಿಯಿಂದ ಮದುವೆ ಮಾಡಿಕೊಡಲು ಪೋಷಕರು ₹60 ಲಕ್ಷ ಖರ್ಚು ಮಾಡಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಮೇಲಾಧಿಕಾರಿಗೆ ಲಂಚ ನೀಡುವುದಕ್ಕಾಗಿ ಕಿರುಕುಳ'

'ಮದುವೆಯಾದ ಸಂದರ್ಭದಲ್ಲಿ ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ಪಿ.ಕಿಶೋರ್ ಕೆಲಸ ಮಾಡುತ್ತಿದ್ದರು. ಈ ಠಾಣೆಯಲ್ಲಿ ಯಾವುದೇ ಆದಾಯ ಇಲ್ಲ. ಬೇರೆ ಠಾಣೆಗೆ ವರ್ಗಾವಣೆ ಮಾಡಿಸಿಕೊಳ್ಳಬೇಕು. ವರ್ಗಾವಣೆ ಮಾಡಿಸಿಕೊಳ್ಳಲು, ಮೇಲಾಧಿಕಾರಿಗಳಿಗೆ ಲಂಚ ಕೊಡಬೇಕು. ನಿಮ್ಮ ತಂದೆಯಿಂದ ₹10 ಲಕ್ಷ ತೆಗೆದುಕೊಂಡು ಬರುವಂತೆ ಹೇಳಿದ್ದರು. ಈಗಾಗಲೇ ಮದುವೆಗೆ ₹1 ಕೋಟಿ ಖರ್ಚಾಗಿದೆ. ಮತ್ತೆ ಹಣ ಕೇಳಿದರೆ, ತಂದೆ ಎಲ್ಲಿಂದ ಹಣ ತಂದು ಕೊಡುತ್ತಾರೆಂದು ಪ್ರಶ್ನಿಸಿದ್ದೆ. ಗನ್ ತೆಗೆದುಕೊಂಡು ಶೂಟ್ ಮಾಡಲು ಮುಂದಾಗಿದ್ದರು. ಧರ್ಮಸ್ಥಳಕ್ಕೆ ವರ್ಗಾವಣೆಯಾದ ಮೇಲೆ ಪೀಠೋಪಕರಣ ಖರೀದಿಗೆ ₹2 ಲಕ್ಷ ತೆಗೆದುಕೊಂಡು ಬರುವಂತೆ ಹೇಳಿದ್ದರು. ಅದಕ್ಕೆ ಒಪ್ಪದಿದ್ದಾಗ ವರದಕ್ಷಿಣೆ ವಿಚಾರವಾಗಿ ಪ್ರತಿನಿತ್ಯ ಕಿರುಕುಳ ನೀಡುತ್ತಿದ್ದರು. ಮನೆಯಲ್ಲಿದ್ದ ಲಟ್ಟಣಿಗೆಯಿಂದ ಹಲ್ಲೆ ಮಾಡಿದ್ದರು. ಇದೇ ತಿಂಗಳ 21ರಂದು ಕಿಶೋರ್ ಅವರು ರಾತ್ರಿ 9ರಿಂದ ಮಧ್ಯರಾತ್ರಿ 1 ಗಂಟೆಯವರೆಗೂ ಬೈಯ್ದು, ಪೊಲೀಸ್ ಬೆಲ್ಟ್‌ನಿಂದ ಹಲ್ಲೆ ನಡೆಸಿದ್ದಾರೆ. ಪೋಷಕರೊಂದಿಗೆ ಬೆಂಗಳೂರಿಗೆ ಬಂದು ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದೇನೆ' ಎಂಬುದಾಗಿ ದೂರಿನಲ್ಲಿ ಪತ್ನಿ ವರ್ಷಾ ಉಲ್ಲೇಖಿಸಿದ್ದಾರೆ.

ಬೈಕ್‌ನಿಂದ ಬಿದ್ದ ವಿದ್ಯಾರ್ಥಿನಿ ಮೇಲೆ ಹರಿದ ಕ್ಯಾಂಟರ್

ಪ್ರಜಾವಾಣಿ ವಾರ್ತೆ

ಮಾಗಡಿ: ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ಬೆಳಗ್ಗೆ ಬೈಕ್‌ನಿಂದ ಆಕಸ್ಮಿಕವಾಗಿ ಕೆಳಗೆ ಬಿದ್ದ ಆಳ್ವಾಸ್ ಕಾಲೇಜಿನ ಎಂಜಿನಿಯರಿಂಗ್ ವಿದ್ಯಾರ್ಥಿನಿ ಮೇಲೆ ಕ್ಯಾಂಟರ್ ಹರಿದು ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾಳೆ.

ತಾಲ್ಲೂಕಿನ ಬ್ಯಾಡರಹಳ್ಳಿ ಗ್ರಾಮದ ಸಿದ್ದರಾಜು ಮತ್ತು ಜಗದಾಂಬ ದಂಪತಿ ಮಗಳು ದಾಕ್ಷಾಯಿಣಿ ಅಲಿಯಾಸ್ ಧನುಶ್ರೀ (20) ಮೃತ ಯುವತಿ.

ಊರ ಹಬ್ಬಕ್ಕಾಗಿ ಬ್ಯಾಡರಹಳ್ಳಿಗೆ ಬಂದಿದ್ದ ಆಕೆ ಹಬ್ಬ ಮುಗಿಸಿಕೊಂಡು ಮಂಗಳವಾರ ಬೆಳಗ್ಗೆ ಮಂಗಳೂರಿಗೆ ಮರಳಲು ಸಹೋದರ ರೇಣುಕೇಶ್ ಜತೆ ಕುಣಿಗಲ್ ರೈಲ್ವೆ ನಿಲ್ದಾಣಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದರು.

ಮೂವರ ಬಂಧನ: ₹40 ಲಕ್ಷ ಮೌಲ್ಯದ ಆಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗೆ ನುಗ್ಗಿ ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಹಾಗೂ ಕದ್ದ ಚಿನ್ನವನ್ನು ವಿಲೇವಾರಿ ಮಾಡುತ್ತಿದ್ದ ನಾಲ್ವರನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸುಬ್ರಹ್ಮಣ್ಯಪುರದ ಹನುಮಗಿರಿ ಬೆಟ್ಟದ ಬಳಿಯ ನಿವಾಸಿ ಪ್ರವೀಣ್ ಅಲಿಯಾಸ್ ಗುಳ್ಳೆ (30) ಮತ್ತು ಈತನಿಂದ ಕಳವು ಚಿನ್ನಾಭರಣಗಳನ್ನು ಪಡೆದು ವಿಲೇವಾರಿ ಮಾಡುತ್ತಿದ್ದ ಟೆಕ್ಕಿ, ಯಶವಂತಪುರ ನಿವಾಸಿ ನಿಖಿಬ್ರೌನ್(28) ಹಾಗೂ ಡಿಪ್ಲೊಮಾ ಎಂಜಿನಿಯರ್ ಪ್ರಶಾಂತ್(26), ರಾಜಾಜಿನಗರದ ನಿವಾಸಿ ಲಿಖಿತ್(30) ಬಂಧಿತರು.

ಬಂಧಿತರಿಂದ ₹ 40 ಲಕ್ಷ ಮೌಲ್ಯದ 460 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.



ಠಾಣಾ ವ್ಯಾಪ್ತಿಯ ಬಾಲಾಜಿ ಲೇಔಟ್‌ನಲ್ಲಿ ವಾಸವಾಗಿರುವ ದೂರುದಾರರು, ಮಾರ್ಚ್ 2ರಂದು ಸಂಜೆ ಮನೆಗೆ ಬೀಗ ಹಾಕಿಕೊಂಡು ಸಮೀಪದ ದೇವಸ್ಥಾನಕ್ಕೆ ತೆರಳಿದ್ದರು. ಮನೆಗೆ ವಾಪಸ್ ಬಂದು ನೋಡಿದಾಗ ಕಳ್ಳತನ ನಡೆದಿದ್ದು ಗೊತ್ತಾಗಿತ್ತು. ಮನೆಯ ಮಾಲೀಕರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿ ಪ್ರವೀಣ್, ಈ ಹಿಂದೆ ಗಿರಿನಗರ ಠಾಣಾ ವ್ಯಾಪ್ತಿಯಲ್ಲಿ ಬೈಕ್ ಕಳ್ಳತನ ಮಾಡಿದ್ದ. ಕದ್ದ ಬೈಕ್ ಮೂಲಕವೇ ನಗರದಲ್ಲಿ ಸುತ್ತಾಟ ನಡೆಸಿ ಬೀಗ ಹಾಕಿದ ಮನೆಗಳನ್ನು ಗುರುತಿಸಿ ತನ್ನ ಸಹಚರರ ಜತೆಗೆ ಸೇರಿಕೊಂಡು ಕಳ್ಳತನ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

'ಹಿಂದುತ್ವ ಯಾವುದೇ ಪಕ್ಷದ ಸ್ವತ್ತಲ್ಲ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಹಿಂದುತ್ವ, ದೇವರು ಬಿಜೆಪಿ ಅಥವಾ ಯಾವುದೇ ಪಕ್ಷದ ಸ್ವತ್ತಲ್ಲ, ಯಾವುದೇ ವ್ಯಕ್ತಿಯ ಸಿದ್ಧಾಂತವಲ್ಲ' ಎಂದು ಮಾಜಿ ಶಾಸಕಿ ಕೆ.ಪೂರ್ಣಿಮಾ ಶ್ರೀನಿವಾಸ್ ಹೇಳಿದರು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶ ಮತ್ತು ಬೆಂಗಳೂರು ಪಶ್ಚಿಮ ಜಿಲ್ಲಾ ಯುವ ಕಾಂಗ್ರೆಸ್ ಹಾಗೂ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷರು, ಪದಾಧಿಕಾರಿಗಳಿಗೆ ಅಭಿನಂದನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಾವೆಲ್ಲರೂ ಪ್ರತಿದಿನ ದೇವರ ಪೂಜೆ, ಆರಾಧನೆ, ಧ್ಯಾನ ಮಾಡುತ್ತೇವೆ. ಬಿಜೆಪಿಯವರಂತೆ ಮತಕ್ಕಾಗಿ ಜಾತಿ, ಧರ್ಮದ ಹೆಸರು ಹೇಳುವವರು ನಾವಲ್ಲ' ಎಂದರು.

ಕೆಪಿಸಿಸಿ ವಕ್ತಾರೆ ಎಚ್.ಕುಸುಮಾ ಮಾತನಾಡಿ, 'ಬಿಜೆಪಿ ಶಾಸಕ ಮುನಿರತ್ನ ಅವರ ಮೋಸ, ವಂಚನೆ ವಿರುದ್ದ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ' ಎಂದರು.

ಎಂಡಿಎಂಎ ವಶ ಪ್ರಕರಣ– ಪೊಲೀಸರ ಮಾಹಿತಿ


'ವಿಚಾರಣೆಗೆ ಸಹಕರಿಸುತ್ತಿಲ್ಲ'

ಪ್ರಜಾವಾಣಿ ವಾರ್ತೆ


ಮಂಗಳೂರು: ಇಲ್ಲಿನ ಸಿಸಿಬಿ ಪೊಲೀಸರು ₹75 ಕೋಟಿಗೂ ಹೆಚ್ಚು ಮೌಲ್ಯದ ನಿಷೇಧಿತ ಎಂಡಿಎಂಎ ವಶಪಡಿಸಿಕೊಂಡ ಪ್ರಕರಣದ ಆರೋಪಿಗಳಿಬ್ಬರ ಪೊಲೀಸ್ ಕಸ್ಟಡಿ ಸೋಮವಾರಕ್ಕೆ ಅಂತ್ಯವಾಗಿದ್ದು, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ವಿಚಾರಣೆ ವೇಳೆ ಇಬ್ಬರೂ ಆರೋಪಿಗಳು ಸಹಕರಿಸದ ಕಾರಣ ಇಲ್ಲಿನ ಸಿಸಿಬಿ ಪೊಲೀಸರು ಈ ಪ್ರಕರಣದಲ್ಲಿ ಲಭ್ಯವಿರುವ ತಾಂತ್ರಿಕ ಪುರಾವೆಗಳ ವಿಶ್ಲೇಷಣೆಗಳ ಮೂಲಕವೇ ಹೆಚ್ಚಿನ ಮಾಹಿತಿ ಕಲೆಹಾಕುವ ಪ್ರಯತ್ನದಲ್ಲಿ ತೊಡಗಿದ್ದಾರೆ.

ನಿಷೇಧಿತ ಎಂಡಿಎಂಎ ಸಾಗಣೆ ಮಾಡಿದ ಆರೋಪದ ಮೇಲೆ ಸಿಸಿಬಿ ಪೊಲೀಸರು ದಕ್ಷಿಣ ಆಫ್ರಿಕಾದ ಬಾಂಬಾ ಫಾಂಟಾ ಹಾಗೂ ಅಬಿಗೇಲ್ ಅಡ್ನೋಯಿಸ್ ಎಂಬುವರನ್ನು ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ನೀಲಾದ್ರಿನಗರದಲ್ಲಿ ಮಾರ್ಚ್ 14ರಂದು ಬಂಧಿಸಿದ್ದರು. ಅದೇ ದಿನ ದೆಹಲಿಯಿಂದ ಬೆಂಗಳೂರಿಗೆ ಪ್ರಯಾಣಿಸಿದ್ದ ಆ ಮಹಿಳೆಯರಿಂದ 37.87 ಕೆ.ಜಿಗಳಷ್ಟು ಎಂ.ಡಿ.ಎಂ.ಎ ವಶಪಡಿಸಿಕೊಂಡಿದ್ದರು.



ಅಬಿಗೇಲ್



ಬಾಂಬಾ


'ವಿಚಾರಣೆ ವೇಳೆ ಆರೋಪಿಗಳು ನಮ್ಮ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿಲ್ಲ. ಎಂಡಿಎಂಎ ಮಾರಾಟ ಜಾಲದ ಹಿಂದಿರುವ ವ್ಯಕ್ತಿಗಳ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕಲು ಬೇರೆ ಮಾರ್ಗಗಳನ್ನು ಹುಡುಕಬೇಕಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಾರ್ಕೋಟಿಕ್ ಕಂಟ್ರೋಲ್ ಬ್ಯೂರೊ ಹಾಗೂ ಗುಪ್ತವಾರ್ತೆ ವಿಭಾಗದವರೂ ಈ ಪ್ರಕರಣಕ್ಕೆ ಸಂಬಂಧಿಸಿ ಇಲ್ಲಿನ ಪೊಲೀಸರಿಂದ ಮಾಹಿತಿ ಪಡದುಕೊಂಡಿದ್ದಾರೆ.

'ಜಾಲದ ಮೂಲ ತಲುಪಲು ಯತ್ನ'

'ಸಿಸಿಬಿ ಪೊಲೀಸರು ಬೆಂಗಳೂರಿಗೆ ಹಾಗೂ ನವದೆಹಲಿಗೆ ತೆರಳಿ ಈ ಪ್ರಕರಣದ ಮಹಜರು ಹಾಗೂ ಕಾನೂನು ಸಂಬಂಧಿಸಿದ ಔಪಚಾರಿಕ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ್ದಾರೆ. ಈ ಆರೋಪಿಗಳ ಬಂಧನದ ಬಳಿಕ ಮಾದಕ ವಸ್ತು ಮಾರಾಟ ಜಾಲದಲ್ಲಿ ತೊಡಗಿದವರು ಜಾಗೃತರಾಗಿದ್ದಾರೆ. ಕೆಲ ಸಮಯ ಅವರು ಚಟುವಟಿಕೆಗಳನ್ನು ನಿಲ್ಲಿಸಿರುವಂತೆ ಕಾಣುತ್ತಿದೆ. ಹಾಗಾಗಿ ಈ ಪ್ರಕರಣಕ್ಕೆ ಸಂಬಂಧಿಸಿದ ತಾಂತ್ರಿಕ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಮೂಲಕ ಈ ಮಾದಕ ವಸ್ತು ಮಾರಾಟ ಜಾಲದ ಮೂಲವನ್ನು ತಲುಪಲು ಯತ್ನಿಸುತ್ತಿದ್ದೇವೆ' ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ಮಾಹಿತಿ ನೀಡಿದರು.

'ಈ ಇಬ್ಬರು ಆರೋಪಿಗಳ ಬಂಧನಕ್ಕೆ ಇಲಾಖೆ ಬಹಳಷ್ಟು ಶ್ರಮ ಹಾಕಿತ್ತು. ಸಿಸಿಬಿ ಪೊಲೀಸರು ಆರು ತಿಂಗಳಿಗೂ ಹೆಚ್ಚು ಕಾಲ ಈ ಜಾಲದ ಚಟುವಟಿಕೆ ಮೇಲೆ ನಿಗಾ ಇಟ್ಟಿದ್ದರು' ಎಂದರು.



ರಾಜಕಾಲುವೆಗೆ ಒಳಚರಂಡಿ ಕೊಳವೆ ಸಂಪರ್ಕ ಕಲ್ಪಿಸಿರುವುದು

'ರಾಜಕಾಲುವೆಗೆ ಒಳಚರಂಡಿ ಸಂಪರ್ಕ'

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಸಮೀಪದ ಬಂಡೇಪಾಳ್ಯದಲ್ಲಿ ಅಪಾರ್ಟ್‌ಮೆಂಟ್ ಮತ್ತು ಮನೆಗಳ ಒಳಚರಂಡಿ ನೀರನ್ನು ನೇರವಾಗಿ ರಾಜಕಾಲುವೆಗೆ ಹರಿಸಲಾಗುತ್ತಿದೆ. ಇದರಿಂದ ದುರ್ವಾಸವನೆ ಹೆಚ್ಚಾಗಿದ್ದು, ರೋಗ ಹರಡುವ ಭೀತಿಯೂ ಎದುರಾಗಿದೆ ಎಂದು ನಿವಾಸಿಗಳು ದೂರಿದ್ದಾರೆ.

'ರಾಜಕಾಲುವೆಯನ್ನು ಅಲ್ಲಲ್ಲಿ ಒತ್ತುವರಿ ಮಾಡಲಾಗಿದೆ. ಇಲ್ಲಿ ಹೂಳು ತೆಗೆದಿಲ್ಲ. ಹೀಗಾಗಿ ನೀರು ನಿಂತಲ್ಲೇ ನಿಂತು ಗಬ್ಬು ವಾಸನೆ ಬೀರುತ್ತಿದೆ. ಈ ಬಗ್ಗೆ ಬಿಬಿಎಂಪಿ ಮತ್ತು ಜಲಮಂಡಳಿ ಗಮನಕ್ಕೆ ತಂದರೂ ಕ್ರಮಕೈಗೊಳ್ಳುತ್ತಿಲ್ಲ' ಎಂದು ಬಂಡೇಪಾಳ್ಯದ ಗೃಹಿಣಿ ವರಲಕ್ಷ್ಮಿ ಹೇಳಿದರು.

'ರಾಜಕಾಲುವೆ ಮೂಲಕ ಹರಿದು ಬರುವ ನೀರು ಬಂಡೇಪಾಳ್ಯಕ್ಕೆ ಹೊಂದಿಕೊಂಡಿರುವ ಗಾರ್ವೆಬಾವಿಪಾಳ್ಯ ಕೆರೆಯನ್ನು ಸೇರುತ್ತಿದೆ. ಸೊಳ್ಳೆ ಹಾವಳಿ ಹೆಚ್ಚಾಗಿದ್ದು, ಮಕ್ಕಳು ವಾಂತಿ–ಭೇದಿ, ಜ್ವರದಿಂದ ಬಳಲುತ್ತಿದ್ದಾರೆ' ಎಂದು ರಾಮಚಂದ್ರ ಆತಂಕ ವ್ಯಕ್ತಪಡಿಸಿದರು.

'ಕೃಷ್ಣಾರೆಡ್ಡಿ ಬಡಾವಣೆ ಅನಧಿಕೃತ ಬಡಾವಣೆಯಾಗಿದ್ದು, ಇಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ. ಲೇಔಟ್ ನಿರ್ಮಾಣದ ವೇಳೆ ಒಳಚರಂಡಿ ನಿರ್ಮಾಣ ಮಾಡಿಲ್ಲ. ಇದಕ್ಕಾಗಿ ಜಾಗವನ್ನೂ ಬಿಟ್ಟಿಲ್ಲ, ಈ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರು ನೀಡಲು ನಿರ್ಧರಿಸಿದ್ದೇವೆ' ಎಂದು ಜಲಮಂಡಳಿ ಕಾರ್ಯಪಾಲಕ ಎಂಜಿನಿಯರ್ ರಮೇಶ್ ಹೇಳಿದರು.

> **ಇಲ್ಲಿನ ನಿವಾಸಿಗಳು ದೂರು ನೀಡಿದ್ದಾರೆ. ಈ ವಿಷಯವನ್ನು ಜಲಮಂಡಳಿಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಅವರು ಕ್ರಮಕೈಗೊಳ್ಳುತ್ತಿಲ್ಲ**
> **ಶ್ರೀಲಕ್ಷ್ಮಿ,** ಬಿಬಿಎಂಪಿ ಬೃಹತ್ ನೀರುಗಾಲುವೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್

ಬಿಡದಿ: ಬಾಂಬ್ ನಿಷ್ಕ್ರಿಯ ದಳದಿಂದ ಶೋಧ • ಪತ್ತೆಯಾಗದ ಸ್ಫೋಟಕ

ರೈಲು ನಿಲ್ದಾಣಕ್ಕೆ ಹುಸಿ ಬಾಂಬ್ ಕರೆ

ಪ್ರಜಾವಾಣಿ ವಾರ್ತೆ

ಬಿಡದಿ: ಇಲ್ಲಿನ ರೈಲು ನಿಲ್ದಾಣದಲ್ಲಿ ಬಾಂಬ್ ಇರುವ ಕುರಿತು ಬಂದ ಅನಾಮಧೇಯ ಕರೆ ಮೇರೆಗೆ ಪೊಲೀಸರು, ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ ಹಾಗೂ ರೈಲ್ವೆ ಪೊಲೀಸರು ಮಂಗಳವಾರ ಬೆಳಿಗ್ಗೆ ಬಾಂಬ್‌ಗಾಗಿ ಶೋಧ ಕಾರ್ಯಾಚರಣೆ ನಡೆಸಿದ್ದಾರೆ. ಈ ವೇಳೆ ಯಾವುದೇ ಸ್ಫೋಟಕ ಪತ್ತೆಯಾಗಿಲ್ಲ. ಹಾಗಾಗಿ, ಇದೊಂದು ಹುಸಿ ಕರೆ ಎಂದು ಪೊಲೀಸರು ತಿಳಿಸಿದ್ದಾರೆ.

ರೈಲ್ವೆ ನಿಯಂತ್ರಣ ಕೊಠಡಿಗೆ ಸೋಮವಾರ ರಾತ್ರಿ 11.30ರ ಸುಮಾರಿಗೆ ವ್ಯಕ್ತಿಯೊಬ್ಬರು ಕರೆ ಮಾಡಿ, 'ನಿಲ್ದಾಣದಲ್ಲಿ ಬಾಂಬ್ ಇದೆ' ಎಂದಿದ್ದಾರೆ. ರಾಜ್ಯ ಗುಪ್ತಚರ ವಿಭಾಗದಿಂದ ಬಂದ ಸೂಚನೆ ಮೇರೆಗೆ ಪೊಲೀಸರು ತಕ್ಷಣವೇ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳದೊಂದಿಗೆ ನಿಲ್ದಾಣಕ್ಕೆ ತೆರಳಿ ತಪಾಸಣೆ ನಡೆಸಿದ್ದಾರೆ. ಆದರೆ, ಸ್ಫೋಟಕ ಸಿಕ್ಕಿಲ್ಲ. ಮಂಗಳವಾರ ಬೆಳಿಗ್ಗೆ ನಡೆಸಿದ ತಪಾಸಣೆ ವೇಳೆಯೂ ಸ್ಫೋಟಕ ಪತ್ತೆಯಾಗಿಲ್ಲ.

ಕರೆ ಬಂದಿದ್ದರ ಕುರಿತು ಪೊಲೀಸರು ಒಂದೊಂದು ರೀತಿ ಹೇಳುತ್ತಿದ್ದಾರೆ. ಗುಪ್ತಚರ ವಿಭಾಗದ ಸೂಚನೆ ಮೇರೆಗೆ ತೆರಳಿ ಶೋಧ ನಡೆಸಿದ್ದೇವೆ ಎಂದು ರೈಲ್ವೆ ಪೊಲೀಸರು ಹೇಳಿದರೆ, ನಿಯಂತ್ರಣ ಕೊಠಡಿಗೆ ಬಂದ ಕರೆ ಆಧರಿಸಿ ನಿಲ್ದಾಣದಲ್ಲಿ ತಪಾಸಣೆ ನಡೆಸಲಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಾಕ್ ಪರ ಬರಹ ಪ್ರಕರಣಕ್ಕೆ ಸಂಬಂಧವಿಲ್ಲ: ಬಿಡದಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯ ಶೌಚಾಲಯದಲ್ಲಿ ಇತ್ತೀಚೆಗೆ ಪಾಕಿಸ್ತಾನ ಪರ ಗೋಡೆ ಬರಹ ಬರೆದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಡದಿ ಪೊಲೀಸರು ಉತ್ತರ ಕರ್ನಾಟಕ ಮೂಲದ ಇಬ್ಬರು ಆರೋಪಿಗಳನ್ನು ಬಂಧಿಸಿ ಜೈಲಿಗೆ ಕಳಿಸಿದ್ದಾರೆ.

ಇದನ್ನು ಖಂಡಿಸಿ ಕಿಡಿಗೇಡಿ ನಿಯಂತ್ರಣ ಕೊಠಡಿಗೆ ಹುಸಿ ಬಾಂಬ್ ಕರೆ ಮಾಡಿ ಬೆದರಿಸಿದ್ದಾನೆ ಎಂಬ ಮಾತುಗಳು ಸಹ ಕೇಳಿ ಬರುತ್ತಿವೆ. ಆದರೆ, ಪೊಲೀಸರು ಇದನ್ನು ನಿರಾಕರಿಸಿದ್ದಾರೆ.

> **ಹುಸಿ ಬಾಂಬ್ ಕರೆ ಬಂದಿಲ್ಲ. ಹಬ್ಬಗಳು ಬಂದಾಗ ಇಲಾಖೆಯು ಎಂದಿನಂತೆ ಜನನಿಬಿಡ ಪ್ರದೇಶಗಳಲ್ಲಿ ಬಾಂಬ್ ನಿಷ್ಕ್ರಿಯ ದಳದೊಂದಿಗೆ ತಪಾಸಣೆ ನಡೆಸುತ್ತದೆ**
> **ಆರ್. ಶ್ರೀನಿವಾಸ ಗೌಡ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಇತರ ನಿಲ್ದಾಣದಲ್ಲೂ ಶೋಧ

'ಬಿಡದಿ ರೈಲು ನಿಲ್ದಾಣಕ್ಕೆ ಹುಸಿ ಬಾಂಬ್ ಕರೆ ಬಂದ ಬೆನ್ನಲ್ಲೇ ಮುನ್ನೆಚ್ಚರಿಕೆ ಕ್ರಮವಾಗಿ ರಾಮನಗರ ಮತ್ತು ಚನ್ನಪಟ್ಟಣ ನಿಲ್ದಾಣಗಳಲ್ಲೂ ರೈಲ್ವೆ ಪೊಲೀಸರು ತಪಾಸಣೆ ನಡೆಸಿದ್ದಾರೆ' ಎಂದು ರೈಲ್ವೆ ಪೊಲೀಸ್ ಮೂಲಗಳು ತಿಳಿಸಿವೆ.

‘ಪ್ರಜಾಪ್ರಭುತ್ವದ ಮನೋಭಾವ ದುರ್ಬಲ’


ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರವನ್ನು ಹಲವು ಜ್ವಲಂತ ಸಮಸ್ಯೆಗಳು ಕಾಡುತ್ತಿವೆ. ಅವುಗಳನ್ನು ಪರಿಹರಿಸುವ ಯಾವುದೇ ಭರವಸೆ ಇಲ್ಲದ ‘ಬೆಂಗಳೂರು ಆಡಳಿತ ಮಸೂದೆ’ಯಿಂದಾಗುವ ಬದಲಾವಣೆಗಳು ಪ್ರಜಾಪ್ರಭುತ್ವದ ಮನೋಭಾವವನ್ನು ದುರ್ಬಲಗೊಳಿಸುತ್ತವೆ. ಆದ್ದರಿಂದ ಈ ಮಸೂದೆಯನ್ನು ಮರುಪರಿಶೀಲಿಸಬೇಕು ಎಂದು ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್‌ನ ಟ್ರಸ್ಟಿ ಡಿ.ಟಿ. ದೇವರೆ ಅಭಿಪ್ರಾಯಪಟ್ಟರು.

‘ಒಂದು ದೊಡ್ಡ ನಗರವನ್ನು ಜನರಿಂದ ಚುನಾಯಿತ ಪ್ರತಿನಿಧಿಗಳು ಆಳಬೇಕು. ಆದರೆ, ಬಿಬಿಎಂಪಿಗೆ ನಾಲ್ಕೂವರೆ ವರ್ಷಗಳಿಂದ ಚುನಾವಣೆ ನಡೆದಿಲ್ಲ. ಇದು ಪ್ರಜಾಪ್ರಭುತ್ವದ ವಿರೋಧಿ ಧೋರಣೆಯಾಗಿದೆ. ಮೆಟ್ರೊಪಾಲಿಟನ್ ಯೋಜನಾ ಸಮಿತಿ (ಎಂಪಿಸಿ) ಕಾಗದದ ಮೇಲಷ್ಟೇ ತನ್ನ ಅಸ್ತಿತ್ವ ಉಳಿಸಿಕೊಂಡಿದ್ದು, ಕಾರ್ಪೊರೇಟರ್‌ಗಳಿಲ್ಲದೆ ಬಿಬಿಎಂಪಿ ಅರ್ಥಹೀನವಾಗಿದೆ. ಇದೆಲ್ಲವುಗಳಿಂದ ‘ಜನರಿಗೆ ಅಧಿಕಾರ’ ಎಂಬ ಆಶಯ ಹೊಂದಿರುವ ಸಂವಿಧಾನದ 74ನೇ ತಿದ್ದುಪಡಿಯನ್ನು ಉಲ್ಲಂಘಿಸಿದಂತಾಗಿದೆ’ ಎಂದರು.

‘ನಗರಕ್ಕೆ ಯಾವುದೇ ಮಾಸ್ಟರ್ ಪ್ಲಾನ್ ಇಲ್ಲ. ಹೀಗಾಗಿ, ಪ್ರಮುಖ ಮೂಲಸೌಕರ್ಯ ಯೋಜನೆಗಳನ್ನು ಸಾರ್ವಜನಿಕರೊಂದಿಗೆ ಸಮಾಲೋಚನೆ ಇಲ್ಲದೆ ಕೈಗೊಳ್ಳಲಾಗುತ್ತಿದೆ. ರಸ್ತೆ ಗುಂಡಿಗಳು, ಸಂಚಾರ ದಟ್ಟಣೆ, ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುವ ವಾಯು ಮಾಲಿನ್ಯ, ಕಸ ವಿಲೇವಾರಿಯಲ್ಲಿ ಲೋಪ, ಹಸಿರು ವಲಯಗಳ ಕೊರತೆ ಸೇರಿದಂತೆ ಹಲವಾರು ಸಮಸ್ಯೆಗಳಿಂದ ನಗರ ಬಳಲುತ್ತಿದೆ. ಇಂತಹ ಗಂಭೀರ ಸಮಸ್ಯೆಗಳಿದ್ದಾಗ, ಅಧಿಕಾರಿಗಳು ‘ಬ್ರ್ಯಾಂಡ್ ಬೆಂಗಳೂರು’ನಂತಹ ಸಾಂಕೇತಿಕತೆ ಮತ್ತು ಸುರಂಗ ರಸ್ತೆಗಳಂತಹ ಅತಿರಂಜಿತ, ಭವ್ಯವಾದ ಯೋಜನೆಗಳನ್ನು ಪ್ರಾರಂಭಿಸುವಲ್ಲಿ ನಿರತರಾಗಿದ್ದಾರೆ. ಇದರ ಜೊತೆಗೆ ‘ಗ್ರೇಟರ್ ಬೆಂಗಳೂರು ಆಡಳಿತ’ವನ್ನು ಮುನ್ನೆಲೆಗೆ ತಂದು, ಸಮಸ್ಯೆಗಳಿಗೆ ಪರಿಹಾರ ನೀಡುವ ಬದಲು ಎಲ್ಲರ ಗಮನವನ್ನು ಬೇರೆಡೆಗೆ ಸೆಳೆಯಲಾಗುತ್ತಿದೆ’ ಎಂದು ದೂರಿದರು.



ಗ್ರೇಟರ್ ಬೆಂಗಳೂರು ಏನೇನಾಗುತ್ತೆ?


ತೆರಿಗೆಗಾಗಿ ಬೆಂಗಳೂರು ಛಿದ್ರ



‘ಬ್ರ್ಯಾಂಡ್ ಬೆಂಗಳೂರು’ ಎಂದು ಹೇಳಿ ನಗರದ ಮೂಲೆ ಮೂಲೆಗಳಲ್ಲಾಗಿರುವ ರಸ್ತೆ ಗುಂಡಿ ಮುಚ್ಚಲಿಲ್ಲ. ಮಳೆ ಬಂದಾಗ ಒಳಚರಂಡಿಗಳು ಉಕ್ಕಿ ಹರಿಯುತ್ತವೆ. ಈಗ ‘ಗ್ರೇಟರ್ ಬೆಂಗಳೂರು’ ಮಾಡಲು ಹೊರಟಿದ್ದಾರೆ. ಇದರಿಂದ ನಮ್ಮ ಮೇಲೆ ಹೆಚ್ಚಿನ ತೆರಿಗೆ ಹಾಕಲು ನಗರವನ್ನು ಹರಿದು ಛಿದ್ರ ಮಾಡಲು ಮುಂದಾಗಿದ್ದಾರೆ. ಹಲವು ವರ್ಷಗಳಿಂದ ಚುನಾವಣೆ ನಡೆಸದೆ, ಕಾರ್ಪೊರೇಟರ್‌ಗಳಿಲ್ಲದೆ ಜನರಿಗೆ ಸೌಲಭ್ಯಗಳೂ ಸಿಗುತ್ತಿಲ್ಲ. ಕಾರ್ಪೊರೇಟರ್‌ಗಳು ಬಂದು, ಅವರಿಗೆ ಅನುದಾನ ನೀಡಿದರೆ ಬಡಾವಣೆಗಳು ಅಭಿವೃದ್ಧಿ ಹೊಂದಬಹುದು. ಸಾರ್ವಜನಿಕರಿಗೆ ಸ್ವಚ್ಛತೆ, ಆರೋಗ್ಯ, ಶಿಕ್ಷಣ, ಗುಂಡಿರಹಿತ ರಸ್ತೆ, ತೆರಿಗೆರಹಿತ ಬದುಕನ್ನು ನೀಡಿದರೆ ಸಾಕು.

ನಿಡಸಾಲೆ ಪುಟ್ಟಸ್ವಾಮಯ್ಯ, ನಾಗರಭಾವಿ

ಕೆಂಪೇಗೌಡರಿಗೆ ಅಪಮಾನ



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ‘ಗ್ರೇಟರ್ ಬೆಂಗಳೂರು’ ಎಂಬ ಹೆಸರಿನಲ್ಲಿ ಏಳು ಭಾಗಗಳನ್ನಾಗಿ ಮಾಡ ಹೊರಟಿರುವುದು ನಾಡಪ್ರಭು ಕೆಂಪೇಗೌಡರಿಗೆ ಅಪಮಾನ ಮಾಡಿದಂತೆಯೇ ಸರಿ. ಇದು ಅನವಶ್ಯಕ. ಭ್ರಷ್ಟಾಚಾರರಹಿತ ಮನಸ್ಸಿದ್ದರೆ ಈಗ ಇರುವ ಸ್ಥಿತಿಯಲ್ಲೇ ಅದ್ಭುತವಾಗಿ ಆಡಳಿತ ನಡೆಸಬಹುದು. ಗುಂಡಿಯಿಲ್ಲದ ರಸ್ತೆಗಳು, ಉದ್ಯಾನಗಳು, ಇರುವ ಕೆರೆಗಳನ್ನು ಮುಚ್ಚದೆ, ಮರಗಳನ್ನು ಕಡಿಯದೆ ಉಳಿಸಿಕೊಂಡು ಲಂಚರಹಿತ ಆಡಳಿತ ನಡೆಸಿದರೆ ತನ್ನಿಂತಾನೇ ಗ್ರೇಟ್ ಅಥವಾ ಗ್ರೇಟರ್ ಬೆಂಗಳೂರು ಆಗುತ್ತದೆ. ಅದನ್ನು ಬಿಟ್ಟು ನಗರವನ್ನು ತುಂಡುಗಳನ್ನಾಗಿ ಮಾಡಿ ಹೊಸ ಹೆಸರಿಟ್ಟರೆ ಪ್ರಯೋಜನವೇನೂ ಇಲ್ಲ. ಭ್ರಷ್ಟಾಚಾರ ಕೂಪಕ್ಕೆ ಮತ್ತೊಂದಿಷ್ಟು ಅಧಿಕಾರಿಗಳು, ಗುತ್ತಿಗೆದಾರರು ಸೇರುತ್ತಾರಷ್ಟೆ.

ಪತ್ತಂಗಿ ಎಸ್. ಮುರಳಿ, ಕುಮಾರಸ್ವಾಮಿ ಬಡಾವಣೆ

ಹಣವಿಲ್ಲದಂತಾಗುತ್ತೆ



ಗ್ರೇಟರ್ ಬೆಂಗಳೂರು ಖಂಡಿತ ಬೇಡ. ಇದರಿಂದ ಆಡಳಿತಾತ್ಮಕ ವೆಚ್ಚ ಏರಿಕೆ ಆಗಿ ನಗರದ ಅಭಿವೃದ್ಧಿಗೆ ಹಣವಿಲ್ಲದಂತಾಗುತ್ತದೆ. ಮುಖ್ಯಮಂತ್ರಿಯಿಂದ ಹಿಡಿದು ಸಚಿವರು, ಅಧಿಕಾರಿಗಳು ಹಾಗೂ ಎಲ್ಲಾ ಸ್ತರದ ಸಿಬ್ಬಂದಿಯಲ್ಲಿ ತಮ್ಮ ಕರ್ತವ್ಯ ನಿಷ್ಠೆ ಹಾಗೂ ಸಮಾಜಮುಖಿ ಧೋರಣೆ ಅತ್ಯಗತ್ಯ.

ಶ್ರೀಮತಿ ಎಚ್.ಎಸ್,

ಹೆಚ್ಚು ಮಹಾನಗರ ಪಾಲಿಕೆಗಳು ಬೇಕು



ಬಿಬಿಎಂಪಿ, ಬಿಡಿಎ, ಬೆಸ್ಕಾಂ, ಬೆಂಗಳೂರು ಜಲಮಂಡಳಿಗಳ ನಡುವೆ ಸಮನ್ವಯವಿಲ್ಲದೆ ಬೆಂಗಳೂರು ನಗರದ ಅಭಿವೃದ್ಧಿ ಹಳ್ಳ ಹಿಡಿದಿದೆ. ಇಂತಹ ಸಂದರ್ಭದಲ್ಲಿ ಸಮನ್ವಯದಿಂದ ಆಡಳಿತ ನಡೆಸುವಂತಹ, ಹೆಚ್ಚು ಅಧಿಕಾರ ಉಳ್ಳಂತಹ, ಪರಿಣಾಮಕಾರಿಯ ಯೋಜನೆಗಳನ್ನು ರೂಪಿಸಬಲ್ಲಂತಹ ವ್ಯವಸ್ಥೆ ಬೆಂಗಳೂರು ನಗರಕ್ಕೆ ಬೇಕಿದೆ. ಈ ಹಿನ್ನೆಲೆಯಲ್ಲಿ ‘ಗ್ರೇಟರ್ ಬೆಂಗಳೂರು ಯೋಜನೆ’ ಸೂಕ್ತವಾಗಿದೆ. ಇಷ್ಟು ದೊಡ್ಡ ವಿಸ್ತೀರ್ಣದ ಬೆಂಗಳೂರಿನ ಆಡಳಿತ ನಿರ್ವಹಣೆಗೆ ಒಂದಕ್ಕಿಂತ ಹೆಚ್ಚು ಮಹಾನಗರ ಪಾಲಿಕೆಗಳು ಸೂಕ್ತ ಆಗುತ್ತವೆ. ಒಬ್ಬ ಮಹಾಪೌರರು ಅಥವಾ ಒಬ್ಬ ಆಯುಕ್ತರು ಇಡೀ ಬೆಂಗಳೂರನ್ನು ನಿಯಂತ್ರಿಸುವುದು ಕಷ್ಟ.

ಕೆ.ಎಸ್. ನಾಗರಾಜ್, ಹನುಮಂತನಗರ


ಹಿಂದಿನಂತೆ ‘ಸಿಎಂಸಿ’ಗಳಾಗಲಿ



ನಗರ ಹೊರವಲಯದಲ್ಲಿದ್ದ ಪುರಸಭೆ, ನಗರಸಭೆಗಳನ್ನು ಬಿಬಿಎಂಪಿಗೆ ವಿಲೀನಗೊಳಿಸಿ ಗೋಜಲು ಮಾಡಲಾಯಿತು. ಈಗ ಮತ್ತೆ ಬಿಬಿಎಂಪಿಯನ್ನು ವಿಭಜಿಸಿ ಮತ್ತಷ್ಟು ಗೋಜಲುಮಯ ಮಾಡಲು ಸರ್ಕಾರ ಮುಂದಾಗಿದೆ. ಹಿಂದಿನ ಸಿಎಂಸಿಗಳನ್ನೇ ಮತ್ತೆ ಮುನ್ನೆಲೆಗೆ ತಂದು ಆ ಪ್ರದೇಶಗಳನ್ನೇ ಬಿಬಿಎಂಪಿಯ ಅಂಗಸಂಸ್ಥೆಗಳನ್ನಾಗಿಸಿ, ಅಧಿಕಾರಯುಕ್ತ ದೀರ್ಘಾವಧಿಯ ಉಪಮೇಯರ್ ಅನ್ನು ನೀಡಬಹುದಲ್ಲವೇ? ಈಗಾಗಲೇ ಈ ಪ್ರದೇಶಗಳು ಸರಿಸುಮಾರು ಅಭಿವೃದ್ಧಿಗೊಂಡಿವೆ. ಹೀಗೆ ಮಾಡುವುದರಿಂದ ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡಬಹುದು. ‘ಗ್ರೇಟರ್ ಬೆಂಗಳೂರು’ನಿಂದ ರಿಯಲ್ ಎಸ್ಟೇಟ್ ಉದ್ಯಮ ವೃದ್ಧಿಯಾಗುತ್ತದೆ ಅಷ್ಟೆ.

ಬಿ. ರಮೇಶ್, ಸಪ್ತಗಿರಿ ಲೇಔಟ್, ಉತ್ತರಹಳ್ಳಿ

ಜಿಬಿಎ ರಚನೆ ಸ್ವಾಗತ



ಇಂದಿನ ಬಿಬಿಎಂಪಿಯ ವ್ಯಾಪ್ತಿಯಲ್ಲಿ ಕಸ ವಿಲೇವಾರಿ, ರಸ್ತೆ ಗುಂಡಿಗಳು, ಕುಡಿಯುವ ನೀರಿನ ಕೊರತೆ, ಮಳೆನೀರು ಹರಿಯುವ ಒಳಚರಂಡಿಯ ವ್ಯವಸ್ಥೆಯಿಲ್ಲದೆ ಮಹಾನಗರಪಾಲಿಕೆಯಲ್ಲಿ ಶಾಶ್ವತ ಪರಿಹಾರ ಕಾಣದೆ ಜ್ವಲಂತ ಸಮಸ್ಯೆಗಳು ತಾಂಡವಾಡುತ್ತಿವೆ. ಜಿಬಿಎ ರಚನೆಯಿಂದ ಅಧಿಕಾರ ಹಾಗೂ ಆಡಳಿತ ವಿಕೇಂದ್ರೀಕರಣಗೊಳ್ಳುವುದು. ಆದರೆ ಇದು ಕೇವಲ ಆರ್ಥಿಕ ಸುಧಾರಣೆಗೆ ಮಾತ್ರ ಗಮನಹರಿಸದೆ, ಸಮಸ್ಯೆಗಳಿಗೆ ಪರಿಹಾರ ನೀಡಬೇಕು.

ಸು.ಜಗದೀಶ, ಬನ್ನೇರುಘಟ್ಟ

‘ಗ್ರೇಟರ್ ಬೆಂಗಳೂರು’: ನೀವೇನನ್ನುತ್ತೀರಿ?

ರಾಜ್ಯ ಸರ್ಕಾರ ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024’ ಮೂಲಕ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿ, ಅದರಡಿ ನಗರಪಾಲಿಕೆಗಳನ್ನು ರಚಿಸಲು ಮುಂದಾಗಿದೆ. ಈ ಬಗ್ಗೆ ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ‘ಪ್ರಜಾವಾಣಿ’ಗೆ ಕಳುಹಿಸಬಹುದು. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರದೊಂದಿಗೆ ವಾಟ್ಸ್ ಆ್ಯಪ್‌ಗೆ ಕಳುಹಿಸಿ.

96060 38256

ಪಶು ವೈದ್ಯಕೀಯ ವಿ.ವಿ 14ನೇ ಘಟಿಕೋತ್ಸವ

ಆದಿತ್ಯಗೆ 9 ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೀದರ್: ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ 14ನೇ ಘಟಿಕೋತ್ಸವ ಇಲ್ಲಿನ ಕಮಠಾಣ ರಸ್ತೆಯ ನಂದಿ ನಗರದ ಆವರಣದಲ್ಲಿ ಮಂಗಳವಾರ ನಡೆಯಿತು.

2022–23ನೇ ಸಾಲಿನ ‘ಬ್ಯಾಚುಲರ್ ಆಫ್ ವೆಟರ್ನರಿ ಸೈನ್ಸ್ ಅಂಡ್ ಅನಿಮಲ್ ಹಸ್ಬೆಂಡ್ರಿ’ (ಬಿವಿಎಸ್‌ಸಿ ಅಂಡ್ ಎಎಚ್) ಸ್ನಾತಕ ಪದವಿಯಲ್ಲಿ ಬೆಂಗಳೂರಿನ ಪಶು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ, ಅಲ್ಲಿನ ಜೆ.ಪಿ. ನಗರದ ನಿವಾಸಿ ಆದಿತ್ಯ ಚಿದಾನಂದ ಈಶ್ವರಲ ಅವರು 9 ಚಿನ್ನದ ಪದಕಗಳಿಗೆ ಭಾಜನರಾದರು. ಆದಿತ್ಯ ಅವರ ಸಹಪಾಠಿ ರವೀನಾ ಅವರು 15 ಚಿನ್ನದ ಪದಕಗಳ ಸಾಧನೆ ಮಾಡಿದರು.

ಚಿತ್ರದುರ್ಗದ ಚಳ್ಳಕೆರೆಯ ಚಿಕ್ಕೇನಹಳ್ಳಿಯವರಾದ ದಕ್ಷಿತ್ ಪಿ.ಎಲ್. ಅವರು ಎಂವಿಎಸ್‌ಸಿ ಸ್ನಾತಕೋತ್ತರ ಪದವಿಯಲ್ಲಿ ಆರು ಚಿನ್ನದ ಪದಕ ಗಳಿಸಿದರು. ಇವರು ಬೆಂಗಳೂರಿನ ಪಶು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಯಾಗಿದ್ದು, 2022–23ನೇ ಸಾಲಿನಲ್ಲಿ ಈ ಸಾಧನೆ ಮಾಡಿದರು.



ಬೆಂಗಳೂರಿನ ಪಶುವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ಆದಿತ್ಯ ಚಿದಾನಂದ ಈಶ್ವರಲ ಅವರಿಗೆ ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್ ಅವರು 9 ಚಿನ್ನದ ಪದಕ, ಪದವಿ ಪ್ರದಾನ ಮಾಡಿದರು. ಕುಲಪತಿ ಪ್ರೊ. ಕೆ.ಸಿ. ವೀರಣ್ಣ, ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಯ ನಿರ್ದೇಶಕ ಡಾ. ನವೀನಕುಮಾರ್ ಹಾಜರಿದ್ದರು

ಪ್ರಜಾವಾಣಿ ಚಿತ್ರ

‘ಬ್ರಿಟಿಷರ ಕಾಲದ ವ್ಯವಸ್ಥೆ ಬಿಟ್ಟುಬಿಡಿ’

‘ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಬದಲಾವಣೆ ಆಗಬೇಕು. ಇಂಗ್ಲಿಷ್ ಭಾಷೆಯ ಬದಲು ಕನ್ನಡ ಭಾಷೆ ಬಳಸಬೇಕು. ಬ್ರಿಟಿಷರ ಕಾಲದ ವ್ಯವಸ್ಥೆ ಬಿಟ್ಟುಬಿಡಿ’ ಎಂದು ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್ ಅವರು ಕುಲಪತಿ ಪ್ರೊ. ಕೆ.ಸಿ. ವೀರಣ್ಣ ಅವರಿಗೆ ತಮ್ಮ ಭಾಷಣದಲ್ಲಿ ಸೂಚಿಸಿದರು.

ಇ–ಸ್ವತ್ತು ಪದ್ಧತಿ ಸುಧಾರಣೆಗೆ ಸಮಿತಿ: ಪ್ರಿಯಾಂಕ್

ಬೆಂಗಳೂರು: ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆಸ್ತಿಗಳಿಗೆ ಇ–ಸ್ವತ್ತು ನೀಡುವ ಸಂಬಂಧ ಇ–ಸ್ವತ್ತು ಪದ್ಧತಿಯಲ್ಲಿ ಸುಧಾರಣೆ ತರಲು ಮತ್ತು ಅವಶ್ಯವಿದ್ದಲ್ಲಿ ಸೂಕ್ತ ನೀತಿ ನಿಯಮಗಳನ್ನು ರೂಪಿಸಲು ಸಮಿತಿಯೊಂದನ್ನು ರಚಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಉದ್ದೇಶಿತ ಸಮಿತಿಯಲ್ಲಿ ಅಧಿಕಾರಿಗಳು ಮಾತ್ರವಲ್ಲದೆ ಸಂಬಂಧಿತ ಕ್ಷೇತ್ರದಲ್ಲಿ ಪರಿಣಿತರಾದ ಅಧಿಕಾರೇತರ ಸದಸ್ಯರೂ ಇರುತ್ತಾರೆ. ಸಮಿತಿಯ ಕಾರ್ಯವ್ಯಾಪ್ತಿ, ಕಾಲಾವಧಿ ಮುಂತಾದ ನಿಯಮಗಳನ್ನು ರೂಪಿಸಿ ಸಮಿತಿ ರಚಿಸಲಾಗುವುದು ಎಂದೂ ಖರ್ಗೆ ತಿಳಿಸಿದರು.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರೂಪಿಸಲಾದ ಬಡಾವಣೆಗಳಲ್ಲಿ ಹಾಗೂ ಗ್ರಾಮಠಾಣ ಹೊರತುಪಡಿಸಿದಂತೆ ನಿರ್ಮಿಸಿದ ಕಟ್ಟಡಗಳನ್ನು ಸಕ್ರಮಗೊಳಿಸುವ ಸಲುವಾಗಿ ಇ–ಸ್ವತ್ತು ಖಾತಾ ಒದಗಿಸಲು ಅವಕಾಶ ಮಾಡಿಕೊಡುವ ಮಸೂದೆಗೆ ವಿಧಾನಮಂಡಲದ ಉಭಯ ಸದನಗಳೂ ಒಪ್ಪಿಗೆ ನೀಡಿವೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇಂತಹ ಸುಮಾರು 96 ಲಕ್ಷ ಸ್ವತ್ತುಗಳಿವೆ ಎಂದು ಅಂದಾಜು ಮಾಡಲಾಗಿದೆ ಎಂದರು.



ವೈದ್ಯರು ಬಿಸಿಜಿ ಲಸಿಕೆ ಪಡೆದುಕೊಂಡು ಕ್ಷಯ ರೋಗದ ಬಗ್ಗೆ ಜಾಗೃತಿ ಮೂಡಿಸಿದರು. ದಿನೇಶ್ ಗುಂಡೂರಾವ್ ಹಾಗೂ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು

ಬಿಸಿಜಿ ಲಸಿಕೆ ವಿತರಣೆಗೆ ಚಾಲನೆ

2024ರಲ್ಲಿ 77 ಸಾವಿರ ಮಂದಿಯಲ್ಲಿ ಕ್ಷಯ ರೋಗ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಕ್ಷಯ ರೋಗ ದಿನದ ಪ್ರಯುಕ್ತ ಆರೋಗ್ಯ ಇಲಾಖೆ ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ‘ವಯಸ್ಕರ ಬಿಸಿಜಿ ಲಸಿಕೆ’ ಹಾಕುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

60 ವರ್ಷ ಮೇಲ್ಪಟ್ಟವರು, ಕಳೆದ ಐದು ವರ್ಷಗಳಲ್ಲಿ ಕ್ಷಯ ರೋಗಕ್ಕೆ ಒಳಗಾಗಿ ಚಿಕಿತ್ಸೆ ಪಡೆದವರು, ಸಕ್ರಿಯ ಕ್ಷಯ ರೋಗಿಗಳ ನಿಕಟ ಸಂಪರ್ಕಿತರು, ದೇಹ ಗಾತ್ರದ ಸೂಚ್ಯಂಕ 18ಕ್ಕಿಂತ ಕಡಿಮೆ ಇರುವವರು, ಮಧುಮೇಹಿಗಳು ಹಾಗೂ ಧೂಮಪಾನಿಗಳು ಈ ಲಸಿಕೆಯ ಫಲಾನುಭವಿಗಳಾಗಿದ್ದಾರೆ.

ಬಳಿಕ ಮಾತನಾಡಿದ ಸಚಿವ ದಿನೇಶ್ ಗುಂಡೂರಾವ್, ‘ರಾಜ್ಯದ 16 ಜಿಲ್ಲೆಗಳಲ್ಲಿ ಬಿಸಿಜಿ ಲಸಿಕೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕ್ಷಯ ರೋಗ ಬರದಂತೆ ತಡೆಯುವಲ್ಲಿ ಈ ಕಾರ್ಯಕ್ರಮ ಮಹತ್ವದ ಪಾತ್ರ ವಹಿಸಲಿದೆ. ಈಗಾಗಲೇ ರಾಜ್ಯದಲ್ಲಿ 1,060 ಗ್ರಾಮ ಪಂಚಾಯಿತಿಗಳನ್ನು ಕ್ಷಯ ರೋಗ ಮುಕ್ತ ಗ್ರಾಮ ಪಂಚಾಯಿತಿಗಳನ್ನಾಗಿ ರೂಪಿಸಲಾಗಿದೆ. ಅಲ್ಲದೆ, ಕ್ಷಯ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಕ್ಷಯ ರೋಗಿಗಳಿಗೆ 98,721 ಪೌಷ್ಟಿಕ ಆಹಾರದ ಕಿಟ್‌ಗಳನ್ನು ವಿತರಿಸಲಾಗಿದೆ. ಸಾರ್ವಜನಿಕರು ಕ್ಷಯ ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸಲು ಬಿಸಿಜಿ ಲಸಿಕಾ ಕಾರ್ಯಕ್ರಮದ ಲಾಭ ಪಡೆಯಬೇಕು’ ಎಂದು ಹೇಳಿದರು.

‘ರಾಜ್ಯದಲ್ಲಿ 2024ರಲ್ಲಿ 20 ಲಕ್ಷಕ್ಕೂ ಅಧಿಕ ಸಂಭಾವ್ಯ ಕ್ಷಯ ರೋಗಿಗಳ ಕಫ ಪರೀಕ್ಷೆಗಳನ್ನು ಮಾಡಲಾಗಿದೆ. ಒಟ್ಟು 77,987 ಕ್ಷಯ ಪ್ರಕರಣಗಳು ದೃಢಪಟ್ಟಿವೆ. ಈ ಸಂಖ್ಯೆ ವರ್ಷದಿಂದ ವರ್ಷಕ್ಕೆ ಇಳಿಮುಖ ಆಗುತ್ತಿದೆ. ದೃಢ ಪ್ರಕರಣಗಳಲ್ಲಿ ಶೇ 4.5 ರಷ್ಟು ಪ್ರಕರಣಗಳು ಔಷಧ ನಿರೋಧಕ ಕ್ಷಯ ರೋಗಿಗಳಾಗಿರುತ್ತಾರೆ’ ಎಂದರು.

‘ಕ್ಷಯ ರೋಗಿಗಳಿಗೆ ಕನಿಷ್ಠ 6 ತಿಂಗಳ ಅವಧಿಯ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಕ್ಷಯ ರೋಗದಿಂದ ಉಂಟಾಗುವ ಮರಣ ದರವನ್ನು ಶೇ 8ರಿಂದ ಶೇ 6ಕ್ಕೆ ಇಳಿಸಲಾಗಿದೆ’ ಎಂದು ಹೇಳಿದರು.

ಇದೇ ವೇಳೆ ಇಲಾಖೆ ನಿರ್ದೇಶಕಿ ತ್ರಿವೇಣಿ ಸೇರಿದಂತೆ ಕ್ಷಯ ರೋಗಿಗಳಿಗೆ ಚಿಕಿತ್ಸೆ ನೀಡುವ ವೈದ್ಯರು ಸಹ ಬಿಸಿಜಿ ಲಸಿಕೆ ಪಡೆದು ಜಾಗೃತಿ ಮೂಡಿಸಿದರು.



ಯಲಹಂಕದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ನಡೆದ ಜಾಗತಿಕ ಶಿಕ್ಷಣ ಮೇಳದಲ್ಲಿ ನಗರದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು

ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಿಂದ ಆಯೋಜನೆ

ಶಿಕ್ಷಣ ಮೇಳದಲ್ಲಿ 14 ದೇಶಗಳು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಅಧ್ಯಯನ ಮಾಡಲು ಅವಕಾಶ ನೀಡುವ ಉದ್ದೇಶದಿಂದ ಯಲಹಂಕದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯವು ಜಾಗತಿಕ ಶಿಕ್ಷಣ ಮೇಳವನ್ನು ಹಮ್ಮಿಕೊಂಡಿತ್ತು.

ಅಂತರರಾಷ್ಟ್ರೀಯ ಮೆಚ್ಚುಗೆ ಪಡೆದಿರುವ 14 ದೇಶಗಳ 60ಕ್ಕೂ ಅಧಿಕ ವಿಶ್ವವಿದ್ಯಾಲಯಗಳು ಈ ಮೇಳದಲ್ಲಿ ಭಾಗವಹಿಸಿದ್ದವು. ಯುಸಿಎಲ್, ಕಿಂಗ್ಸ್ ಕಾಲೇಜು ಲಂಡನ್, ಆಕ್ಲೆಂಡ್ ವಿಶ್ವವಿದ್ಯಾಲಯ, ಮ್ಯಾಕ್ವಾರಿ ವಿಶ್ವವಿದ್ಯಾಲಯ, ಯುಸಿ ಡೇವಿಸ್ ಮತ್ತು ಇಂಡಿಯಾನಾದಂಥ ಉನ್ನತ ವಿಶ್ವವಿದ್ಯಾಲಯಗಳ ಮುಖ್ಯಸ್ಥರು ಪಾಲ್ಗೊಂಡಿದ್ದರು. ವಿದೇಶಗಳಲ್ಲಿ ಪದವಿ. ಸ್ನಾತಕೋತ್ತರ ಪದವಿ, ಪಿಎಚ್.ಡಿ ಮಾಡಲು ಬಯಸುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು.

ವಿವಿಧ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳು ಜಾಗತಿಕ ಶಿಕ್ಷಣ ಮೇಳದಲ್ಲಿ ಭಾಗವಹಿಸಿದ್ದರು. ವಿದೇಶಕ್ಕೆ ಏಜೆಂಟರ ಮೂಲಕ ತೆರಳದೇ ಪ್ರತಿಷ್ಠಿತ ಜಾಗತಿಕ ಶಿಕ್ಷಣ ಸಂಸ್ಥೆಗಳೊಂದಿಗೆ ನೇರವಾಗಿ ಸಂವಹನ ನಡೆಸಲು ಮೇಳ ವೇದಿಕೆಯಾಯಿತು.

ಪ್ರೆಸಿಡೆನ್ಸಿ ವಿ.ವಿ. ಕುಲಪತಿ ವಿಜಯನ್ ಇಮ್ಯಾನುಯೆಲ್, ಸಹ ಕುಲಪತಿ ಶಿವ ಪೆರುಮಾಳ್ ಮತ್ತು ಕುಲಸಚಿವರಾದ ಸಮೀನಾ ನೂರ್ ಅಹ್ಮದ್ ಪನಾಲಿ ಈ ಮೇಳವನ್ನು ಉದ್ಘಾಟಿಸಿದರು.



ಜೆಮಿನಿ ಲೈವ್‌ಗೆ ಕಣ್ಣು ಬಂತು!

ಗೂಗಲ್‌ನ ಮಹತ್ವದ ಯೋಜನೆಯಾದ 'ಜೆಮಿನಿ ಲೈವ್'ಗೆ ಹೊಸ ಹೊಸ ಫೀಚರ್‌ಗಳು ಸೇರ್ಪಡೆಯಾಗುತ್ತಲೇ ಇವೆ

ಕೃಷ್ಣ ಭಟ್

ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋದಾಗ ಭಾಷೆ ಗೊತ್ತಿಲ್ಲದೇ ಒದ್ದಾಡುತ್ತಿದ್ದಾಗ 'ಗೂಗಲ್ ಟ್ರಾನ್ಸ್‌ಲೇಟ್' ಹಾಗೂ 'ಗೂಗಲ್ ಲೆನ್ಸ್ ಅಪ್ಲಿಕೇಶನ್'ಗಳು ನಮಗೆ ಸಹಾಯಕವಾಗುತ್ತಿದ್ದವು. ಸೈನ್‌ಬೋರ್ಡ್‌ಗಳಲ್ಲಿ ನಮಗೆ ಅರ್ಥವಾಗದ ಭಾಷೆ ಇದ್ದರೆ, ಸ್ಮಾರ್ಟ್‌ಫೋನ್ ಕ್ಯಾಮೆರಾವನ್ನು ಆನ್ ಮಾಡಿ ಗೂಗಲ್ ಲೆನ್ಸ್‌ನಿಂದ ಅದನ್ನು ತಕ್ಷಣವೇ ಅನುವಾದ ಮಾಡಿಕೊಂಡು ಅರ್ಥಮಾಡಿಕೊಳ್ಳುವುದಂತೂ ಈಗ ಅತ್ಯಂತ ಸಾಮಾನ್ಯ ಸಂಗತಿ. ಯಾರೂ ಈಗ ಪರಿಚಯದವರಿಗೆ ಫೋನ್ ಮಾಡಿ, 'ನಾನು ಇಲ್ಲಿದ್ದೇನೆ, ಇಲ್ಲಿಂದ ನಾವು ಹೋಗಬೇಕಾದಲ್ಲಿಗೆ ಹೋಗುವುದು ಹೇಗೆ ಸ್ವಲ್ಪ ಹೇಳು ಮಾರಾಯ' ಎಂದು ಯಾರನ್ನೋ ಗೋಗರೆಯುವ ಕೆಲಸ ಇಲ್ಲ. ಸೀದಾ ಜೇಬಿನಿಂದ ಸ್ಮಾರ್ಟ್‌ಫೋನ್ ತೆಗೆದು ಅದರಲ್ಲಿನ 'ಮ್ಯಾಪ್' ಆ್ಯಪ್ ಓಪನ್ ಮಾಡಿ, ನಾವು ಹೋಗಬೇಕಾದ ಸ್ಥಳವನ್ನು ನಮೂದಿಸಿದರೆ ಸಾಕು, ದಾರಿಯನ್ನು ತೋರಿಸಿಬಿಡುತ್ತದೆ.

ಆದರೆ, 'ಎ.ಐ.' ಬಂದಮೇಲೆ ಒಂದೊಂದು ವ್ಯವಸ್ಥೆಗೂ ಹೊಸ ಜೀವ ಬಂದಿದೆ! ಅವೆಲ್ಲವೂ ಹೊಸ ಅಂಗಿ–ಪ್ಯಾಂಟನ್ನೋ, ಹೊಸ ಪಂಚೆಯನ್ನೋ ಸುತ್ತಿಕೊಂಡು ಓಡಾಡಲು ಶುರು ಮಾಡಿವೆ. ಹಾಗೆಯೇ, ಈ ವ್ಯವಸ್ಥೆಗೂ ಒಂದು ಬದಲಾವಣೆ ಬೇಕಲ್ಲ! ಖಂಡಿತ, ಅದೂ ಬದಲಾಗುತ್ತಿದೆ.

ಇನ್ನು ನಾವು ಎಲ್ಲೋ ನಿಂತು ದಿಕ್ಕುಗಾಣದಂತಾದರೆ ದಾರಿ ತೋರಿಸಲು, ನಮ್ಮೆದುರಿನ ಸೈನ್‌ಬೋರ್ಡ್‌ನಲ್ಲಿ ಏನು ಬರೆದಿದೆ ಎಂದು ಓದಲು, ಎರಡು ಕಲರ್‌ಗಳನ್ನು ತೋರಿಸಿ, ಈ ಎರಡು ಕಲರ್‌ಗಳಲ್ಲಿ ಪೇಂಟಿಂಗ್‌ಗೆ ಯಾವುದು ಸೂಕ್ತ ಎಂದು ನಿರ್ಧಾರ ಮಾಡಲು – ಹೀಗೆ ನಮ್ಮ ಎದುರು ಇರುವ ಎಲ್ಲದರ ಜೊತೆಗೂ ಒಂದು ಸಂವಹನವನ್ನು ನಡೆಸಲು 'ಜೆಮಿನಿ ಲೈವ್' ಸಹಾಯ ಮಾಡುತ್ತದೆ.

'ಜೆಮಿನಿ ಲೈವ್' ಎಂಬುದು ಕಳೆದ ಕೆಲವು ತಿಂಗಳ ಹಿಂದೆಯೇ ಗೂಗಲ್ ಪ್ರದರ್ಶಿಸಿದ್ದ ಒಂದು ಮಹತ್ವಾಕಾಂಕ್ಷಿ ಯೋಜನೆ. ಇದಕ್ಕೆ ಈಗ ಒಂದೊಂದೇ ಹೊಸ ಹೊಸ ಫೀಚರ್‌ಗಳು ಸೇರಿಕೆಯಾಗುತ್ತಿವೆ.

ಸದ್ಯ ನಮ್ಮ ಕೈಯಲ್ಲಿರುವ ಎಲ್ಲ 'ಜನರೇಟಿವ್ ಎ.ಐ.' ಅಪ್ಲಿಕೇಶನ್‌ಗಳೆಲ್ಲವೂ ನಮ್ಮ ದೈನಂದಿನ ಜೀವನದಲ್ಲಿನ ಕ್ಷಣಕ್ಷಣದ ನಿರ್ಧಾರಗಳಲ್ಲಿ ಸಹಾಯಕ್ಕೆ ಬರುತ್ತಿಲ್ಲ. ಜನರೇಟಿವ್ ಎ.ಐ. ಗೆ ಬುದ್ಧಿ ಇದೆ. ಅದು ಅದರ ಮೂಲಭೂತ ವೈಶಿಷ್ಟವಾಯಿತು. ಜೊತೆಗೆ, ಅದಕ್ಕೆ ಬಾಯಿ ಬಂದಿತ್ತು. ಅಂದರೆ, ಮಾತನಾಡುವ ಸಾಮರ್ಥ್ಯವೂ ಬಂದಿದೆ. ಜೊತೆಗೆ, ಅದಕ್ಕೆ ಕಿವಿ ಇದೆ. ಅಂದರೆ ಕೇಳಿಸಿಕೊಂಡಿದ್ದನ್ನು ಬುದ್ಧಿಗೆ ಕಳುಹಿಸುತ್ತದೆ. ಆದರೆ, ಕಣ್ಣು ಬಂದಿರಲಿಲ್ಲ. ಅಂದರೆ, ಏನನ್ನಾದರೂ ನೋಡಿ ಅದರ ಬಗ್ಗೆ ಮಾಹಿತಿ ನೀಡುವುದೋ ಅಥವಾ ಅದರ ಕುರಿತಂತೆ ನಮಗೆ ಬುದ್ಧಿ ಹೇಳುವ ಕೆಲಸ ಮಾಡುತ್ತಿರಲಿಲ್ಲ. ಜನರೇಟಿವ್ ಎ.ಐ.ಗಳ ವಿಷಯದಲ್ಲಿ ಈವರೆಗೆ ನಿಜವಾದ ಕೊರತೆ ಇದಾಗಿತ್ತು. ಆದರೆ, ಈಗ ಆ ಕೊರತೆಯೂ ನಿವಾರಣೆಯಾದ ಹಾಗಿದೆ. ಗೂಗಲ್ ಜೆಮಿನಿ ಲೈವ್ ಈ ನಿಟ್ಟಿನಲ್ಲಿ ಮಹತ್ವದ ಸಾಧನೆ.

ಸದ್ಯಕ್ಕೆ ಇದು ಎಲ್ಲರಿಗೂ ಲಭ್ಯವಿಲ್ಲ. ಅಡ್ವಾನ್ಸ್‌ಡ್ ಬಳಕೆದಾರರಿಗೆ ಮಾತ್ರ ಈ ಸೌಲಭ್ಯ ಬಳಕೆಗೆ ಸಿಗುತ್ತಿದೆ. ಬಹುಶಃ ಮುಂದಿನ ದಿನಗಳಲ್ಲಿ ಇದು ಇನ್ನಷ್ಟು ಬಳಕೆದಾರರಿಗೂ ಲಭ್ಯವಾಗಬಹುದು. ಈಗಿನ 'ಜೆನ್ ಎ.ಐ'ನಲ್ಲಿ ಹುಟ್ಟಿರುವ ಸ್ಪರ್ಧೆಯನ್ನು ಗಮನಿಸಿದರೆ, ಯಾವ ಹೊಸ ಸೌಲಭ್ಯಗಳೂ ಉಚಿತ ಬಳಕೆದಾರರಿಗೆ ಸಿಗುವ ದಿನ ದೂರವಿಲ್ಲ. ಕ್ಯಾಮೆರಾ ಆಕ್ಸೆಸ್ ಸಿಕ್ಕಿರುವುದು ಮತ್ತು ಕ್ಯಾಮೆರಾದಲ್ಲಿ ಲೈವ್ ಆಗಿ ಕಾಣುತ್ತಿರುವುದನ್ನು ಜೆನ್ ಎ.ಐ. ವಿಶ್ಲೇಷಣೆ ಮಾಡುವುದು ಬಹುಶಃ ಮುಂದಿನ ದಿನಗಳಲ್ಲಿ ಜೆನ್ ಎ.ಐ. ಬಳಕೆಗೆ ಇನ್ನಷ್ಟು ಅವಕಾಶವನ್ನು ಸೃಷ್ಟಿಸಲಿದೆ. ಅದರಲ್ಲೂ, ಜನರ ದೈನಂದಿನ ಬಳಕೆಯಲ್ಲಿ ಈ ಸೌಲಭ್ಯಗಳು ಅತ್ಯಂತ ಮಹತ್ವದ ಕೆಲಸ ಮಾಡಲಿವೆ. ಉದಾಹರಣೆಗೆ ನಾವು ಈಗ ಎಲ್ಲೋ ಒಂದು ಕಡೆ ನಿಂತಿದ್ದೇವೆ. ಮುಂದೆ ಎಲ್ಲಿಗೆ ಹೋಗಬೇಕು ಎಂದು ಗೊತ್ತಿಲ್ಲ. ಎಲ್ಲಿಗೆ ಹೋಗಬೇಕು ಎಂಬುದನ್ನು ನೋಡುವುದಕ್ಕೆ ನಾವು ಮ್ಯಾಪ್ ತೆಗೆದು ಅದರಲ್ಲಿ ಡೆಸ್ಟಿನೇಶನ್ ಹಾಕಬೇಕು. ಆಗ ಅದು ನಮಗೆ ಎಲ್ಲಿಗೆ ಹೋಗಬೇಕು ಎಂಬುದನ್ನು ತೋರಿಸುತ್ತದೆ. ಆದರೆ, ಜೆಮಿನಿ ಲೈವ್ ಈ ಕೆಲಸವನ್ನು ಇನ್ನಷ್ಟು ಸರಾಗವಾಗಿಸುತ್ತದೆ.

ಜೆಮಿನಿ ಲೈವ್ ಆ್ಯಪ್ ತೆರೆದು ಧ್ವನಿ ಕಮಾಂಡ್‌ನಲ್ಲೇ ಈ ಎಲ್ಲ ಕೆಲಸವನ್ನೂ ಮಾಡಬಹುದು. ಅದು ಸ್ಕ್ರೀನ್ ಮೇಲೆ ಮ್ಯಾಪ್ ತೆಗೆದು ತೋರಿಸುತ್ತದೆ. ಈ ವೈಶಿಷ್ಟ್ಯಗಳು ಜೆನ್ ಎ.ಐ. ಜೊತೆಗೆ ನಮ್ಮ ಸಂವಹನವನ್ನು ಇನ್ನಷ್ಟು ಸರಾಗವಾಗಿಸುತ್ತದೆ. ಅಷ್ಟೇ ಅಲ್ಲ, ಜೆನ್ ಎ.ಐ.ಗೆ ಸಂದರ್ಭವನ್ನು ಅರ್ಥ ಮಾಡಿಕೊಳ್ಳಲೂ ಅನುಕೂಲವಾಗುತ್ತದೆ. ಅಷ್ಟೇ ಅಲ್ಲ, ಈ ಸೌಲಭ್ಯದ ಜೊತೆಗೆ ನಮ್ಮ ಫೋನ್ ಸ್ಕ್ರೀನ್ ಮೇಲೆ ಏನು ಕಾಣಿಸುತ್ತದೆ ಎಂಬುದನ್ನೂ ಈ ಜೆಮಿನಿ ಲೈವ್ ವಿಶ್ಲೇಷಣೆ ಮಾಡುತ್ತದೆ. ಈ ಮೂಲಕ ಜೆನರೇಟಿವ್ ಎಐಗೆ ಒಂದು ಪ್ರಸ್ತುತತೆಯೂ ಸಿಕ್ಕಂತಾಗಿದೆ.

ಇಲ್ಲಿ ನಾವು ನೆನಪಿಡಬಹುದಾದ ಸಂಗತಿಯೇನೆಂದರೆ, ಈ ಜೆನ್‌ಎಐಗೆ ಮೂಲವಾದ 'ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್'ಗಳನ್ನು ಅಭಿವೃದ್ಧಿಪಡಿಸುವಾಗ ಕೆಲವು ವರ್ಷಗಳ ಹಿಂದಿನ ಡೇಟಾವನ್ನು ಮಾತ್ರ ತೆಗೆದುಕೊಳ್ಳಲಾಗಿತ್ತು. ಆ ಡೇಟಾವನ್ನು ಆಧರಿಸಿ ಈ ಮಾಡೆಲ್‌ಗಳಿಗೆ ಯೋಚನೆ ಮಾಡುವ ತರಬೇತಿಯನ್ನು ನೀಡಲಾಗಿತ್ತು. ಅಂದರೆ, ಅವು ಈಗ ಏನು ನಡೆಯುತ್ತಿದೆ ಎಂಬುದನ್ನು ಹೇಳಲು ಸಾಧ್ಯವಾಗುತ್ತಿರಲಿಲ್ಲ. ಆದರೆ, ಈಗ ಲೈವ್ ಕ್ಯಾಮೆರಾ ಆಕ್ಸೆಸ್ ಕೂಡ ಸಿಕ್ಕಮೇಲೆ ನಮ್ಮ ಕಣ್ಣಿಗೂ ಮಿದುಳಿಗೂ ಇರುವ ಸಂಪರ್ಕದಂತಹ ಒಂದು ಕೊಂಡಿ ಮಶಿನ್‌ಗೂ ಸಿಕ್ಕಂತಾಗಿದೆ!



ಧ್ವನಿ ಕಮಾಂಡ್‌ನಲ್ಲೇ ಎಲ್ಲ ಕೆಲಸವನ್ನು ಮಾಡುವ ಆ್ಯಪ್



ನ್ಯಾನೊ ಚುಕ್ಕಿಚಿತ್ರಗಳ ಪರದೆ

ಕೊಳ್ಳೇಗಾಲ ಶರ್ಮ

ನ್ಯಾನೊ ಚುಕ್ಕಿಗಳಲ್ಲಿ ಚಿತ್ರಗಳನ್ನು ತೋರಿಸುವ ನ್ಯಾನೊ ಎಲ್‌ಇಡಿಗಳು ಬರಲಿವೆ. ವೈರಸ್‌ಗಿಂತಲೂ ಸೂಕ್ಷ್ಮವಾದ ಎಲ್‌ಇಡಿ ಬಲ್ಬುಗಳನ್ನು ಚೀನಾದ ಜೀಜಾಂಗ್ ವಿಶ್ವವಿದ್ಯಾಲಯದ ತಂತ್ರಜ್ಞರು ತಯಾರಿಸಿದ್ದಾರೆ. ನ್ಯಾನೋತಂತ್ರಜ್ಞ ದಾವೇ ಡೀ ಮತ್ತು ಸಂಗಡಿಗರು ವೈರಸ್ಸುಗಳಿಗಿಂತಲೂ ಪುಟ್ಟದಾದ, ಕಣ್ಣಿಗೆ ಕಾಣದಂತಹ ಎಲ್‌ಇಡಿ ಬಲ್ಬುಗಳಿರುವ ಪರದೆಗಳನ್ನು ತಯಾರಿಸಿದ್ದಾರೆ. ಇದು ಇನ್ನಷ್ಟು ಸ್ಪಷ್ಟ ಚಿತ್ರಗಳನ್ನು ಮೂಡಿಸುವ ಎಲ್‌ಇಡಿ ಪರದೆಗಳ ತಯಾರಿಕೆಗೆ ಹಾದಿ ಮಾಡಿಕೊಡಲಿದೆ.

ಎಲ್‌ಇಡಿ ಪರದೆಗಳು ಎಂದರೆ ಬೆಳಕಿನ ಬಲ್ಬುಗಳನ್ನೇ ಚುಕ್ಕಿಗಳಂತೆ ಜೋಡಿಸಿ ಚಿತ್ರಗಳನ್ನು ಬರೆಯುವ ಸಾಧನಗಳು. ಚುಕ್ಕಿಚಿತ್ರಗಳು ಗೊತ್ತಲ್ಲ? ಒಂದರ ಪಕ್ಕ ಇನ್ನೊಂದು ಚುಕ್ಕಿಯನ್ನು ಜೋಡಿಸಿ, ದೂರದಿಂದ ನೋಡಿದರೆ ಚಿತ್ರವಾಗಿ ಕಾಣುತ್ತದೆಯಷ್ಟೆ. ಟೆಲಿವಿಷನ್ ಪರದೆಗಳಂತಹ ಇಲೆಕ್ಟ್ರಾನಿಕ್ ಚಿತ್ರದರ್ಶಕಗಳೂ ಇದೇ ಬಗೆಯಲ್ಲಿ ಚಿತ್ರಗಳನ್ನು ಮೂಡಿಸುತ್ತವೆ. ಡಿಜಿಟಲ್ ಕ್ಯಾಮೆರಾ, ಎಲ್‌ಇಡಿ ಟೆಲಿವಿಷನ್, ಕಂಪ್ಯೂಟರು ಪರದೆಗಳೆಲ್ಲವೂ ಹೊಳೆಯುವ ಚುಕ್ಕೆಗಳನ್ನು ಜೋಡಿಸಿಯೇ ಚಿತ್ರವನ್ನು ರಚಿಸುವ ಸಾಧನಗಳು.

ಟಿ.ವಿ. ಪರದೆಯಲ್ಲಿ ಕೆಂಪು, ಹಸಿರು ಹಾಗೂ ನೀಲಿಬಣ್ಣದ ಮೂರು ಸೂಕ್ಷ್ಮವಾದ ಎಲ್‌ಇಡಿ ಬಲ್ಬುಗಳ ಗುಂಪುಗಳನ್ನು ಸಾಲಾಗಿ ಜೋಡಿಸಿರುತ್ತಾರೆ. ಮೂರೂ ಬಲ್ಬುಗಳೂ ಹೊಳೆದರೆ ಬಿಳಿಬಣ್ಣ, ಒಂದೋ ಎರಡೋ ಹೊಳೆದರೆ ಬೇರೆ ಬೇರೆ ಬಣ್ಣಗಳು ಕಾಣಿಸುತ್ತವೆ. ಬೇಕಿರುವ ಬಲ್ಬನ್ನು ಹೊಳೆಯಿಸಿ, ಬಣ್ಣಬಣ್ಣದ ಚುಕ್ಕಿ ಚಿತ್ರಗಳನ್ನು ಸೃಷ್ಟಿಸುತ್ತಾರೆ. ಟೆಲಿವಿಷನ್ ಜೀವಂತವಾಗುತ್ತದೆ. ಚಿತ್ರ ಹೆಚ್ಚು ಸ್ಪಷ್ಟವಾಗಿ ಇರಬೇಕೆಂದರೆ, ಹೆಚ್ಚೆಚ್ಚು ಚುಕ್ಕಿಗಳನ್ನು ಜೋಡಿಸಬೇಕು. ಈ ಎಲ್‌ಇಡಿ ಚುಕ್ಕೆಗಳನ್ನು ಸಾಮಾನ್ಯವಾಗಿ 'ಪಿಕ್ಸೆಲುಗಳು' ಎಂದು ಹೇಳುವುದುಂಟು.

ಪಿಕ್ಸೆಲುಗಳ ಗಾತ್ರ ಕಿರಿದಾದಷ್ಟೂ, ಹೆಚ್ಚೆಚ್ಚು ಸಂಖ್ಯೆಯ ಚುಕ್ಕಿಗಳನ್ನು ಬಳಸಬಹುದು. ಚಿತ್ರವನ್ನು ಇನ್ನಷ್ಟು ಸ್ಪಷ್ಟವಾಗಿ, ಚುಕ್ಕಿಗಳೇ ಕಾಣದಂತೆ ತೋರಿಸಬಹುದು. ಕ್ಯಾಮೆರಾದಲ್ಲಿ ನೀವು ಯಾವುದೇ ಚಿತ್ರವನ್ನು ಜೂಮ್ ಮಾಡಿದರೆ, ಒಂದು ಮಿತಿಯ ನಂತರ ಅದು ಚಚ್ಚೌಕದ ಅಸ್ಪಷ್ಟ ತುಣುಕುಗಳ ಜೋಡಣೆಯಂತೆ ತೋರುತ್ತದೆ. ಪಿಕ್ಸೆಲುಗಳ ಗಾತ್ರ ಎಷ್ಟು ಕಡಿಮೆ ಇರುತ್ತದೆಯೋ, ಅಷ್ಟೂ ಹೆಚ್ಚು ಜೂಮ್ ಮಾಡಬಹುದು. ಆದರೆ ಎಲ್‌ಇಡಿ ಪರದೆಗಳನ್ನು ತಯಾರಿಸುವ ತಂತ್ರಜ್ಞಾನಗಳು ಇದುವರೆವಿಗೂ ಎಲ್‌ಇಡಿ ಚುಕ್ಕೆಗಳ ಗಾತ್ರಕ್ಕೊಂದು ಮಿತಿಯನ್ನು ಒಡ್ಡಿದ್ದುವು. ಅತಿ ಹೆಚ್ಚು ಎಂದರೆ ಸುಮಾರು ನೂರು ಮೈಕ್ರೊಮೀಟರು, ಅಂದರೆ ಮಿಲಿಮೀಟರಿನಲ್ಲಿ ಹತ್ತು ಚುಕ್ಕೆಗಳನ್ನು, ಸೆಂಟಿಮೀಟರಿನಲ್ಲಿ ನೂರು ಚುಕ್ಕೆಗಳನ್ನು ಇಡಬಹುದಿತ್ತು. ಒಂದು ಅಂಗುಲಕ್ಕೆ ಸುಮಾರು ಮುನ್ನೂರು ಚುಕ್ಕೆಗಳನ್ನು ಇಡಬಹುದಿತ್ತು. ಅವು ನಮ್ಮ ಕಣ್ಣಿಗೆ ಬಿಡಿ, ಬಿಡಿಯಾಗಿ ಕಾಣುತ್ತಿರಲಿಲ್ಲ. ಹಾಗಿದ್ದರೂ, ಈ ಪಿಕ್ಸೆಲುಗಳ ಅಂಚಿನಿಂದ ಬೆಳಕು ಸೋರಿ ಹೋಗಿ, ಚಿತ್ರ ಸ್ವಲ್ಪ ಅಸ್ಪಷ್ಟವಾಗುತ್ತಿತ್ತು.

ಇದೀಗ ಹೊಸ ವಸ್ತುಗಳು ಹಾಗೂ ಹೊಸ ತಯಾರಿಕೆಯ ವಿಧಾನವನ್ನು ಬಳಸಿಕೊಂಡು ಸುಮಾರು ತೊಂಬತ್ತು ನ್ಯಾನೊಮೀಟರಿನಿಂದ, ನಾಲ್ಕುನೂರು ನ್ಯಾನೊಮೀಟರು ಗಾತ್ರದ ಎಲ್‌ಇಡಿ ಪಿಕ್ಸೆಲುಗಳನ್ನು ತಯಾರಿಸಬಹುದು ಎಂದು ದಾವೆ ಡೀ ತಂಡ ನಿರೂಪಿಸಿದೆ. ಒಂದು ಮಿಲಿಮೀಟರು ಎಂದರೆ ಹತ್ತು ಸಾವಿರ ನ್ಯಾನೊಮೀಟರುಗಳಾಗುತ್ತವೆ. ಪ್ರತಿ ಅಂಗುಲದಲ್ಲಿ ಹನ್ನೆರಡು ಸಾವಿರದಿಂದ, ಒಂದು ಲಕ್ಷದ ಇಪ್ಪತ್ತೇಳು ಸಾವಿರ ಬಲ್ಬುಗಳನ್ನು ಜೋಡಿಸಬಹುದು.

ದಾವೆ ಡೀ ತಂಡದವರು ಪೆರೋವ್‌ಸ್ಕೈಟುಗಳೆಂಬ ವಸ್ತುಗಳನ್ನು ಇದಕ್ಕಾಗಿ ಬಳಸಿದ್ದಾರೆ. ವಿದ್ಯುತ್ತು ಹರಿದಾಗ ಇವು ಹೊಳೆಯುತ್ತವೆ. ನ್ಯಾನೊ ಗಾತ್ರದಲ್ಲಿ ಈ ಪೆರೋವ್‌ಸ್ಕೈಟು ಚುಕ್ಕೆಗಳನ್ನು ಜೋಡಿಸಿ, ಅವಕ್ಕೆ ವಿದ್ಯುತ್ ಹರಿಸಿದಾಗ ಎಲ್‌ಇಡಿಯಂತೆ ಅವು ಬೆಳಗುತ್ತವೆ. ಅತಿ ಸೂಕ್ಷ್ಮವಾದ ಎಲ್‌ಇಡಿಗಳನ್ನು ತಯಾರಿಸಲು ದಾವೇ ಡೀ ತಂಡ ರಾಸಾಯನಿಕವಾಗಿ ಸರಳವೆನ್ನಿಸುವ ತಂತ್ರಗಳನ್ನು ಬಳಸಿತು.

ಇವರು ರಚಿಸಿದ ನ್ಯಾನೊಎಲ್‌ಇಡಿ ಪರದೆಯಲ್ಲಿ ಹಲವು ಪದರಗಳಿವೆ. ತಳಭಾಗದಲ್ಲಿ ನಿರ್ದಿಷ್ಟವಾದ ವಿದ್ಯುತ್ ಸರ್ಕೀಟು ಇರುತ್ತದೆ. ಅದರ ಮೇಲೊಂದು ತೆಳುವಾದ ಸಿಲಿಕಾನ್ ಆಕ್ಸೈಡ್‌ನ ಪದರ ಇರುತ್ತದೆ. ಸರ್ಕೀಟಿನಲ್ಲಿ ವಿದ್ಯುತ್ ಹರಿದಾಗ, ಸಿಲಿಕಾನ್ ಪದರದಿಂದ ಎಲೆಕ್ಟ್ರಾನುಗಳು ಹೊಮ್ಮುತ್ತವೆ. ಈ ಎಲೆಕ್ಟ್ರಾನುಗಳು ತಾಕಿದಾಗ ಬೆಳಕು ಹೊಮ್ಮಿಸುವ ಎಲ್‌ಇಡಿಗಳನ್ನು ಸಿಲಿಕಾನ್ ಆಕ್ಸೈಡಿನ ಪದರದ ಮೇಲೆ ಹರಡಿರುತ್ತಾರೆ. ಎಲ್‌ಇಡಿಗಳನ್ನು ಹರಡುವುದು ಸುಲಭವಲ್ಲ. ಅತಿ ಸಣ್ಣದಾದಷ್ಟೂ ಅದನ್ನು ಎತ್ತಿ ನಿರ್ದಿಷ್ಟ ಜಾಗದಲ್ಲಿ ಜೋಡಿಸುವುದು ಕಷ್ಟ. ಇದರಿಂದಾಗಿಯೇ ಅತಿ ಸ್ಪಷ್ಟವಾದ, ಅಂದರೆ ಸಣ್ಣ ಪಿಕ್ಸೆಲುಗಳು ಹೆಚ್ಚಿರುವ ಪರದೆಗಳನ್ನು ತಯಾರಿಸುವುದು ದುಬಾರಿ ಕೆಲಸ.

ಈ ಹಂತವನ್ನು ದಾವೇ ದೀ ತಂಡ ಸರಳವಾಗಿಸಿದೆ. ಬೆಳಕು ಬಿದ್ದಾಗ ಗಟ್ಟಿಯಾಗುವ ಫೋಟೋರೆಸಿಸ್ಟ್ ಗುಣವಿರುವ ವಸ್ತುವನ್ನು ಸಿಲಿಕಾನ್ ಪದರದ ಮೇಲೆ ಹಚ್ಚಿದ್ದಾರೆ. ಇದರಲ್ಲಿ ತಮಗೆ ಬೇಕಾದ ಚಿತ್ರದ, ಅಥವಾ ರಂಧ್ರಗಳ ಜೋಡಣೆಯ ಚಿತ್ರವನ್ನು ಮೂಡಿಸಬಹುದು. ಅನಂತರ ಅಲ್ಟ್ರಾ ವಯಲೆಟ್ ಕಿರಣಗಳನ್ನು ಹರಿಸಿ, ಪದರವನ್ನು ಗಟ್ಟಿಯಾಗಿಬಹುದು. ಹೀಗೆ ರಂಧ್ರಗಳಿರುವ ಪರದೆಯನ್ನು ಸೃಷ್ಟಿಸಿದ್ದಾರೆ. ಇದರ ಮೇಲೆ 'ಪೆರೋವ್‌ಸ್ಕೈಟ್' ವಸ್ತುವನ್ನು ಲೇಪಿಸಿದ್ದಾರೆ. ಅನಂತರ ಅಳಿದುಳಿದ ಫೋಟೋರೆಸಿಸ್ಟು ಪದರವನ್ನು ತೊಳೆದು ತೆಗೆದಿದ್ದಾರೆ.

ಈ ತಂತ್ರದಿಂದ ಅಂಚುಗಳು ಸ್ಪಷ್ಟವಾಗಿರುವಂತಹ ಅತಿ ಸೂಕ್ಷ್ಮವಾದ ಎಲ್‌ಇಡಿಗಳನ್ನು ರೂಪಿಸಿದ್ದಾರೆ, ದಾವೇ ಡೀ. ಸದ್ಯಕ್ಕೆ ಕೇವಲ ಹಸಿರುಬಣ್ಣದ ಎಲ್‌ಇಡಿಯನ್ನು ಮಾತ್ರ ಬಳಸಿ ಕೆಲವೇ ಸೆಂಟಿಮೀಟರು ಅಗಲದ ಪರದೆಯೊಂದನ್ನು ತಯಾರಿಸಿದ್ದಾರೆ. ಸಾಧಾರಣ ಟೆಲಿವಿಷನ್ನಿನಲ್ಲಿ ಬಳಸುವ ಸರ್ಕೀಟನ್ನೇ ಬಳಸಿಕೊಂಡು ಈ ಪರದೆಯಲ್ಲಿ ಇಡೀ ಭೂಗೋಲದ ಚಿತ್ರವನ್ನು ಸ್ಪಷ್ಟವಾಗಿ ಮೂಡಿಸಿ ತೋರಿಸಿದ್ದಾರೆ. ಇದರಲ್ಲಿರುವ ಒಂದೊಂದು ಎಲ್‌ಇಡಿ ಬಲ್ಬನ್ನು ನೋಡಲೂ ಸೂಕ್ಷ್ಮದರ್ಶಕವೇ ಬೇಕು.

ಸಿಇಟಿ- ನೀಟ್ ಪರೀಕ್ಷೆ ದಿಕ್ಸೂಚಿ

CET CHEMISTRY

MULTIPLE CHOICE QUESTIONS

31) Negative deviation from Raoult's Law is observed in which of the following binary liquid mixtures:

a) ethanol and acetone **b)** benzene and toluene
c) acetone and chloroform
d) chloroethane and bromoethane


Ans:- c

32) Mercury is a liquid metal because...........


a) it has a completely filled s – orbital
b) it has a small atomic size
c) it has a completely filled d – orbital that prevents d-d overlapping of orbitals
d) it has a completely filled d – orbital that causes d-d overlapping

Ans:- c


29)



Y is ....



Ans:- a



33) Power alcohol is a mixture of ....

a) 80% Petrol + 20% Benzene + Small quantity of Ethanol
b) 80% Petrol + 20% Ethanol + Small quantity of Benzene
c) 80% Ethanol + 20% Benzene + Small quantity of Petrol
d) 50% Petrol + 50% Ethanol + Small quantity of Benzene

Ans:- b

34) Dalda is prepared from oils by -

a) oxidation b) reduction
c) hydrolysis d) distillation

Ans:- b

35) In the brown ring test, the brown colour of the ring is due to ....

a) ferrous nitrate b) a mixture of NO and NO_2
c) ferric nitrate d) nitroso ferrous sulphate

Ans:- d

36) On heating with concentrated NaOH solution in an inert atmosphere of CO_2, white phosphorus gives a gas. Which of the following statement is incorrect about gas?

a) It is highly poisonous and has smell like fish.
b) It's solution in water decomposes in the presence of light.
c) It is more basic than NH_3.
d) It is less basic than NH_3.

Ans:- c

37) 8.8 g of monohydric alcohol added to ethyl magnesium iodide in ether liberates 2240 cm^3 of ethane at STP. This monohydric alcohol when oxidised using pyridinium-chloromate, forms a carbonyl compound that answers silver mirror test (Tollen's test). The monohydric alcohol is

(A) butan-2-ol (B) 2, 2-dimethyl propan-1-ol
(C) pentan-2-ol (D) 2, 2-dimethyl ethan-1-ol

Ans:-B

Expln:-

$$8.8 \text{ g of monohydric alcohol} \leftarrow 2240\ cm^3$$
$$88\text{ g} \leftarrow 22400\ cm^3$$

The carbonyl compound that can oxidise tollens reagent i.e., **Aldehyde** and which is oxidising product of Primary alcohol.

38) PCC is

(A) $K_2Cr_2O_7$ + Pyridine
(B) $CrO_3 + CHCl_3$
(C) $CrO_3 + H_2SO_4$
(D) A complex of chromium trioxide with pyridine + HCl

Ans:-D

Expln:- PCC is pyridinium chlorochromate

$$C_5H_5\overset{+}{N}HCrO_3Cl^-$$

39)


In the reaction

$$\text{Aniline} \xrightarrow[\text{dil. HCl}]{NaNO_2} P \xrightarrow[NaOH]{\text{Phenol}} Q.$$

(A) $C_6H_5N_2Cl$
(B) ortho-hydroxyazobenzene
(C) para-hydroxyazobenzene
(D) meta-hydroxyazobenzene

Ans:- C

Expln:-



NEET PHYSICS

1) The speed of light in medium M_1 and M_2 are $1.5 \times 10^8\ ms^{-1}$ and $2 \times 10^8\ ms^{-1}$ respectively. A ray travels from medium M_1 to the medium M_2 with an angle of incidence θ. The ray suffers total internal reflection. Then the value of the angle of incidence θ is.

(a) $> \sin^{-1}\left(\frac{3}{4}\right)$ (b) $< \sin^{-1}\left(\frac{3}{4}\right)$
(c) $= \sin^{-1}\left(\frac{3}{4}\right)$ (d) $\le \sin^{-1}\left(\frac{3}{4}\right)$

Ans:- a

Expln- For total internal reflection, the angle of incidence of light in denser medium must be greater than the critical angle for the pair of media in contact, i.e., $i > C$

We have, $\frac{1}{\sin C} = \frac{v_2}{v_1}$

Given $v_1 = M_1 = 1.5\times10^8\ ms^{-1}$; $v_2 = M_2 = 2\times10^8\ ms^{-1}$

Here, $C = \sin^{-1}\left(\frac{M_1}{M_2}\right)$

$\therefore i > \sin^{-1}\left(\frac{M_1}{M_2}\right) \Rightarrow i > \sin^{-1}\left(\frac{1.5\times10^8}{2\times10^8}\right)$

$\Rightarrow i > \sin^{-1}\left(\frac{3}{4}\right)$

2) The errors in the measurement which arise due to unpredictable fluctuations in temperature and voltage supply are:

a) Random errors
b) Instrumental errors
c) Personal errors
d) Least count errors

Ans:- (a) As the factors controlling temperature and voltage supply are beyond prediction and control so the error occurred due to unpredictable fluctuations of temperature and voltage would be random errors.

3) A metal wire has mass (0.4 ± 0.002) g, radius (0.3± 0.001) mm and length (5 ± 0.02) cm. The maximum possible percentage error in the measurement of density will nearly be

a) 1.4% b) 1.2%
c) 1.3% d) 1.6%

Ans:-

(d) $m = \rho \pi r^2 l$

$$\rho = \frac{m}{\pi r^2 l}$$

$$\frac{\Delta\rho}{\rho} = \frac{\Delta m}{m} + \frac{2\Delta r}{r} + \frac{\Delta l}{l}$$

$$\frac{\Delta\rho}{\rho}\times100 = \frac{0.002}{0.4}\times100 + \frac{2\times0.001}{0.3}\times100 + \frac{0.02}{5}\times100$$

$$= \frac{0.2}{0.4} + \frac{0.2}{0.3} + \frac{2}{5}$$

$= 0.5 + 0.67 + 0.4$

$= 1.57$


$= 1.6\%$

4) The output of an OR gate is connected to both the inputs of a NAND gate. The combination will serve as....................

(a) AND gate (b) NOT gate
(c) NAND gate (d) NOR gate

Ans:- (d)

Expln- The given situation can be shown as



The output $Y' = \overline{A + B}$ is the output of NOR gate.

5) A logic circuit provides the output Y as per the following truth table :

A	B	Y
0	0	1
0	1	0
1	0	1
1	1	0

The expression for the output Y is :

a) $A.B + \bar{A}$ b) $A.\bar{B} + \bar{A}$
c) $\bar{B}$ d) B

Ans (c)

Expln:-

A	B	Y
0	0	1
0	1	0
1	0	1
1	1	0

According to given truth table, output is independent on value of A

$\therefore$ Output $Y = \bar{B}$

6) Three conductors draw currents of 1 A, 2 A and 3 A respectively, when connected in turn across a battery. If they are connected in series and the combination is connected across the same battery, the current drawn is

(a) $\frac{2}{7}$ A (b) $\frac{3}{7}$ A
(c) $\frac{6}{11}$ A (d) $\frac{5}{7}$ A


Ans:- c

Expn- Let the three conductors are R_1, R_2 and R_3 and the current drawn by them 1 A, 2 A and 3 A respectively when connected in turn across a battery.

$\therefore V = R_1,\ V = 2R_2$ and $V = 3R_3$

So, $R_1 = V,\ R_2 = \frac{V}{2}$ and $R_3 = \frac{V}{3}$

When the conductors are connected in series, across the same battery, then



$V = I[R_1 + R_2 + R_3]$

$\Rightarrow V = I\left[V + \frac{V}{2} + \frac{V}{3}\right] \Rightarrow I = I\left[\frac{6+3+2}{6}\right] \Rightarrow I = \frac{6}{11}A$

ರಾಜ್ಯದ ಹಲವೆಡೆ ವರ್ಷಧಾರೆ, ಧಾರವಾಡದಲ್ಲಿ ಧರೆಗೆ ಉರುಳಿದ ಮರ

ನಾಪೋಕ್ಲು ವ್ಯಾಪ್ತಿಯಲ್ಲಿ ಗುಡುಗು ಸಹಿತ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ/ ಉಡುಪಿ: ರಾಜ್ಯದ ವಿವಿಧೆಡೆ ಮಂಗಳವಾರ ಮಳೆಯಾಗಿದೆ. ಮಡಿಕೇರಿ ತಾಲ್ಲೂಕಿನ ನಾಪೋಕ್ಲು ಸುತ್ತಲಿನ ನೆಲಜಿ, ಎಮ್ಮೆಮಾಡು, ಬಲ್ಲಮಾವಟಿ ಗ್ರಾಮಗಳಲ್ಲಿ ಮಂಗಳವಾರ ಮಧ್ಯಾಹ್ನ ಒಂದು ಗಂಟೆ ಕಾಲ ಗುಡುಗು ಸಹಿತ ಮಳೆಯಾಯಿತು.

ಉಡುಪಿ ಜಿಲ್ಲೆಯ ವಿವಿಧೆಡೆ ಮಂಗಳವಾರ ಸಂಜೆ ಮಳೆ ಸುರಿಯಿತು. ಕಾರ್ಕಳ, ಹೆಬ್ರಿ, ಬ್ರಹ್ಮಾವರ ಮೊದಲಾದೆಡೆ ಗಾಳಿ ಸಹಿತ ಮಳೆ ಸುರಿಯಿತು. ಬ್ರಹ್ಮಾವರ ತಾಲ್ಲೂಕಿನ ಬಾರ್ಕೂರು, ಹಂದಾಡಿ, ಮಂದಾರ್ತಿ, ಪರಿಸರದಲ್ಲಿ ಅರ್ಧ ಗಂಟೆ ಗಾಳಿ, ಸಿಡಿಲಿನೊಂದಿಗೆ ಬೇಸಿಗೆಯ ಮೊದಲ ಧಾರಾಕಾರ ಮಳೆ ಸುರಿಯಿತು.



ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದ ಹಲವೆಡೆ ಧಾರಾಕಾರ ಮಳೆಯಾಗಿದೆ. ಮೂಡಿಗೆರೆ ತಾಲ್ಲೂಕಿನ ವಿವಿಧೆಡೆ ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾದ ಮಳೆ, ಗುಡುಗು ಸಿಡಿಲಿನೊಂದಿಗೆ ಒಂದು ಗಂಟೆಗೂ ಹೆಚ್ಚು ಕಾಲ ಆರ್ಭಟಿಸಿತು. ಕೊಪ್ಪ ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಮಳೆಯಾಗಿದೆ. ಶೃಂಗೇರಿ ಪಟ್ಟಣ ಮತ್ತು ಸುತ್ತಮುತ್ತ ಗುಡುಗು, ಸಿಡಿಲು, ಆಲಿಕಲ್ಲು ಸಹಿತ ಮಳೆ ಸುರಿಯಿತು.

ಹುಬ್ಬಳ್ಳಿ ವರದಿ: ಉತ್ತರ ಕನ್ನಡ, ವಿಜಯನಗರ, ಬೆಳಗಾವಿ, ಧಾರವಾಡ, ಗದಗ ಜಿಲ್ಲೆ ಸೇರಿದಂತೆ ಹಲವೆಡೆ ಮಳೆಯಾಯಿತು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಮಳಲಗಾಂವದಲ್ಲಿ ಮರವೊಂದು ವಿದ್ಯುತ್ ತಂತಿ ಮೇಲೆ ಬಿದ್ದು ನಾಲ್ಕಕ್ಕೂ ಹೆಚ್ಚು ಕಂಬಗಳು ಧರೆಗುರುಳಿದ್ದವು. ಯಲ್ಲಾಪುರ, ಸಿದ್ದಾಪುರ, ದಾಂಡೇಲಿ, ಹಳಿಯಾಳ ಭಾಗದಲ್ಲಿ ಗುಡುಗು ಸಹಿತ ಮಳೆಯಾಯಿತು.

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ಹಿರೇಹಡಗಲಿ ಸುತ್ತಮುತ್ತಲ ಗ್ರಾಮಗಳಲ್ಲಿ ಮಧ್ಯಾಹ್ನ ಅರ್ಧ ಗಂಟೆ ಗುಡುಗು ಸಹಿತ ಮಳೆಯಾಯಿತು.

ಧಾರವಾಡ ಜಿಲ್ಲೆಯ ವಿವಿಧೆಡೆ ಗುಡುಗು, ಮಿಂಚಿನ ಆರ್ಭಟದೊಂದಿಗೆ ಮಳೆಯಾಗಿದ್ದು ಗಾಳಿ ರಭಸಕ್ಕೆ ನಗರದಲ್ಲಿ ಎರಡು ಮರಗಳು ಉರುಳಿ ಬಿದ್ದಿವೆ. ಗದಗ ನಗರ ಸೇರಿ ಜಿಲ್ಲೆಯ ಬೆಟಗೇರಿ, ಲಕ್ಷ್ಮೇಶ್ವರದಲ್ಲಿ ಮಳೆ ಸುರಿಯಿತು.

ದಾವಣಗೆರೆ ವರದಿ: ನಗರ ಸೇರಿ ಜಿಲ್ಲೆಯ ವಿವಿಧೆಡೆ ಮಂಗಳವಾರ ಸಂಜೆ ಗುಡುಗು, ಬಿರುಗಾಳಿ ಸಹಿತ ಮಳೆ ಸುರಿಯಿತು. ವರ್ಷದ ಮೊದಲ ಮಳೆಗೆ ಭೂಮಿ ತಂಪಾಯಿತು. ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ನ್ಯಾಮತಿ ಹಾಗೂ ಹರಿಹರ ತಾಲ್ಲೂಕಿನ ವಿವಿಧೆಡೆಯೂ ಮಳೆಯಾಗಿದ್ದು, ರೈತರು ಹರ್ಷಗೊಂಡಿದ್ದಾರೆ.

ಶಿವಮೊಗ್ಗ ವರದಿ: ಶಿವಮೊಗ್ಗ ಜಿಲ್ಲೆಯ ಸೊರಬ ಹಾಗೂ ಹೊಸನಗರದ ವಿವಿಧೆಡೆ ವರ್ಷಧಾರೆಯಾಗಿದೆ. ಹೊಸನಗರದ ಮೂರು ಕಡೆ ಮರಗಳು ಧರೆಗುರುಳಿ ಮನೆ ಹಾಗೂ ವಿದ್ಯುತ್ ಕಂಬಕ್ಕೆ ಹಾನಿಯಾಗಿದೆ.

ಗೋಡೆ ಕುಸಿದು ಇಬ್ಬರ ಸಾವು

ಕಲಘಟಗಿ (ಧಾರವಾಡ ಜಿಲ್ಲೆ): ತಾಲ್ಲೂಕಿನ ಕಾಡನಕೊಪ್ಪ ಗ್ರಾಮದ ಬಳಿ ನಿರ್ಮಾಣ ಹಂತದ ಕಟ್ಟಡದ ಗೋಡೆ ಮಳೆ, ಗಾಳಿಗೆ ಕುಸಿದು ಹುಬ್ಬಳ್ಳಿಯ ಮಹಮ್ಮದ್ ರಫೀಕ್ ಚನ್ನಾಪುರ (55) ದಾವೂದ್ ಸವಣೂರ (46) ಎಂಬ ಇಬ್ಬರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇನ್ನೊಬ್ಬ ಕಾರ್ಮಿಕ ಅಂಚಟಗೇರಿ ಗ್ರಾಮದ ಮಾತೇಶ ಚವರಗುಡ್ಡ (36) ಅವರಿಗೆ ಗಾಯಗಳಾಗಿವೆ.

'ಹುಬ್ಬಳ್ಳಿ ಟಿಪ್ಪು ನಗರದ ನಿವಾಸಿ ಮುಸ್ತಾಕ್ ಅಹ್ಮದ್ ಹೇಬಸೂರ್ ಎಂಬುವರು ಕಟ್ಟಡ ನಿರ್ಮಿಸುತ್ತಿದ್ದು, ಮಳೆಗೆ ಗೋಡೆ ಕುಸಿದು ಕಾರ್ಮಿಕರು ಮೃತಪಟ್ಟಿದ್ದಾರೆ' ಎಂದು ಕಲಘಟಗಿ ಠಾಣೆ ಪೊಲೀಸರು ತಿಳಿಸಿದರು.

ಮಸ್ಕಿ: ಪುರಸಭೆ ಮುಖ್ಯಾಧಿಕಾರಿ ಅಮಾನತು

ಮಸ್ಕಿ (ರಾಯಚೂರು ಜಿಲ್ಲೆ): ಪಟ್ಟಣದ ಪುರಸಭೆಯ ಪೀಠೋಪಕರಣ ಖರೀದಿಯಲ್ಲಿ ಹಣ ದುರ್ಬಳಕೆ ಮಾಡಿರುವ ಆರೋಪದ ಮೇಲೆ ಲಿಂಗಸುಗೂರು ಪುರಸಭೆಯ ಮುಖ್ಯಾಧಿಕಾರಿ ರೆಡ್ಡಿ ರಾಯನಗೌಡ ಅವರನ್ನು ಜಿಲ್ಲಾಧಿಕಾರಿ ಅಮಾನತುಗೊಳಿಸಿದ್ದಾರೆ.

ರಾಯನಗೌಡ ಅವರು ಮಸ್ಕಿ ಪುರಸಭೆ ಮುಖ್ಯಾಧಿಕಾರಿ ಆಗಿದ್ದಾಗ ಕಚೇರಿಯ ನೂತನ ಕಟ್ಟಡಕ್ಕೆ ಮೀಸಲಿಟ್ಟ ₹57 ಲಕ್ಷ ಅನುದಾನವನ್ನು ನಿಯಮ ಉಲ್ಲಂಘಿಸಿ ಕಚೇರಿ ಪೀಠೋಪಕರಣ ಖರೀದಿಗಾಗಿ ಕೆಆರ್‌ಐಡಿಎಲ್ ಸಂಸ್ಥೆಗೆ ಪಾವತಿಸಿದ್ದರು.

ರನ್ಯಾ ರಾವ್ ಪ್ರಕರಣ ಜಾಮೀನು ಆದೇಶ ಪ್ರಕಟ ನಾಳೆ

ಬೆಂಗಳೂರು: ದುಬೈನಿಂದ ಚಿನ್ನ ಕಳ್ಳ ಸಾಗಣೆ ಮಾಡಿದ್ದ ಆರೋಪದಡಿ ಬಂಧನಕ್ಕೆ ಒಳಗಾಗಿ ಜೈಲಿನಲ್ಲಿರುವ ನಟಿ ರನ್ಯಾ ರಾವ್ ಅವರ ಜಾಮೀನು ಅರ್ಜಿಯ ಆದೇಶವನ್ನು 64ನೇ ಸಿಸಿಎಚ್ ನ್ಯಾಯಾಲಯವು ಮಂಗಳವಾರ ಕಾಯ್ದಿರಿಸಿತು.

ಡಿಆರ್‌ಐ ಪರ ವಕೀಲ ಮಧು ರಾವ್ ಅವರು ವಾದ ಮಂಡನೆ ಮಾಡಿದರು. ರನ್ಯಾ ರಾವ್ ಪರ ವಕೀಲ ಕಿರಣ್ ಜವಳಿ ಪ್ರತಿವಾದ ಮಂಡಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು, ಇದೇ 27ರಂದು ಜಾಮೀನು ಆದೇಶ ಪ್ರಕಟಿಸುವುದಾಗಿ ಹೇಳಿದರು.

'ಇದು ಜಾಮೀನುರಹಿತ ಪ್ರಕರಣ ಆಗಿದೆ. ರನ್ಯಾ ರಾವ್ ದುಬೈನಿಂದ ಚಿನ್ನದ ಜೊತೆಗೆ ಬಂದಿದ್ದಾರೆ. ದೇವನಹಳ್ಳಿಯಲ್ಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಂದು ಸಂಜೆ 6.30ರ ಸುಮಾರಿಗೆ ಇಳಿದಿದ್ದರು. ಅದೇ ವೇಳೆಗೆ ಶಿಷ್ಟಾಚಾರ ಅಧಿಕಾರಿಯೊಬ್ಬರು ಅಲ್ಲಿಗೆ ತೆರಳಿದ್ದರು. ಅವರ ನೆರವು ಪಡೆದು ವಿಐಪಿ ದ್ವಾರದ ಮೂಲಕ ರನ್ಯಾ ಅವರು ಹೊರಕ್ಕೆ ಬಂದಿದ್ದರು. ಯಾವುದೇ ಕಾರಣಕ್ಕೂ ಆರೋಪಿಗೆ ಜಾಮೀನು ಮಂಜೂರು ಮಾಡಬಾರದು' ಎಂದು ಡಿಆರ್‌ಐ ಪರ ವಕೀಲ ಮನವಿ ಮಾಡಿದರು.

ಕೆಆರ್‌ಎಸ್‌ನಿಂದ ವ್ಯರ್ಥವಾಗಿ ಹರಿದ ನೀರು: ಆರೋಪ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: 'ತಾಲ್ಲೂಕಿನ ಕೆಆರ್‌ಎಸ್ ಜಲಾಶಯದ ಪ್ಲಸ್ 80 ಅಡಿ ಮಟ್ಟದ 5ನೇ ಗೇಟ್ ಮೂಲಕ ಭಾನುವಾರ ರಾತ್ರಿಯಿಂದ ಸೋಮವಾರ ರಾತ್ರಿವರೆಗೆ ಅನಗತ್ಯವಾಗಿ ನೀರು ಹರಿದು ಹೋಗಿದೆ' ಎಂದು ರೈತರು ದೂರಿದ್ದಾರೆ.

'ಜಲಾಶಯದ ಒಂದು ಗೇಟ್‌ನಿಂದ ಎರಡು ಸಾವಿರ ಕ್ಯುಸೆಕ್ ನೀರು ನದಿಗೆ ಹರಿದಿದೆ. ಜಲಾಶಯದ ನೀರಿನ ಮಟ್ಟ ನೋಡಲು ಹೋದ ಸಿಬ್ಬಂದಿ ಅದನ್ನು ಗಮನಿಸಿ, ಎಂಜಿನಿಯರ್‌ಗಳಿಗೆ ವಿಷಯ ಮುಟ್ಟಿಸಿದ್ದರು. ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಮುಖ್ಯ ಎಂಜಿನಿಯರ್ ವೆಂಕಟೇಶ್, ಅಧೀಕ್ಷಕ ಎಂಜಿನಿಯರ್ ರಘುರಾಂ ಸೂಚನೆಯಂತೆ, ಗೇಟ್ ಭದ್ರಪಡಿಸಿ ನೀರು ನಿಲ್ಲಿಸಿದ್ದಾರೆ' ಎಂದು ನಿಗಮದ ಸಿಬ್ಬಂದಿ ತಿಳಿಸಿದ್ದಾರೆ.

'ತನಿಖೆ ನಡೆಸಿ'

'ಸರ್ಕಾರದ ಸೂಚನೆ ಪ್ರಕಾರ ಅಧಿಕಾರಿಗಳು ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ಎರಡು ದಿನ ನಿರಂತರವಾಗಿ ನೀರು ಹರಿಸಿದ್ದಾರೆ. ಗೇಟ್‌ನಲ್ಲಿ ತಾಂತ್ರಿಕ ದೋಷ ಉಂಟಾಗಿ ನದಿಗೆ ನೀರು ಹರಿದು ಹೋಗಿದೆ ಎಂಬ ಮಾತನ್ನು ನಂಬಲು ಸಾಧ್ಯವಿಲ್ಲ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ರೈತ ಸಂಘದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಮಂಜೇಶಗೌಡ ಒತ್ತಾಯಿಸಿದ್ದಾರೆ.

ವಿಜಯಪುರ: ಆಸ್ತಿ ವಿವರ ಸಲ್ಲಿಸದ ಪಾಲಿಕೆ ಸದಸ್ಯರು ಅನರ್ಹ

ವಿಜಯಪುರ: ವಿಜಯಪುರ ಮಹಾನಗರ ಪಾಲಿಕೆಯ ಎಲ್ಲ 35 ಸದಸ್ಯರು ತಮ್ಮ ಸ್ಥಿರಾಸ್ತಿ ಮತ್ತು ಚರಾಸ್ತಿ ವಿವರವನ್ನು ಮೇಯರ್ ಅವರಿಗೆ ನಿಗದಿತ ಅವಧಿಯೊಳಗೆ ಸಲ್ಲಿಸದ ಕಾರಣ ಅವರನ್ನು ಅನರ್ಹಗೊಳಿಸಿ, ಬೆಳಗಾವಿ ಪ್ರಾದೇಶಿಕ ಆಯುಕ್ತ ಎಸ್.ಬಿ. ಶೆಟ್ಟಣ್ಣವರ ಆದೇಶ ಹೊರಡಿಸಿದ್ದಾರೆ.

ಬಿಜೆಪಿಯ 17, ಕಾಂಗ್ರೆಸ್‌ನ 10, ಎಐಎಂಐಎಂ 2, ಜೆಡಿಎಸ್ 1 ಹಾಗೂ ಪಕ್ಷೇತರ 5 ಸದಸ್ಯರು ಸೇರಿ ಎಲ್ಲ ಸದಸ್ಯರು ಅನರ್ಹರಾಗಿದ್ದಾರೆ. ಮೇಯರ್, ಉಪಮೇಯರ್ ಸೇರಿ ಯಾರೂ ಆಸ್ತಿ ವಿವರ ಸಲ್ಲಿಸಿಲ್ಲ.

ಆಸ್ತಿ ವಿವರ ನೀಡದಿರುವುದನ್ನು ಪ್ರಶ್ನಿಸಿ ಮತ್ತು ಅವರ ಸದಸ್ಯತ್ವ ರದ್ದುಗೊಳಿಸಲು ಕೋರಿ ಪಾಲಿಕೆಯ ಮಾಜಿ ಸದಸ್ಯರಾದ ಬಿಜೆಪಿಯ ಪ್ರಕಾಶ ಮಿರ್ಜಿ ಮತ್ತು ಕಾಂಗ್ರೆಸ್‌ನ ಮೈನುದ್ದೀನ್ ಬೀಳಗಿ ಕಲಬುರಗಿ ಹೈಕೋರ್ಟ್ ಪೀಠದಲ್ಲಿ ದೂರು ದಾಖಲಿಸಿದ್ದರು.

ಕರ್ನಾಟಕ ಸರ್ಕಾರ
(ಶಾಲಾ ಶಿಕ್ಷಣ ಇಲಾಖೆ)
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.
ದೂರವಾಣಿ: 080–26422238/45, ಇ–ಮೇಲ್: mdktbs.tender@gmail.com
ವೆಬ್‌ಸೈಟ್: https://textbooks.karnataka.gov.in
ಸಂಖ್ಯೆ: A8/KTBS/ADM/OTEN/2/2023 E-15960 ದಿನಾಂಕ: 25.03.2025
(ಟೆಂಡರ್ ಸಂಖ್ಯೆ: KTBS/2024-25/SE0005)

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು ಕಛೇರಿ ಕೆಲಸಗಳಿಗೆ ಎರಡು ವರ್ಷಗಳ ಅವಧಿಗೆ ಹೊರಗುತ್ತಿಗೆ ಆಧಾರದಲ್ಲಿ ಕಂಪ್ಯೂಟರ್ ಪ್ರೋಗ್ರಾಮರ್, ಅಕೌಂಟ್ಸ್ ಅಂಡ್ ಆಡಿಟ್ ಕೋ–ಆರ್ಡಿನೇಟರ್, ಅಕೌಂಟ್ಸ್ ಅಸಿಸ್ಟೆಂಟ್, ಡಾಟಾ ಎಂಟ್ರಿ ಆಪರೇಟರ್ಸ್, 'ಡಿ' ದರ್ಜೆ ಕೆಲಸಗಾರರು, ವಾಹನ ಚಾಲಕರು, ಪರಿಚಾರಕರು ಮತ್ತು ಕಾವಲುಗಾರರ ಸೇವೆ ಪಡೆಯಲು ಇ–ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ. ವಿವರಗಳನ್ನು ಇ–ಪೋರ್ಟಲ್ ನಲ್ಲಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ವಿವರವಾಗಿ ಒದಗಿಸಿದೆ. ಅರ್ಹ ಸಂಸ್ಥೆಗಳು **ದಿನಾಂಕ: 08.04.2025 ರಂದು ಸಂಜೆ 5.30 ರವರೆಗೆ** ಬಿಡ್‌ಗಳನ್ನು ಸಲ್ಲಿಸಲು ಅವಕಾಶ ಇರುತ್ತದೆ. ವಿವರವಾದ ಟೆಂಡರ್ ದಸ್ತಾವೇಜನ್ನು **https://textbooks.karnataka.gov.in & www.kppp.karnataka.gov.in** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಇ–ಪೋರ್ಟಲ್ ಸಹಾಯವಾಣಿ: 080–46010000 & 080–68948777

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆವರಣ, ಬೆಂಗಳೂರು – 560012
ನಂ. ಕೆಎಸ್‌ಸಿಎಸ್‌ಟಿ/ಎನ್‌ಟಿಎಫ್‌ಪಿಸಿಇ/741 ದಿನಾಂಕ: 25–03–2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಮಂಡಳಿಯ ಅಲ್ಪಾವಧಿ ಇ–ಟೆಂಡರ್‌ಗಳನ್ನು ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಪ್ರಕಟಿಸಲಾಗಿದೆ. ಟೆಂಡರ್‌ಗಳ ವಿವರ ಈ ಕೆಳಕಂಡಂತಿದೆ:

1. **ಲ್ಯಾಂಪ್ಸ್ ಸೊಸೈಟಿ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆಯಲ್ಲಿ 500 ಕೆಜಿ ಸಾಮರ್ಥ್ಯದ ಸೀಗೆಕಾಯಿ ಸಂಸ್ಕರಣೆ ಮತ್ತು ಪ್ಯಾಕಿಂಗ್ ಘಟಕದ ವಿನ್ಯಾಸ, ಸರಬರಾಜು, ಸ್ಥಾಪನೆ ಮತ್ತು ಅನುಷ್ಠಾನ.** ಟೆಂಡರ್ ಸಂಖ್ಯೆ: ITBTST/2024-25/IND0019 ದಿನಾಂಕ: 24.03.2025 ಪ್ರಕಟಿಸಲಾಗಿದೆ. ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **22ನೇ ಏಪ್ರಿಲ್, 2025, ಸಂಜೆ 05.30 ಗಂಟೆಯೊಳಗೆ.**
2. **ಕರ್ನಾಟಕ ರಾಜ್ಯ ಲ್ಯಾಂಪ್ಸ್ ಸಹಕಾರ ಮಹಾಮಂಡಳಿ ನಿಯಮಿತ, ಮೈಸೂರುನಲ್ಲಿ 1000 ಕೆಜಿ ಸಾಮರ್ಥ್ಯದ ನೆಲ್ಲಿಕಾಯಿ ಸಂಸ್ಕರಣೆ ಘಟಕದ ವಿನ್ಯಾಸ, ಸರಬರಾಜು, ಸ್ಥಾಪನೆ ಮತ್ತು ಅನುಷ್ಠಾನ.** ಟೆಂಡರ್ ಸಂಖ್ಯೆ: ITBTST/2024-25/IND0018 ದಿನಾಂಕ: 24.03.2025 ಪ್ರಕಟಿಸಲಾಗಿದೆ. ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **22ನೇ ಏಪ್ರಿಲ್, 2025, ಸಂಜೆ 05.30 ಗಂಟೆಯೊಳಗೆ.**

ಹೆಚ್ಚಿನ ವಿವರಗಳಿಗಾಗಿ ಮತ್ತು ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಲು,
ಜಾಲತಾಣ ಲಿಂಕ್: **https://kppp.karnataka.gov.in/#/portal/searchTender/live**

DIPR/CP/YC/5899/2024-25 ಸಹಿ/– ಕಾರ್ಯನಿರ್ವಾಹಕ ಕಾರ್ಯದರ್ಶಿ, ಕೆ.ಎಸ್.ಸಿ.ಎಸ್.ಟಿ

ಪಿಎಂ ಶ್ರೀ ಶಾಲೆ, ಜವಾಹರ ನವೋದಯ ವಿದ್ಯಾಲಯ
ಬಾಗಲೂರು, ಬೆಂಗಳೂರು ನಗರ ಜಿಲ್ಲೆ, ಕರ್ನಾಟಕ–562149
ನವೋದಯ ವಿದ್ಯಾಲಯ ಸಮಿತಿಯ ಒಂದು ಘಟಕ
ಶಿಕ್ಷಣ ಸಚಿವಾಲಯ (ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ವಿಭಾಗ), ಭಾರತ ಸರ್ಕಾರ
PH:080-29900456, Email ID-jnvbengaluruurban@gmail.com

ಟೆಂಡರು ಪ್ರಕಟಣೆ

ನಮ್ಮ ವಿದ್ಯಾಲಯಕ್ಕೆ **2025–26** ನೇ ಸಾಲಿಗಾಗಿ ಈ ಕೆಳಕಂಡ ಕೆಲಸ / ಸಾಮಾನುಗಳ ಸರಬರಾಜಿಗಾಗಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ.
(I) ಅಕ್ಕಿ (ii) ದಿನಸಿ ವಸ್ತುಗಳು (iii) ಮೊಟ್ಟೆ, ಕೋಳಿ ಮಾಂಸ ಮತ್ತು ಕುರಿ ಮಾಂಸ (iv) ತರಕಾರಿ ಮತ್ತು ಹಣ್ಣು/ಗಳು (v) ಬೇಕರಿ ವಸ್ತುಗಳು (vi) ನೈರ್ಮಲ್ಯ ವಸ್ತುಗಳು (ಶೌಚಾಲಯ) (vii) ಟಿ–ಶರ್ಟ್, ಟ್ರ್ಯಾಕ್‌ಸೂಟ್, ಸ್ವೆಟರ್ (viii) ಪಾದರಕ್ಷೆಗಳ ವಸ್ತುಗಳು (ಶೂಗಳು, ಚಪ್ಪಲ್, ಸಾಕ್ಸ್) ಮತ್ತು ಶಾಲಾ ಚೀಲಗಳು (ix) ಹಾಸಿಗೆ ವಸ್ತುಗಳು (x) ಸಮವಸ್ತ್ರಗಳನ್ನು ಒಗೆಯುವುದು ಮತ್ತು ಇಸ್ತ್ರಿ ಮಾಡುವುದು (xi) ಅನುಪಯುಕ್ತ ವಸ್ತುಗಳ ವಿಲೇವಾರಿ.
ಇದಕ್ಕೆ ಸಂಬಂದಿಸಿದ ಟೆಂಡರು ಫಾರಂಗಳನ್ನು ದಿನಾಂಕ 26.03.2025 ರಿಂದ 15.04.2025 ರವರೆಗೆ ಜವಾಹರ್ ನವೋದಯ ವಿದ್ಯಾಲಯ, ಬಾಗಲೂರು, ಕಛೇರಿಯ ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 9.00 ಘಂಟೆಯಿಂದ ಸಾಯಂಕಾಲ 4.00 ಗಂಟೆಯವರೆಗೆ ವಿತರಿಸಲಾಗುವುದು. ಸದರೀ ಫಾರಂಗಳ ಬೆಲೆ ರೂಪಾಯಿ 200/– ರೂ ಆಗಿದ್ದು ಇದನ್ನು ವಿದ್ಯಾಲಯಕ್ಕೆ ಪಾವತಿಸುವುದರ ಮೂಲಕ ಪಡೆಯಬಹುದು. ಈ ಹಣವನ್ನು ವಿದ್ಯಾಲಯವು ಮರುಪಾವತಿಸುವುದಿಲ್ಲ. ವಿದ್ಯಾಲಯದ ವೆಬ್ ಸೈಟ್ https://www.navodaya.gov.in/nvs/nvs-school/BANGALOREURBAN/en/home/ ಅಥವಾ ಸಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಫಾರಂಗಳನ್ನು ತೆಗೆದುಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ದಿನಾಂಕ 16.04.2025 ರ ಸಂಜೆ 04.00 ಘಂಟೆಯವರೆಗೆ ಸ್ವೀಕರಿಸಲಾಗುವುದು. ಸೀಲು ಮಾಡಿದ ಲಕೋಟೆಗಳನ್ನು ನಿಗದಿ ಪಡಿಸಿದ ದಿನಾಂಕದೊಳಗಾಗಿ ಖುದ್ದಾಗಿ ಅಂಚೆ ಅಥವಾ (ತ್ವರಿತ ಅಂಚೆ ಅಥವಾ ರಿಜಿಸ್ಟರ್ ಪೋಸ್ಟ್) ಮೂಲಕ ವಿದ್ಯಾಲಯಕ್ಕೆ ಕಳುಹಿಸತಕ್ಕದ್ದು.
ಸೀಲು ಮಾಡಿದ ಲಕೋಟೆಗಳನ್ನು ದಿನಾಂಕ 17.04.2025 ರಂದು ಬೆಳಿಗ್ಗೆ 11.00 ಗಂಟೆಗೆ ಬೆಂಗಳೂರು ನಗರ ಜಿಲ್ಲೆಯ ಬಾಗಲೂರು, ಜವಾಹರ ನವೋದಯ ವಿದ್ಯಾಲಯದ ಪ್ರಾಂಶುಪಾಲರ ಕಚೇರಿಯಲ್ಲಿ ಹಾಜರಿದ್ದ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

ಪ್ರಾಂಶುಪಾಲರು

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಆಕುಕ ಇಂಜಿನಿಯರಿಂಗ್ ವಿಭಾಗ,
ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
Ph. No: 0821-2979772 E-mail: khsdrp.divmys@gmail.com
ಸಂಖ್ಯೆ: ಆಕುಕ/ಇಂ.ವಿ./ಕಾ.ಅ/ಮೈ/ಸಇ–4/ಟೆಂಡರ್–31/2024–25
ದಿನಾಂಕ: 21.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವ್ಯಾಪ್ತಿಗೆ ಒಳಪಡುವ Providing Modular IVF Lab setup at Second Floor of Womens & Children's Block Chaluvamba Hospital premises MMC &RI, Mysuru (ರೂ.90.00 ಲಕ್ಷಗಳು) ಕಾಮಗಾರಿಯನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಮೂರನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 07.04.2025 ರಂದು 16.00 ಗಂಟೆಯವರೆಗೆ. 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 08.04.2025 ರಂದು 16.30 ಗಂಟೆಗೆ. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp. karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸೂಚನೆ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಕೆ.ಪಿ.ಪಿ.ಪೋರ್ಟಲ್‌ನಲ್ಲಿ (https://kppp.karnataka.gov.in) ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
DIPR-DD-MYS/1493/KSMCA-1121/2024-25

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಹಾಸನ

ವಾರಸುದಾರರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ಮಗುವಿನ ವಿವರ: ಕ್ರ.ಸಂ.1)ಹೆಸರು: ಅಂಜಲಿ 2)ವಯಸ್ಸು: 7 ವರ್ಷ 3)ಲಿಂಗ: ಹೆಣ್ಣು 5)ಬಣ್ಣ: ಗೋದಿ ಬಣ್ಣ 6)ಪತ್ತೆಯಾದ ವರ್ಷ: 05.03.2022 7)ಪತ್ತೆಯಾದ ಸ್ಥಳ: ಜಾವಗಲ್ 7)ಪೊಲೀಸ್ ಠಾಣೆ: ಜಾವಗಲ್. ಮೇಲೆ ತಿಳಿಸಿದಂತಹ ಬಾಲಕೀಯ ವಾರಸುದಾರರು ಇದ್ದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಸನ ಅಥವಾ ಮಕ್ಕಳ ಕಲ್ಯಾಣ ಸಮಿತಿ, ಹಾಸನ ಇವರನ್ನು ಸಂಪರ್ಕಿಸಬಹುದಾಗಿದೆ.

ಮಗುವಿನ ಭಾವಚಿತ್ರ



ಸಹಿ/–ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಹಾಸನ
ವಾಸಾಸಂಇ/ಹಿಸನಿ/ಹಾಸನ/1094/ಕೆಎಸ್ಎಂಸಿಎ/2024–25

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು–560 001.
ಕರ್ನಾಟಕ ರಾಜ್ಯ, ಭಾರತ. ಫೋನ್: 25581383, 25589112, 25589113, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್: https://kspcb.karnataka.gov.in

ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ ತಿದ್ದುಪಡಿ

ದಿನಾಂಕ: 22.03.2025ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ No. PCB 288 INFRA EPH 2024/5311 Date: 20/03/2025 ಕ್ರ.ಸಂ.6ರ: ಯೋಜನೆಯ ದಾಸ್ತವೇಜುಗಳನ್ನು ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳಗಳನ್ನು (ಅ) ಜಿಲ್ಲಾಧಿಕಾರಿಗಳ ಕಛೇರಿ, ಧಾರವಾಡ. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯತ್, ಧಾರವಾಡ. (ಇ) ತಹಶೀಲ್ದಾರ್ ಕಾರ್ಯಾಲಯ, ಧಾರವಾಡ. (ಈ) ಜಿಲ್ಲಾ ಕೈಗಾರಿಕಾ ಕೇಂದ್ರ, ಧಾರವಾಡ (ಉ) ಗ್ರಾಮ ಪಂಚಾಯಿತಿ ಕಾರ್ಯಾಲಯ, ತೇಗೂರ್ ಗ್ರಾಮ, ಧಾರವಾಡ ತಾಲ್ಲೂಕು ಮತ್ತು ಜಿಲ್ಲೆ. (ಊ) ಗ್ರಾಮ ಪಂಚಾಯಿತಿ ಕಾರ್ಯಾಲಯ, ರಾಮಪುರ ಗ್ರಾಮ, ಧಾರವಾಡ ತಾಲ್ಲೂಕು ಮತ್ತು ಜಿಲ್ಲೆ. (ಋ) ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಛೇರಿ– ಧಾರವಾಡ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ಲಾಟ್ ನಂ.4, ಲಕ್ಕಮನಹಳ್ಳಿ ಕೈಗಾರಿಕಾ ಪ್ರದೇಶ, ಧಾರವಾಡ –580004. (ಎ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ಲಾಟ್ ನಂ.4, ಲಕ್ಕಮನಹಳ್ಳಿ ಕೈಗಾರಿಕಾ ಪ್ರದೇಶ, ಧಾರವಾಡ –580004. (ಐ) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034. (ಒ) ರಾಜ್ಯ ಪರಿಸರ ಅಘಾತ ಅಂದಾಜಿಕರಣ ಪ್ರಾಧಿಕಾರ–ಕರ್ನಾಟಕ, 4ನೇ ಗೇಟ್, 7ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು–560 001. (ಓ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001, **ಎಂದು ಓದಿಕೊಳ್ಳುವುದು.**

ಸಹಿ/–
ಸದಸ್ಯ ಕಾರ್ಯದರ್ಶಿ

ಕರ್ನಾಟಕ ಸರ್ಕಾರ
ಮುಖ್ಯ ವೈದ್ಯಾಧಿಕಾರಿಗಳ ಕಚೇರಿ,
ಸಾರ್ವಜನಿಕ ಆಸ್ಪತ್ರೆ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ
E-mail: gh.srpatna@gmail.com
Phone no: 08236-295435
ಸಂಖ್ಯೆ:ಸಾ.ಆ.ಶ್ರೀ/ಸರಬ/243/2024–25 ದಿ:24.03.2025

ಇ– ಪ್ರಕ್ಯೂರ್‌ಮೆಂಟ್ ಪ್ರಕಟಣೆ

2025–26 ನೇ ಸಾಲಿನ 31.03.2026 ರವರೆಗೆ ಮಾತ್ರ ಹೊರ ಗುತ್ತಿಗೆ ಗ್ರೂಪ್ ಡಿ ಕಾರ್ಮಿಕರ ಅರ್ಹ ಟೆಂಡರ್‌ದಾರರಿಂದ/ ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಪಾರದರ್ಶಕ ಅಧಿನಿಯಮ 1999–2000 ಮೇರೆಗೆ ದ್ವಿಲಕೋಟೆ ಪದ್ಧತಿಯನ್ವಯ ಮೊಹರಾದ ಟೆಂಡರ್‌ಗಳನ್ನು ಮರು ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ, ಇ.ಎಂ.ಡಿ ಮೊತ್ತ ಮತ್ತು ಇತರೆ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು **www.eproc.karnataka.gov.in** ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವ ಮೂಲಕ ಇ– ಪ್ರಕ್ಯೂರ್ ಮೆಂಟ್ ನಲ್ಲಿ ಭಾಗವಹಿಸಬಹುದು. ಭರ್ತಿಮಾಡಿದ ಟೆಂಡರ್‌ಗಳನ್ನು ದಿ:15.04.2025 ಸಂಜೆ 4 ಗಂಟೆಯೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಅಥವಾ ವೆಬ್‌ಸೈಟ್‌ನಲ್ಲಿ ಕಾಣಬಹುದು.

ಸಹಿ/–ಮುಖ್ಯ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/790/2024–25

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2024–25/6309 ದಿನಾಂಕ: 24/03/2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (Call-1 & Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024–25 ನೇ ಸಾಲಿನ ಲೆಕ್ಕ ಶೀರ್ಷಿಕೆ 5054–ರಾಜ್ಯ ಹೆದ್ದಾರಿ ಸುಧಾರಣೆ ಅಡಿ 1 ಕಾಮಗಾರಿ ಹಾಗೂ 5054–ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ ಅಡಿ 2 ಕಾಮಗಾರಿಗಳು, ಹೀಗೆ ಒಟ್ಟು 3 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಟ ಮೊತ್ತ ರೂ. 20.00 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 392.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್/ ಮರುಟೆಂಡರ್ ಆವ್ಹಾನಿಸಲಾಗಿದೆ.
ಕ್ರ.ಸಂ. 1 & 3 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:05–04–2025 ರಂದು (11.00 ಗಂಟೆಗೆ), 2)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:07–04–2025 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:09–04–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 11–04–2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕ್ರ.ಸಂ. 2 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:09–04–2025 ರಂದು (11.00 ಗಂಟೆಗೆ), 2)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:11–04–2025 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:15–04–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):17–04–2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-2008/KSMCA/2024-25

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು.
ಆಸ್ತಿ ಅಧಿಕಾರಿಗಳು ಆಸ್ತಿ ವಿಭಾಗ ರಾಯಚೂರು.
ಸಂಖ್ಯೆ/ಆಅ/ಆವಿ/ಟೆ.ನೋ–182/2024–25 ದಿನಾಂಕ:22–03–2025.

ಟೆಂಡರ್ ಅಧಿಸೂಚನೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಮುಖ್ಯ ಆವರಣ, ಮತ್ತು ಇತರೆ ಆವರಣಗಳಲ್ಲಿರುವ ವಿವಿಧ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಭಾಗಗಳಿಗೆ ಹಾಗೂ ಅಲ್ಲಿಯ ಸ್ಥಿರ ಮತ್ತು ಚರಾಸ್ತಿಗಳಿಗೆ, ರಕ್ಷಣೆ ಒದಗಿಸಲು ಆದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಭದ್ರತಾ ಸೇವೆ ಒದಗಿಸಲು ನಿಗದಿತ ನಮೂನೆಯಲ್ಲಿ ನೊಂದಾಯಿತ ಹಾಗೂ ಅರ್ಹ ಭದ್ರತಾ ಏಜನ್ಸಿದಾರರಿಂದ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ಹೆಚ್ಚಿನ ವಿವರಗಳು ವೆಬ್‌ಸೈಟ್ ವಿಳಾಸ https://kppp.karnataka.gov.in ದಲ್ಲಿ ಲಭ್ಯವಿರುತ್ತದೆ.ಟೆಂಡರ್ ವೇಳಾ ಪಟ್ಟಿ :– (1) ತುಂಬಿದ ಟೆಂಡರನ್ನು ವೆಬ್‌ಸೈಟ್‌ನ ಮೂಲಕ ಸಲ್ಲಿಸುವ ಕೊನೆಯ ದಿನಾಂಕ:– 21–04–2025 ಸಾಯಂಕಾಲ 4.00 ಗಂಟೆಯವರೆಗೆ(2) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:– 22–04–2025 ಸಾಯಂಕಾಲ 4.10 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ ಕೆಲಸದ ದಿನಗಳಂದು ಸದರಿ ಕಛೇರಿಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು (Ph. No. 08532 – 220640) ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ https://kppp.karnataka.gov.in ನಲ್ಲಿ ಇಲ್ಲವೆ ಹೆಲ್ಪಡೆಸ್ಕನಿಂದ (ಸಹಾಯಕ ದೂರವಾಣಿ ಸಂಖ್ಯೆ : 080–25501216 ಮತ್ತು 25501227) ಪಡೆಯಬಹುದು.

ಸಹಿ/– ಆಸ್ತಿ ಅಧಿಕಾರಿಗಳು,
ಕೃ.ವಿ.ವಿ. ರಾಯಚೂರು.
DIP/RCR/854/KSMC&A/858/2024-25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ
ಸಂ.ಕಾನಿಅ/ಲೋಇ/ಕವಿ/ತಾಶಾ–4,5&6/.ಟೆಂಡರ್.ಅಧಿಸೂಚನೆ/2024–25/8073 ದಿನಾಂಕ: 24.03.2025

:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ 2024–25ನೇ ಸಾಲಿನ 4059 ಅಪೆಂಡಿಕ್ಸ್–ಇ, 2059–2216 ನಿರ್ವಹಣೆ ಮತ್ತು 8443 ಠೇವಣಿ ಯೋಜನೆಯಡಿಯಲ್ಲಿನ ಒಟ್ಟು (06) ಕಾಮಗಾರಿಗೆ KPPP portal ಮುಖಾಂತರ ಟೆಂಡರ ಕರೆಯಲಾಗಿದೆ. ಇಂಡೆಂಟ ಸಂ: **19814, 20444, 20820, 20819, 20827 & 20826** ಕ್ಕೆ e-procurement ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: **ಕನಿಷ್ಠ ರೂ. 100.00 ಮತ್ತು ಗರಿಷ್ಠ ರೂ 285.00 ಲಕ್ಷಗಳು,** 3) ಕಾಮಗಾರಿಯ ಗುತ್ತಿಗೆ ಮೊತ್ತ: **ಕನಿಷ್ಠ ರೂ. 83.83 ಮತ್ತು ಗರಿಷ್ಠ ರೂ 241.41 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ ವಿವರ: ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಕ್ಲಾಸ್–III ದರ್ಜೆ ಮತ್ತು ಮೇಲ್ಪಟ್ಟ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಾಗಿರಬೇಕು. 5) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ಕನಿಷ್ಠ ರೂ. 2,00,000.00 ಮತ್ತು ಗರಿಷ್ಠ 3,62,000.00, 6) ಪ್ರೀ ಬಿಡ್ ಸಭೆ ದಿನಾಂಕ: **01/04/2025 (11.0 ಗಂಟೆ),** 7) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **03/04/2025 (17.30 ಗಂಟೆ),** 8) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **04/04/2025 (16.00 ಗಂಟೆ),** 9) ತಾಂತ್ರಿಕ ಬಿಡ್ ತೆರವುಗೊಳಿಸಿವ ದಿನಾಂಕ: **05/04/2025 (16.30 ಗಂಟೆ),** 10) ಆರ್ಥಿಕ ಬಿಡ್ ತೆರೆವುಗೋಳಿಸುವ ದಿನಾಂಕ: **07/04/2025 (16.30 ಗಂಟೆ),** 11) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿಯಲ್ಲಿ ಸಂಪರ್ಕಿಸಬಹುದಾಗಿದೆ. 12) ಅಂತರ್ಜಾಲ ತಾಣದ ವಿಳಾಸ: www.kppp.karnataka.gov.in, 13) ಗಮನಿಸಬೇಕಾದ ಅಂಶಗಳು: **ಟಿಪ್ಪಣಿ:** 1) ಈ ಕೆಳಗೆ ಸಹಿ ಮಾಡಿರುವವರು ಯಾವೂದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವೂದೆ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯೂನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜೆನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1144/ಕೆ.ಎಸ್.ಎಂ.ಸಿ.&ಎ/2024–25

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 080–26096839 / 26096855 ಇಮೇಲ್: purchase@kmf.coop
ಸಂಖ್ಯೆ: KMF/PUR/CFRM-633B/2025-26 ದಿನಾಂಕ: 25–03–2025

ಅಲ್ಪಾವಧಿ ಟೆಂಡರ್ ಪ್ರಕಟಣೆ (KPPP Tender No. KMF/2024-25/IND1339)

ಕರ್ನಾಟಕ ಹಾಲು ಮಹಾಮಂಡಳವು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಘಟಕವಾರು ವಿವಿಧ ಪಶು ಆಹಾರ ಕಚ್ಚಾಮಾಲುಗಳನ್ನು ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ಭಾಗವಹಿಸಬಹುದಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಹಾಗೂ ಐಟಂವಾರು ಇ.ಎಂ.ಡಿ ವಿವರಗಳನ್ನು KPP Portal https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ತಿದ್ದುಪಡಿ/ ಟಿಪ್ಪಣಿಗಳೇನಾದರು ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು.

ಕ್ರ. ಸಂ.	ಕಚ್ಚಾಮಾಲುಗಳು	ಘಟಕವಾರು ಪರಿಮಾಣ ಮೆಟ್ರಿಕ್ ಟನ್‌ಗಳಲ್ಲಿ (MTs)				
		ರಾಜಾನುಕುಂಟೆ	ಗುಬ್ಬಿ	ಧಾರವಾಡ	ಹಾಸನ	ಶಿಕಾರಿಪುರ
1	ಎಣ್ಣೆರಹಿತ ಹತ್ತಿ ಬೀಜದ ಹಿಂಡಿ (ಫ್ಲೇಕ್ಸ್)	0	100	50	300	0
2	ಎಣ್ಣೆರಹಿತ ಸಾಸಿವೆ ಹಿಂಡಿ	250	450	0	1500	0
3	ಮೆಕ್ಕೆಜೋಳದ ಗ್ಲೂಟೇನ್ ಫೀಡ್	0	175	0	200	0
4	ಮೈಜ್ ಡಿ.ಡಿ.ಜಿ.ಎಸ್	0	0	75	150	0
5	ಎಣ್ಣೆರಹಿತ ಮೈಜ್ ಡಿ.ಡಿ.ಜಿ.ಎಸ್	0	0	100	200	0
6	ಎಣ್ಣೆರಹಿತ ಸೂರ್ಯಕಾಂತಿ ಹಿಂಡಿ ಗ್ರೇಡ್–1 (ಪೆಲೆಟ್ಸ್)	0	150	0	200	150
7	ಎಣ್ಣೆರಹಿತ ಶೇಂಗಾ ಹಿಂಡಿ	0	200	0	100	150

ಟೆಂಡರ್ ವೇಳಾಪಟ್ಟಿ: ಟೆಂಡರ್ ಪ್ರಾರಂಭವಾಗುವ ದಿನಾಂಕ: 25-03-2025; ಪೂರ್ವಭಾವಿ ಸಭೆಯ ದಿನಾಂಕ: 07-04-2025 at 11.30AM; ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15-04-2025 at 04:30 PM; ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 16-04-2025 at 04.45 PM; ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ: 16-04-2025 at 05.00 PM.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಬ್ಬಿ
ಕೆ.ಎಸ್.ಆರ್.ಟಿ.ಸಿ ಬಸ್ಟ್ಯಾಂಡ್ ಹತ್ತಿರ, ಗುಬ್ಬಿ–572216.
ಇ ಮೇಲ್:–apmcgubbi@gmail.com ದೂ:08131–222250, 222150
ಸಂಖ್ಯೆ:ಕೃಮಾಇ/ಕೃಉಮಾಸ/ಗು/252/2024–25 ದಿನಾಂಕ: 19.03.2025

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಬ್ಬಿ ವತಿಯಿಂದ 2024–25 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡ ಕಾಮಗಾರಿಗಳನ್ನು ಕರ್ನಾಟಕ ಸರ್ಕಾರದ KPP ಪೋರ್ಟಲ್ https://kppp.karnataka.gov.in ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಟೆಂಡರ್ ಪ್ರೊಸೆಸಿಂಗ್ ಶುಲ್ಕ	ಅರ್ಹ ಗುತ್ತಿಗೆದಾರರ ವರ್ಗ	ಕಾಮಗಾರಿ ಕಾಲಾವಧಿ
1.	ಕೃ.ಉ.ಮಾ.ಸ., ಗುಬ್ಬಿ ಸಮಿತಿ ವ್ಯಾಪ್ತಿಯ ಚೇಳೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಸಿ.ಸಿ. ರಸ್ತೆ ಮತ್ತು ಆರ್.ಸಿ.ಸಿ. ಚರಂಡಿ ನಿರ್ಮಿಸುವ ಕಾಮಗಾರಿ	1,03,35,401	1,55,030	KPP ಪೋರ್ಟಲ್ ರನ್ವಯ KW-4	ಲೋಕೋಪಯೋಗಿ ಇಲಾಖೆ ನೊಂದಾಯಿತ 1ನೇ ದರ್ಜೆ	4 ತಿಂಗಳು (ಮಳೆಗಾಲ ಹೊರತುಪಡಿಸಿ)
2.	ಕೃ.ಉ.ಮಾ.ಸ., ಗುಬ್ಬಿ ಸಮಿತಿ ವ್ಯಾಪ್ತಿಯ ಚೇಳೂರು ಉಪ ಮಾರುಕಟ್ಟೆ ಪ್ರಾಂಗಣದ ಮುಂಭಾಗದ ಕಾಂಪೌಂಡ್ ಗೋಡೆ ಅಭಿವೃದ್ಧಿ ಕಾಮಗಾರಿ	32,18,407	64,400	KPP ಪೋರ್ಟಲ್ ರನ್ವಯ KW-2	ಲೋಕೋಪಯೋಗಿ ಇಲಾಖೆ ನೊಂದಾಯಿತ 2ನೇ ದರ್ಜೆ	3 ತಿಂಗಳು (ಮಳೆಗಾಲ ಹೊರತುಪಡಿಸಿ)

1. ಬಿಡ್ ಪೂರ್ವಭಾವಿ ಸಭೆ ಮತ್ತು ಟೆಂಡರ್ ತಕರಾರು ಸಮಜಾಯಿಷಿ ನೀಡುವ ದಿನಾಂಕ ಮತ್ತು ಸ್ಥಳ 02–04–2025, ಬೆಳಿಗ್ಗೆ 11–00 ಗಂಟೆಗೆ, ಆಡಳಿತ ಕಛೇರಿ,ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಬ್ಬಿ. 2. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ವೇಳೆ 28–04–2025 ಸಂಜೆ : 4–00 ಗಂಟೆಯವರೆಗೆ 3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 02–05–2025 ಬೆಳಿಗ್ಗೆ 11–00 ಗಂಟೆಗೆ. 4. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 15–05–2025 ಬೆಳಿಗ್ಗೆ 11–00 ಗಂಟೆಗೆ(ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ). ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಾರ್ಯಾಲಯದ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಅಥವಾ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಸಮಿತಿ ಕಾರ್ಯಾಲಯದ ದೂರವಾಣಿ ಸಂಖ್ಯೆ: 08131–222250 ಯಿಂದ ಪಡೆಯಬಹುದಾಗಿದೆ. ಟೆಂಡರುಗಳನ್ನು ಯಾವುದೇ ಕಾರಣ ನೀಡದೇ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–ಕಾರ್ಯದರ್ಶಿ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಬ್ಬಿ

ಸಹಿ/– ಆಡಳಿತಾಧಿಕಾರಿಗಳು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಬ್ಬಿ.



ಸುಭಾಷಿತ

ವಾದ ಮಾಡುವಾಗ ಎತ್ತರಿಸಬೇಕಾದದ್ದು ಧ್ವನಿಯನ್ನಲ್ಲ, ವಿಷಯದ ಸತ್ವವನ್ನು. ಪ್ರಕೃತಿ ನಳನಳಿಸುವುದು ಗುಡುಗಿನಿಂದಲ್ಲ, ಮಳೆಯಿಂದ. –ರೂಮಿ

ಲೋಕಸಭಾ ಕ್ಷೇತ್ರ ಮರುವಿಂಗಡಣೆ ಎಲ್ಲರೂ ಒಪ್ಪುವ ಸೂತ್ರ ಸಿದ್ಧವಾಗಲಿ

ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯ ವಿಚಾರವಾಗಿ ಚರ್ಚಿಸಲು ವಿವಿಧ ರಾಜ್ಯ ಸರ್ಕಾರಗಳ ಪ್ರಮುಖರು ಹಾಗೂ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಚೆನ್ನೈನಲ್ಲಿ ಕಳೆದ ವಾರ ಸಭೆ ಸೇರಿದ್ದರು. ಇವರಲ್ಲಿ ದಕ್ಷಿಣದ ರಾಜ್ಯಗಳಿಗೆ ಸೇರಿದ ಪ್ರಮುಖರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಈಗಿನ ಜನಸಂಖ್ಯೆಯನ್ನು ಆಧರಿಸಿ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಮಾಡುವ ಬಗ್ಗೆ ದಕ್ಷಿಣದ ರಾಜ್ಯಗಳಲ್ಲಿ ಇರುವ ಕಳವಳವನ್ನು ಈ ಸಭೆಯು ಪ್ರಮುಖವಾಗಿ ಪ್ರಸ್ತಾಪಿಸಿದೆ. ನ್ಯಾಯಸಮ್ಮತ ಮರುವಿಂಗಡಣೆಗಾಗಿ ಜಂಟಿ ಕ್ರಿಯಾ ಸಮಿತಿ ಹೆಸರಿನಲ್ಲಿ ನಡೆದ ಮೊದಲ ಸಭೆ ಇದು. ತಮಿಳುನಾಡು, ಕೇರಳ, ತೆಲಂಗಾಣ ಮತ್ತು ಪಂಜಾಬ್‌ನ ಮುಖ್ಯಮಂತ್ರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಕರ್ನಾಟಕದ ಉಪಮುಖ್ಯಮಂತ್ರಿ, ಒಡಿಶಾ, ತೆಲಂಗಾಣದ ರಾಜಕೀಯ ನಾಯಕರು ಸಭೆಯಲ್ಲಿ ಇದ್ದರು. 1971ರ ಜನಗಣತಿಯನ್ನು ಆಧರಿಸಿದ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಇನ್ನೂ 25 ವರ್ಷ ಬದಲಾಯಿಸಬಾರದು ಎಂದು ಸಭೆಯು ಒತ್ತಾಯಿಸಿದೆ. ಸಭೆಯ ಆತಿಥ್ಯ ವಹಿಸಿದ್ದ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು, ಜಂಟಿ ಕ್ರಿಯಾ ಸಮಿತಿಯು ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯನ್ನು ವಿರೋಧಿಸುತ್ತಿಲ್ಲ; ಬದಲಿಗೆ, 'ಜನಸಂಖ್ಯೆಯ ಹೆಚ್ಚಳವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಮೂಲಕ ದೇಶದ ಪ್ರಗತಿಗೆ ಕೊಡುಗೆ ನೀಡಿರುವ ರಾಜ್ಯಗಳನ್ನು ಶಿಕ್ಷೆಗೆ ಗುರಿಪಡಿಸದ ರೀತಿಯಲ್ಲಿ ನ್ಯಾಯಸಮ್ಮತವಾಗಿ ಮರುವಿಂಗಡಣೆ ನಡೆಯಬೇಕು ಎಂಬ ಆಗ್ರಹ ಮಂಡಿಸಿದೆ' ಎಂದು ಸ್ಪಷ್ಟಪಡಿಸಿದ್ದಾರೆ.



ಜನಸಂಖ್ಯೆಯನ್ನು ಮಾತ್ರವೇ ಆಧಾರವಾಗಿ ಇರಿಸಿಕೊಂಡು ಕ್ಷೇತ್ರಗಳ ಮರುವಿಂಗಡಣೆ ನಡೆಸಿದಾಗ, ದಕ್ಷಿಣದ ರಾಜ್ಯಗಳಿಗೆ ಅನ್ಯಾಯ ಆಗುತ್ತದೆ ಎಂಬ ಆತಂಕದಲ್ಲಿ ಹುರುಳಿದೆ

ಹಾಗಾದರೆ, ಕ್ಷೇತ್ರಗಳ ಮರುವಿಂಗಡಣೆ ಕಾರ್ಯವು 'ನ್ಯಾಯಸಮ್ಮತವಾಗಿ ನಡೆದರೆ', ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯನ್ನು 25 ವರ್ಷ ತಡೆಹಿಡಿಯಬೇಕು ಎಂಬ ಆಗ್ರಹವನ್ನು ಮಂಡಿಸುವುದೇಕೆ ಎಂಬುದು ಸ್ಪಷ್ಟವಾಗಿಲ್ಲ. 'ನ್ಯಾಯಸಮ್ಮತವಾಗಿ' ನಡೆಯುವುದು ಅಂದರೆ ಏನು ಎನ್ನುವ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಇರುವುದು ಖಚಿತ. ಆದರೆ, ಜನಸಂಖ್ಯಾ ನಿಯಂತ್ರಣ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದ ರಾಜ್ಯಗಳಿಗೆ ಲೋಕಸಭೆಯಲ್ಲಿ ಪ್ರಾತಿನಿಧ್ಯ ಕಡಿಮೆ ಮಾಡಿ, ಅವುಗಳಿಗೆ ಶಿಕ್ಷೆ ವಿಧಿಸಬಾರದು ಎಂಬುದನ್ನು ಸಭೆಯು ಸ್ಪಷ್ಟವಾಗಿ ಹೇಳಿದೆ. ಲೋಕಸಭೆಯಲ್ಲಿ ದಕ್ಷಿಣದ ರಾಜ್ಯಗಳು ಹೊಂದಿರುವ ಸಂಖ್ಯಾ ಬಲವು ಕಡಿಮೆ ಆಗುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭರವಸೆ ನೀಡಿದ್ದಾರೆ. ಆದರೆ, ಅವರ ಈ ಮಾತು ಸಮಾಧಾನ ಮೂಡಿಸುವಂತೆ ಇಲ್ಲ. ಏಕೆಂದರೆ, ಜನಸಂಖ್ಯೆಯಲ್ಲಿ ಭಾರಿ ಏರಿಕೆ ಕಂಡಿರುವ ರಾಜ್ಯಗಳ ಲೋಕಸಭಾ ಕ್ಷೇತ್ರಗಳು ಹೆಚ್ಚಳವಾದರೆ, ಆ ರಾಜ್ಯಗಳ ಸಂಖ್ಯಾ ಬಲಕ್ಕೆ ಹೋಲಿಸಿದರೆ ದಕ್ಷಿಣದ ರಾಜ್ಯಗಳ ಸಂಖ್ಯಾ ಬಲವು ಕುಗ್ಗುತ್ತದೆ. ಸಮಸ್ಯೆಯ ತಿರುಳು ಇರುವುದೇ ಇಲ್ಲಿ. ಇದನ್ನು ಪರಿಹರಿಸಲು ಕೆಲಸ ಆಗಬೇಕು. ಇಲ್ಲವಾದರೆ, ಕ್ಷೇತ್ರ ಮರುವಿಂಗಡಣೆ ಕಾರ್ಯವು ದೇಶದ ರಾಜಕೀಯ ಮತ್ತು ಸಾಂವಿಧಾನಿಕ ಸಂರಚನೆಯ ಬಹುಮುಖ್ಯ ಭಾಗವಾದ ಒಕ್ಕೂಟ ವ್ಯವಸ್ಥೆಯಲ್ಲಿ ಅಸಮತೋಲನವನ್ನು ಸೃಷ್ಟಿಸುತ್ತದೆ. ಅದರಿಂದ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಪರಿಣಾಮಗಳು ಉಂಟಾಗುತ್ತವೆ.

ಕೇಂದ್ರ ಗೃಹ ಸಚಿವರ ಮಾತುಗಳನ್ನು ಹೊರತುಪಡಿಸಿದರೆ, ಕ್ಷೇತ್ರ ಮರುವಿಂಗಡಣೆ ವಿಚಾರವಾಗಿ ತಾನು ಏನು ಮಾಡಲು ಬಯಸಿದ್ದೇನೆ ಎಂಬುದನ್ನು ಕೇಂದ್ರವು ವಿವರಿಸಿಲ್ಲ. ಜನಗಣತಿಯನ್ನು ನಡೆಸುವಲ್ಲಿ ಆಗಿರುವ ವಿಳಂಬವು ಸರ್ಕಾರದ ಉದ್ದೇಶಗಳ ಬಗ್ಗೆ ಒಂದಿಷ್ಟು ತಕರಾರು ಸೃಷ್ಟಿಸಿದೆ. ಕೇಂದ್ರ ಸರ್ಕಾರದ ಕಡೆಯಿಂದ ಅಧಿಕೃತವಾಗಿ ಯಾವುದೇ ಮಾತು ಬಂದಿಲ್ಲವಾದರೂ ಆಡಳಿತಾರೂಢ ಬಿಜೆಪಿಯ ಕೆಲವು ಸದಸ್ಯರು ಜನಸಂಖ್ಯೆ ಆಧರಿತ ಕ್ಷೇತ್ರ ಮರುವಿಂಗಡಣೆಯನ್ನು ಸಮರ್ಥಿಸಿಕೊಳ್ಳಲು ಆರಂಭಿಸಿದ್ದಾರೆ. ಜನಸಂಖ್ಯೆ ಎಷ್ಟೇ ಇದ್ದರೂ, ಒಬ್ಬ ವ್ಯಕ್ತಿಗೆ ಒಂದೇ ಮತವಲ್ಲವೇ ಎಂಬ ಮಾತು ತಾತ್ವಿಕವಾಗಿ ಸರಿಯಾದರೂ ಜನಸಂಖ್ಯೆಯನ್ನು ಮಾತ್ರವೇ ಆಧಾರವಾಗಿ ಇರಿಸಿಕೊಂಡು ಕ್ಷೇತ್ರಗಳ ಮರುವಿಂಗಡಣೆ ನಡೆಸಿದಾಗ, ದಕ್ಷಿಣದ ರಾಜ್ಯಗಳಿಗೆ ಅನ್ಯಾಯ ಆಗುತ್ತದೆ ಎಂಬ ಆತಂಕದಲ್ಲಿ ಹುರುಳಿದೆ. ಕ್ಷೇತ್ರ ಮರುವಿಂಗಡಣೆ ವಿಚಾರವಾಗಿ ಎಲ್ಲ ಅಭಿಪ್ರಾಯಗಳಿಗೂ ಕೇಂದ್ರವು ಕಿವಿಗೊಡಬೇಕು. ಪಾರದರ್ಶಕವಾದ ಹಾಗೂ ಎಲ್ಲರನ್ನೂ ಒಳಗೊಳ್ಳುವ ಪ್ರಕ್ರಿಯೆಯನ್ನು ಅನುಸರಿಸಬೇಕು. ಎಲ್ಲರಿಗೂ ಒಪ್ಪಿತವಾಗುವ ಸೂತ್ರವೊಂದನ್ನು ಅದು ರೂಪಿಸಬೇಕು. ಈ ಎಲ್ಲ ಕೆಲಸಗಳನ್ನು ಮಾಡಲು ಕೇಂದ್ರ ಸರ್ಕಾರದ ಬಳಿ ಸಮಯವಂತೂ ಖಂಡಿತ ಇದೆ.

ದಿನದ ಟ್ವೀಟ್

ಸಲ್ಲದ ವಿಷಯಕ್ಕೆ ಸಮಯಹರಣ



ನಾವು ಔರಂಗಜೇಬನಿಂದ ಕುನಾಲ್ ವಿಷಯಕ್ಕೆ ಹೊರಳಿದ್ದೇವೆ. ಇತಿಹಾಸದಿಂದ ಪ್ರಚಲಿತ ವಿದ್ಯಮಾನದತ್ತ ಬಂದಂತಾಯಿತು. ಅಷ್ಟರಮಟ್ಟಿಗೆ ಮುನ್ನಡೆ ಸಾಧಿಸಿದಂತಾಗಿದೆ!

ಅರವಿಂದ್ ರಾಮಚಂದ್ರ, ಛಾಯಾಗ್ರಾಹಕ

ಕಿಡಿನುಡಿ



ಮೀರಟ್‌ನಲ್ಲಿ ನಡೆದ ಗಂಡನೊಬ್ಬನ ಭೀಕರ ಹತ್ಯೆ ಪ್ರಕರಣದ ಬಗ್ಗೆ ಕಂಟೆಂಟ್ ಕ್ರಿಯೇಟರ್‌ಗಳು ತಮಾಷೆಯ ರೀಲ್ಸ್ ಮಾಡುತ್ತಿದ್ದಾರೆ. ಈ ಭಯಾನಕ ಪ್ರಕರಣದ ಬಗ್ಗೆ ಇಂತಹ ಲೆಕ್ಕವಿಲ್ಲದಷ್ಟು ವಿಡಿಯೊಗಳು ಪ್ರಕಟವಾಗುತ್ತಿವೆ. ಅವುಗಳನ್ನು ನೋಡಿ ಜನ ಜೋರಾಗಿ ನಗುತ್ತಿದ್ದಾರೆ. ಒಂದೊಮ್ಮೆ ಗಂಡನ ಜಾಗದಲ್ಲಿ ಹೆಂಡತಿ ಇದ್ದಿದ್ದರೆ ಇದನ್ನು 'ಸಮಾಜದಲ್ಲಿ ಸ್ತ್ರೀದ್ವೇಷದ ಬಹಿರಂಗ ಪ್ರದರ್ಶನ' ಎಂದು ಕರೆಯಲಾಗುತ್ತಿತ್ತು.

ದೀಪಿಕಾ ನಾರಾಯಣ್ ಭಾರದ್ವಾಜ್, ಪತ್ರಕರ್ತೆ, ಚಿತ್ರ ನಿರ್ದೇಶಕಿ

25 ವರ್ಷಗಳ ಹಿಂದೆ

ಭಾನುವಾರ, 26-3-2000

• ಕೃಷ್ಣಾ ಮೇಲ್ದಂಡೆ ಅಕ್ರಮ ತನಿಖೆಗೆ ಸಮಿತಿ ರಚನೆ: ಸಂಪುಟ ನಿರ್ಧಾರ

ಬೆಂಗಳೂರು, ಮಾರ್ಚ್ 25– ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳ ಅನುಷ್ಠಾನದಲ್ಲಿ ನಡೆದಿದೆ ಎನ್ನಲಾದ ಅಕ್ರಮ–ಅವ್ಯವಹಾರಗಳ ಸಂಬಂಧ ವಿಧಾನಸಭೆಯ ಅಂದಾಜು ಸಮಿತಿ ವರದಿಯಲ್ಲಿ ಮಾಡಲಾಗಿರುವ ಆರೋಪಗಳ ಕುರಿತು ತನಿಖೆ ನಡೆಸಲು ನಾಲ್ವರು ಹಿರಿಯ ಅಧಿಕಾರಿಗಳನ್ನೊಳಗೊಂಡ ಉನ್ನತ ಮಟ್ಟದ ಸಮಿತಿ ನೇಮಿಸಲು ಇಂದು ನಡೆದ ರಾಜ್ಯ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

1994–97ರ ಮೂರು ವರ್ಷಗಳ ಅವಧಿಯಲ್ಲಿ ಆಗಿರುವ ಕಾಮಗಾರಿಗಳಿಗೆ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಹಣ ವೆಚ್ಚ ಮಾಡಿರುವುದು, ಯೋಜನೆಯ ನಿರ್ವಹಣಾ ಕಾಮಗಾರಿಗಳಲ್ಲಿ ನಡೆದಿರುವ ಅಕ್ರಮಗಳು, ನಾರಾಯಣಪುರ ಬಲದಂಡೆ ಕಾಲುವೆಯ ವಿತರಣಾ ನಾಲೆಗಳ ಕಾಮಗಾರಿಗಳಲ್ಲಿ ನಡೆದಿರುವ ಅಕ್ರಮಗಳು, ಕೆಲವು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ಫಾರಂ ಹಾಗೂ ಕರಾರು ಫಾರಂಗಳನ್ನು ಅವಶ್ಯಕತೆಗಿಂತಲೂ ಹೆಚ್ಚು ಮುದ್ರಿಸಿರುವುದು, ಟೆಂಡರ್ ಕರೆಯದೆ ಗುತ್ತಿಗೆ ನೀಡಿರುವುದು, ಸಿಮೆಂಟ್, ಕಬ್ಬಿಣ, ಅಣೆಕಟ್ಟೆ ಮತ್ತು ನಾಲೆಗಳ ಗೇಟುಗಳು ಹಾಗೂ ಸ್ಫೋಟಕ ವಸ್ತುಗಳ ಖರೀದಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಈ ಸಮಿತಿ ತನಿಖೆ ನಡೆಸಲಿದೆ ಎಂದು ವಾರ್ತಾ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್ ಅವರು ವರದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 26-3-1975

• ಸೌದಿ ಅರೇಬಿಯಾದ ದೊರೆ ಫೈಜಲ್ ಹತ್ಯೆ

ಬೈರೂತ್, ಮಾರ್ಚ್ 25– ಸೌದಿ ಅರೇಬಿಯಾದ ದೊರೆ ಫೈಜಲ್ ಅವರು ತಮ್ಮ ಅರಮನೆಯಲ್ಲಿ ಇಂದು ಕೊಲೆಗೀಡಾದರು.

ಫೈಜಲ್ ಅವರು ತಮ್ಮ ಸೋದರ ಸಂಬಂಧಿ ಆದ ರಾಜಕುಮಾರ ಫೈಜಲ್ ಬಿನ್ ಮೌಸ್ಸಾಯೆದ್ ಅವರಿಂದ ಅರಮನೆಯಲ್ಲಿ ಗುಂಡೇಟಿಗೆ ತುತ್ತಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಕೊನೆಯುಸಿರು ಎಳೆದರು ಎಂದು ರಿಯಾದ್ ರೇಡಿಯೊ ವರದಿ ಮಾಡಿದೆ.

70 ವರ್ಷ ವಯಸ್ಸಿನ ಫೈಜಲ್ ಅವರು ಅರಮನೆಯಲ್ಲಿದ್ದಾಗ, ರಾಜಕುಮಾರ ಮೌಸ್ಸಾಯೆದ್ ಅವರು ಪ್ರವಾದಿ ಮಹಮದ್ ಜನ್ಮ ದಿನಾಚರಣೆ ಸಂದರ್ಭದಲ್ಲಿ ಶುಭಾಶಯ ಸಲ್ಲಿಸುವವರಂತೆ ಹತ್ತಿರ ಬಂದು, ಹಠಾತ್ತಾಗಿ ಬಂದೂಕು ಹೊರತೆಗೆದು ಫೈಜಲ್ ಅವರ ಮೇಲೆ ಹಲವು ಬಾರಿ ಗುಂಡು ಹಾರಿಸಿದರೆಂದು ವರದಿಯಾಗಿದೆ.

ಭಾರತೀಯ ಕಾಲಮಾನ ಸಂಜೆ 4.43ರಲ್ಲಿ ಫೈಜಲ್ ಕೊಲೆ ಸುದ್ದಿ ನೀಡಿದ ರೇಡಿಯೊ ಪ್ರಕಟಣೆಯು, 'ಏಕಾಂಗಿಯಾಗಿ ಈ ಕೃತ್ಯ ನಡೆಸಿದ ಕೊಲೆಗಾರನಿಗೆ ಬುದ್ಧಿ ವಿಕಲ್ಪ ಆಗಿತ್ತು. ಈ ಕೊಲೆಗೆ ಯಾರಿಂದಲೂ ಪ್ರೇರಿತವಾಗಿರಲಿಲ್ಲ' ಎಂದು ತಿಳಿಸಿದೆ.

• 23 ಲಕ್ಷ ರೂ. ಬೆಲೆಯ ವ್ಯರ್ಥ ಬಿಡಿಭಾಗಗಳು

ಬೆಂಗಳೂರು, ಮಾರ್ಚ್ 25– ರಾಜ್ಯ ಸಾರಿಗೆ ಸಂಸ್ಥೆ ಮತ್ತು ಬೆಂಗಳೂರು ಸಾರಿಗೆ ಸಂಸ್ಥೆಯ ದಾಸ್ತಾನಿನಲ್ಲಿ ಇರುವ ನಿರುಪಯೋಗಿ ಬಿಡಿಭಾಗಗಳ ಒಟ್ಟು ಮೌಲ್ಯ 23.18 ಲಕ್ಷ ರೂ.ಗಳೆಂದು ಸಾರಿಗೆ ಸಚಿವ ಎಂ. ಮಹಮದಾಲಿ ಅವರು ಇಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ಡಿ. ರಾಜಗೋಪಾಲ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬಸ್ಸುಗಳ ಮಾದರಿಯಲ್ಲಿ ಬದಲಾವಣೆಗಳು ಆಗಿರುವುದರಿಂದ ಬಳಸದೇ ಇದ್ದರೂ ಇವುಗಳು ಉಪಯೋಗಕ್ಕೆ ಬಾರದೆ ಹಾಗೇ ಉಳಿದಿವೆ ಎಂದರು.

ಹನಿಟ್ರ್ಯಾಪ್: ಶಾಸಕರು ಸರ್ಕಾರದಿಂದ ಸುರಕ್ಷತೆಯ 'ಗ್ಯಾರಂಟಿ' ಬಯಸುತ್ತಿದ್ದಾರೆಯೇ?

ಬರ–ಗರ: ಈ ನಾಡಿಗೆ ಏನಾಗಿದೆ?



ಪಡಸಾಲೆ

ರಘುನಾಥ ಚ.ಹ.

'ಈ ಪಟ್ಟಣಕ್ಕೆ ಏನಾಯಿತು? ಒಂದೆಡೆ ಇದ್ದಿಲಾದರೆ, ಇನ್ನೊಂದೆಡೆ ಹೊಗೆಯೋ ಹೊಗೆ. ಏಕೆ ಯಾರೂ ಮಾತನಾಡುತ್ತಿಲ್ಲ? ಮೌನವಾಗಿ ಹೊಗೆಯನ್ನು ಸಹಿಸಿಕೊಳ್ಳುತ್ತಿದ್ದಾರೆ? ಸಹನೆಯ ಪರೀಕ್ಷೆಯಾಗಿದೆ...' – ಧೂಮಪಾನದ ಕೆಡುಕುಗಳ ಬಗ್ಗೆ ಜಾಗೃತಿ ಮೂಡಿಸಲು ಚಲನಚಿತ್ರದ ಆರಂಭಕ್ಕೆ ಮುನ್ನ ಚಿತ್ರಮಂದಿರಗಳಲ್ಲಿ ಪ್ರದರ್ಶನಗೊಳ್ಳುತ್ತಿದ್ದ 'ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ'ದ ಪ್ರಕಟಣೆಯಲ್ಲಿನ ಈ ಪ್ರಶ್ನೆಗಳನ್ನು ವರ್ತಮಾನದ ಸಾಮಾಜಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಕನ್ನಡಿಗರು ಕೇಳಿಕೊಳ್ಳಬೇಕಾಗಿದೆ. ಈ ಪಟ್ಟಣಕ್ಕೆ ಏನಾಯಿತು ಎನ್ನುವ ಆತಂಕವನ್ನು 'ಈ ನಾಡಿಗೆ ಏನಾಯಿತು?' ಎಂದು ಕೇಳಿಕೊಂಡರೆ, ಎದುರಾಗುವ ಬಿಂಬಗಳು ಕನ್ನಡನಾಡಿನ ವಿವೇಕಕ್ಕೆ ಗರ ಹಾಗೂ ನೈತಿಕತೆಗೆ ಬರ ಬಡಿದಿರುವುದನ್ನು ಸ್ಪಷ್ಟವಾಗಿಸುತ್ತಿವೆ.

ಈ ನಾಡಿಗೆ ಏನಾಗಿದೆ ಎನ್ನುವುದರ ಅವಲೋಕನವನ್ನು ವಿಧಾನಸಭೆಯಿಂದಲೇ ಆರಂಭಿಸಬಹುದು. 'ರಾಜ್ಯ ಹಾಗೂ ಕೇಂದ್ರದ ಎಲ್ಲ ಪಕ್ಷಗಳ 48 ನಾಯಕರು ಹನಿಟ್ರ್ಯಾಪ್‌ಗೆ ಒಳಗಾಗಿದ್ದು, ಅವರ ಸಾಹಸಗಳನ್ನು ಸಿ.ಡಿ. ಮಾಡಿಟ್ಟುಕೊಳ್ಳಲಾಗಿದೆ. ರಾಜ್ಯವು ಸಿ.ಡಿ., ಪೆನ್‌ಡ್ರೈವ್ ಕಾರ್ಖಾನೆಯಾಗಿದೆ' ಎಂದು ಸಚಿವರೊಬ್ಬರು ಹೇಳಿದ್ದಾರೆ. ಅವರ ಮಾತಿಗೆ ಪುರಾವೆಯೆನ್ನುವಂತೆ, ರಾಜಕಾರಣಿಗಳು ಲೈಂಗಿಕ ಹಗರಣಗಳಲ್ಲಿ ಭಾಗಿಯಾಗಿರುವ ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಬೆಳಕಿಗೆ ಬಂದಿವೆ; ಜನಪ್ರತಿನಿಧಿಗಳ ಹೆಣ್ಣುಬಾಕತನ ಸೀಡಿ–ಪೆನ್‌ಡ್ರೈವ್ ರೂಪದಲ್ಲಿ ಬೀದಿಗೆ ಬಿದ್ದಿದೆ; ತಮ್ಮ ಮರ್ಯಾದೆ ಬಯಲಾಗಬಾರದು ಎಂದು ನ್ಯಾಯಾಲಯಗಳಿಂದ ಪ್ರತಿಬಂಧಕಾಜ್ಞೆ ತಂದಿರುವ ಜನಪ್ರತಿನಿಧಿಗಳ ವರ್ತನೆ ಹೆಗಲು ಮುಟ್ಟಿ ನೋಡಿಕೊಳ್ಳುವ 'ಕುಂಬಳಕಾಯಿ ಕಳ್ಳ'ನನ್ನು ನೆನಪಿಸುವಂತಿದೆ; 'ಬಾಂಬೆ ಬಾಯ್ಸ್' ಎನ್ನುವ ವಿಶೇಷಣ ರಾಜಕಾರಣದ ಪದಕೋಶ ಸೇರಿಕೊಂಡಿದೆ.

ಸದ್ಯದ ರಾಜಕಾರಣದ ನೈತಿಕ ಪತನದ ತುದಿ ಬಿಂದುವಿನ ರೂಪದಲ್ಲಿ ಹನಿಟ್ರ್ಯಾಪ್ ಪ್ರಕರಣಗಳನ್ನು ಗುರುತಿಸಬಹುದು. ಹನಿಟ್ರ್ಯಾಪ್ ದಂಧೆಗೆ ಮುನ್ನುಡಿಯ ರೂಪದಲ್ಲಿ, ಕ್ರಿಕೆಟಿಗರ ಲಿಲಾವು ನಡೆದಂತೆ ರಾಜಕಾರಣಿಗಳೂ ಖರೀದಿಗೆ ಲಭ್ಯ ಎನ್ನುವುದನ್ನು ದೇಶಕ್ಕೆ ಕರ್ನಾಟಕವೇ ತೋರಿಸಿಕೊಟ್ಟಿತ್ತು. ನಂತರದ ದಿನಗಳಲ್ಲಿ, ಕರ್ನಾಟಕದ 'ಆಪರೇಷನ್' ಮಾದರಿ ದೇಶದ ವಿವಿಧ ಭಾಗಗಳಲ್ಲಿ ಯಶಸ್ವಿಯಾಗಿ ಜಾರಿಗೊಂಡಿದ್ದನ್ನು ಗಮನಿಸಬೇಕು. ರಾಜಕಾರಣಿಗಳ ಕಚ್ಚೆ ಬಿಚ್ಚಿಸುವ 'ಹನಿಟ್ರ್ಯಾಪ್ ಮಾದರಿ'ಯೂ ಉಳಿದ ರಾಜ್ಯಗಳಿಗೆ ಅನುಸರಣೀಯವಾಗಿ ಕಾಣಿಸಿದರೆ ಆಶ್ಚರ್ಯವೇನಿಲ್ಲ.

ಸದ್ಯದ ಸಂದರ್ಭದಲ್ಲಿ ರಾಜಕಾರಣಿಯೊಬ್ಬ ತನ್ನ ಕಚ್ಚೆ ಭದ್ರವಾಗಿದೆ ಎಂದು ಹೇಳಿಕೊಳ್ಳುವುದಕ್ಕಿಂತಲೂ ದೊಡ್ಡ ತಮಾಷೆ ಮತ್ತೊಂದಿಲ್ಲ ಎನ್ನುವ ಮಟ್ಟಿಗೆ ರಾಜ್ಯ ರಾಜಕಾರಣ ನಾರುತ್ತಿದೆ. ಹನಿಟ್ರ್ಯಾಪ್ ಸೂತ್ರಧಾರರು ಯಾರೆನ್ನುವುದರ ಬಗ್ಗೆ ಆಡಳಿತ ಹಾಗೂ ವಿರೋಧಪಕ್ಷಗಳು ಪರಸ್ಪರ ಕೆಸರೆರಚಿಕೊಳ್ಳುತ್ತಿವೆ. ಅವರ ಮಾತು ಹಾಗೂ ವರ್ತನೆ, ಸ್ವತಃ ಬೆತ್ತಲಾಗಿ ನಿಂತವರು ಎದುರಾಳಿಯ ಬೆತ್ತಲೆಯನ್ನು ಕಂಡು ನಗುವಂತಿದೆ.

'ಮೌಲ್ಯಾಧಾರಿತ ರಾಜಕಾರಣ' ಎನ್ನುವ ಪರಿಕಲ್ಪನೆ ಹಳತಾಗಿ, ಮೌಲ್ಯದ ಜಾಗದಲ್ಲಿ ಹಣ ಸೇರಿಕೊಂಡು ಬಹಳ ಕಾಲವಾಯಿತು ಹಾಗೂ ಆ ಬದಲಾವಣೆಯನ್ನು ಅನಿವಾರ್ಯದಿಂದಲೋ ಅಸಹಾಯಕತೆಯಿಂದಲೋ ಶ್ರೀಸಾಮಾನ್ಯ ಕೂಡ ಸ್ವಲ್ಪಮಟ್ಟಿಗೆ ಒಪ್ಪಿಕೊಂಡಿರುವಂತಿದೆ. ಈ ದುಃಸ್ಥಿತಿ ಮತ್ತೂ ಹದಗೆಟ್ಟಿರುವ ದಿನಗಳಿವು. ರಾಜಕಾರಣದ ಉದ್ದೇಶ ಹಣ ದೋಚುವುದಾಗಿಯಷ್ಟೇ ಈಗ ಉಳಿದಿಲ್ಲ. ದುಡ್ಡಿನಷ್ಟೇ ಅಥವಾ ದುಡ್ಡಿಗೂ ಮಿಗಿಲಾದ ಆಕರ್ಷಣೆಯಾಗಿ 'ಅಧಿಕಾರದ ಚಲಾವಣೆ' ಇರುವಂತಿದೆ. ಹಣ–ಹೆಣ್ಣಿನ ವಿಷಯ ಹಾಗೂ ಹೊಣೆಗಾರಿಕೆಯಿಲ್ಲದ ಅಧಿಕಾರದ ಚಲಾವಣೆಯೇ ಸದ್ಯದ ರಾಜಕಾರಣದ ಉದ್ದೇಶ ಎನ್ನುವಂತಾಗಿದೆ.

ರಾಜಕೀಯ ಚರಿತ್ರೆಯಲ್ಲಿ ಮದುವೆಯಾಚೆಗಿನ ಸಂಬಂಧಗಳ ಕಥನಗಳು ಬಹಳಷ್ಟಿವೆ. ಆದರೆ, ಆ ಸಂಬಂಧಗಳು ಸಮಾಜದ ಕಣ್ಣಿಗೆ ಕೊಳಕೆನ್ನಿಸದಂತೆ ನಿಭಾಯಿಸುವಷ್ಟು ಲಜ್ಜೆಯನ್ನು ರಾಜಕಾರಣಿಗಳು ಉಳಿಸಿಕೊಂಡಿದ್ದರು. ಇಂದಿನ ರಾಜಕಾರಣಿಗಳ ಹೆಣ್ಣುಬಾಕತನ ಅಸಹ್ಯ ಹುಟ್ಟಿಸುವಂತಹದ್ದು, ವಿಕೃತವಾದುದು; ಕೊಂಚವೂ ಅಳುಕು, ಲಜ್ಜೆ, ಪಾಪಪ್ರಜ್ಞೆ ಇಲ್ಲದಿರುವಂಥದ್ದು. ಇತ್ತೀಚೆಗೆ ಬಯಲಾದ ಲೈಂಗಿಕ ಹಗರಣಗಳಲ್ಲಿ ಸಿಲುಕಿದ ರಾಜಕಾರಣಿಗಳು, ಅವರ ಕುಟುಂಬದವರು ಮತ್ತು ಬೆಂಬಲಿಗರಲ್ಲಿ ಯಾರೊಬ್ಬರೂ ಘಟಿಸಿದ ಕೃತ್ಯದ ಬಗ್ಗೆ ಕನಿಷ್ಠ ಪಶ್ಚಾತ್ತಾಪವನ್ನೋ ವಿಷಾದವನ್ನೋ ವ್ಯಕ್ತಪಡಿಸಿಲ್ಲ. ಲೈಂಗಿಕ ಹಗರಣ ಎನ್ನುವುದು ಅವರ ಪಾಲಿಗೆ ರಾಜಕೀಯ ಷಡ್ಯಂತ್ರ. ತಮ್ಮ ಅನೈತಿಕ ಕೃತ್ಯಗಳು, ಅಧಿಕಾರದ ದುರ್ಬಳಕೆ ಮತ್ತು ಮತದಾರರಿಗೆ ಮಾಡಿದ ವಿಶ್ವಾಸದ್ರೋಹ ಎಂದು ಯಾರಿಗೂ ಅನ್ನಿಸುತ್ತಿಲ್ಲ. ತಮ್ಮ ಖಾಸಗಿತನಕ್ಕೆ ಧಕ್ಕೆಯಾಗಿರುವುದರ ಬಗ್ಗೆ, ಆಗುತ್ತಿರುವುದರ ಬಗ್ಗೆಯಷ್ಟೇ ಅವರಿಗೆ ಆತಂಕ. ಹನಿಟ್ರ್ಯಾಪ್‌ಗೆ ಸಂಬಂಧಪಟ್ಟಂತೆ ಸರ್ಕಾರ ಹಾಗೂ ಜನರಿಂದ 'ಗ್ಯಾರಂಟಿ'ಯನ್ನು ಶಾಸಕರು ಬಯಸುತ್ತಿರುವಂತೆ ಕಾಣಿಸುತ್ತಿದೆ. ವಿಕೃತ ಭೋಗದ ಅವರ ಚಿತ್ರಿಕೆಗಳು ಜಾಹೀರಾದ ಮೇಲೂ ತಮ್ಮನ್ನು ಯಾರೋ ವಂಚಿಸಿದ್ದಾರೆಂದು ಹೇಳಿಕೊಳ್ಳುತ್ತ ಅಮಾಯಕರಂತೆ ಬಿಂಬಿಸಿಕೊಳ್ಳುವುದು ಲಜ್ಜೆಗೇಡಿತನದ ತುತ್ತತುದಿ. ಹನಿಟ್ರ್ಯಾಪ್ ಮಾಡುವುದು ಹಾಗೂ ಅದನ್ನು ರಾಜಕೀಯ ಅಸ್ತ್ರದಂತೆ ಬಳಸಿಕೊಳ್ಳುವುದನ್ನು ಒಪ್ಪಿಕೊಳ್ಳಲಾಗದು. ಆದರೆ, ನಮ್ಮ ಜನಪ್ರತಿನಿಧಿಗಳು ಹನಿಟ್ರ್ಯಾಪ್‌ಗೆ ಸಿದ್ಧರಿದ್ದಾರೆ ಎನ್ನುವುದನ್ನು ಹೇಗೆ ಅರಗಿಸಿಕೊಳ್ಳುವುದು? ತಮಗೆ ಚಾರಿತ್ರ್ಯ ಅಗತ್ಯವಿಲ್ಲ ಎನ್ನುವ ಸ್ಥಿತಿಯನ್ನು ಜನಪ್ರತಿನಿಧಿಗಳು ತಲುಪುವುದು ಪ್ರಜಾಪ್ರಭುತ್ವದ ಬಹುದೊಡ್ಡ ವ್ಯಂಗ್ಯ. ಇಂಥ ರಾಜಕಾರಣಿಗಳಿಂದ ನತದೃಷ್ಟ ಹೆಣ್ಣೊಬ್ಬಳಿಗಾದ ಅನ್ಯಾಯಕ್ಕೆ ನ್ಯಾಯವನ್ನು ಅಪೇಕ್ಷಿಸುವ ಸಾರ್ವಜನಿಕ 'ಸೌಜನ್ಯ'ಕ್ಕೆ ಕಿಮ್ಮತ್ತು ಬರುವುದು ಹೇಗೆ?



ಪುರುಷ ಶಾಸಕರ ಶಯ್ಯಾಗೃಹದ ಸಾಹಸಗಳು ಶಾಸಕಿಯರಿಗೆ ಇರುಸುಮುರುಸು ಉಂಟುಮಾಡಬೇಕಿತ್ತು. ಅವರು ತಮ್ಮ ಸಹೋದ್ಯೋಗಿಗಳನ್ನು ಪ್ರಶ್ನಿಸಿ ತರಾಟೆಗೆ ತೆಗೆದುಕೊಳ್ಳಬೇಕಿತ್ತು. ಖೆಡ್ಡಾಕ್ಕೆ ಕೆಡವಲು ಗಾಳವಾಗಿ ಬಳಕೆಯಾದ ಹೆಣ್ಣುಮಕ್ಕಳ ಸ್ಥಿತಿಗತಿಯ ಬಗ್ಗೆ ಧ್ವನಿ ಎತ್ತಬೇಕಾಗಿತ್ತು. ದುರ್ಯೋಧನನ ಸಭೆಯ ಮೂಕ ಗಂಡುಗಳಂತೆ, ಕರ್ನಾಟಕ ವಿಧಾನಸಭೆಯ ಶಾಸಕಿಯರು ಮೌನ ವಹಿಸಿದ್ದಾರೆ.

ಅರಮನೆಯಲ್ಲಿ ಅರಾಜಕತೆ ಉಂಟಾದಾಗ ಗುರುಮನೆಯತ್ತ ನೋಡುವುದು ನಮ್ಮ ಪರಂಪರೆಯಲ್ಲಿನ ಪರಿಪಾಟ. ನಾಡಿನ ದೌರ್ಭಾಗ್ಯವೆಂದರೆ, ರಾಜಕಾರಣ ಗಬ್ಬೆದ್ದು ಹೋಗಿರುವ ಸಂದರ್ಭದಲ್ಲಿ ಬಹುತೇಕ ಗುರುಮನೆಗಳೂ ಸ್ವಚ್ಛವಾಗಿ ಉಳಿದಿಲ್ಲ. ಮಠದ ವಸತಿ-ಶಾಲೆಗಳಲ್ಲಿ ಆಶ್ರಯ ಪಡೆದ ಬಾಲಕಿಯರನ್ನು ಮಗ್ಗುಲಿಗೆ ಎಳೆದುಕೊಂಡ ಸ್ವಾಮೀಜಿಯನ್ನು ಕಂಡಿದ್ದೇವೆ. ಕೆಲವು ಮಠಗಳಲ್ಲಿನ ಕಾಮದ ಕಮಟು ವಾಸನೆ ಸಾರ್ವಜನಿಕ ಚರ್ಚೆಯ ವಸ್ತುವಾಗಿದೆ. ಮತ್ತೆ ಕೆಲವು ಸ್ವಾಮೀಜಿಗಳು ಧರ್ಮಸೂಕ್ಷ್ಮಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಕ್ಕಿಂತಲೂ ಸಮಾಜ ವಿಭಜಕ ರಾಜಕಾರಣದಲ್ಲೇ ಹೆಚ್ಚು ಆಸಕ್ತರು. ಧರ್ಮ ಮತ್ತು ರಾಜಕಾರಣದ ಕಲಸುಮೇಲೋಗರದ ಸಂದರ್ಭದಲ್ಲಿ, 'ಆತ್ಮಸಾಕ್ಷಿ', 'ವಿವೇಕ', 'ಸೌಹಾರ್ದ', 'ಸಹಬಾಳ್ವೆ' ಎನ್ನುವಂಥ ಪದಗಳು ಬರಹ ಘೋಷಣೆಗಳಲ್ಲಷ್ಟೇ ಉಸಿರು ಹಿಡಿದುಕೊಂಡಿರುವಂತಿದೆ.

ಹನಿಟ್ರ್ಯಾಪ್ ಪ್ರಕರಣಗಳು ರಾಜಕಾರಣದಲ್ಲಿನ ನೈತಿಕ ಅಧಃಪತನದ ಒಂದು ಭಾಗವಷ್ಟೇ. ದೇಶದ ಶ್ರೀಮಂತ ಟಾಪ್ 10 ಶಾಸಕರ ಪಟ್ಟಿಯಲ್ಲಿ ಕರ್ನಾಟಕದ ನಾಲ್ವರು ಶಾಸಕರಿದ್ದಾರೆ ಎಂದು 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್' (ಎಡಿಆರ್) ವರದಿ ಹೇಳಿದೆ. ಇದು ಕನ್ನಡಿಗರಿಗೆ ಹೆಮ್ಮೆಯ ಸಂಗತಿಯೋ? ಲಜ್ಜೆಗೆ ಕಾರಣವಾಗಬೇಕಾದುದೋ?

ಹಣ, ಅಧಿಕಾರ ಹಾಗೂ ಜಾತಿಯ ಹೆಸರಿನಲ್ಲಿ ಅಪರಾಧಗಳನ್ನು, ಅನೈತಿಕ ಕೃತ್ಯಗಳ ತೀವ್ರತೆಯನ್ನು ನಿರ್ಧರಿಸುವ ಸಾರ್ವಜನಿಕ ಧೋರಣೆ ಬಲವಾಗುತ್ತಿದೆ. ಅಷ್ಟರಮಟ್ಟಿಗೆ ಸಾಮಾಜಿಕ ವಿವೇಕವನ್ನೂ ರಾಜಕಾರಣದ ಗೆದ್ದಲು ಆವರಿಸಿದೆ. ಜನಪ್ರತಿನಿಧಿಗಳು ತಾವಷ್ಟೇ ಬೆತ್ತಲಾಗುತ್ತಿಲ್ಲ. ತಮ್ಮನ್ನು ಚಲಾಯಿಸಿದ ಮತದಾರರನ್ನೂ ಬೆತ್ತಲಾಗಿಸಿದ್ದಾರೆ. ಜನಪ್ರತಿನಿಧಿಗಳು ಹನಿಟ್ರ್ಯಾಪ್ ಆಗುವ ಮೂಲಕ ಇಡೀ ಕರ್ನಾಟಕವನ್ನು ಖೆಡ್ಡಾಕ್ಕೆ ಕೆಡವಿದ್ದಾರೆ. ಯಾರನ್ನು ದೂರುವುದು? ಯಾರ ಮೊರೆ ಹೋಗುವುದು?

'ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ'ದ ಮತ್ತೊಂದು ಪ್ರಕಟಣೆಯಲ್ಲಿ ಕ್ಯಾನ್ಸರ್‌ಗೆ ತುತ್ತಾಗಿರುವ ಹೆಣ್ಣುಮಗಳೊಬ್ಬಳು, 'ಎಲ್ಲವೂ ಚೆನ್ನಾಗಿಯೇ ಇತ್ತು... ಇನ್ನು ಯಾವುದೂ ಮೊದಲಿನಂತೆ ಇರುವುದಕ್ಕೆ ಆಗುವುದಿಲ್ಲ...' ಎಂದು ಸಾವಿನ ಧ್ವನಿಯಲ್ಲಿ ಹೇಳುತ್ತಾಳೆ. ಆಕೆಯ ಮಾತುಗಳು ಇವತ್ತಿನ ಸಾಮಾಜಿಕ ಸಂದರ್ಭಕ್ಕೂ ಹೊಂದುವಂತಹವು. ಸಾಮಾಜಿಕ ಕ್ಯಾನ್ಸರ್ ಅನ್ನು ರಾಜಕಾರಣಿಗಳು ಅಲಕ್ಷಿಸಬಹುದು; ಜನಸಾಮಾನ್ಯರು ನಿರ್ಲಕ್ಷಿಸಬಹುದೇ?

ಚುರುಮುರಿ



ಹಲೋ, ನಾನು ಮಧು...

• ಮಣ್ಣೆ ರಾಜು

ಶಂಕ್ರಿ ಮೊಬೈಲ್ ರಿಂಗ್ ಆಯ್ತು. ರಿಸೀವ್ ಮಾಡಿ 'ಹಲೋ...' ಅಂದ.

'ನಾನು ಮಧು, ನಿಮ್ಮ ಫ್ರೆಂಡು...' ಮಧುರವಾದ ಧ್ವನಿ ಕೇಳಿಸಿತು.

'ಯಾವ ಮಧು? ನೀವು ಯಾರೂಂತ ಗೊತ್ತಾಗುತ್ತಿಲ್ಲ'.

'ರೀ, ಯಾರ ಫೋನ್?' ಸುಮಿ ಕೇಳಿದಳು. 'ಯಾರೋ ಮಧು ಅಂತೆ' ಎಂದ. ಸುಮಿ ಮೊಬೈಲ್ ಈಸ್ಕೊಂಡು, 'ಹಲೋ, ಯಾರು ನೀವು?' ಕೇಳಿದಳು.

'ನಿಮ್ಮ ಗಂಡನ ಫ್ರೆಂಡ್, ಅವರು ನನ್ನನ್ನು ಮರೆತೇಬಿಟ್ಟಿದ್ದಾರೆ' ಅಂದಳು ಮಧು.

'ಅವರಿಗೆ ಇತ್ತೀಚೆಗೆ ಮರೆವು ಜಾಸ್ತಿಯಾಗಿದೆ. ಈರುಳ್ಳಿ ತರಲು ಹೇಳಿದರೆ ಬೆಳ್ಳುಳ್ಳಿ ತರ್ತಾರೆ. ಅದ್ಸರಿ, ಯುಗಾದಿಗೆ ಹೊಸ ಸೀರೆ ತಗೊಂಡ್ರಾ?'

'ತಗೊಂಡೆ, ನೀವು ಗಂಡನ ಜೊತೆ ಹೋಗಿ ಸೀರೆ ಕೊಂಡುಕೊಂಡ್ರಾ?'

'ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೆ, ಸೀರೆ ಅಂಗಡಿಯಲ್ಲಿ ಗಂಡನಿಗೆ ಏನು ಕೆಲ್ಸ ಇರುತ್ತೆ? ನಾನೊಬ್ಬಳೇ ಹೋಗಿ ತಂದೆ'.

'ಗಂಡಸರು ಸೀರೆ ಅಂಗಡಿಯಲ್ಲೂ ಸಲ್ಲುವುದಿಲ್ಲ, ಸರ್ಕಾರದಲ್ಲೂ ಸಲ್ಲುವುದಿಲ್ಲ. ಸರ್ಕಾರ ನಮಗೆ ಉಚಿತ ಭಾಗ್ಯಗಳನ್ನು ಕೊಡ್ತಿದೆ, ಗಂಡಸರಿಗೆ ಒಂದು ಶೇವಿಂಗ್ ಬ್ಲೇಡನ್ನೂ ಫ್ರೀಯಾಗಿ ಕೊಟ್ಟಿಲ್ಲ, ಪಾಪ!'

'ಗಂಡಸರಿಗೆ ಉಚಿತವಾಗಿ ಮದ್ಯ ಕೊಡಬೇಕು ಅಂತ ಶಾಸಕರೊಬ್ಬರು ಅಸೆಂಬ್ಲಿಯಲ್ಲಿ ಕೇಳಿಕೊಂಡರಲ್ಲ, ಮದ್ಯ ಕೊಟ್ಟರೆ ಸಂಸಾರ ಉಳಿಯುತ್ತೇನ್ರೀ?'

'ಸರ್ಕಾರ ಎಣ್ಣೆ ಭಾಗ್ಯ ಕೊಡುವುದಿಲ್ಲ ಬಿಡಿ, ಗಂಡಸರಿಗೆ ಸರ್ಕಾರಿ ಭಾಗ್ಯ ಪಡೆಯುವ ಯೋಗವೂ ಇಲ್ಲ. ಪಾಪ, ಗಂಡಸರ ಗ್ರಹಚಾರವೇ ಸರಿಯಿಲ್ಲ'.

'ಹೌದೂರೀ, ಗಂಡಸರಿಗೆ ಮಧುಬಲೆ ಕಾಟ ಶುರುವಾಗಿದೆಯಂತೆ. ಮಂತ್ರಿ, ಶಾಸಕರನ್ನೂ ಬಿಟ್ಟಿಲ್ಲವಂತೆ. ಅದಕ್ಕೆ ಹೆದರಿ ಕೆಲವರು ಸೆಕ್ಯೂರಿಟಿ ಗಾರ್ಡ್‌ಗಳನ್ನು ಇಟ್ಟುಕೊಂಡಿದ್ದಾರಂತೆ!'

'ಹೌದಾ?!'

'ಅಯ್ಯೋ ಮಂಕೆ, ಹಣ, ಅಧಿಕಾರ ಇಲ್ಲದ ನನ್ನ ಗಂಡನಿಗೆ 'ಮಧುಬಲೆ' ಬೀಸಿದರೆ ನೀನೇ ಫೂಲ್ ಆಗ್ತೀಯ!' ಎಂದು ಸುಮಿ ನಕ್ಕಳು.

ಮಧು ಕೂಡಲೇ ಫೋನ್ ಕಟ್ ಮಾಡಿದಳು.

ಚರ್ಚೆ

ಕನ್ನಡ ಬೋಧನೆ: ಗಡಿರೇಖೆ ಏಕೆ?

ಭಾಷೆ ಮತ್ತು ಸಾಹಿತ್ಯದ ಬೋಧನೆಗೆ ಪದವಿಗಳು ನಿರ್ಣಾಯಕವಲ್ಲ


• ಬಾಲಸುಬ್ರಹ್ಮಣ್ಯ ಕಂಜರ್ಪಣೆ

'ಅನ್ಯ ವಿಷಯ ತಜ್ಞರಿಂದ ಕನ್ನಡ ಪಠ್ಯ ಬೋಧನೆ'ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಇತ್ತೀಚೆಗೆ ಆಕ್ಷೇಪ ವ್ಯಕ್ತಪಡಿಸಿರುವುದಾಗಿ ವರದಿಯಾಗಿದೆ. ಅವರ ಪ್ರಕಾರ, ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡ ಪಠ್ಯವನ್ನು ಬೇರೆ ವಿಷಯ ತಜ್ಞರು ಬೋಧಿಸುತ್ತಿರುವುದು ವೃತ್ತಿ ಶಿಕ್ಷಣದಲ್ಲಿ ಕನ್ನಡದ ಉಳಿವಿಗೆ ಮಾರಕ.

ಇಂತಹ ಅಭಿಮತಗಳನ್ನು ಗೌರವಿಸೋಣ. ಆದರೆ ಕನ್ನಡ ಭಾಷೆಯ ಅಳಿವಿಗೂ ಉಳಿವಿಗೂ ಇದಕ್ಕೂ ಸಂಬಂಧವಿಲ್ಲ ಎಂಬುದನ್ನು ನಾವು ತಿಳಿಯಬೇಕು. ಈಗ ಸಾಮಾನ್ಯವಾಗಿ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲೂ ಕನ್ನಡವನ್ನು ಬೋಧಿಸುತ್ತಿರುವವರು ಕನ್ನಡ ವಿಷಯ ತಜ್ಞರೇ ಅರ್ಥಾತ್ ಕನ್ನಡದಲ್ಲಿ ಪದವೀಧರರು, ಸ್ನಾತಕೋತ್ತರ ಪದವೀಧರರು ಹಾಗೂ ಅದಕ್ಕೂ ಹೆಚ್ಚಿನ ಪದವಿಯನ್ನು ಪಡೆದಿರುವವರು. ಇವರಿಂದ ಸಲ್ಲುವ ಸೇವೆಯು ಉಳಿಯುತ್ತಿರುವ ಕನ್ನಡಕ್ಕೋ ಬೆಳೆಯುತ್ತಿರುವ ಕನ್ನಡಕ್ಕೋ ಅಥವಾ ಅಳಿಯುತ್ತಿರುವ ಕನ್ನಡಕ್ಕೋ?

ಪದವಿಗಳು ಭಾಷೆ ಮತ್ತು ಸಾಹಿತ್ಯದ ಬೋಧನೆಗೆ ನಿರ್ಣಾಯಕವಲ್ಲ. ಅವು ರಹದಾರಿಗಳು ಮಾತ್ರ. ನೈಜ ಪ್ರೀತಿ, ಆಸಕ್ತಿ, ಪರಿಶ್ರಮ, ಪರಿಣತಿ ಇದ್ದರೆ ಯಾರೂ ಇವನ್ನು ಬೋಧಿಸಬಹುದು. ದುರದೃಷ್ಟವಶಾತ್ ಈ ಪದವಿಗಳೇ ಒಬ್ಬ ವ್ಯಕ್ತಿಯನ್ನು 'ತಜ್ಞ'ನನ್ನಾಗಿಸುತ್ತವೆ. ಒಮ್ಮೆ ತಜ್ಞನಾದರೆ ಇಂದು ಕಾಳಿದಾಸ, ಪಂಪನ ಕುರಿತೂ ನಾಳೆ ವಿವಿಧ ಸಾಹಿತಿಗಳ ಕುರಿತೂ ನಾಡಿದ್ದು ಅನುವಾದಗಳ ಕುರಿತೂ ಆಚೆ ನಾಡಿದ್ದು ಸಂವಿಧಾನ, ಕಾನೂನು, ಭಾಷಾ ಸೂತ್ರ, ಗಡಿ, ನದಿ ವಿವಾದಗಳ ಬಗ್ಗೆಯೂ ಮಾತನಾಡಬಹುದು. ನಮ್ಮ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು, ನಗರ, ಮಹಾನಗರಗಳಲ್ಲಿ ನಡೆಯುವ ರಾಷ್ಟ್ರ, ರಾಜ್ಯ ಮಟ್ಟದ ಗೋಷ್ಠಿ, ಸಂಕಿರಣಗಳೇ ಇದಕ್ಕೆ ನಿದರ್ಶನ. ಭಾಷಾತೀತವಾದ (ಕೇಂದ್ರ) ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಕರ್ನಾಟಕದ ವಿವಿಧ ಅಕಾಡೆಮಿಗಳಲ್ಲಿನ ಹುದ್ದೆಗಳು, ವಿಶ್ವವಿದ್ಯಾಲಯಗಳ ಕುಲಪತಿ, ಕುಲಸಚಿವ ರೀತಿಯ ಹುದ್ದೆಗಳಿಗೆ ನಮ್ಮ ಅಚ್ಚ ಕನ್ನಡ ಭಾಷಾ ತಜ್ಞರು ಬೋಧನೆಯ ಅವಧಿಯಲ್ಲೇ, ಅಂದರೆ ನಿವೃತ್ತಿಗೆ ಮುನ್ನವೇ ವಲಸೆ ಹೋಗುತ್ತಿರುವುದೇಕೆ? ಬೋಧನೆಯಲ್ಲಿ ಆಸಕ್ತಿ ಕಳೆದುಕೊಂಡು ಹೀಗೆ ಮಾಡುತ್ತಿದ್ದಾರೆಯೇ ಅಥವಾ ಅಲ್ಲಿನ ಐಹಿಕ ಸುಖಭೋಗಗಳಿಗಾಗಿಯೇ?

ಭಾಷೆ ಮತ್ತು ಸಾಹಿತ್ಯದ ಒಟ್ಟಾರೆ ಬೆಳವಣಿಗೆ ಆಗಿದ್ದರೆ ಅದು ಈ 'ತಜ್ಞ'ರಿಗಿಂತಲೂ ಇತರರಿಂದಲೇ ಎಂದು ನಮ್ಮ ಭಾಷಾ ಮತ್ತು ಸಾಹಿತ್ಯ ಚರಿತ್ರೆ ಹೇಳುತ್ತದೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಲ್ಲಿ ಒಂದಿಬ್ಬರನ್ನು ಹೊರತುಪಡಿಸಿದರೆ ಉಳಿದವರೆಲ್ಲರೂ ಪದವೀಧರ ಭಾಷಾತಜ್ಞರಲ್ಲ. ವಿ.ಸೀತಾರಾಮಯ್ಯನವರು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದವರಾಗಿದ್ದರೂ ಅವರನ್ನು, ಆಗ ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿದ್ದ ಬಿಎಂಶ್ರೀಯವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕನ್ನಡ ಉಪನ್ಯಾಸಕರನ್ನಾಗಿ ನೇಮಿಸಿದರು. ಮುಂದೆ ಅವರು ಕನ್ನಡ ಭಾಷಾ ವಿಭಾಗದ ಮುಖ್ಯಸ್ಥರಾದರು. ಆಗ ಜ್ಞಾನ ಮುಖ್ಯವಾಗಿತ್ತೇ ವಿನಾ ಪದವಿಯಲ್ಲ. ಶಿವರಾಮ ಕಾರಂತ ಅವರು ಒಮ್ಮೆ ಕಾಲೇಜೊಂದರಲ್ಲಿ ಅತಿಥಿಯಾಗಿ ಭಾಷಣ ಮಾಡುತ್ತ 'ನಾನು ಅರ್ಜಿ ಹಾಕಿದರೆ ನಿಮ್ಮ ಕಾಲೇಜಿನಲ್ಲಿ ನನಗೆ ಉಪನ್ಯಾಸಕ ಹುದ್ದೆ ಸಿಕ್ಕುವುದಿಲ್ಲ' ಎಂದಿದ್ದರು.



ನನ್ನ ಅನುಭವವೊಂದನ್ನು ಹೇಳುತ್ತೇನೆ: ಒಮ್ಮೆ ಮೈಸೂರಿನಿಂದ ಒಬ್ಬ ಪರಿಣತರು ಸರ್ಕಾರ ಪ್ರಾಯೋಜಿಸಿದ್ದ 'ಕಾವೇರಿಯಿಂದ ಗೋದಾವರಿವರೆಗೆ...' ಎಂದೇನೋ ಶೀರ್ಷಿಕೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ದಾಖಲೀಕರಣಕ್ಕೆ ಛಾಯಾಗ್ರಾಹಕರೊಂದಿಗೆ ಬಂದಿದ್ದರು. ಅವರು ಸಾಂದರ್ಭಿಕವಾಗಿ ಮತ್ತು ಸಾಂಕೇತಿಕವಾಗಿ ಕಾವೇರಿಯಿಂದಲೇ ಆರಂಭಿಸೋಣ ಎಂದು ಕೊಡಗಿನ ಒಂದು ಕಾಲೇಜಿಗೆ ಹೋಗಿ, ಅಲ್ಲಿನ ಯಾವುದಾದರೂ ತರಗತಿಗೆ ಕನ್ನಡ ಉಪನ್ಯಾಸಕರು ಕವಿರಾಜಮಾರ್ಗದ ಈ ಮೇಲೆ ಉಲ್ಲೇಖಿಸಿದ ಭಾಗವನ್ನು 10-15 ನಿಮಿಷಗಳ ಕಾಲ ಬೋಧಿಸಬೇಕೆಂದೂ ಅದರ ವಿಡಿಯೊ ದೃಶ್ಯವನ್ನು ದಾಖಲಿಸಿಕೊಳ್ಳುವುದಾಗಿಯೂ ಹೇಳಿ ಸಹಕಾರ ಕೋರಿದರು. ದುರಂತವೆಂದರೆ, ಅಲ್ಲಿನ ಇಬ್ಬರು, ಮೂವರು ಕನ್ನಡ ಉಪನ್ಯಾಸಕರು ಇದಕ್ಕೆ ಹಿಂಜರಿದರು. ತಾವು ತಯಾರಿ ನಡೆಸಿಲ್ಲ, ಅದು ಪಠ್ಯ ಭಾಗದಲ್ಲಿಲ್ಲ ಎಂದೆಲ್ಲ ಸಬೂಬು ಹೇಳಿದರು. ಕೊನೆಗೆ ಆ ಕೃತಿಯೂ ಅಲ್ಲಿನ ಗ್ರಂಥಾಲಯದಲ್ಲಿ ದೊರಕಲಿಲ್ಲ. ಆಗ ಅಲ್ಲಿದ್ದ ಪತ್ರಕರ್ತರೊಬ್ಬರು ನನಗೆ ದೂರವಾಣಿ ಕರೆ ಮಾಡಿ, ಆ ಪುಸ್ತಕವಿದೆಯೇ ಮತ್ತು ಆ ಭಾಗವನ್ನು ಬೋಧಿಸಬಹುದೇ ಎಂದು ಕೇಳಿದರು. ನಾನು ನನ್ನ ವಕೀಲ ವೃತ್ತಿಯಿಂದ, ಆ ದಿನದ ಮಟ್ಟಿಗೆ ಒಂದಿಷ್ಟು ಬಿಡುವು ಮಾಡಿಕೊಂಡು, ನನ್ನಲ್ಲಿದ್ದ ಕವಿರಾಜಮಾರ್ಗ ಹೊತ್ತಗೆಯೊಂದಿಗೆ ಅಲ್ಲಿ ಹೋಗಿ ಅವರ ಹೊಣೆಯನ್ನು ತಕ್ಕಮಟ್ಟಿಗೆ ನಿಭಾಯಿಸಿದೆ.

ಹೀಗೆಂದರೆ, ಇತರರೇ ಕನ್ನಡ ಭಾಷೆಯನ್ನು ಬೋಧಿಸಬಹುದು ಎಂದಲ್ಲ. ಆದರೆ ಬಿಳಿಮಲೆ ಅವರು ಹೇಳಿದ ರೀತಿಯಲ್ಲಿ ಕಟ್ಟುಪಾಡುಗಳನ್ನು ಹೇರಿದರೆ, ಅದು ನಿರುದ್ಯೋಗಿ ಕನ್ನಡ 'ತಜ್ಞ'ರಿಗೆ ಸಹಕಾರಿಯಾಗಬಹುದೇ ವಿನಾ ಕನ್ನಡ ಬೋಧನೆಗಲ್ಲ. ಈಗ ಕನ್ನಡ ಬೋಧನೆಗೆ ಅಂಟಿರುವ ಪದವಿ, ಅಂಕಗಳು ಎಲ್ಲವೂ ಕೃತಕ ಗಡಿರೇಖೆಗಳು. ಇವು ಇರುವವರೆಗೆ ಕನ್ನಡ ಎಂದಲ್ಲ ಯಾವುದರ ಅಭಿವೃದ್ಧಿಯೂ ಕಷ್ಟ.

ವಾಚಕರ ವಾಣಿ

ರೋಪ್ ವೇ: ಸಾಧಕ– ಬಾಧಕ ಪರಿಶೀಲಿಸಿ

ನಂದಿಬೆಟ್ಟಕ್ಕೆ ರೋಪ್ ವೇ ನಿರ್ಮಿಸುವುದು ಅಪಾಯಕಾರಿ ನಡೆ ಎಂದು ಹೇಳಿರುವ ಪರಿಸರ ತಜ್ಞ ಅ.ನ.ಯಲ್ಲಪ್ಪ ರೆಡ್ಡಿ ಅವರು, ಈ ವಿಷಯದಲ್ಲಿ ಸರ್ಕಾರದ ನಿಲುವನ್ನು ವಿರೋಧಿಸಿರುವುದು ಸರಿಯಾಗಿದೆ. ಇದಕ್ಕೆ ಪೂರಕವಾಗಿ ಅವರು ಹೇಳಿರುವ ಮಾತಿನಲ್ಲಿ ಸಾರ್ವಕಾಲಿಕ ಸತ್ಯ ಇದೆ, ಪ್ರವಾಸೋದ್ಯಮದ ಹೆಸರಿನಲ್ಲಿ ಪ್ರಕೃತಿಯ ಮೇಲೆ ನಡೆಯುತ್ತಿರುವ ದಾಳಿಯನ್ನು ಅದು ಸೂಚಿಸುತ್ತದೆ. ಕೇರಳದ ವಯನಾಡಿನಲ್ಲಿ ಬಿರುಮಳೆಯಿಂದ ಭೂಕುಸಿತ ಸಂಭವಿಸಿ ಆದ ದುರಂತಗಳು ನಮ್ಮ ಕಣ್ಮುಂದೆ ಇರುವಾಗಲೇ ನಂದಿಬೆಟ್ಟಕ್ಕೆ ರೋಪ್ ವೇ ನಿರ್ಮಿಸುವ ಯೋಚನೆ ಸರ್ಕಾರಕ್ಕೆ ಹೇಗಾದರೂ ಬಂತೋ ಎಂದು ಅಚ್ಚರಿಯಾಗುತ್ತದೆ. ಹಣ ಇರುವವರು ಅಲ್ಲಿಗೆ ಬಂದು ಖುಷಿ ಪಟ್ಟು ಹೋಗಬಹುದು. ಆದರೆ ನಿಜವಾಗಿ ಸಮಸ್ಯೆ ಎದುರಿಸುವವರು ಸ್ಥಳೀಯರು. ಹೀಗಾಗಿ, ಸರ್ಕಾರ ರೋಪ್ ವೇ ನಿರ್ಮಾಣದಿಂದ ಆಗುವ ಸಾಧಕ– ಬಾಧಕಗಳನ್ನು ಗಂಭೀರವಾಗಿ ಪರಿಶೀಲಿಸಲಿ.

ಸುಮಾವೀಣಾ, ಹಾಸನ

ಹಾಲಿನ ದರ: ನ್ಯಾಯ ಸಿಗಲಿ

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ (ಕೆಎಂಎಫ್) ಸಲ್ಲಿಸಿದ ಹಾಲಿನ ದರ ಏರಿಕೆ ಪ್ರಸ್ತಾವವನ್ನು ಸಂಪುಟ ಸಭೆಯಲ್ಲಿ ಚರ್ಚಿಸಿದ ನಂತರ ನಿರ್ಧಾರ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ (ಪ್ರ.ವಾ., ಮಾರ್ಚ್ 25). ಹಾಲಿನ ದರವನ್ನು ಕಾಲಕಾಲಕ್ಕೆ ಹೆಚ್ಚಿಸುವುದು ನಿಜಕ್ಕೂ ರೈತರಿಗೆ ನೀಡುವ ಉತ್ತೇಜನವೇ ಹೌದು. ಆದರೆ, ಅದು ಬಳಕೆದಾರರ ಕೈ ಸುಡುವಂತೆ ಇರಬಾರದು. ನಂದಿನಿ ಉತ್ಪನ್ನಗಳಿಗೆ ಹೊರ ರಾಜ್ಯಗಳಲ್ಲಿ ಒಳ್ಳೆಯ ಬೇಡಿಕೆ ಇದೆ. ಬೇರೆ ಬ್ರ್ಯಾಂಡ್ ಉತ್ಪನ್ನಗಳು ಅಲ್ಲಿ ಇನ್ನೂ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿವೆ. ಇದನ್ನು ಪರಿಶೀಲಿಸಿ, ಹೊರ ರಾಜ್ಯಗಳಲ್ಲಿ ಬೆಲೆಯನ್ನು ಹೆಚ್ಚಿಸಿ, ನಮ್ಮ ರಾಜ್ಯದಲ್ಲಿ ಈಗಿರುವ ಬೆಲೆಯನ್ನೇ ಮುಂದುವರಿಸಲಿ. ಇದರಿಂದ ಉತ್ಪಾದಕರು ಮತ್ತು ಸ್ಥಳೀಯ ಗ್ರಾಹಕರು ಇಬ್ಬರಿಗೂ ನ್ಯಾಯ ಒದಗಿಸಿದಂತೆ ಆಗುತ್ತದೆ. ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸಿರುವ ಮಧ್ಯಮ ವರ್ಗದವರ ಮೇಲೆ ಇನ್ನಷ್ಟು ಹೊರೆ ಬೀಳುವುದು ತಪ್ಪುತ್ತದೆ.

ಪಿ.ದಯಾನಂದ, ಬೆಂಗಳೂರು

ಅಕ್ರಮ ಕಟ್ಟಡ: ಎ.ಐ.ಗೇ ಪಾಠ ಕಲಿಸುವ ಜಾಣರಿದ್ದಾರೆ!

ಬೆಂಗಳೂರಿನಲ್ಲಿ ಅಕ್ರಮ ಕಟ್ಟಡ ನಿರ್ಮಾಣಗಳನ್ನು ಪತ್ತೆ ಹಚ್ಚಲು ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಬಳಸುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿರುವುದು (ಪ್ರ.ವಾ., ಮಾರ್ಚ್ 25), 'ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡರು' ಎಂಬ ಗಾದೆಯನ್ನು ನೆನಪಿಸುತ್ತದೆ. ಕಟ್ಟಡಗಳನ್ನು ಕಟ್ಟುವ ಮೊದಲು ಮತ್ತು ಕಟ್ಟಡ ಕಟ್ಟಿದ ನಂತರ ಅದರ ನಕ್ಷೆಗಳಿಗೆ ಅನುಮತಿ ತೆಗೆದುಕೊಳ್ಳಲು ಕಾನೂನೇ ಇದೆ. ಅಷ್ಟೇ ಅಲ್ಲದೆ, ಅದಕ್ಕೆ ನಿರ್ದಿಷ್ಟ ಪ್ರಮಾಣದ ಕಟ್ಟಡ ತೆರಿಗೆಯನ್ನು ನಿರ್ಧರಿಸಲು ಸಹ ನಿಯಮಗಳಿವೆ. ಇವನ್ನೆಲ್ಲ ಗಾಳಿಗೆ ತೂರಿ, ಅಧಿಕಾರಿಗಳ ಸಹಕಾರದಿಂದ, ನಿರ್ಮಾಣ ಮಾಡುವವರ ಜಾಣತನದಿಂದ ಅದೆಷ್ಟೋ ಕಟ್ಟಡಗಳನ್ನು ಅಕ್ರಮವಾಗಿ ಕಟ್ಟಲಾಗುತ್ತಿದೆ.

ಇಂತಹ ಬೆಳವಣಿಗೆಗಳನ್ನು ಬೇರಿನಲ್ಲೇ ಸರಿಪಡಿಸುವುದನ್ನು ಬಿಟ್ಟು ಎ.ಐ. ತಂತ್ರಜ್ಞಾನದಿಂದ ಅದನ್ನು ಕಂಡುಹಿಡಿಯಲು ಆಲೋಚಿಸುತ್ತಿರುವುದು ಹಾಸ್ಯಾಸ್ಪದವಾಗಿದೆ. ಅದರ ಬದಲು ಈ ತಂತ್ರಜ್ಞಾನವನ್ನು ಇದಕ್ಕೆ ಸಂಬಂಧಪಟ್ಟ ಸರ್ಕಾರಿ ಕಚೇರಿಗಳಲ್ಲಿ ಹಾಗೂ ಅದರ ಸುತ್ತಮುತ್ತಲಿನ ಜಾಗಗಳಲ್ಲಿ, ಅಂಗಡಿ, ಹೋಟೆಲುಗಳಲ್ಲಿ ಅಳವಡಿಸಿದರೆ ಬಹುಶಃ ಹೆಚ್ಚು ಲಾಭವಾಗಬಹುದೇನೊ. ಏಕೆಂದರೆ ನಮ್ಮಲ್ಲಿ ಅನೇಕರು ಎ.ಐ. ಬುದ್ಧಿಮತ್ತೆಗಿಂತಲೂ ಅಧಿಕ ಜಾಣರಿದ್ದು, ಅದಕ್ಕೇ ಪಾಠ ಕಲಿಸುವಂತಹ ಬುದ್ಧಿಯನ್ನು ಹೊಂದಿದ್ದಾರೆ!

ಕಡೂರು ಫಣಿಶಂಕರ್, ಬೆಂಗಳೂರು

ಸ್ವಾವಲಂಬಿಗಳನ್ನು ಪರಾವಲಂಬಿಯಾಗಿಸಿದ ಯೋಜನೆ!

ಮಲೆನಾಡಿನಲ್ಲಿ ಜಲ ಜೀವನ್ ಮಿಷನ್ (ಜೆಜೆಎಂ) ಯೋಜನೆ ಕುರಿತು ಅಖಿಲೇಶ್ ಚಿಪ್ಪಳಿ ಅವರು ವಿಶ್ಲೇಷಿಸಿರುವಂತೆ (ಪ್ರ.ವಾ., ಮಾರ್ಚ್ 24), ಯೋಜನೆಯು ಈ ಭಾಗದಲ್ಲಿ ಅನುಕೂಲ ಆಗಿದ್ದಕ್ಕಿಂತ ಜನರಿಗೆ ಬಾಧಕವಾಗಿದ್ದೇ ಹೆಚ್ಚು. ನಮ್ಮೂರು ಮಲೆನಾಡಿನ ಸೆರಗಾದ ಶಿವಮೊಗ್ಗದ ಹತ್ತಿರ ಒಂದು ಪುಟ್ಟ ಹಳ್ಳಿ. ಅಲ್ಲಿದ್ದ ಸ್ಫಟಿಕದಂತಹ ಸಿಹಿನೀರಿನ ತೆರೆದಬಾವಿ ಎಂತಹ ಬಿರು ಬೇಸಿಗೆ ಇದ್ದರೂ ಪೂರ್ತಿ ಊರಿಗೆ ನೀರು ಒದಗಿಸುತ್ತಿತ್ತು. ಆದರೆ ಈ ಯೋಜನೆ ಬಂದ ಮೇಲೆ ಜನ ಫಿಲ್ಟರ್ ನೀರು ಹಾಗೂ ನಲ್ಲಿ ನೀರಿಗೆ ಅಂಟಿಕೊಂಡರು. ಹೀಗಾಗಿ, ಬಾವಿ ಈಗ ಪೂರ್ತಿ ಕಸದ ತಿಪ್ಪೆಯಾಗಿ, ಸ್ಫಟಿಕದಂತಹ ನೀರು ಕೊಳಕಾಗಿದೆ. ಯೋಜನೆಯ ಆಶಯ ಮಹತ್ವದ್ದಾಗಿದ್ದರೂ ಮಂಜೂರಾದ ಹಣವನ್ನು ಖರ್ಚು ಮಾಡುವ ಭರದಲ್ಲಿ ಇನ್ನೊಂದು ತೊಂದರೆ ತಂದೊಡ್ಡಿದಂತೆ ಆಗಿದೆ. ಬೇಸಿಗೆಯ ಆರಂಭದಲ್ಲೇ ಅನಿಯಮಿತ ಲೋಡ್‌ಶೆಡ್ಡಿಂಗ್ ಇರುವುದರಿಂದ ವಿದ್ಯುತ್ ಇದ್ದಾಗಲಷ್ಟೇ ನೀರು ಎಂಬಂತಾಗಿದೆ. ನೀರಿನ ವಿಷಯದಲ್ಲಿ ಸ್ವಾವಲಂಬಿಗಳಾಗಿದ್ದವರೆಲ್ಲಾ ಈಗ ಪರಾವಲಂಬಿಗಳು. ಸರ್ಕಾರ ಹಾಗೂ ಪಂಚಾಯಿತಿಗಳು ಮಂಜೂರಾದ ಹಣವನ್ನು ಖರ್ಚು ಮಾಡುವ ಮೊದಲು ಆಯಾ ಭಾಗದ ಜನರ ಅಗತ್ಯ, ಅನಗತ್ಯಗಳನ್ನು ಪರಿಗಣಿಸಿ ನಿರ್ಧರಿಸುವುದು ಒಳ್ಳೆಯದು.

ಸುವರ್ಣ ಸಿ.ಡಿ., ತರೀಕೆರೆ

ದುರುದ್ದೇಶದ ರೀಲ್ಸ್‌ಗೆ ಬೇಕು ಕಡಿವಾಣ

ಇತ್ತೀಚಿನ ದಿನಗಳಲ್ಲಿ 'ರೀಲ್ಸ್' ಮೂಲಕ ಸುಳ್ಳುಸುದ್ದಿಯನ್ನು ಹರಡುವ ಪ್ರಯತ್ನಗಳು ನಡೆಯುತ್ತಿವೆ. ಮೂರು ಮಕ್ಕಳನ್ನು ಹೊಂದಿರುವ 30 ವರ್ಷ ಪ್ರಾಯದ ಮಹಿಳೆಯೊಬ್ಬಳು 15 ವರ್ಷದ ತಮ್ಮನನ್ನೇ ಮದುವೆಯಾದಳು ಎಂದು ತೋರಿಸುವ 'ರೀಲ್ಸ್' ಹಾಗೂ 18 ವರ್ಷಕ್ಕಿಂತ ಕೆಳಗಿನ ಅಣ್ಣ, ತಂಗಿ ದೇವಾಲಯವೊಂದರಲ್ಲಿ ಮದುವೆಯಾದರು ಎಂಬ ಫೇಸ್‌ಬುಕ್ ಪೋಸ್ಟ್ ಹಲವು ದಿನಗಳಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಸದ್ದು ಮಾಡುತ್ತಿವೆ. ದೇಶಗಳು ಹಾಗೂ ಧರ್ಮಗಳ ನಡುವೆ ದ್ವೇಷ ಹರಡುವ ರೀತಿಯಲ್ಲಿ ಪುಟ್ಟ ಮಕ್ಕಳ ಹೇಳಿಕೆಗಳನ್ನು ಒಳಗೊಂಡ ವಿಡಿಯೊ ತುಣುಕುಗಳೂ ಆಗಾಗ ಕಾಣಿಸಿಕೊಳ್ಳುತ್ತವೆ. ಮನರಂಜನೆಗಾಗಿ ಇಂತಹ ರೀಲ್ಸ್ ಮಾಡುತ್ತಿರಬಹುದು. ಆದರೆ ಮನರಂಜನೆಯ ಹೆಸರಿನಲ್ಲಿ ಒಂದು ದೇಶವನ್ನು, ಸಮುದಾಯವನ್ನು ನಿಂದಿಸುವುದು ಸರಿಯಲ್ಲ. ಇಂತಹ ಅಸಂಬದ್ಧ ಪೋಸ್ಟ್‌ಗಳಿಗೆ ಕಡಿವಾಣ ಹಾಕುವ ಮೂಲಕ ದೇಶದ ಘನತೆ ಮತ್ತು ಸೌಹಾರ್ದ ಪರಂಪರೆಯನ್ನು ಕಾಪಾಡಬೇಕಾಗಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಮತ್ತು ಅಂಕೋಲಾ ತಾಲ್ಲೂಕಿನಲ್ಲಿ ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ವಾಣಿಜ್ಯ ಬಂದರುಗಳ ನಿರ್ಮಾಣಕ್ಕೆ ಸ್ಥಳೀಯ ಮೀನುಗಾರರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಇತ್ತೀಚೆಗೆ ಅವರು ನಡೆಸಿದ್ದ ತೀವ್ರ ಪ್ರತಿಭಟನೆ ರಾಷ್ಟ್ರೀಯ ಮಟ್ಟದಲ್ಲೂ ಸುದ್ದಿಯಾಗಿತ್ತು. ಪ್ರತಿಭಟನೆಗಳನ್ನು ಹತ್ತಿಕ್ಕಲು ಪೊಲೀಸರು ಮಾಡಿದ್ದ ಬಲಪ್ರಯೋಗ ಕೂಡ ಚರ್ಚೆಗೆ ಗ್ರಾಸವಾಗಿತ್ತು. ಬಂದರುಗಳು ನಿರ್ಮಾಣವಾದರೆ ತಾವು ಶಾಶ್ವತವಾಗಿ ನೆಲೆ ಕಳೆದುಕೊಳ್ಳಬೇಕಾಗುತ್ತದೆ ಎಂಬ ಆತಂಕ ಮೀನುಗಾರರದ್ದು

ಟೊಂಕದಲ್ಲಿ ಟೊಂಕಕಟ್ಟಿ ನಿಂತಿದೆ ಬದುಕು ಮೂರಾಬಟ್ಟೆ ಆಗುವ ಆತಂಕ • ಕೇಣಿ ಜನರ ಕೂಗೂ ಕೇಳುವವರಿಲ್ಲ

ಬಂದರು ಬಿದ್ದಿದೆ ಹೋರಾಟಕ್ಕೇ ಲಂಗರು!



ಕೇಣಿಯಲ್ಲಿ ಗ್ರೀನ್‌ಫೀಲ್ಡ್ ಬಂದರು ಯೋಜನೆ ವಿರೋಧಿಸಿ ಸ್ಥಳೀಯ ಮೀನುಗಾರರು ಸಮುದ್ರದಲ್ಲಿ ದೋಣಿಗಳನ್ನು ನಿಲುಗಡೆ ಮಾಡಿ ಪ್ರತಿಭಟಿಸಿದ್ದರು



• ಗಣಪತಿ ಹೆಗಡೆ

'ಮೀನುಗಾರಿಕೆಯೇ ನಮಗೆ ಬದುಕು. ಮೀನು ಹಿಡಿಯುವ ಕಸುಬು ಬಿಟ್ಟು ಹೊಟ್ಟೆ ಹೊರೆಯಲು ಬೇರೆ ಕೆಲಸ ನಮಗೆ ಗೊತ್ತಿಲ್ಲ. ನಮ್ಮ ಜೀವನಕ್ಕೆ ಏಕೈಕ ಆಸರೆಯಾಗಿರುವ ಕಡಲತೀರಗಳನ್ನು ನಮ್ಮಿಂದ ದೂರ ಮಾಡಲಾಗುತ್ತಿದೆ. ನೆಲೆ ಉಳಿಸಿಕೊಳ್ಳುವುದಕ್ಕಾಗಿ ನಾವು ಹೋರಾಡುತ್ತಿದ್ದರೆ ಸರ್ಕಾರ, ಪೊಲೀಸ್ ಬಲದ ಮೂಲಕ ನಮ್ಮನ್ನು ಹತ್ತಿಕ್ಕುತ್ತಿದೆ. ಬದುಕುವ ಹಕ್ಕಿನ ರಕ್ಷಣೆಗೆ ಅನಿವಾರ್ಯವಾಗಿ ಹೋರಾಟ ಮಾಡುತ್ತಿರುವವರ ಮೇಲೆ ಪೊಲೀಸರು ಪ್ರಕರಣ ದಾಖಲಿಸುತ್ತಿದ್ದಾರೆ. ರೌಡಿಗಳ ಪಟ್ಟಿಯಲ್ಲಿ ಹೆಸರು ಸೇರಿಸುತ್ತಿದ್ದಾರೆ. ಜೈಲಿಗೆ ಅಟ್ಟುತ್ತಿದ್ದಾರೆ'

– ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕಾಸರಕೋಡದ ಟೊಂಕ ಪ್ರದೇಶದ ಮೀನುಗಾರ ಗಣಪತಿ ತಾಂಡೇಲ ಅವರ ಮಾತಿದು. ಟೊಂಕದ ಕಡಲತೀರದಲ್ಲಿ ತಿಂಗಳುಗಳಿಂದ ಮಗುಚಿಟ್ಟಿದ್ದ ತಮ್ಮ ದೋಣಿಯನ್ನು ತೋರಿಸುತ್ತಾ ಹೇಳುವಾಗ ಅವರ ಕಣ್ಣಾಲಿಗಳು ತುಂಬಿದ್ದವು. ಮುಂದೆ ಏನು ಎಂಬ ಆತಂಕವೂ ಅವರನ್ನು ಕಾಡುತ್ತಿತ್ತು.

'ನಸುಕಿನಲ್ಲೇ ಸಮುದ್ರಕ್ಕೆ ಇಳಿದು ಮೀನು ಹಿಡಿದು, ಸೂರ್ಯ ನೆತ್ತಿಗೆ ಏರಿ ಬರುವಷ್ಟರಲ್ಲಿ ಹಿಡಿದು ತಂದ ಮೀನನ್ನು ವ್ಯಾಪಾರ ಮಾಡಿಬಿಡುತ್ತಿದ್ದೆವು. ಅಂದಿನ ದುಡಿಮೆ, ಅಂದಿನ ಊಟಕ್ಕೆ ಸಾಲುತ್ತಿತ್ತು. ಈಗ ನಿರಾತಂಕವಾಗಿ ಸಮುದ್ರಕ್ಕೆ ಇಳಿಯುವಂತೆಯೂ ಇಲ್ಲ. ದುಡಿಮೆಯೂ ಇಲ್ಲ. ಬಂದರು ನಿರ್ಮಿಸಿ ನಮ್ಮ ಬದುಕನ್ನು ಮೂರಾಬಟ್ಟೆ ಮಾಡಲು ಸರ್ಕಾರ ಹೊರಟಿದೆ' ಎಂದು ಹೇಳಿ ಮತ್ತೆ ಕಣ್ಣೀರಾದರು.

ಟೊಂಕ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಾಣಿಜ್ಯ ಬಂದರಿಗೆ ಸಂಪರ್ಕ ಕಲ್ಪಿಸುವ ರಸ್ತೆಗಾಗಿ ಭೂಸ್ವಾಧೀನಕ್ಕೆ ಫೆ.25 ರಂದು ಸಮೀಕ್ಷೆ ನಡೆಯಿತು. ಇದನ್ನು ವಿರೋಧಿಸಿ ಹೋರಾಟಕ್ಕೆ ಇಳಿದ 45 ಮೀನುಗಾರ ಮುಖಂಡರ ಮೇಲೆ ಪೊಲೀಸರು, ಕರ್ತವ್ಯಕ್ಕೆ ಅಡ್ಡಿ, ಹಲ್ಲೆ, ಕೊಲೆಯತ್ನ ಸೇರಿದಂತೆ ಗಂಭೀರ ಪ್ರಕರಣಗಳನ್ನು ದಾಖಲಿಸಿದರು. ಅವರ ಪೈಕಿ 24 ಮಂದಿಯನ್ನು ಬಂಧಿಸಿದ್ದರು (ಈಗ ಎಲ್ಲರಿಗೂ ಜಾಮೀನು ಸಿಕ್ಕಿದೆ). ಪೊಲೀಸರ ಈ ಕ್ರಮ ಮೀನುಗಾರರಲ್ಲಿ ಆಕ್ರೋಶದ ಜೊತೆಗೆ ಆತಂಕಕ್ಕೂ ಕಾರಣವಾಗಿದೆ. ಬಂಧನದ ಭಯದಿಂದ ಸಮುದಾಯದ ಹಲವು ಮುಖಂಡರು ಊರನ್ನೇ ತೊರೆದಿದ್ದರು. ಈಗ ಅವರು ಊರಿಗೆ ವಾಪಸ್ ಆಗಿದ್ದರೂ, ಅವರಲ್ಲಿ ಆತಂಕ ಇದ್ದೇ ಇದೆ.

ಇದು ಟೊಂಕ ಪ್ರದೇಶದ ಕಥೆಯಾದರೆ, ಇಲ್ಲಿಂದ 65 ಕಿ.ಮೀ. ದೂರದಲ್ಲಿರುವ ಅಂಕೋಲಾ ತಾಲ್ಲೂಕಿನ ಕೇಣಿಯ ಮೀನುಗಾರರ ವ್ಯಥೆಯೂ ಇದೇ ರೀತಿಯದ್ದು. ಅಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬೃಹತ್ ವಾಣಿಜ್ಯ ಬಂದರು ತಮ್ಮ ಬದುಕಿಗೇ ಕೊಳ್ಳಿ ಇಡಲಿದೆ ಎಂದು ಸ್ಥಳೀಯ ಮೀನುಗಾರರು ಯೋಜನೆಯನ್ನು ವಿರೋಧಿಸುತ್ತಿದ್ದಾರೆ. ಬಂದರು ನಿರ್ಮಾಣವಾದರೆ ಮೀನುಗಾರರ ಕುಟುಂಬಗಳು ಶಾಶ್ವತವಾಗಿ ನೆಲೆ ಕಳೆದುಕೊಳ್ಳಬೇಕಾಗುತ್ತದೆ ಎಂಬ ಕಳವಳ ಅವರದ್ದು.

ಕೇಣಿ ಭಾಗದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆ ಮೂಲಕ ಬದುಕು ಕಟ್ಟಿಕೊಂಡಿರುವ 2,000ಕ್ಕೂ ಹೆಚ್ಚು ಮೀನುಗಾರರ ಕುಟುಂಬಗಳಿವೆ. ಬಂದರು ನಿರ್ಮಾಣದ ವಿರುದ್ಧ ದೀರ್ಘ ಅವಧಿಯಿಂದ ಹೋರಾಟ ನಡೆಸುತ್ತಿರುವ ಅವರು ಇತ್ತೀಚೆಗೆ ಹೋರಾಟ ತೀವ್ರಗೊಳಿಸಿದ್ದಾರೆ. ಹೋರಾಟ ಹತ್ತಿಕ್ಕಲು ಪೊಲೀಸರು ಈ ಭಾಗದಲ್ಲಿ ನಿಷೇಧಾಜ್ಞೆ ಅಸ್ತ್ರವನ್ನು ಬಳಸಿದ್ದಾರೆ. ಮೀನುಗಾರರು ನೆಲವನ್ನು ಬಿಟ್ಟು ಸಮುದ್ರದ ನೀರಿನಲ್ಲಿ ದೋಣಿಗಳನ್ನು ನಿಲ್ಲಿಸಿ ಪ್ರತಿಭಟನೆ ನಡೆಸಿದರು. ಅಲ್ಲೂ ಪ್ರತಿಭಟನೆಯನ್ನು ಹತ್ತಿಕ್ಕುವ ಕೆಲಸವನ್ನು ಪೊಲೀಸರು ಮಾಡಿದ್ದಾರೆ ಎಂಬುದು ಮೀನುಗಾರರ ಆರೋಪ.

'ಹೋರಾಟ ಹತ್ತಿಕ್ಕಲು ಪೊಲೀಸರು ಗ್ರಾಮದಲ್ಲಿ ಎರಡು ವಾರ ನಿಷೇಧಾಜ್ಞೆ ಹೇರಿದರು. ನಿಷೇಧಾಜ್ಞೆ ನಡುವೆಯೂ ಹೋರಾಟ ನಡೆಸಿದವರ ಮಾಹಿತಿ ಪಡೆದು ಬೆದರಿಸಲು ಪ್ರಯತ್ನಿಸಿದರು. ನೆಲ ಬಿಟ್ಟು ಸಮುದ್ರದಲ್ಲಿ ದೋಣಿ ನಿಲ್ಲಿಸಿ ಪ್ರತಿಭಟನೆ ಮಾಡಿದೆವು. ಅಲ್ಲೂ ಪೊಲೀಸರು ವಾಗ್ವಾದ ನಡೆಸಿದರು' ಎಂದು ಕೇಣಿಯ ಸಂಜೀವ ಬಲೇಗಾರ ಹೇಳಿದರು.

'ವಾಣಿಜ್ಯ ಬಂದರು ನಿರ್ಮಾಣಕ್ಕೆ ಕಿ.ಮೀ. ಉದ್ದದ ಕಡಲ ತೀರವನ್ನು ವಶಕ್ಕೆ ಪಡೆಯುತ್ತಾರೆ. ಈಗ ಮೀನುಗಾರಿಕೆಗೆ ಅಡ್ಡಿ ಏನೂ ಆಗದು ಎನ್ನುವ ಅಧಿಕಾರಿಗಳು ಕಾಲಕ್ರಮೇಣ ಮೀನುಗಾರಿಕೆ ನಡೆಸದಂತೆ ನಿರ್ಬಂಧ ಹೇರುತ್ತಾರೆ. ಮೀನುಗಾರಿಕೆ ವೃತ್ತಿಯ ಹೊರತಾಗಿ ಬೇರೆ ದುಡಿಮೆ ಇಲ್ಲದ ನಾವು ನೆಲೆ, ದುಡಿಮೆ ಕಳೆದುಕೊಂಡು ಬೀದಿಗೆ ಬರಬೇಕಾಗುತ್ತದೆ' ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಜೀವನೋಪಾಯಕ್ಕೆ ಕುತ್ತು: 'ಇತ್ತ ಕಾಸರಕೋಡದ ಟೊಂಕ ಪ್ರದೇಶ, ಅತ್ತ ಅಂಕೋಲಾದ ಕೇಣಿ ಕಡಲತೀರ ಸದಾ ಮೀನುಗಾರಿಕೆಯಿಂದ ಗಿಜಿಗುಡುತ್ತದೆ. ಸಾವಿರಾರು ಕುಟುಂಬಗಳಿಗೆ ಮೀನುಗಾರಿಕೆಯೇ ಜೀವನೋಪಾಯದ ದಾರಿ. ಪುರುಷರು ಸಮುದ್ರಕ್ಕೆ ಹೋಗಿ ಮೀನು ಹಿಡಿದು ತಂದರೆ, ಕುಟುಂಬದಲ್ಲಿನ ಮಹಿಳೆಯರು ಅದನ್ನು ಮಾರಾಟ ಮಾಡುತ್ತಾರೆ. ಆಯಾ ದಿನ ಹಿಡಿದ ಮೀನುಗಳನ್ನು ಕೆಲವರು ಅಂದೇ ಮಾರಾಟ ಮಾಡಿದರೆ, ಮೀನುಗಳನ್ನು ಸ್ವಚ್ಛಗೊಳಿಸಿ, ಮೂರ್ನಾಲ್ಕು ದಿನ ಅವುಗಳನ್ನು ಒಣಗಿಸಿ ನಂತರ ಮಾರುವ ಮಹಿಳೆಯರ ಸಂಖ್ಯೆ ಇಲ್ಲಿ ದೊಡ್ಡದಿದೆ.

'ಸಮುದ್ರದ ದಂಡೆ ಇಲ್ಲದಿದ್ದರೆ ನಮ್ಮ ಜೀವನ ಇಲ್ಲ. ಮೀನು ಹಿಡಿಯುವುದು, ಮಾರಾಟ ಮಾಡುವುದು ಇಲ್ಲವೇ ಹಸಿ ಮೀನನ್ನು ಒಣಗಿಸಿ ಮಾರಾಟ ಮಾಡಿ ನಮ್ಮ ಜೀವನವನ್ನು ಕಟ್ಟಿಕೊಂಡಿದ್ದೇವೆ. ಅದು ಬಿಟ್ಟರೆ ನಮಗೆ ಬೇರೆ ಉದ್ಯೋಗ ಗೊತ್ತಿಲ್ಲ. ಬಂದರು ನಿರ್ಮಾಣ ನೆಪದಲ್ಲಿ ಮೀನುಗಾರಿಕೆಗೆ ನಿರ್ಬಂಧ ಹೇರಿದರೆ ನಮ್ಮ ಜೀವನ ನಡೆಯುವುದು ಹೇಗೆ' ಎಂದು ಟೊಂಕದ ಮೀನುಗಾರ ಮಹಿಳೆ ರೇಣುಕಾ ತಾಂಡೇಲ ಪ್ರಶ್ನಿಸಿದರು.

'ಈ ಮೊದಲು ಎಚ್‌ಪಿಪಿಎಲ್ ಕಂಪನಿ ಪಡೆದಿದ್ದ ಪರಿಸರ ಪರವಾನಗಿಯಲ್ಲಿ ರೈಲು, ಹೆದ್ದಾರಿ ಸಂಪರ್ಕದ ಪ್ರಸ್ತಾವ ಇರಲಿಲ್ಲ. ಕಾಸರಕೋಡ, ಟೊಂಕ ಮಾರ್ಗವಾಗಿ ಹಾದುಹೋಗುವ ಸಂಪರ್ಕ ಹೆದ್ದಾರಿಯಿಂದ ನೂರಾರು ಮೀನುಗಾರರು ನೆಲೆ ಕಳೆದುಕೊಳ್ಳಲಿದ್ದಾರೆ. ಹೊಸಪಟ್ಟಣದಿಂದ ರೈಲು ಮಾರ್ಗ ಕಲ್ಪಿಸುವ ಪ್ರಸ್ತಾವವನ್ನೂ ಯೋಜನೆ ಒಳಗೊಂಡಿದೆ. ಇದರಿಂದಲೂ ನೂರಾರು ಮೀನುಗಾರರ ಮನೆಗಳು ನೆಲಸಮವಾಗಲಿವೆ' ಎಂದು ಬಂದರು ಯೋಜನೆ ವಿರೋಧಿ ಹೋರಾಟಗಾರರಾದ ರಾಜು ತಾಂಡೇಲ ಹೇಳಿದರು.

ಟೊಂಕ ಕಡಲತೀರದಲ್ಲಿ ಈಗ ಮೌನ ಆವರಿಸಿದೆ. ಪೊಲೀಸ್ ಸರ್ಪಗಾವಲಿನಲ್ಲಿ ಬಂದರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಕೆಲಸ ನಡೆಯುತ್ತಿದೆ.

'ಹೊನ್ನಾವರದ ವಾಣಿಜ್ಯ ಬಂದರು ಯೋಜನೆ ವಿರೋಧಿಸುವವರ ಮೇಲೆ ಪೊಲೀಸರ ನಿಗಾ ಇರಿಸುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಸಂದೇಶ ಕಳಿಸಿದರೂ ಪ್ರಕರಣ ದಾಖಲಿಸಲಾಗುತ್ತಿದೆ. ಈಗಲೂ ನಿತ್ಯ ಪೊಲೀಸರು ಕಾಸರಕೋಡ, ಟೊಂಕದಲ್ಲಿ ಪೊಲೀಸರ ಗಸ್ತು ಮುಂದುವರಿದಿದೆ. ಪೊಲೀಸ್ ಕಾವಲಿನಲ್ಲಿ ರಾಶಿಗಟ್ಟಲೆ ಮಣ್ಣನ್ನು ಕಡಲತೀರದಲ್ಲಿ ರಸ್ತೆ ನಿರ್ಮಾಣಕ್ಕೆ ತಂದು ಸುರಿಯಲಾಗುತ್ತಿದೆ' ಎಂದು ಮೀನುಗಾರ ರಾಜು ತಾಂಡೇಲ ಹೇಳಿದರು.

ಹೆಚ್ಚಲಿದೆ ಕಡಲು ಕೊರೆತ


'ಬಂದರು ನಿರ್ಮಾಣದ ಭಾಗವಾಗಿ ಸಮುದ್ರದಲ್ಲಿ ನೂರಾರು ಮೀಟರ್ ಉದ್ದದ ಅಲೆ ತಡೆಗೋಡೆ ನಿರ್ಮಿಸಬೇಕಾಗುತ್ತದೆ. ಇದರಿಂದ ಅಕ್ಕಪಕ್ಕದಲ್ಲಿರುವ, ಕೆಲವು ಕಿ.ಮೀ ದೂರದಲ್ಲಿರುವ ಉಳಿದ ಕಡಲತೀರಗಳು ಮಳೆಗಾಲದಲ್ಲಿ ಕೊರೆತಕ್ಕೊಳಗಾಗುತ್ತವೆ. ಕಾರವಾರದ ವಾಣಿಜ್ಯ ಬಂದರಿಗೆ ನಿರ್ಮಿಸಿದ ತಡೆಗೋಡೆಯಿಂದ ದೇವಭಾಗ, ಮಾಜಾಳಿಯಲ್ಲಿ ಕಡಲು ಕೊರೆತದ ಸಮಸ್ಯೆ ತಲೆದೋರಿದ ನಿದರ್ಶನವಿದೆ' ಎನ್ನುತ್ತಾರೆ ಕಡಲಜೀವಶಾಸ್ತ್ರಜ್ಞ ವಿ.ಎನ್.ನಾಯಕ.

'ಪರಿಸರ ಸೂಕ್ಷ್ಮ ಪ್ರದೇಶವಾಗಿರುವ ಉತ್ತರ ಕನ್ನಡದಲ್ಲಿ ನಿರ್ಮಾಣಗೊಳ್ಳುವ ಬಂದರುಗಳಿಗೆ ಕಾಲಕ್ರಮೇಣ ಕಂಪನಿಗಳು ಹೆದ್ದಾರಿ ವಿಸ್ತರಣೆ ಬೇಡಿಕೆ ಇಡುತ್ತವೆ. ಹೊಸದಾಗಿ ರೈಲು ಸಂಪರ್ಕಕ್ಕೆ ಪ್ರಯತ್ನಿಸುತ್ತವೆ. ಇವುಗಳಿಂದ ಪಶ್ಚಿಮ ಘಟ್ಟ ಸಂಪೂರ್ಣ ನಾಶವಾಗುವ ಸ್ಥಿತಿ ಬರಲಿದೆ' ಎಂಬುದಾಗಿ ನಾಯಕ ವಾದಿಸುತ್ತಾರೆ.

₹4,118 ಕೋಟಿ ವೆಚ್ಚ

ಅಂಕೋಲಾದ ಕೇಣಿಯಲ್ಲಿ ₹4,118 ಕೋಟಿ ವೆಚ್ಚದಲ್ಲಿ, ವಾರ್ಷಿಕ ಮೂರು ಕೋಟಿ ಟನ್ ಸಾಮರ್ಥ್ಯದ ಗ್ರೀನ್‌ಫೀಲ್ಡ್ ಬಂದರು ನಿರ್ಮಿಸಲು ಜೆಎಸ್‌ಡಬ್ಲ್ಯು ಕೇಣಿ ಪೋರ್ಟ್ ಪ್ರೈ.ಲಿ ಕಂಪನಿ ಮುಂದಾಗಿದ್ದು, ಈಗಾಗಲೇ ಭೂವೈಜ್ಞಾನಿಕ ಸಮೀಕ್ಷೆಯನ್ನು ನಡೆಸುತ್ತಿದೆ. ಆಳ ಸಮುದ್ರದಲ್ಲಿ ಬಾರ್ಜ್ ಬಳಸಿ ಮಣ್ಣಿನ ಪರೀಕ್ಷೆ ನಡೆಸಲಾಗುತ್ತಿದೆ. ಈ ಯೋಜನೆಗೆ ಹೆಚ್ಚು ಭೂಸ್ವಾಧೀನ ಮಾಡಿಕೊಳ್ಳದೆ ಸಮುದ್ರದಲ್ಲೇ ಸುಮಾರು 450 ಎಕರೆಯಷ್ಟು ಜಾಗ ಬಳಸಿಕೊಂಡು ಬಂದರು ನಿರ್ಮಿಸಲಾಗುತ್ತದೆ. ಕಡಲತೀರದ ಅಕ್ಕಪಕ್ಕ ವಿಶೇಷ ಆರ್ಥಿಕ ವಲಯ ನಿರ್ಮಿಸಿ ಉದ್ಯೋಗ ಸೃಷ್ಟಿಸಲಾಗುತ್ತದೆ ಎಂಬುದಾಗಿ ಕಂಪನಿ ಹೇಳುತ್ತಿದೆ.

ಬಂದರು ನಿರ್ಮಾಣವಾದರೆ ಜಿಲ್ಲೆಯ ಮೂಲಕ ಆಮದು-ರಫ್ತು ಚಟುವಟಿಕೆ ನಡೆಯಲಿದ್ದು, ಇದು ಉದ್ಯೋಗ ಸೃಷ್ಟಿಯ ಜೊತೆಗೆ ಉತ್ತರ ಕರ್ನಾಟಕ, ಕರಾವಳಿ ನಡುವೆ ಸಂಪರ್ಕ ಬಲಗೊಳಿಸಲಿದೆ. ವಾಣಿಜ್ಯ ಚಟುವಟಿಕೆಗಳು ಗರಿಗೆದರುತ್ತವೆ. ಹೀಗಾಗಿ ಯೋಜನೆ ಅಗತ್ಯವಿದೆ ಎಂಬುದಾಗಿ ಜಿಲ್ಲೆಯ ಹಲವು ಉದ್ಯಮಿಗಳು ಪ್ರತಿಪಾದಿಸುತ್ತಾರೆ.



ಕೇಣಿಯಲ್ಲಿ ನಿರ್ಮಾಣಗೊಳ್ಳಲಿರುವ ಸರ್ವಋತು ಆಳಸಮುದ್ರದ ಬಂದರಿನ ನೀಲನಕ್ಷೆ

ಪರಿಸರ, ಜೀವವೈವಿಧ್ಯಕ್ಕೆ ಧಕ್ಕೆ

ನಿರ್ಮಾಣಗೊಳ್ಳುವ ಬಂದರುಗಳು ಪರಿಸರ ಮತ್ತು ಸಮುದ್ರದ ಜೀವವೈವಿಧ್ಯವನ್ನು ನಾಶ ಮಾಡಬಲ್ಲ ಯೋಜನೆ ಎಂಬುದು ಪರಿಸರವಾದಿಗಳ ಹೇಳಿಕೆ.

'ಹೊನ್ನಾವರದಲ್ಲಿ ಸ್ಥಾಪನೆಯಾಗುವ ಬಂದರು ಕಬ್ಬಿಣದ ಅದಿರು ರಫ್ತು ಚಟುವಟಿಕೆ ನಡೆಸಲಿದೆ ಎಂಬ ಮಾಹಿತಿ ಯೋಜನೆಯ ನೀಲನಕ್ಷೆಯಲ್ಲಿದೆ. ಕಲ್ಲಿದ್ದಲು, ರಾಸಾಯನಿಕ ಗೊಬ್ಬರಗಳನ್ನು ಆಮದು ಮಾಡಿಕೊಳ್ಳುವ ಮತ್ತು ಅಲ್ಲಿಯೇ ದಾಸ್ತಾನು ಮಾಡುವ ಸೌಲಭ್ಯವನ್ನೂ ಕಲ್ಪಿಸಲಾಗುತ್ತಿದೆ. ಕೇಣಿಯ ಬಂದರು ಸ್ಥಾಪನೆಯ ಹಿಂದೆಯೂ ಅದಿರು ರಫ್ತು ಮತ್ತು ಆಮದು ಚಟುವಟಿಕೆ ನಡೆಸುವ ಉದ್ದೇಶವಿದೆ. 2006-10ರ ಅವಧಿಯಲ್ಲಿ ಬಳ್ಳಾರಿಯಿಂದ ಬೇಲೆಕೇರಿ, ಕಾರವಾರದ ಬಂದರು ಮೂಲಕ ರಫ್ತಾಗುತ್ತಿದ್ದ ಅದಿರು ಇಲ್ಲಿನ ಜನಜೀವನ ಅಸ್ತವ್ಯಸ್ತಗೊಳಿಸಿತ್ತು. ಅದಿರಿನ ದೂಳಿನಿಂದ ಪರಿಸರಕ್ಕೆ, ಜನರ ಆರೋಗ್ಯಕ್ಕೆ ಮಾರಕವಾಗಿತ್ತು. ಈಗಲೂ ಅಂತದ್ದೇ ಸ್ಥಿತಿ ಮರುಕಳಿಸಬಹುದು' ಎಂಬುದಾಗಿ ಆತಂಕ ವ್ಯಕ್ತಪಡಿಸುತ್ತಾರೆ ಪರಿಸರವಾದಿಗಳು.

'ಟೊಂಕ ಪ್ರದೇಶದಲ್ಲಿ ಆಲಿವ್ ರಿಡ್ಲೆ ಕಡಲಾಮೆಗಳು ಮೊಟ್ಟೆ ಇಡುವ ಸ್ಥಳಗಳಿವೆ. ಇದೇ ಮಾರ್ಗದಲ್ಲಿ ಬಂದರು ಸಂಪರ್ಕಿಸುವ ರಸ್ತೆ ಹಾದುಹೋಗಲಿದೆ. ಇದು ಅಳಿವಿನಂಚಿನಲ್ಲಿರುವ ಜೀವಿಗಳ ಹೆರಿಗೆ ತಾಣವನ್ನು ನಾಶಪಡಿಸಲಿದೆ' ಎಂದು ಹೊನ್ನಾವರ ಫೌಂಡೇಷನ್ ಸದಸ್ಯರು ಆತಂಕ ವ್ಯಕ್ತಪಡಿಸಿದರು.

ದಶಕದ ಹಿಂದಿನ ಯೋಜನೆ

ಕಾಸರಕೋಡ ಟೊಂಕ ಪ್ರದೇಶದಲ್ಲಿ ವಾರ್ಷಿಕ 49 ಲಕ್ಷ ಟನ್ ಸಾಮರ್ಥ್ಯದ ವಾಣಿಜ್ಯ ಬಂದರು ನಿರ್ಮಿಸಲು ಹೊನ್ನಾವರ ಪೋರ್ಟ್ ಪ್ರೈವೆಟ್ ಲಿಮಿಟೆಡ್ (ಎಚ್‌ಪಿಪಿಎಲ್) ಕಂಪನಿ ಕೆಲಸ ಆರಂಭಿಸಿದೆ.

2010ರಲ್ಲೇ ರಾಜ್ಯ ಸರ್ಕಾರವು ಹೊನ್ನಾವರದಲ್ಲಿ ವಾಣಿಜ್ಯ ಬಂದರು ಸ್ಥಾಪಿಸಲು ಹೈದರಾಬಾದ್‌ನ ಎಚ್‌ಪಿಪಿಎಲ್‌ಗೆ ಲೀಸ್ ಆಧಾರದಲ್ಲಿ 93 ಎಕರೆ ಭೂಮಿ ಹಸ್ತಾಂತರಿಸಿತ್ತು. 2012ರಲ್ಲಿ 400 ಮೀಟರ್ ಉದ್ದದಲ್ಲಿ ಎರಡು ಹಡಗು ಕಟ್ಟೆ (ಬರ್ತ್), 850 ಮೀಟರ್ ಉದ್ದದ ಎರಡು ಅಲೆ ತಡೆಗೋಡೆ, 15 ಮೀಟರ್ ಆಳದ ಹಡಗು ಸಂಚರಿಸುವ ಕಾಲುವೆ ನಿರ್ಮಿಸಲು ಒಪ್ಪಿಗೆ ಪಡೆದುಕೊಂಡ ಕಂಪನಿಯು ಯೋಜನೆ ಆರಂಭಿಸಲು ಮುಂದಾಗಿತ್ತು.




ಟೊಂಕದ ಬಂದರಿಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಸ್ವಾಧೀನಗೊಳ್ಳುವ ಜಾಗದ ಗಡಿ ಗುರುತಿಸಿರುವುದು

2016ರಲ್ಲಿ ಕೋರ್ಟ್ ಮೆಟ್ಟಿಲೇರಿದ್ದ ಮೀನುಗಾರರು ಯೋಜನೆಗೆ ನೀಡಿದ್ದ ಪರಿಸರ ಅನುಮತಿ ರದ್ದುಪಡಿಸಲು ಕೋರಿದ್ದರು. ಕೋರ್ಟ್‌ನಲ್ಲಿ ಸುದೀರ್ಘ ವಿಚಾರಣೆ ನಡೆದು, ಕಂಪನಿ ಪರ ತೀರ್ಪು ಹೊರಬಿದ್ದಿತ್ತು. 2021ರ ವೇಳೆಗೆ ಯೋಜನೆಗೆ ನೀಡಿದ್ದ ಪರಿಸರ ಅನುಮತಿ ಅವಧಿ ಮುಗಿದಿದ್ದರಿಂದ ಕಾಮಗಾರಿ ಪುನರಾರಂಭಕ್ಕೆ ಅಡ್ಡಿಯಾಗಿತ್ತು. 2022ರಲ್ಲಿ ಪುನಃ ಪರಿಸರ ಅನುಮತಿ ಕೋರಿ ಕಂಪನಿ ಅರ್ಜಿ ಸಲ್ಲಿಸಿದ್ದು, 2024ರ ಡಿ. 31ರವರೆಗೆ ಪರಿಸರ ಅನುಮತಿ ನವೀಕರಿಸಲಾಯಿತು.

'ಯೋಜನೆಗೆ ಮೀನುಗಾರರ ಮನೆ, ಜಾಗಗಳು ಸ್ವಾಧೀನವಾಗುವುದನ್ನು ತಡೆಯಲು ರಸ್ತೆಯ ಅಗಲದ ವಿಸ್ತೀರ್ಣವನ್ನು 50 ಮೀ. ಬದಲಿಗೆ 35 ಮೀ.ಗೆ ಇಳಿಸಲಾಗಿದೆ. ಬಂದರಿಗೆ ಸಂಪರ್ಕ ಕಲ್ಪಿಸಲು ರೈಲು ಮಾರ್ಗದ ಪ್ರಸ್ತಾವ ಕೈಬಿಡಲಾಗಿದೆ. ಯೋಜನೆಗೆ 100 ಮನೆಗಳಿರುವ ಜಾಗ ಸ್ವಾಧೀನಗೊಳ್ಳಲಿದ್ದು, ಸರ್ಕಾರ ಸೂಚಿಸಿದ ಮೊತ್ತದಷ್ಟು ಪರಿಹಾರವನ್ನು ಕಂಪನಿಯೇ ಸಂತ್ರಸ್ತರಿಗೆ ನೀಡಲಿದೆ' ಎಂದು ಎಚ್‌ಪಿಪಿಎಲ್ ಕಂಪನಿಯ ಯೋಜನಾ ನಿರ್ದೇಶಕ ಟಿ.ಎಸ್.ಫಾಯದೆ ಹೇಳಿದ್ದಾರೆ.

ಸಿನಿ ಬಿಟ್ಸ್

ವೀರಗಾಸೆ ವೇಷದಲ್ಲಿ ವಿಜಯ ರಾಘವೇಂದ್ರ



ವಿಜಯ್ ರಾಘವೇಂದ್ರ

'**ಕಾಂತಾರ**' ಯಶಸ್ಸಿನ ಬಳಿಕ ನಾಡಿನ ಪ್ರಮುಖ ಆರಾಧನೆಗಳು ಸಿನಿಮಾವಾಗುತ್ತಿವೆ. ತುಳುನಾಡಿನ ಬಹುತೇಕ ಆಚರಣೆಗಳು ಈಗಾಗಲೇ ಚಿತ್ರವಾಗಿ ತೆರೆ ಮೇಲೆ ಬಂದಿವೆ. ಇದೀಗ ಬಯಲುಸೀಮೆಯ ಜನಪ್ರಿಯ ಜನಪದ ಕಲೆ ವೀರಗಾಸೆ ಹಾಗೂ ಅದರ ಅಧಿದೇವರಾದ ವೀರಭದ್ರನ ಕತೆ ಹೇಳುವ 'ರುದ್ರಾಭಿಷೇಕಂ' ಚಿತ್ರ ತೆರೆಗೆ ಬರಲು ಸಜ್ಜಾಗುತ್ತಿದೆ. ವಸಂತ್ ಕುಮಾರ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಚಿತ್ರದ ಚಿತ್ರೀಕರಣ ಮುಕ್ತಾಯದ ಹಂತದಲ್ಲಿದೆ. ಇತ್ತೀಚೆಗೆ ದೇವನಹಳ್ಳಿಯ ಚಿಕ್ಕತಮಂಗಲದಲ್ಲಿ ಹಾಡಿನ ಚಿತ್ರೀಕರಣವಾಗಿದೆ. ಚಿತ್ರದ ನಾಯಕ ವಿಜಯ ರಾಘವೇಂದ್ರ ಜೊತೆಗೆ ವೀರಗಾಸೆ ಕಲಾವಿದರು ಹಾಡಿನಲ್ಲಿ ಹೆಜ್ಜೆ ಹಾಕಿದ್ದಾರೆ. ದೈವದ ಹಿನ್ನೆಲೆ ಇರುವ ಈ ಜನಪದ ಕಲೆಯನ್ನು ನಾಡಿನ ಮನೆ ಮನೆಗೂ ತಲುಪಿಸಬೇಕು ಎನ್ನುವುದೇ ನಮ್ಮ ಉದ್ದೇಶ' ಎನ್ನುತ್ತಾರೆ ನಿರ್ದೇಶಕರು.

ಪ್ರಿಯಾಂಕ ತಿಮ್ಮೇಶ್ ಚಿತ್ರದ ನಾಯಕಿ. ದೇವನಹಳ್ಳಿ, ಗೋಕರ್ಣ, ಹೊನ್ನಾವರ, ಕುಮಟಾ, ಅಘನಾಶಿನಿ ಹಿನ್ನೀರಿನ ಜಾಗಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಪ್ಯಾನ್ ಇಂಡಿಯಾ ಕ್ರಿಯೇಷನ್ಸ್ ಚಿತ್ರವನ್ನು ನಿರ್ಮಿಸಿದೆ. ವಿ.ಮನೋಹರ್ ಸಂಗೀತ ಸಂಯೋಜನೆ, ಮುತ್ತುರಾಜ್ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.

'ವೀರ ಧೀರ'ನಾದ ವಿಕ್ರಮ್

ತಮಿಳಿನ ಜನಪ್ರಿಯ ನಟ 'ಚಿಯಾನ್' ವಿಕ್ರಮ್ ಅಭಿನಯದ 'ವೀರ ಧೀರ ಶೂರನ್ -2' ಚಿತ್ರ ಮಾ.27 ರಂದು ತೆರೆ ಕಾಣುತ್ತಿದೆ. ಚಿತ್ರದ ಪ್ರಚಾರಕ್ಕಾಗಿ ಇತ್ತೀಚೆಗೆ ವಿಕ್ರಮ್ ಬೆಂಗಳೂರಿಗೆ ಬಂದಿದ್ದರು. ಚಿತ್ರವನ್ನು ಅರುಣ್ ಕುಮಾರ್ ಬರೆದು, ನಿರ್ದೇಶಿಸಿದ್ದಾರೆ. ರಿಯಾ ಶಿಬು ನಿರ್ಮಾಣವಿದೆ.



'ನನ್ನ ಹಿಂದಿನ ಹಲವು ಚಿತ್ರಗಳ ಪ್ರಚಾರಕ್ಕೆ ಬೆಂಗಳೂರಿಗೆ ಬಂದಿದ್ದೆ. ಕನ್ನಡ ಚಿತ್ರರಂಗದಲ್ಲಿ ನನಗೆ ಒಳ್ಳೆಯ ಗೆಳೆಯರಿದ್ದಾರೆ. 'ಕೆಜಿಎಫ್', 'ಕಾಂತಾರ' ಚಿತ್ರಗಳ ಅಭಿಮಾನಿ. 'ವೀರ ಧೀರ...' ಚಿತ್ರವು ಎರಡು ಭಾಗಗಳಲ್ಲಿ ಮೂಡಿಬರುತ್ತಿದ್ದು, ಎರಡನೇ ಭಾಗ ಈಗ ತೆರೆಗೆ ಬರುತ್ತಿದೆ. ಆ ನಂತರ ಮೊದಲ ಭಾಗ ಬರಲಿದೆ. 'ಇದೊಂದು ಮಾಸ್ ಚಿತ್ರ. ಆಕ್ಷನ್ ಸಹಜವಾಗಿಯೂ ಇದೆ. ಕಥೆಯಲ್ಲಿ ಸಾಕಷ್ಟು ವಿಷಯಗಳಿವೆ. ಅದರಲ್ಲೂ ಫ್ಲ್ಯಾಷ್ ಬ್ಯಾಕ್ ದೃಶ್ಯಗಳು ಬಹಳ ಆಸಕ್ತಿದಾಯಕವಾಗಿವೆ' ಎಂದರು ವಿಕ್ರಮ್.

ಕನ್ನಡದ ನಟ ರಮೇಶ್ ಇಂದಿರಾ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ದುಶಾರ ವಿಜಯನ್, ಎಸ್.ಜೆ. ಸೂರ್ಯ, ಸುರಾಜ್ ವೆಂಜಾರಮೂಡು ಮುಂತಾದವರು ಚಿತ್ರದಲ್ಲಿದ್ದಾರೆ. ಜಿ.ವಿ. ಪ್ರಕಾಶ್ ಕುಮಾರ್ ಸಂಗೀತ, ತೇನಿ ಈಶ್ವರ್ ಛಾಯಾಚಿತ್ರಗ್ರಹಣವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ವಾಂಶಂಕರ ಸೋಮಯಾಜಿ, ಕಮ್ಮರಡಿ

ಬುಧವಾರ ಮಾರ್ಚ್ 26, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣದ್ವಾದಶಿ ಗ.25-43 ನಕ್ಷತ್ರ: ಧನಿಷ್ಠ ಗ. 26-30 ಯೋಗ: ಸಿದ್ಧ ಗ. 12-25 ಕರಣ: ಕೌಲವ ಗ. 14-50, ಮೀನ ಮಾಸದ 12 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 3.

ರಾಹುಕಾಲ: ಮಧ್ಯಾಹ್ನ 12-00–01-30

ಸೂರ್ಯೋದಯ: 06-34 **ಸೂರ್ಯಾಸ್ತ:** 06-38

ಮುಸ್ಲಿಂ ದಿನಾಂಕ: 25 ರಂಜಾನ್

ಅದೃಷ್ಟ ಸಂಖ್ಯೆ: 11, 10

ಮೇಷ: ಆಸ್ತಿ ಖರೀದಿ ಮಾಡುವಾಗ ದಾಖಲೆಯ ಎಲ್ಲಾ ವಿವರಗಳ ಬಗ್ಗೆ ಎಚ್ಚರದಿಂದ ಬಳಿ ಮಾಹಿತಿಯನ್ನು ಪಡೆದುಕೊಳ್ಳಿರಿ. ಕೆಲಸಗಳನ್ನು ಸ್ವಲ್ಪ ಯಡವಟ್ಟು ಮಾಡಿದರೂ ದಂಡ ತೆತ್ತಬೇಕಾಗುವುದು.

ವೃಷಭ: ಇತರರೊಂದಿಗೆ ಸಾಧ್ಯವಾದಷ್ಟು ಬೆರೆಯಲು ಪ್ರಯತ್ನಿಸಿ. ಪ್ರಾಪಂಚಿಕ ಜ್ಞಾನ ಅಭಿವೃದ್ಧಿಯಾಗಲಿದೆ. ಸಂಬಂಧಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಉನ್ನತಿಯನ್ನು ಉಂಟುಮಾಡುವುದು.

ಮಿಥುನ: ಹಿತಶತ್ರುಗಳು ಇದ್ದಂತ ಅನುಭವ ನಿರ್ಮಾಣವಾಗುವುದು. ಬೃಹತ್ ಮಟ್ಟದಲ್ಲಿ ವ್ಯಾಪಾರ ನಡೆಸುವವರು ಸಣ್ಣ ಸಣ್ಣ ಕಾರ್ಯಗಳಲ್ಲಿಯೂ ಗಮನ ನಡೆಸಬೇಕಾಗುವುದು.

ಕರ್ಕಾಟಕ: ರಿಯಲ್ ಎಸ್ಟೇಟ್ ವ್ಯವಹಾರಸ್ಥರು ಉತ್ತಮ ಹಾಗೂ ಧನಾತ್ಮಕವಾದ ವ್ಯವಹಾರ ತಮ್ಮದಾಗಿಸಿಕೊಳ್ಳುವರು. ಸಾರ್ವಜನಿಕರ ರಕ್ಷಣೆ ಕೆಲಸ ಮಾಡುವವರು ಶ್ರಮ ವಹಿಸಬೇಕಾಗುತ್ತದೆ.

ಸಿಂಹ: ಅಧ್ಯಯನ ನಿರತರಿಗೆ ಸೂಕ್ತವಾದ ಸಲಹೆ, ಮಾರ್ಗದರ್ಶನ ಮತ್ತು ಅಧ್ಯಯನಕ್ಕೆ ಬೇಕಾದ ಗ್ರಂಥಗಳು ದೊರೆಯಲಿವೆ. ಮಾರ್ಗದರ್ಶನ ಮಾಡಿದವರ ಅನುಪಸ್ಥಿತಿ ಕಾಡಬಹುದು.

ಕನ್ಯಾ: ಸಾಂಸಾರಿಕವಾಗಿ ಸದ್ಯದ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವುದೇ ಉತ್ತಮ ಎಂಬ ಭಾವನೆ ಸರಿಯಾಗಿದೆ. ವಿವಾಹಕ್ಕೆ ಸಂಬಂಧಪಟ್ಟ ಮಾತುಕತೆಗಳಿಂದ ಭಿನ್ನಾಭಿಪ್ರಾಯಗಳು ದೂರಾಗಲಿವೆ.

ತುಲಾ: ಅದ್ಭುತ ಆಲೋಚನೆಗಳಿವೆ, ಅದನ್ನು ಕಾರ್ಯರೂಪಕ್ಕೆ ತರಲು ಸೃಜನಶೀಲ ಜನರಾದವರನ್ನು ಆರಿಸಿಕೊಳ್ಳಬೇಕಷ್ಟೆ. ಹೆಚ್ಚಿನ ಆತ್ಮವಿಶ್ವಾಸದಿಂದ ಈ ದಿನವನ್ನು ಆರಂಭಿಸಿ.

ವೃಶ್ಚಿಕ: ಕಳೆದು ಹೋದ ಆಸ್ತಿಯ ಬಗ್ಗೆ ಯೋಚಿಸದೆ, ವೃತ್ತಿಯಲ್ಲಿ ಶ್ರಮಪಡುವ ಮನೋಭಾವ ಬೆಳೆಸಿಕೊಳ್ಳಿರಿ. ಹೆಚ್ಚಿನ ಅಭಿವೃದ್ಧಿಯನ್ನು ತಂದುಕೊಡಲಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರಿಶ್ರಮ ಪಡುವುದು ಉತ್ತಮ.

ಧನು: ರಾಜಕೀಯ ಭವಿಷ್ಯದಲ್ಲಿ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಬೇಕಾದ ಪ್ರಯತ್ನ ನಡೆಸಿ. ದುರ್ಜನರ ಸಹವಾಸದಿಂದ ಗೌರವ ಮತ್ತು ಹಣ ಕಳೆದುಕೊಳ್ಳುವಂತೆ ಆಗುವುದು. ಆಸ್ತಿ ಖರೀದಿಸುವ ವಿಷಯದಲ್ಲಿ ನಿಧಾನ ಮಾಡಬೇಡಿ.

ಮಕರ: ಹಿರಿಯರ ಆಶೀರ್ವಾದದಿಂದ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಸಿಗಲಿದೆ. ಗೌರವಾನ್ವಿತ ಸ್ಥಾನದಲ್ಲಿರುವವರಿಗೆ ಅನಾವಶ್ಯಕ ಸಮಸ್ಯೆಗಳ ಸಂಖ್ಯೆ ಹೆಚ್ಚಾಗಲಿದೆ. ಮಾನಸಿಕ ಪೀಡೆಗಳಿಗೆ ಒಳಗಾಗದಂತೆ ಕಾಳಜಿವಹಿಸಿ.

ಕುಂಭ: ಸ್ನೇಹಿತರೊಂದಿಗೆ ಸಂತೋಷ ಕೂಟಗಳಲ್ಲಿ ಭಾಗವಹಿಸುವ ಅವಕಾಶ ಸಿಗುವುದು. ಸಮಯದ ಅಭಾವದಿಂದ ಕೆಲವು ನಷ್ಟ ಸಂಭವಿಸಲಿದೆ. ಮಗನ ಸಹಾಯಕ್ಕೆ ನಿಲ್ಲಬೇಕಾಗುವುದು.

ಮೀನ: ಒಡನಾಡಿಗಳ ಪ್ರೀತಿ, ವಿಶ್ವಾಸ, ಸಹಕಾರದಿಂದ ಕೆಲಸ ಕಾರ್ಯಗಳನ್ನು ಸುಲಭದಲ್ಲಿ ಸಾಧಿಸುವಿರಿ. ಕನಸುಗಳು ಮತ್ತು ಗುರಿಗಳು ಸೂಕ್ತ ಸಮಯದಲ್ಲಿ ಪೂರ್ಣಗೊಳ್ಳಲಿವೆ.

ಸಂತೃಪ್ತಿ ಕಳೆದುಕೊಂಡು ಸಂಗ್ರಹ ಮಾಡಬಾರದು!

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

160

ಒಬ್ಬ ಮಹಿಳೆ ನಗರದಲ್ಲಿ ಬಸ್ ಹತ್ತಿದಳು. ಕಂಡಕ್ಟರ್ ಬಂದ ತಕ್ಷಣ 'ಹಾ ಹಾ' ಎಂದು ತಲೆ ಅಲ್ಲಾಡಿಸಲು ಶುರು ಮಾಡಿದಳು. 'ಯಾಕೆ ಏನಾತು' ಎಂದು ಕೇಳಿದ ಕಂಡಕ್ಟರ್. ಅದಕ್ಕೆ ಅವಳು 'ನನ್ನ ಮೈಮೇಲೆ ದೇವಿ ಬಂದಾಳ' ಎಂದಳು. ಆಗ ಬೆದರಿದ ಕಂಡಕ್ಟರ್ ನೂರು ರೂಪಾಯಿ ಕಾಣಿಕೆ ನೀಡಿದ. ಇದನ್ನು ಮತ್ತೊಂದು ಮುದುಕಿ ನೋಡುತ್ತಿದ್ದಳು. ಅವಳು ಹಳ್ಳಿ ಬಸ್ ಹತ್ತಿದಾಗ ಹೀಗೆಯೇ ಮಾಡಿದಳು. ಆದರೆ ಹಳ್ಳಿ ಬಸ್ಸಿನ ಕಂಡಕ್ಟರ್, 'ನಿನ್ನ ಮೈ ಮೇಲೆ ದೇವಿ ಬಂದಾಳ ಅಂದ್ರ ಎರಡು ಟಿಕೆಟ್ ತಗಾ. ಒಂದು ನಿನಗ ಇನ್ನೊಂದು ದೇವಿಗೆ' ಅಂದ. ನಮ್ಮ ಮೈಮೇಲೆ ದೇವರು ಬರಬೇಕು. ಆದರೆ ಕಸಿದುಕೊಳ್ಳುವ ದೇವರು ಅಲ್ಲ, ಕೊಡೋ ದೇವರು ಬರಬೇಕು. ದುಡಿಯೋ ದೇವರು ಬರಬೇಕು. ಜೀವನದಲ್ಲಿ ಸಂಗ್ರಹ ಮಾಡಬೇಕೋ ಬಾರದೋ? ಸಂಗ್ರಹ ಇಲ್ಲದ ಜೀವನ ನಡೆಸಲು ಸಾಧ್ಯವಾಗದು ಎಂದೇ? ಇದಕ್ಕೆ ಋಷಿಗಳು ಹೇಳುತ್ತಾರೆ ಸಂಗ್ರಹ ಅಲ್ಲ, ಪರಿಗ್ರಹ ಮಾಡಬೇಕು. 'ನಿನ್ನ ಜೀವನದ ಸಂತೃಪ್ತಿಯನ್ನು ಕಳೆದುಕೊಂಡು ಸಂಗ್ರಹ ಮಾಡಬೇಡ. ಹಾಗೆ ಮಾಡಿದರೆ ಅದು ಅಪರಿಗ್ರಹ' ಎಂದರು.

ಜೀವನದಲ್ಲಿ ಎರಡು ಮುಖ್ಯವಾದ ವಿಚಾರಗಳಿವೆ. ಒಂದು ಯಶಸ್ಸು, ಇನ್ನೊಂದು ಸಂತೃಪ್ತಿ. ಯಶಸ್ಸನ್ನು ಇತರರು ಅಳೆಯುತ್ತಾರೆ. ಆದರೆ ಸಂತೃಪ್ತಿಯನ್ನು ನಮ್ಮ ಹೃದಯವೇ ಅಳೆಯುತ್ತದೆ. ನಾವು ಯಶಸ್ಸಿನ ಹಿಂದೆ ಬಿದ್ದು ಸಂಗ್ರಹ ಮಾಡಲು ತೊಡಗಿದ್ದೇವೆ. ಬರೀ ದುಡ್ಡು ಸಂಪಾದನೆ ಮಾಡಿದರೆ ಯಶಸ್ಸು ಅಲ್ಲ. ಯಶಸ್ಸು ಜನರಿಗೆ ಗೊತ್ತಾಗಬಹುದು. ಆದರೆ ಸಂತೃಪ್ತಿ ನಮ್ಮ ಹೃದಯಕ್ಕೆ ಗೊತ್ತಾಗುತ್ತದೆ. ಅದಕ್ಕೆ ಜೀವನದಲ್ಲಿ ಸಂತೃಪ್ತಿ ಬಹಳ ಮುಖ್ಯ. ಸಂತೃಪ್ತಿ ಕಳೆದುಕೊಂಡು ಸಂಗ್ರಹ ಮಾಡಿದರೆ ಅದು ದುಃಖಕ್ಕೆ ಕಾರಣವಾಗುತ್ತದೆ. ಒಂದು ಪಕ್ಷಿ ಗೂಡು ಕಟ್ಟುತ್ತದೆ. ಎಲ್ಲಿಂದಲೋ ಕಾಳುಗಳನ್ನು ಹೆಕ್ಕಿ ತರುತ್ತದೆ. ಮರಿಗಳಿಗೆ ತಿನ್ನಿಸುತ್ತದೆ. ಪಕ್ಷಿಗೆ ಗೂಡು ಮುಖ್ಯವಲ್ಲ. ಒಂದು ದಿನ ಹಾರಿ ಹೋಗುತ್ತದೆ. ಪಕ್ಷಿಗೆ ಮಕ್ಕಳು ಮುಖ್ಯ, ಬದುಕು ಮುಖ್ಯ, ಸಂಗ್ರಹ ಮುಖ್ಯವಲ್ಲ, ಬದುಕು ಮುಖ್ಯ ಎನ್ನುವುದನ್ನು ಮನುಷ್ಯ ತಿಳಿದುಕೊಳ್ಳಬೇಕು. ಸಂಗ್ರಹ ಹೆಚ್ಚಾಗಿರುವುದರಿಂದ ಬದುಕಿನ ಸಂತೃಪ್ತಿ ಕಳೆದುಹೋಗಿದೆ. ಸಂಗ್ರಹ ಎಷ್ಟು ಬೇಕೋ ಅಷ್ಟು ಇರಬೇಕು.

ನಿಮ್ಮ ಕಾಲಿನ ಅಳತೆಗೆ ತಕ್ಕ ಚಪ್ಪಲಿ ತೆಗೆದುಕೊಳ್ಳಬೇಕು. ನಾನು ಬಹಳ ಶ್ರೀಮಂತ ಇದ್ದೀನಿ ಅಂತ 10 ನಂಬರಿನ ಚಪ್ಪಲಿ ಬೇಕಾದರೆ 20 ನಂಬರಿನ ಚಪ್ಪಲಿ ತೆಗೆದುಕೊಳ್ಳಲು ಆಗದು. ಅಳತೆ ಎಷ್ಟು ಬೇಕೋ ಅಷ್ಟು ಬನಿಯನ್ ತೆಗೆದುಕೊಳ್ಳಬೇಕು. ತಲೆ ಇದ್ದಷ್ಟೇ ಟೊಪ್ಪಿಗೆ ಖರೀದಿ ಮಾಡ್ತೀವಿ. ಅಂದ ಮೇಲೆ ಹೊಟ್ಟೆ ಇದ್ದಷ್ಟೇ ಸಂಗ್ರಹ ಯಾಕೆ ಮಾಡಬಾರದು? ಮನುಷ್ಯನೇ ಇದನ್ನು ತಿಳಿದುಕೊ. ನಮ್ಮ ಹೊಟ್ಟೆ ಇರುವುದಾದರೂ ಎಷ್ಟು. ಅರ್ಧ ಅಡಿ ಅಷ್ಟೆ. ಆದರೆ ಭಾರಿ ಹೊಟ್ಟೆ ಇರುವ ಆನೆ ಕೂಡಾ ತನ್ನ ಮರಿಗಾಗಿ ಒಂದಿಷ್ಟು ಸಂಗ್ರಹ ಮಾಡಿಲ್ಲ. ಸಾಯುವ ಆಕಳು ತನ್ನ ಮರಿಗೆ ಬಣವಿ ಇಟ್ಟು ಸತ್ತಿಲ್ಲ. ಆದರೆ ಅದು ನಿಸರ್ಗದ ಮೇಲೆ ಭರವಸೆ ಇಟ್ಟು ಹೋಗುತ್ತೆ. ನಿಸರ್ಗ ಬದುಕಿಸುತ್ತದೆ ಎನ್ನುವುದು ಗೊತ್ತು ಅದಕ್ಕೆ. ನಾವು ನಿಸರ್ಗದ ಮೇಲೆ ಭರವಸೆ ಇಟ್ಟು ಬದುಕಬೇಕು.

ಪದಬಂಧ 5993


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬಟ್ಟೆಗಳನ್ನು ಮಡಿಮಾಡುವವನು (4)
3.ಕೀಲುಗಳಿಗೆ ಬರುವ ರೋಗ (4)
4.ಮೊದಲನೆಯದು ಉಲ್ಟಾ ಆಗಿಬಿಟ್ಟಿದೆ (3)
5.ದ್ವೇಷವು ತಿರುವು ಮುರುವಾಗಿದೆ (2)
7.ದಾನ ನೀಡುತ್ತಿರುವ ರಾಕ್ಷಸ (3)
11.ದಣಿವನ್ನು ಬಲ್ಲವನು (3)
12.ಸರಸದಲ್ಲಿರುವ ದ್ರವ (2)
14.ಆನೆಯ ದಾಡೆ (3)
15.ಅವನ ಕೆಟ್ಟಗುಣ! (4)
16.ಸ್ವಭಾವವನ್ನು ಹೊಗಳುವುದು (4)

ಮೇಲಿಂದ ಕೆಳಕ್ಕೆ

1.ಮಲ್ಲಿಗೆ ಕಿತ್ತು ಮುಡಿದ ಸುವಾಸಿತ ಹೂವು (3)
2.ತಿರುಗಿದಾಗ ಬಂದಿರುವ ಸುವಾಸನೆ (4)
3.ಪ್ರಧಾನರಿಗೆ ನೀಡಿದ ಕಾಣಿಕೆ! (4)
6.ಮೋಸಗಾರ ಇಲ್ಲಿದ್ದಾನೆ (5)
8.ಬೇರೆ ಬೇರೆ ಜಾತಿಗಳ ಬೆರೆಯುವಿಕೆ (5)
9.ನಡುವೆ ಕರವಸ್ತ್ರ ಘಟನೆ (4)
10.ತುಸುವೇ ಬೀರಿದ ಮಂದಹಾಸ (4)
13.ದನವಿರುವ ಮನೆ (3)



5992ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಾದಕ 3.ಬಾಲಕ 5.ರವಿಕಿರಣ 6.ದಗಾ 8.ತವರ 10.ಹಾವನೆ 11.ಅಲೆನ 13.ಹಯವದನ 15.ಅವರ 16.ರವಾನೆ

ಮೇಲಿಂದ ಕೆಳಕ್ಕೆ: 1.ವಾರಣಸಿ 2.ಕರ 3.ಬಾಣ 5.ರಶಾಂತ 7.ದರಾವ 9.ವಹೀರ 10.ಹಾಲಾಹಲ 12.ನರೆವನೆ 13.ಹಣ 14.ನರ

ಸುಡೊಕು 6378

					7		1	4
8		7	6		4			
	2			8			5	
	4			1		9		
		1	8		5		7	
7	5			9		3	4	
	8			7		4		3
	3		4		8			
9		4			2		6	8

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6377 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಬೆಂಗಳೂರು, ಕಲಬುರಗಿ, ಮೈಸೂರಿನಲ್ಲಿ ಜಾಸ್ತಿ • ರಾಜ್ಯ ಮಕ್ಕಳ ನಿರ್ದೇಶನಾಲಯದ ಮಾಹಿತಿಯಿಂದ ಬಹಿರಂಗ

ಹೆಚ್ಚುತ್ತಿರುವ 'ಬಾಲಭಿಕ್ಷಾಟನೆ' ಪಿಡುಗು

• ಎಂ. ಮಹೇಶ್

ಮೈಸೂರು: ರಾಜ್ಯದಲ್ಲಿ 'ಬಾಲ ಭಿಕ್ಷಾಟನೆ'ಯಲ್ಲಿ ತೊಡಗುವ ಮಕ್ಕಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು, ಬರೆಯುವ ಕೈಗಳಿಗೆ 'ಬಿಡಿ' ಬೀಳುತ್ತಿದೆ.

ಇಲ್ಲಿನ ಒಡನಾಡಿ ಸೇವಾ ಸಂಸ್ಥೆಯು ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಸಲ್ಲಿಸಿದ್ದ ಅರ್ಜಿಗೆ ರಾಜ್ಯ ಮಕ್ಕಳ ನಿರ್ದೇಶನಾಲಯವು ಮಾಹಿತಿ ನೀಡಿದ್ದು, 2021ರಿಂದ 2023ರವರೆಗೆ ರಾಜ್ಯದಲ್ಲಿ 1,347 ಅಂಥ ಮಕ್ಕಳಿದ್ದಾರೆ.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕಚೇರಿಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ನಿರ್ದೇಶನಾಲಯ ನೀಡಿದ್ದು, ಅದರಲ್ಲಿ 632 ಬಾಲಕಿಯರಿದ್ದಾರೆ. ರಕ್ಷಿಸಲ್ಪಟ್ಟವರಲ್ಲಿ ಬಾಲಕ-ಬಾಲಕಿಯರು ಮತ್ತೆ ಭಿಕ್ಷಾಟನೆಗೆ ಇಳಿಯುತ್ತಿದ್ದಾರೆ.

ಕೂಸೆತ್ತಿಕೊಂಡು: ಮೈಸೂರು ಸೇರಿದಂತೆ ಮಹಾನಗರಗಳ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಮಕ್ಕಳು ಭಿಕ್ಷೆ ಬೇಡುವುದು ಕಂಡು ಬರುತ್ತಿದೆ. ಕಂಕುಳಲ್ಲಿ ಕೂಸು ಕೂರಿಸಿಕೊಂಡು ಹಣ ಕೇಳುತ್ತಾರೆ. ಕೆಲವರು, ಸಣ್ಣ ಬುಟ್ಟಿಯಲ್ಲಿ ದೇವರ ಫೋಟೊ ಅಥವಾ ವಿಗ್ರಹವನ್ನಿಟ್ಟುಕೊಂಡು ಭಿಕ್ಷೆಗೆ ನಿಲ್ಲುವುದು ಕಾಣಸಿಗುತ್ತಿದೆ. ಕೆಲವರ ಕೈ-ಕಾಲಿನಲ್ಲಿ ಗಾಯಗಳಿರುತ್ತವೆ.

'ಬಾಲಭಿಕ್ಷಾಟನೆ ಮುಕ್ತ ರಾಜ್ಯ ನಿರ್ಮಾಣ ನಮ್ಮ ಗುರಿ' ಎಂದು ಸರ್ಕಾರ ಅಥವಾ ಸಂಬಂಧಿಸಿದ ಇಲಾಖೆ ಹೇಳುತ್ತದೆ. ಆದರೆ, ಅವರಿಗೆ ಸಮರ್ಪಕ ಪುನರ್ವಸತಿ ಕಲ್ಪಿಸದೆ, ಭಿಕ್ಷಾಟನೆಗೆ ಇಳಿಯುತ್ತಲೇ ಇರುತ್ತಾರೆ. ಅವರನ್ನು ಬೀದಿಗೆ ತಳ್ಳುವ ಜಾಲವೂ ಇದೆ' ಎಂಬ ಆರೋಪವೂ ಇದೆ.

ಅಂಕಿ-ಅಂಶಗಳಿಂದಲೇ ದೃಢ: 'ಬೆಂಗಳೂರು, ಮೈಸೂರಿನಂತಹ ನಗರಗಳಲ್ಲಿ ಬಾಲಭಿಕ್ಷುಕರು ಹೆಚ್ಚಿದ್ದಾರೆ. ರಕ್ಷಿಸಿದ ಅಂಥ ಮಕ್ಕಳನ್ನು ಪೋಷಕರಿಗೆ ಒಪ್ಪಿಸಲಾಗುತ್ತದೆ. ಆ ಅಸಹಾಯಕರು ಅನಿವಾರ್ಯವಾಗಿ ಮತ್ತೆ ಭಿಕ್ಷಾಟನೆಗೆ ದೂಡುತ್ತಾರೆ. ಬಾಲಕಿಯರು ಲೈಂಗಿಕವಾಗಿ ದುರ್ಬಳಕೆಯಾಗುವ ಸಾಧ್ಯತೆಯೂ ಇರುತ್ತದೆ. ಹೀಗಾಗಿ, ಅಂಥವರ ಪುನರ್ವಸತಿಗೆ ಸಮರ್ಪಕ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸುತ್ತಾರೆ ಒಡನಾಡಿ ಸೇವಾ ಸಂಸ್ಥೆಯ ನಿರ್ದೇಶಕ ಎಂ.ಎಲ್.ಪರಶುರಾಮ್.

'ಸಾಮಾನ್ಯ ಪುನರ್ವಸತಿ ಕಾರ್ಯಕ್ರಮಕ್ಕಿಂತ ಸಂಗೀತ, ನಾಟಕ, ವೃತ್ತಿಪರ ತರಬೇತಿ, ಅನೌಪಚಾರಿಕ ಶಿಕ್ಷಣದಂತಹ ಚಟುವಟಿಕೆಗಳು ನಡೆಯಬೇಕಾಗಿದೆ. ಕೆಲವು ವರ್ಷಗಳು ಭಿಕ್ಷಾಟನೆಯಲ್ಲೇ ಇದ್ದವರನ್ನು ರಕ್ಷಿಸಿದರೂ, ಅವರಿಗೆ ಅದರಲ್ಲೇ 'ಸೆಳೆತ'ವಿರುತ್ತದೆ. ಅವರನ್ನು ಉತ್ತಮ ಮಾರ್ಗದಲ್ಲಿ ನಡೆಸುವಂತಹ ಪುನರ್ವಸತಿ ಅಗತ್ಯವಿದೆ' ಎಂದು ಸಲಹೆ ಅವರದು.

ಪ್ರಯೋಜನ ಆಗದು: 'ಮಕ್ಕಳನ್ನು ರಕ್ಷಿಸಿ ಮತ್ತೆ ಭಿಕ್ಷಾಟನೆ ಮಾಡುವವರಿಗೇ ಒಪ್ಪಿಸಿದರೆ ಪ್ರಯೋಜನವಿಲ್ಲ. ಭಿಕ್ಷೆ ಕೇಳುವ ಅವರು ಮಾದಕ ವಸ್ತುಗಳ ದಾಸರಾಗುತ್ತಾರೆ. ಸರ್ಕಾರ ಇಂಥವರಿಗೆಂದೇ ಪ್ರತ್ಯೇಕವಾದ ಪುನರ್ವಸತಿ ಕೇಂದ್ರಗಳನ್ನು ತೆರೆಯಬೇಕು. ಪೋಷಕರ ಮನವೊಲಿಸಬೇಕು' ಎಂದರು.

'ಸುಪ್ರೀಂ ಕೋರ್ಟ್ ಆದೇಶದಂತೆ ಪುನರ್ವಸತಿ ಕೇಂದ್ರಗಳನ್ನು ನಡೆಸಲು ನಗರ ಸ್ಥಳೀಯ ಸಂಸ್ಥೆಗಳು ಕ್ರಮ ವಹಿಸುತ್ತಿಲ್ಲ. ಮಕ್ಕಳನ್ನು ರಕ್ಷಿಸಿದ ನಂತರ ಏನು ಮಾಡಬೇಕೆಂಬುದು ಬಹಳ ಮುಖ್ಯ. ಸರ್ಕಾರ ಆ ಮಾಹಿತಿಯನ್ನು ಕೊಡುತ್ತಿಲ್ಲ. ಜವಾಬ್ದಾರಿ ಇಲ್ಲದ ಪೋಷಕತ್ವದಿಂದ ಅಥವಾ ಅಸಹಾಯಕತೆಯಿಂದ ಮಕ್ಕಳ ಭವಿಷ್ಯ ಕಮರುತ್ತಿರುವುದನ್ನು ಗಮನಿಸುತ್ತಿದ್ದೇವೆ' ಎನ್ನುತ್ತಾರೆ ಅವರು.



ಬಾಲಭಿಕ್ಷಾಟನೆಯಲ್ಲಿ ತೊಡಗಿದವರ ರಕ್ಷಣೆಗೆ ತುರ್ತು ಕ್ರಮ ಅಗತ್ಯ. ಅವರಿಗೆಂದೇ ಇರುವ ನಿಧಿ ಬಳಸಬೇಕು. ಇದಕ್ಕಾಗಿ ಸರ್ಕಾರಕ್ಕೆ ಪತ್ರ ಬರೆಯಲಾಗುವುದು

ಎಂ.ಎಲ್. ಪರಶುರಾಮ್ ನಿರ್ದೇಶಕ, ಒಡನಾಡಿ ಸೇವಾ ಸಂಸ್ಥೆ, ಮೈಸೂರು



ಬಾಲಕಿಯರು ಭಿಕ್ಷಾಟನೆಯಲ್ಲಿ ತೊಡಗಿರುವುದು

ವರ್ಷ	ಬಾಲಭಿಕ್ಷುಕರು
2021-22	288
2022-23	453
2023-24	606
ಒಟ್ಟು	1,347

ಬಾಲಭಿಕ್ಷಾಟನೆ ಜಿಲ್ಲಾವಾರು ಮಾಹಿತಿ

ಜಿಲ್ಲೆ	ಸಂಖ್ಯೆ	ಜಿಲ್ಲೆ	ಸಂಖ್ಯೆ
ಬೆಂಗಳೂರು ನಗರ (ಕೇಂದ್ರ), ದಕ್ಷಿಣ, ಪಶ್ಚಿಮ, ಪೂರ್ವ, ಉತ್ತರ, ಗ್ರಾಮಾಂತರ	212	ಬಳ್ಳಾರಿ	59
		ಹಾಸನ	55
ಕಲಬುರಗಿ	119	ಹಾವೇರಿ	53
ಮೈಸೂರು	145	ಬೆಳಗಾವಿ	49
ಕೋಲಾರ	73	ದಾವಣಗೆರೆ	47
ಚಿಕ್ಕಮಗಳೂರು	62	ಧಾರವಾಡ	45

(ಮಾಹಿತಿ: ಮಕ್ಕಳ ರಕ್ಷಣಾ ನಿರ್ದೇಶನಾಲಯ)


ಸುದ್ದಿ 2 ನಿಮಿಷ

'ಏರ್ ಕ್ವಾಲಿಟಿ ಕಮ್ಯುನಿಟಿ' ರಾಯಭಾರಿಯಾಗಿ ಆಶಿಕ್ ಆಯ್ಕೆ

ಬೆಂಗಳೂರು: ನಗರದ ಪಬ್ಲಿಕ್ ಅಫೇರ್ಸ್ ಸೆಂಟರ್‌ನ ಆಶಿಕ್ ಎಸ್.ವಿ ಅವರನ್ನು ಅಮೆರಿಕದ 'ಓಪನ್ ಎಕ್ಯು' ಸಂಸ್ಥೆ 'ಓಪನ್ ಏರ್ ಕ್ವಾಲಿಟಿ ಕಮ್ಯುನಿಟಿ ರಾಯಭಾರಿ'ಯಾಗಿ ಆಯ್ಕೆ ಮಾಡಿದೆ.

ಕೆಳ ಮತ್ತು ಮಧ್ಯಮ ಆದಾಯದ ದೇಶಗಳಲ್ಲಿ ವಾಯು ಗುಣಮಟ್ಟ ಸುಧಾರಣೆ ಮಾಡುವ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಯುವಕರನ್ನು ಆಯ್ಕೆ ಮಾಡಿ ಅವರಿಗೆ ನಾಯಕತ್ವ ತರಬೇತಿ ನೀಡಲಾಗುತ್ತದೆ. ವಾಯು ಗುಣಮಟ್ಟದ ದತ್ತಾಂಶವನ್ನು ಬಳಸಿಕೊಂಡು ಶುದ್ಧವಾದ ಮತ್ತು ವಾಯು ಅಸಮತೋಲನದ ವಿರುದ್ಧ ಹೋರಾಟ ನಡೆಸಲು ಮತ್ತು ಸುಧಾರಣೆಗಳ ಸಂಶೋಧನೆಗಳಿಗಾಗಿ 'ಓಪನ್ ಎಕ್ಯು' ಒಂದು ವರ್ಷ ತರಬೇತಿ ನೀಡಲಿದೆ. ಅದಕ್ಕೆ ಅಗತ್ಯ ಇರುವ ಉಪಕರಣಗಳನ್ನು ನೀಡಲಿದೆ.

ಭಾರತದಲ್ಲದೆ, ಮೊರಾಕ್ಕೊ, ಉಜ್ಬೆಕಿಸ್ತಾನ, ಕೊಲಂಬಿಯಾ, ಟ್ಯುನೀಷಿಯಾ, ರವಾಂಡ, ಪೆರು, ಜಾಂಬಿಯಾ ಮತ್ತು ಉಗಾಂಡ ದೇಶಗಳಿಂದ ರಾಯಭಾರಿಗಳನ್ನು ಆಯ್ಕೆ ಮಾಡಲಾಗಿದೆ.



ವಿಶ್ವದಲ್ಲಿ ಶುದ್ಧ ಗಾಳಿ ಆಂದೋಲನಕ್ಕಾಗಿ ನಾಸಾ ಮತ್ತು ಇತರ ಪ್ರತಿಷ್ಠಿತ ಸಂಸ್ಥೆಗಳು 'ಓಪನ್ ಎಕ್ಯು'ಗೆ ಧನ ಸಹಾಯ ನೀಡುತ್ತಿವೆ. ಆಶಿಕ್ ಎಸ್.ವಿ ಈ ಹಿಂದೆ 'ಪ್ರಜಾವಾಣಿ ಸಾಧಕರ ಪ್ರಶಸ್ತಿ'ಗೆ ಭಾಜನರಾಗಿದ್ದರು.

ರಸ್ತೆ ನಿಧಿ: ₹750 ಕೋಟಿ ಬಿಡುಗಡೆಗೆ ಸತೀಶ ಜಾರಕಿಹೊಳಿ ಮನವಿ

ನವದೆಹಲಿ: ಕೇಂದ್ರ ರಸ್ತೆ ಮತ್ತು ಮೂಲಸೌಕರ್ಯ ನಿಧಿಯಡಿ (ಕ್ರಿಫ್) ₹750 ಕೋಟಿ ಬಾಕಿಯನ್ನು ಬಿಡುಗಡೆ ಮಾಡುವಂತೆ ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮನವಿ ಮಾಡಿದರು.

ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಮಂಗಳವಾರ ಭೇಟಿ ಮಾಡಿದ ಅವರು ವಿವಿಧ ಯೋಜನೆಗಳಿಗೆ ಮಂಜೂರಾತಿ ನೀಡುವಂತೆ ವಿನಂತಿಸಿದರು. ₹300 ಕೋಟಿ ವರೆಗಿನ ಕಾಮಗಾರಿಗಳಿಗೆ ರಾಜ್ಯ ಲೋಕೋಪಯೋಗಿ ಇಲಾಖೆಯೇ ಟೆಂಡರ್ ಆಹ್ವಾನಿಸಲು ಅನುಮತಿ ನೀಡಬೇಕು ಎಂದು ಒತ್ತಾಯಿಸಿದರು.

ಕಾರವಾರ ಬಳಿ ಕಾಳಿ ನದಿಗೆ 1984ರಲ್ಲಿ ನಿರ್ಮಿಸಿದ್ದ ಸೇತುವೆ ಕಳೆದ ವರ್ಷ ಆಗಸ್ಟ್‌ನಲ್ಲಿ ಕುಸಿದುಬಿದ್ದಿದೆ. ಇದರಿಂದಾಗಿ, ಪರ್ಯಾಯ ಸೇತುವೆ ಮೂಲಕ ವಾಹನಗಳು ಸಾಗಬೇಕಿದೆ. ಇಷ್ಟೊಂದು ವಾಹನಗಳನ್ನು ತಾಳಿಕೊಳ್ಳುವ ಸಾಮರ್ಥ್ಯವನ್ನು ಈ ಸೇತುವೆ ಹೊಂದಿಲ್ಲ. ಹೀಗಾಗಿ, ಹೊಸ ಸೇತುವೆ ನಿರ್ಮಾಣಕ್ಕೆ ಒಪ್ಪಿಗೆ ನೀಡಬೇಕು ಎಂದು ಅವರು ಆಗ್ರಹಿಸಿದರು. ಕೋಲಾರಕ್ಕೆ ಬೈಪಾಸ್ ಮಂಜೂರು ಮಾಡಬೇಕು. ಬೆಳಗಾವಿಯಲ್ಲಿ ಫ್ಲೈಓವರ್ ನಿರ್ಮಾಣ ಸಂಬಂಧ ವಿಸ್ತೃತ ಯೋಜನಾ ವರದಿ ಸಲ್ಲಿಸಿ ವರ್ಷಗಳು ಕಳೆದಿವೆ. ಅದಕ್ಕೆ ಮಂಜೂರಾತಿ ನೀಡಬೇಕು. ಉಡುಪಿ ಜಿಲ್ಲೆಯ ಪೆರ್ಡೂರಿನಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ವಿನ್ಯಾಸ ಬದಲಾವಣೆ ಮಾಡಬೇಕು ಎಂದು ಅವರು ಮನವಿ ಮಾಡಿದರು.

ಸಂಕ್ಷಿಪ್ತ ಸುದ್ದಿ

'ಮೇಕೆದಾಟು ನ್ಯಾಯ ಸಿಗುವ ವಿಶ್ವಾಸ'

ಬೆಂಗಳೂರು: 'ಮೇಕೆದಾಟು ಅಣೆಕಟ್ಟು ನಿರ್ಮಾಣ ಯೋಜನೆಗೆ ಅನುಮತಿ ಕೋರಿ ನಾವು ನ್ಯಾಯಾಲಯದ ಮೊರೆ ಹೋಗಿದ್ದೇವೆ. ನಮಗೆ ನ್ಯಾಯ ಸಿಗುವ ವಿಶ್ವಾಸವಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಮೇಕೆದಾಟು ಯೋಜನೆಗೆ ಅವಕಾಶ ನೀಡುವುದಿಲ್ಲ' ಎಂಬ ತಮಿಳುನಾಡು ಸಚಿವ ದೊರೈ ಮುರುಗನ್ ಹೇಳಿಕೆ ಕುರಿತು ಮಾಧ್ಯಮಗಳಿಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ನಮ್ಮ ನೀರು ನಮ್ಮ ಹಕ್ಕು. ಅವರು ತಮ್ಮದೇ ಆದ ರಾಜಕೀಯ ನಿಲುವು ತೆಗೆದುಕೊಂಡಿದ್ದಾರೆ' ಎಂದರು.

'ಈ ಹಿಂದೆ ಅನೇಕ ಬಾರಿ ಮಾತುಕತೆ ಆಗಿತ್ತು. ನ್ಯಾಯಾಲಯದ ತೀರ್ಪಿಗೆ ಯಾರೂ ಅಡ್ಡಿಪಡಿಸಲು ಸಾಧ್ಯವಿಲ್ಲ. ಅವರು ತಮ್ಮ ವಾದ ಮಾಡಲಿ, ನಾವು ನಮ್ಮ ವಾದ ಮಂಡಿಸುತ್ತೇವೆ' ಎಂದು ಹೇಳಿದರು.

ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಲ್ಲಿಕೆ ಮಾಡಿಲ್ಲ ಎಂಬ ಹೇಳಿಕೆ ಬಗ್ಗೆ ಕೇಳಿದಾಗ, 'ಡಿಪಿಆರ್ ಸಲ್ಲಿಕೆ ಮಾಡಲಾಗಿದೆ. ಈ ಯೋಜನೆ ಜಾರಿಗೆ ನಾವು ಬದ್ಧವಾಗಿದ್ದೇವೆ. ಕೇಂದ್ರ ಸರ್ಕಾರಕ್ಕೂ ಪ್ರಸ್ತಾವ ಸಲ್ಲಿಸಲಾಗಿದೆ' ಎಂದರು.

'ಕಾಂಗ್ರೆಸ್‌ನವರ ಸ್ನೇಹಿತರಾಗಿರುವ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರನ್ನು ಒಪ್ಪಿಸಲಿ' ಎಂಬ ಬಿಜೆಪಿ ಆಗ್ರಹದ ಬಗ್ಗೆ ಕೇಳಿದಾಗ, 'ಜೆಡಿಎಸ್ ನಾಯಕರಾದ ಎಚ್‌.ಡಿ. ದೇವೇಗೌಡ ಮತ್ತು ಎಚ್‌.ಡಿ. ಕುಮಾರಸ್ವಾಮಿ ಅವರು ಕೈಹಿಡಿದು ಒಪ್ಪಿಗೆ ಕೊಡಿಸುವುದಾಗಿ ಹೇಳಿದ್ದರು. ಅವರು ಏಕೆ ಕೊಡಿಸುತ್ತಿಲ್ಲ? ರಾಜಕೀಯದಲ್ಲಿ ಅನೇಕ ಒತ್ತಡಗಳಿರುತ್ತವೆ' ಎಂದು ಹೇಳಿದರು.

ಕೃಷ್ಣಾ ನೀರು ಬಳಕೆ ಕುರಿತು ಚರ್ಚೆಗೆ ಆಂಧ್ರಪ್ರದೇಶ ಮುಖ್ಯಮಂತ್ರಿಯವರ ಸಮಯ ಕೋರಲಾಗಿದೆ. ಅವರು ದಿನಾಂಕ ನಿಗದಿ ಮಾಡಿದ ಬಳಿಕ ಹೋಗಿ ಭೇಟಿ ಮಾಡಲಾಗುವುದು ಎಂದರು.

ಪ್ರಚೋದನಕಾರಿ ಆಡಿಯೊ: ಪ್ರಕರಣ ದಾಖಲು

ಉಡುಪಿ: ಮಲ್ಪೆಯಲ್ಲಿ ಮಹಿಳೆಯನ್ನು ಮರಕ್ಕೆ ಕಟ್ಟಿ ಹಾಕಿ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಾಟ್ಸ್ ಆ್ಯಪ್‌ನಲ್ಲಿ ಪ್ರಚೋದನಕಾರಿ ಆಡಿಯೊ ಕ್ಲಿಪ್ ಹಂಚಿಕೊಂಡಿರುವುದಕ್ಕೆ ಮಲ್ಪೆ ಠಾಣೆಯ ಪೊಲೀಸರು ಅಪರಿಚಿತ ವ್ಯಕ್ತಿಯ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಪರಿಚಿತ ವ್ಯಕ್ತಿಯು ವಾಟ್ಸ್ ಆ್ಯಪ್‌ನಲ್ಲಿ ತುಳು ಭಾಷೆಯಲ್ಲಿ ಆಡಿಯೊ ಕ್ಲಿಪ್ ಹರಿಯಬಿಟ್ಟಿದ್ದು ಅದರಲ್ಲಿ 'ಸೋಮವಾರ ಹೋಯ್ತು ಮಂಗಳವಾರ ಬಂತು. ಆದರೂ ಇದುವರೆಗೂ ಮೀನುಗಾರ ಹೆಂಗಸರ ಬಿಡುಗಡೆ ಅಗಲಿಲ್ಲ. ಅದಕ್ಕೆ ನಮ್ಮ ಮೀನುಗಾರ ಸಂಘದವರು ಒಟ್ಟಾಗಿ ಗಂಗೊಳ್ಳಿಯಲ್ಲಿ ಮಾಡಿದಂತೆ ಎಲ್ಲರೂ ಒಟ್ಟಾಗಿ ರಸ್ತೆಗೆ ಇಳಿದು ಪ್ರತಿಭಟನೆ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ಎಸ್‌.ಪಿ. ಹಾಗೂ ಅವರ ಮೇಲೆ ಇದ್ದವರಿಗೂ ನಮ್ಮ ಶಕ್ತಿ ಎಷ್ಟಿದೆ ಎಂದು ಗೊತ್ತಾಗುತ್ತೆ' ಎಂದು ಹೇಳಿರುವುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಸಂವಿಧಾನ ಬದಲಾವಣೆ ಬಿಜೆಪಿ ಮಾತು : ಸಚಿವ ಬೋಸರಾಜು

ಮಡಿಕೇರಿ: 'ಸಂವಿಧಾನ ಬದಲಾವಣೆ ಎಂಬ ಮಾತು ಬಿಜೆಪಿಯವರ ಬಾಯಲ್ಲಿ ಬರುವಂತಹದ್ದು. ಡಿಸಿಎಂ ಡಿ.ಕೆ. ಶಿವಕುಮಾರ್ ಅಂಥವರು ಸಂವಿಧಾನ ಬದಲಾವಣೆ ಬಗ್ಗೆ ಮಾತನಾಡಲು ಸಾಧ್ಯವೇ ಇಲ್ಲ' ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಎನ್‌.ಎಸ್‌. ಬೋಸರಾಜು ಪ್ರತಿಪಾದಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ವಿರೋಧ ಪಕ್ಷದ ನಾಯಕರು ಜವಾಬ್ದಾರಿ ಅರಿತು ಪ್ರಬುದ್ಧವಾಗಿ ಮಾತನಾಡಬೇಕು. ಡಿ.ಕೆ. ಶಿವಕುಮಾರ್ ಅವರ ಹೇಳಿಕೆಯನ್ನು ತಪ್ಪಾಗಿ ಗ್ರಹಿಸಿ ಮಾತನಾಡಬಾರದು' ಎಂದರು

'ಯಾರೋ ಒಬ್ಬರನ್ನಷ್ಟೇ ಗುರಿಯಾಗಿಸಿಕೊಂಡು ಸಚಿವ ರಾಜಣ್ಣ ಮಧುಬಲೆ ಕುರಿತು ಹೇಳಿಲ್ಲ. ಈಗ ಅವರೇ ಅದಕ್ಕೆ ಆಧಾರವಿಲ್ಲವೆನ್ನುತ್ತಿದ್ದಾರೆ. ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರೂ, ಯಾರೂ ದೂರು ಕೊಡುತ್ತಿಲ್ಲ. ಈ ಪ್ರಕರಣಕ್ಕೂ ಸಿಎಂಗೂ ಸಂಬಂಧವಿಲ್ಲ ಎಂದರು.

'ಹೊಸ ವಿಶ್ವವಿದ್ಯಾಲಯಗಳ ವಿಲೀನ ವಿಚಾರ ಇನ್ನೂ ಸಂಪುಟ ಸಭೆಗೆ ಬಂದಿಲ್ಲ. ಬಂದ ನಂತರವಷ್ಟೇ ಸ್ಪಷ್ಟ ನಿರ್ಧಾರ ಸಾಧ್ಯ' ಎಂದರು.

₹15,568 ಕೋಟಿ ಅವ್ಯವಹಾರ'

ಸ್ಮಾರ್ಟ್ ಮೀಟರ್: ಬಿಜೆಪಿ ಶಾಸಕ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಆರೋಪ

ಪ್ರಜಾವಾಣಿ ವಾರ್ತೆ



ಡಾ.ಸಿ.ಎನ್‌. ಅಶ್ವತ್ಥನಾರಾಯಣ

ಬೆಂಗಳೂರು: ಬೆಸ್ಕಾಂ ಮತ್ತು ಇತರ ಎಸ್ಕಾಂಗಳ ಸ್ಮಾರ್ಟ್ ಮೀಟರ್ ಖರೀದಿ ಟೆಂಡರ್‌ನಲ್ಲಿ ಸುಮಾರು ₹15,568 ಕೋಟಿಯಷ್ಟು ಅವ್ಯವಹಾರ ನಡೆದಿದೆ ಎಂದು ಶಾಸಕ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಅವರು ಆರೋಪಿಸಿದರು.

'ವಿಧಾನಸಭೆ ಕಲಾಪದ ವೇಳೆ ಈ ವಿಷಯ ಪ್ರಸ್ತಾಪಿಸಿದ್ದೆವು. ಮಾರನೇ ದಿನ ಉತ್ತರ ನೀಡುವುದಾಗಿ ಹೇಳಿದ್ದ ಇಂಧನ ಸಚಿವರು ಆರೋಪಗಳಿಗೆ ಉತ್ತರ ನೀಡದೇ, ಅಧಿಕಾರಿಗಳ ಮೂಲಕ ತಪ್ಪು ಮಾಹಿತಿಗಳಿಂದ ಕೂಡಿದ ಸಮಜಾಯಿಷಿ ಕೊಟ್ಟಿದ್ದಾರೆ' ಎಂದು ಅವರು ಸುದ್ದಿ ಗೋಷ್ಠಿಯಲ್ಲಿ ಟೀಕಿಸಿದರು.

'ಕೆಟಿಪಿಪಿ ಕಾಯ್ದೆಯ ಅನ್ವಯ ಬಿಡ್ ಸಾಮರ್ಥ್ಯವನ್ನು ಟೆಂಡರ್‌ನಲ್ಲಿ ಉಲ್ಲೇಖಿಸಲೇಬೇಕು. ಬಿಡ್ಡಿಂಗ್ ಸಾಮರ್ಥ್ಯವನ್ನು ಉಲ್ಲೇಖಿಸಿಲ್ಲ. ಈ ಟೆಂಡರ್‌ನಲ್ಲಿ ಬಿಡ್ಡಿಂಗ್ ಸಾಮರ್ಥ್ಯ ₹6,800 ಕೋಟಿ ಇರಬೇಕು. ಕೆಟಿಪಿಪಿ ಕಾಯ್ದೆ ಪ್ರಕಾರ ಬಿಡ್‌ನಲ್ಲಿ ಭಾಗವಹಿಸುವವರ ವಹಿವಾಟು ₹1,920 ಕೋಟಿ ಇರಬೇಕು. ಆದರೆ, ಟೆಂಡರ್‌ನಲ್ಲಿ ಬಿಡ್‌ದಾರರು ಬರೀ ₹107 ಕೋಟಿ ಎಂದು ನಮೂದಿಸಿದ್ದಾರೆ. ಸಾಮರ್ಥ್ಯ ನಮೂದಿಸದಿರುವುದೇ ಮೊದಲ ಹಗರಣ' ಎಂದು ಹೇಳಿದರು.

'ಕೇಂದ್ರ ಸರ್ಕಾರದ ನಿಯಮಗಳ ಪ್ರಕಾರ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಕನಿಷ್ಠ 1 ಲಕ್ಷ ಸ್ಮಾರ್ಟ್ ಮೀಟರ್ ಅಳವಡಿಸಿದ ಅನುಭವ ಇರಬೇಕು. ಆದರೆ, ಸ್ಮಾರ್ಟ್ ಮೀಟರ್ ಉತ್ಪಾದನೆಯನ್ನೇ ಮಾಡದ, 10 ಲಕ್ಷ ಸಾಮಾನ್ಯ ಮೀಟರ್ ಅಳವಡಿಕೆ ಮಾಡಿರುವುದನ್ನೇ ಆಯ್ಕೆಗೆ ಮಾನದಂಡ ಮಾಡಿದ್ದಾರೆ. ಮೊದಲು ಟ್ರಾನ್ಸ್‌ಫಾರ್ಮರ್, ಫೀಡರ್‌ಗಳಿಗೆ ಇದನ್ನು ಅಳವಡಿಸಿ ಸಾಗಾಟದಲ್ಲಿ ಆಗುವ ನಷ್ಟವನ್ನು ತಿಳಿಯಬೇಕಿತ್ತು. ಬಳಿಕ ರಾಜ್ಯದ ಗ್ರಾಹಕರಿಗೆ ಇದನ್ನು ಅಳವಡಿಸಬೇಕಿತ್ತು. ಇದನ್ನೂ ಮಾಡಿಲ್ಲ. ಕೇಂದ್ರದ ಆರ್‌ಡಿಎಸ್‌ಎಸ್ ಅಡಿ ಸಿಗುವ ₹3 ಸಾವಿರ ಕೋಟಿಯನ್ನು ಬಳಕೆ ಮಾಡಿಲ್ಲ' ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಎಸ್‌.ಆರ್ ವಿಶ್ವನಾಥ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್‌.ಹರೀಶ್ ಮತ್ತು ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿಗೌಡ ಅವರು ಇದ್ದರು.

ಸ್ಮಾರ್ಟ್ ಮೀಟರ್ ಭಾರಿ ಅಕ್ರಮ: ನಿಖಿಲ್

'ವಿದ್ಯುತ್ ಸ್ಮಾರ್ಟ್ ಮೀಟರ್ ಖರೀದಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾರಿ ಅಕ್ರಮ ನಡೆದಿದೆ. ಇದು ₹ 15,000 ಕೋಟಿ ಮೊತ್ತದ ಭ್ರಷ್ಟಾಚಾರಕ್ಕೆ ಕಾರಣವಾಗಲಿದೆ' ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ ಗುತ್ತಿಗೆ ನೀಡಲಾಗಿದೆ. ರಾಜಶ್ರೀ ಎಲೆಕ್ಟ್ರಿಕ್ ಕಂಪನಿಗೆ ಅರ್ಹತೆಯೇ ಇಲ್ಲ. ಉತ್ತರ ಪ್ರದೇಶದಲ್ಲಿ ಈ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ. ಉಪಗುತ್ತಿಗೆ ಹೆಸರಿನಲ್ಲಿ ಅದೇ ಕಂಪನಿಗೆ ಅಕ್ರಮವಾಗಿ ಗುತ್ತಿಗೆ ನೀಡಲಾಗಿದೆ' ಎಂದರು.

ಈಗ ನೀಡಿರುವ ಗುತ್ತಿಗೆ ಆದೇಶವನ್ನು ರದ್ದುಪಡಿಸಿ, ಪಾರದರ್ಶಕ ರೀತಿಯಲ್ಲಿ ಮರು ಟೆಂಡರ್ ಪ್ರಕ್ರಿಯೆ ನಡೆಸಬೇಕು ಎಂದು ಆಗ್ರಹಿಸಿದರು.



ಜನಪದ ಉತ್ಸವ...

ಕಲಬುರಗಿಯ ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ) ಕಾಲೇಜಿನಲ್ಲಿ ಮಂಗಳವಾರ ನಡೆದ ಜನಪದ ಉತ್ಸವದಲ್ಲಿ ವಿದ್ಯಾರ್ಥಿನಿಯರು ಸಾಂಪ್ರದಾಯಿಕ ಬಂಜಾರ ಉಡುಪಿನಲ್ಲಿ ಗಮನ ಸೆಳೆದರು ಚಿತ್ರ: ತಾಜುದ್ದೀನ್ ಆಜಾದ್

ಶಳಕೆ ಬಂಧನ: ಪೊಲೀಸರ ವಿರುದ್ಧ ಅವಹೇಳನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಮುಖಂಡ ಶುಭಂ ಶಳಕೆ ಬಂಧನ ಖಂಡಿಸಿ, ಎಂಇಎಸ್‌ನ ಯುವ ಸಮಿತಿ ಸೀಮಾಭಾಗ್ ಪೇಜ್‌ನಲ್ಲಿ ಪೊಲೀಸರ ಅವಹೇಳನ ಮಾಡಿ, ಸಂದೇಶವನ್ನು ಪೋಸ್ಟ್ ಮಾಡಲಾಗಿದೆ. ಶುಭಂ ಅವರನ್ನು ಪೊಲೀಸರು ಹಿಡಿದಿರುವ ಚಿತ್ರ ಹಾಕಿ, ಮರಾಠಿಯಲ್ಲಿ ಪೊಲೀಸರಿಗೆ 'ನಾಯಿಗಳು' ಎಂದು ಬರೆಯಲಾಗಿದೆ.

ಭಾಷಾ ಸಾಮರಸ್ಯ ಕದಡುವ ಹೇಳಿಕೆ ಕೊಟ್ಟ ಮತ್ತು ಕನ್ನಡ ವಿರೋಧಿಗಳನ್ನು ಸನ್ಮಾನಿಸಿದ ಆರೋಪದಡಿ ಸೋಮವಾರ ರಾತ್ರಿ ಶುಭಂ ಬಂಧನವಾಗಿದೆ. 'ಸಮಿತಿಯ ಸಿಂಹ ಒಬ್ಬನೇ ಫೈಟ್ ಮಾಡುತ್ತಿದ್ದಾನೆ. ಸಾವಿರಾರು ನಾಯಿಗಳು ಅವನ ಬೆನ್ನು ಬಿದ್ದಿವೆ. ಆದರೂ, ನಾಯಿಗಳಿಗೆ ಸಿಂಹವನ್ನು ಮುಗಿಸಲು ಆಗುತ್ತಿಲ್ಲ' ಎಂದು ಪೋಸ್ಟ್‌ನಲ್ಲಿ ಬರೆಯಲಾಗಿದೆ.

ಇದಕ್ಕೆ ಪ್ರತಿಕ್ರಿಯಿಸಿದ ನಗರ ಪೊಲೀಸ್ ಕಮಿಷನರ್ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, 'ರೌಡಿ ಶೀಟರ್ ಆಗಿರುವ ಶುಭಂ ಅವರನ್ನು ಮಾಳಮಾರುತಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಅವರ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ 12 ಪ್ರಕರಣಗಳಿವೆ. ಭಾಷೆ ವಿಷಯದಲ್ಲಿ ಪ್ರಚೋದನಕಾರಿ ಹೇಳಿಕೆ ನೀಡುವ ಜತೆಗೆ, ಪೋಸ್ಟ್‌ಗಳನ್ನು ಹಾಕುತ್ತಿದ್ದರು' ಎಂದರು.

ನಕಲಿ ಅಂಕಪಟ್ಟಿ ಜಾಲ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣ ಮಂಡಳಿ' ಹೆಸರಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯ ನಕಲಿ ಅಂಕಪಟ್ಟಿ ತಯಾರಿಸಿ ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಗದಗ ಜಿಲ್ಲೆಯ ಎಚ್‌. ರಾಜಶೇಖರ್(41), ಧಾರವಾಡದ ಪ್ರಶಾಂತ್, ಬೆಂಗಳೂರು ಬನಶಂಕರಿಯ ಕೆ.ಜೆ.ಮೋನಿಶ್(36) ಬಂಧಿತರು.

ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದು ಆತನ ಪತ್ತೆಗೆ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಬಂಧಿತರಿಂದ ನಕಲಿ ಅಂಕಪಟ್ಟಿ ಹಾಗೂ ಪರೀಕ್ಷೆ ಪ್ರವೇಶ ಪತ್ರಗಳನ್ನು ವಶಕ್ಕೆ ಪಡೆಯಲಾಗಿದೆ ಎಂದೂ ಮಾಹಿತಿ ನೀಡಿದರು.

'ಕತ್ರಿಗುಪ್ಪೆ ಮುಖ್ಯರಸ್ತೆಯ ರಾಮ್‌ರಾವ್ ಲೇಔಟ್‌ನಲ್ಲಿರುವ ದೂರ ಶಿಕ್ಷಣ ನೀಡುವ ಅಕಾಡೆಮಿಯೊಂದಕ್ಕೆ ದೂರುದಾರ ತಮ್ಮ ಸಹೋದರನ ಮಗನನ್ನು ದಾಖಲಿಸಿದ್ದರು. ಯುವಕನಿಗೆ ಯಾವುದೇ ಪರೀಕ್ಷೆ ಬರೆಸದೇ ಅಕಾಡೆಮಿ ಮಾಲೀಕರು, 'ರಾಜ್ಯ ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣ ಮಂಡಳಿ' ಹೆಸರಿನಲ್ಲಿ ಅಂಕಪಟ್ಟಿ ನೀಡಿದ್ದರು. ಅನುಮಾನಗೊಂಡ ದೂರುದಾರರು, ಅಂಕಪಟ್ಟಿ ಪರಿಶೀಲಿಸಿದಾಗ ನಕಲಿ ಅಂಕಪಟ್ಟಿ ಎಂಬುದು ಗೊತ್ತಾಗಿ ಸಿಸಿಬಿಗೆ ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.



ಪ್ರಶಾಂತ್



ರಾಜಶೇಖರ್



ಮೋನಿಶ್

ಆರೋಪಿಗಳು , ಧಾರವಾಡ ಮತ್ತು ಬೆಳಗಾವಿಯಲ್ಲಿ ನಕಲಿ ಅಂಕಪಟ್ಟಿಗಳನ್ನು ಮುದ್ರಿಸಿ ಮಾರಾಟ ಮಾಡುತ್ತಿದ್ದರು

ಬಿ.ದಯಾನಂದ ಬೆಂಗಳೂರು ಪೊಲೀಸ್ ಕಮಿಷನರ್

ಆರೋಪಿಗಳು ಐದು ವರ್ಷದಿಂದ ನಕಲಿ ಅಂಕಪಟ್ಟಿ ತಯಾರಿಸಿ ಮಾರಾಟ ಮಾಡುತ್ತಿದ್ದರು. ಬಂಧಿತರು 350ಕ್ಕೂ ಹೆಚ್ಚು ನಕಲಿ ಅಂಕಪಟ್ಟಿಗಳನ್ನು ವಿತರಣೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ಹೇಳಿದರು.

'ಬನಶಂಕರಿಯಲ್ಲಿರುವ ಅಕಾಡೆಮಿ ಮೇಲೆ ದಾಳಿ ನಡೆಸಿ ಮೋನಿಶ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಧಾರವಾಡದ ಪ್ರಶಾಂತ್ ಮತ್ತು ಬೆಳಗಾವಿಯಲ್ಲಿರುವ ಮತ್ತೊಬ್ಬ ಆರೋಪಿ ಜತೆಗೆ ಸೇರಿಕೊಂಡು ದಂಧೆ ನಡೆಸುತ್ತಿರುವುದು ತನಿಖೆಯಿಂದ ಗೊತ್ತಾಯಿತು' ಎಂದು ಪೊಲೀಸರು ಹೇಳಿದರು.

'ಆರೋಪಿ ಪ್ರಶಾಂತ್‌ಗೆ ಸೇರಿದ ಧಾರವಾಡ ಶ್ರೀನಗರದ ಕಚೇರಿ ಮೇಲೆ ದಾಳಿ ನಡೆಸಿ ಎರಡು ಮೊಬೈಲ್, 300ಕ್ಕೂ ಹೆಚ್ಚು ನಕಲಿ ಅಂಕಪಟ್ಟಿ ಜಪ್ತಿ ಮಾಡಲಾಗಿದೆ. ಆರೋಪಿ ನೀಡಿದ್ದ ನಕಲಿ ಅಂಕಪಟ್ಟಿಗಳಿಂದ ಕೆಲವು ಅಭ್ಯರ್ಥಿಗಳು ಸಾರಿಗೆ ಇಲಾಖೆಯಲ್ಲಿ ಡಿ ದರ್ಜೆ ಹುದ್ದೆ ಪಡೆದಿರುವ ಜತೆಗೆ, ಚಾಲನಾ ಪರವಾನಗಿ, ಪಾಸ್‌ಪೋರ್ಟ್ ಮಾಡಿಸಿಕೊಂಡಿರುವುದು ಗೊತ್ತಾಗಿದೆ. ಅಲ್ಲದೇ ಶಿಶು ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯಲ್ಲೂ ಡಿ ದರ್ಜೆ ನೌಕರರಾಗಿ ಕೆಲಸಕ್ಕೆ ಸೇರಿಕೊಂಡಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಹಣ ಪಡೆದು ಮಾರಾಟ: ಆರೋಪಿಗಳು ಬೆಂಗಳೂರು, ಧಾರವಾಡ, ಬೆಳಗಾವಿಯಲ್ಲಿರುವ ಕೆಲವು ಅಕಾಡೆಮಿಗಳನ್ನು ಸಂಪರ್ಕಿಸಿ, ತಮ್ಮ ಸಂಸ್ಥೆಯು ಸರ್ಕಾರದ ಮಾನ್ಯತೆ ಪಡೆದುಕೊಂಡಿದೆ ಎಂದು ಹೇಳುತ್ತಿದ್ದರು. ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಅಂಕಪಟ್ಟಿಗಳನ್ನು ಕೊಡುವುದಾಗಿ ನಂಬಿಸುತ್ತಿದ್ದರು. ಜತೆಗೆ, ಅರ್ಧಕ್ಕೆ ವಿದ್ಯಾಭ್ಯಾಸ ಮೊಟಕುಗೊಳಿಸಿರುವ ಅಭ್ಯರ್ಥಿಗಳಿಂದಲೂ ತಲಾ ₹15 ಸಾವಿರ ಪಡೆದು ಅಂಕಪಟ್ಟಿಗಳನ್ನು ಮಾರಾಟ ಮಾಡಿದ್ದಾರೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಖಾಸಗಿ ಕಾನ್ವೆಂಟ್‌ಗಳಿಗೆ ಸಡ್ಡು ಹೊಡೆದ ಮಂಡ್ಯ ಜಿಲ್ಲೆಯ ನಾಗಮಂಗಲದ ಸರ್ಕಾರಿ ಶಾಲೆ

ನಾಗತಿಹಳ್ಳಿ ಶಾಲೆಗೆ ಶತಮಾನದ ಸಂಭ್ರಮ

• ಸಿದ್ದು ಆರ್‌.ಜಿ.ಹಳ್ಳಿ

ಮಂಡ್ಯ: ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಗಡಿಭಾಗದಲ್ಲಿರುವ ಎ. ನಾಗತಿಹಳ್ಳಿಯ (ಅಳಿಸಂದ್ರ ನಾಗತಿಹಳ್ಳಿ) ಸರ್ಕಾರಿ ಶಾಲೆಯು ಶತಮಾನದ ಸಂಭ್ರಮದಲ್ಲಿದೆ. ಆಧುನಿಕ ಸೌಲಭ್ಯಗಳನ್ನು ಹೊಂದಿರುವ ಮಾದರಿ ಶಾಲೆಯು ಖಾಸಗಿ ಕಾನ್ವೆಂಟ್‌ಗಳಿಗೆ ಸಡ್ಡು ಹೊಡೆಯುತ್ತಿದೆ.

1925ರಲ್ಲಿ ಆರಂಭಗೊಂಡ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯು ಗ್ರಾಮದ ಸುತ್ತಮುತ್ತಲಿನ 20 ಹಳ್ಳಿಗಳ ಪಾಲಿನ ಶಿಕ್ಷಣ ಕೇಂದ್ರವಾಗಿತ್ತು. 1950ರಲ್ಲಿ ಹಿರಿಯ ಪ್ರಾಥಮಿಕ ಶಾಲೆಯಾಯಿತು. ಗುಣಮಟ್ಟದ ಬೋಧನೆಯಿಂದ ಗ್ರಾಮೀಣ ವಿದ್ಯಾರ್ಥಿಗಳ ಪಾಲಿನ ನೆಚ್ಚಿನ ಜ್ಞಾನದೇಗುಲವಾಗಿದೆ.

ಜಾನಪದ ತಜ್ಞ ಎಚ್‌.ಎಲ್‌. ನಾಗೇಗೌಡ, ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ, ಅಮೆರಿಕದ ಮಿಯಾಮಿ ವಿ.ವಿ.ಯಲ್ಲಿರುವ ಸಹ ಪ್ರಾಧ್ಯಾಪಕ ಡಾ.ನಾಗರಾಜು ಸೇರಿದಂತೆ ಹಲವು ಪ್ರತಿಭಾವಂತರನ್ನು ಶಾಲೆಯು ಕೊಡುಗೆಯಾಗಿ ನೀಡಿದೆ.

20ರಿಂದ 211ಕ್ಕೆ ಏರಿಕೆ!

ಖಾಸಗಿ ಶಾಲೆಗಳ ಪ್ರಭಾವದಿಂದ ಇಲ್ಲಿಯೂ ವಿದ್ಯಾರ್ಥಿಗಳ ಪ್ರವೇಶಾತಿ ಗಣನೀಯವಾಗಿ ಕುಸಿದಿತ್ತು. 2019–20ನೇ ಸಾಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ 20ಕ್ಕೆ ಇಳಿದು ಮುಚ್ಚುವ ಹಂತ ತಲುಪಿತ್ತು. ಆಗ ಗ್ರಾಮದಲ್ಲಿ ಸಭೆ ನಡೆಸಿ, ಪೋಷಕರು ಮತ್ತು ವಿದ್ಯಾರ್ಥಿಗಳ ಮನದಿಂಗಿತವನ್ನು ಶಿಕ್ಷಕರು ಅರ್ಥಮಾಡಿಕೊಂಡರು. ನಂತರ ಶಾಲೆಗೆ ಇಂಗ್ಲಿಷ್ ಮಾಧ್ಯಮವನ್ನು ತರುವಲ್ಲಿ ಯಶಸ್ವಿಯಾದರು. ಈ 'ದ್ವಿಭಾಷಾ ಶಾಲೆ'ಯಲ್ಲಿ ಪ್ರಸ್ತುತ 211 ವಿದ್ಯಾರ್ಥಿಗಳಿದ್ದಾರೆ.

'ಡೊನೇಷನ್ ಇಲ್ಲ, ದುಬಾರಿ ಶುಲ್ಕವಿಲ್ಲ, ಉಚಿತವಾಗಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯಬಹುದು. ಊಟ ತರಬೇಕಿಲ್ಲ. ಬಿಸಿಯೂಟ, ಹಾಲು, ಮೊಟ್ಟೆ, ರಾಗಿಮಾಲ್ಟ್ ಕೊಡುತ್ತೇವೆ. ಪಠ್ಯಪುಸ್ತಕ, ಸಮವಸ್ತ್ರ, ಶೂ ಸಾಕ್ಸ್‌ಗಳೂ ಉಚಿತ ಎಂದು ಹಿರಿಯ ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ಪ್ರಚಾರ ಮಾಡಿದ್ದರಿಂದ ಶಾಲೆಯ ಸೀಟುಗಳಿಗೆ ಭಾರಿ ಬೇಡಿಕೆಯಿದೆ' ಎನ್ನುತ್ತಾರೆ ಮುಖ್ಯಶಿಕ್ಷಕ ಆರ್‌.ಎಸ್‌. ಪ್ರಭು.

ನಾಗತಿಹಳ್ಳಿ ಕೊಡುಗೆ: ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ ಅವರು ಸ್ವಂತ ಹಣದಿಂದ 'ಸಿಹಿಕನಸು' ರಂಗಮಂದಿರ, ಕಂಪ್ಯೂಟರ್ ಲ್ಯಾಬ್, ಬೃಹತ್ ಗ್ರಂಥಾಲಯವನ್ನು ಕೊಡುಗೆಯಾಗಿ ನೀಡಿದ್ದಾರೆ. ನಂತರ ಜನಪ್ರತಿನಿಧಿಗಳು, ದಾನಿಗಳು ಮತ್ತು ವಿವಿಧ ಇಲಾಖೆಗಳ ಯೋಜನೆಗಳ ನೆರವು ಪಡೆದು, ಸಂಸ್ಕೃತಿಭವನ, ಪರಿಸರಸ್ನೇಹಿ ಶಾಲಾ ಕಟ್ಟಡ, ವಿಜ್ಞಾನ ಪ್ರಯೋಗಾಲಯ, ಆಡಿಟೋರಿಯಂ, ಸ್ಮಾರ್ಟ್ ಕ್ಲಾಸ್ ಪ್ರೊಜೆಕ್ಟರ್, ಶುದ್ಧ ಕುಡಿಯುವ ನೀರಿನ ಘಟಕ, ಬಾಲಕ–ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ, ಕಾಂಪೌಂಡ್, ಕ್ರೀಡೋಪಕರಣ ಸೇರಿದಂತೆ ಪಠ್ಯ–ಪಠ್ಯೇತರ ಚಟುವಟಿಕೆಗೆ ಪೂರಕವಾದ ವಾತಾವರಣ ಕಲ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ.




ನಾಗಮಂಗಲ ತಾಲ್ಲೂಕಿನ ಎ.ನಾಗತಿಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹೊರನೋಟ ಚಿತ್ರ: ಸಂತೋಷ್ ಚಂದ್ರಮೂರ್ತಿ

ನಾಗತಿಹಳ್ಳಿ ಸಂಸ್ಕೃತಿ ಹಬ್ಬ ಇಂದಿನಿಂದ

ಈ ಶಾಲೆಯ ಅಂಗಳದಲ್ಲಿ ಮಾರ್ಚ್ 26ರಿಂದ 30ರವರೆಗೆ ಹಮ್ಮಿಕೊಂಡಿರುವ '21ನೇ ನಾಗತಿಹಳ್ಳಿ ಸಂಸ್ಕೃತಿ ಹಬ್ಬ'ದ ಅಂಗವಾಗಿ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯಲಿವೆ.

26ರಂದು ಶಾಲೆಯ ಮಕ್ಕಳು ಬೆಂಗಳೂರಿನ ಜವಾಹರಲಾಲ್ ನೆಹರು ತಾರಾಲಯಕ್ಕೆ ಭೇಟಿ ನೀಡಿ, ವಿಜ್ಞಾನಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. 27ರಂದು ಸಾರ್ವಜನಿಕರಿಗೆ ಉಚಿತ ವೈದ್ಯಕೀಯ ಶಿಬಿರ ನಡೆಯಲಿದೆ. ಕಾವ್ಯ ರಸಗ್ರಹಣ ಶಿಬಿರ, ರೈತರೊಂದಿಗೆ ಸಂವಾದ, ಜನಪದ ಗೀತೆ ಮತ್ತು ನೃತ್ಯ ಪ್ರದರ್ಶನಗಳಿರಲಿವೆ. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ನಟನ ರಂಗಶಾಲೆಯಿಂದ 'ಮಕ್ಕಳ ಮಹಾಭಾರತ' ನಾಟಕ ಪ್ರದರ್ಶನಗೊಳ್ಳಲಿದೆ ಎಂದು ಗ್ರಂಥಪಾಲಕ ಕಾಂತರಾಜು ನಾಗತಿಹಳ್ಳಿ ಮಾಹಿತಿ ನೀಡಿದ್ದಾರೆ.



ಶಾಲೆಗಳು ರಾಜಕೀಯೇತರ ಸಾಂಸ್ಕೃತಿಕ ಕೇಂದ್ರಗಳಾಗಬೇಕೆಂಬ ಆಶಯದೊಂದಿಗೆ 'ನಾಗತಿಹಳ್ಳಿ ಸಂಸ್ಕೃತಿ ಹಬ್ಬ' ರೂಪುಗೊಂಡಿತು. ಶತಮಾನೋತ್ಸವದಲ್ಲಿ ಹೊರಗಿನವರೂ ಸಂಭ್ರಮಿಸುತ್ತಿದ್ದಾರೆ

ನಾಗತಿಹಳ್ಳಿ ಚಂದ್ರಶೇಖರ, ಸಾಹಿತಿ

ಶಿಕ್ಷಣ ಇಲಾಖೆಗೆ ರಶ್ಮಿ ಪ್ರಧಾನ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ರಶ್ಮಿ ವಿ. ಮಹೇಶ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ರಶ್ಮಿ ಅವರಿಗೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ(ವಿಪತ್ತು ನಿರ್ವಹಣೆ) ಹುದ್ದೆಯನ್ನೂ ಹೆಚ್ಚುವರಿಯಾಗಿ ವಹಿಸಲಾಗಿದೆ.

ಏಡ್ಸ್ ಪ್ರಿವೆನ್ಶನ್ ಸೊಸೈಟಿಯ ಯೋಜನಾ ನಿರ್ದೇಶಕ ಎನ್‌.ಎಂ. ನಾಗರಾಜ ಅವರನ್ನು ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ವರ್ಗಾಯಿಸಲಾಗಿದೆ.

ಸಾಗರದ ಉಪ ವಿಭಾಗಾಧಿಕಾರಿಯಾಗಿದ್ದ ಆರ್‌. ಯತೀಶ್ ಅವರನ್ನು ಡಿಪಿಎಆರ್‌ನ (ಇ-ಆಡಳಿತ) ಎಲೆಕ್ಟ್ರಾನಿಕ್ ಡೆಲಿವರಿ ಸಿಟಿಜನ್ ಸರ್ವೀಸಸ್‌ನ ನಿರ್ದೇಶಕರನ್ನಾಗಿ ವರ್ಗಾಯಿಸಲಾಗಿದೆ. ಹಣಕಾಸು ಇಲಾಖೆಯ ಎಚ್‌ಆರ್‌ಎಂಎಸ್ 2.0 ಉಪ ಯೋಜನಾ ನಿರ್ದೇಶಕರ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಲಾಗಿದೆ.

ಸಂಶೋಧನೆ: ಕೆಎಲ್‌ಇ ಟೆಕ್ ಒಪ್ಪಂದ



ಹುಬ್ಬಳ್ಳಿಯಲ್ಲಿ ಮಂಗಳವಾರ ಒಪ್ಪಂದಕ್ಕೆ ಸಹಿ ಹಾಕುವ ಕಾರ್ಯಕ್ರಮದಲ್ಲಿ ಎನ್‌.ಎಚ್‌.ಆಯಚಿತ್, ಶಿವಪ್ರಸಾದ್ ಎಸ್‌.ಎಂ, ಪ್ರೊ. ಅಶೋಕ ಶೆಟ್ಟರ್, ಪ್ರೊ. ಜಿ.ಯು.ಕುಲಕರ್ಣಿ, ಪ್ರಕಾಶ್ ತಿವಾರಿ ಮತ್ತು ಬಸವರಾಜ ಆನಮಿ ಉಪಸ್ಥಿತರಿದ್ದರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯ ಮತ್ತು ಬೆಂಗಳೂರಿನ ಜವಾಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ (ಜೆಎನ್‌ಸಿಎಎಸ್‌ಆರ್) ಇಲ್ಲಿಯ ಬಿವಿಬಿ ಕಾಲೇಜಿನಲ್ಲಿ ಮಂಗಳವಾರ ಸಂಶೋಧನಾ ಸಹಯೋಗಕ್ಕಾಗಿ ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಿದವು.

ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಪಿ.ಜಿ. ತಿವಾರಿ ಮತ್ತು ಜೆಎನ್‌ಸಿಎಎಸ್‌ಆರ್ ಅಧ್ಯಕ್ಷ ಪ್ರೊ. ಜಿ.ಯು. ಕುಲಕರ್ಣಿ ಅವರು ಸಹಿ ಹಾಕಿ ಒಪ್ಪಂದ ಮಾಡಿಕೊಂಡರು.

ಪ್ರೊ. ಜಿ.ಯು. ಕುಲಕರ್ಣಿ ಮಾತನಾಡಿ, 'ಹೊಸ ಒಪ್ಪಂದದ ಅನ್ವಯ ಕೆಎಲ್‌ಇ ಟೆಕ್ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಜೆಎನ್‌ಸಿಎಎಸ್‌ಆರ್‌ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು. ನಮ್ಮ ಕೇಂದ್ರದ ಸಂಶೋಧಕರನ್ನು ಮತ್ತು ವಿದ್ಯಾರ್ಥಿಗಳನ್ನು ಸಹ ಇಲ್ಲಿಗೆ ಕಳುಹಿಸುತ್ತೇವೆ. ಪ್ರೊ. ಅಶೋಕ ಶೆಟ್ಟರ್ ಮತ್ತು ಅವರ ತಂಡದ ದೃಷ್ಟಿಕೋನದಡಿ ಕೆಎಲ್‌ಇ ನವೀನತೆ ಮತ್ತು ಶ್ರೇಷ್ಠತೆಯ ಕಡೆಗೆ ಹೆಜ್ಜೆ ಹಾಕುತ್ತಿರುವುದು ಮೆಚ್ಚುಗೆಯ ಸಂಗತಿ' ಎಂದರು.

ಕೆಎಲ್‌ಇ ಟೆಕ್ ಪ್ರೊ-ಚಾನ್ಸಲರ್ ಪ್ರೊ. ಅಶೋಕ ಶೆಟ್ಟರ್ ಮಾತನಾಡಿ, 'ಜೆಎನ್‌ಸಿಎಎಸ್‌ಆರ್ ಶ್ರೇಷ್ಠ ವೈಜ್ಞಾನಿಕ ಸಂಶೋಧನೆಗೆ ಒತ್ತು ನೀಡುತ್ತದೆ. ಒಪ್ಪಂದದಿಂದ ಉಭಯ ಸಂಸ್ಥೆಗಳಿಗೂ ಪ್ರಯೋಜನವಾಗಲಿದೆ' ಎಂದು ತಿಳಿಸಿದರು.

ಸುರಂಗ ಕುಸಿತ ಮತ್ತೊಂದು ಮೃತದೇಹ ಪತ್ತೆ

ನಾಗರ್‌ಕರ್ನೂಲ್ (ತೆಲಂಗಾಣ) (ಪಿಟಿಐ): ನಿರ್ಮಾಣ ಹಂತದಲ್ಲಿರುವ, ಶ್ರೀಶೈಲಂ ಎಡ ದಂಡೆ ಕಾಲುವೆ (ಎಸ್‌ಎಲ್‌ಬಿಸಿ) ಕುಸಿದ ಪರಿಣಾಮ ಒಳಗಡೆ ಸಿಲುಕಿರುವ 8 ಮಂದಿ ಕಾರ್ಮಿಕರ ಪೈಕಿ ಮತ್ತೊಬ್ಬರ ಮೃತದೇಹ ಪತ್ತೆಯಾಗಿದೆ.

ಇದುವರೆಗೂ ಸುರಂಗದಿಂದ ತೆಗೆದ ಮೃತದೇಹಗಳ ಸಂಖ್ಯೆ 2ಕ್ಕೆ ಏರಿಕೆಯಾಗಿದೆ. ಮಂಗಳವಾರ ಬೆಳಿಗ್ಗೆ ಮೃತದೇಹ ಪತ್ತೆಯಾಗಿದ್ದು, ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಮೃತ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ.

ಮಾರ್ಚ್ 9ರಂದು ಸುರಂಗ ಕೊರೆಯುವ ಯಂತ್ರದ ಆಪರೇಟರ್, ಪಂಜಾಬ್ ಮೂಲದ ಗುರ್ಪೀತ್ ಸಿಂಗ್ ಅವರ ಮೃತದೇಹವು ಪತ್ತೆಯಾಗಿತ್ತು. ಇನ್ನುಳಿದ ಆರು ಮಂದಿಯ ಹುಡುಕಾಟಕ್ಕಾಗಿ 25 ರಾಜ್ಯಗಳ ರಕ್ಷಣಾ ಕಾರ್ಯಕರ್ತರು ಕಳೆದೊಂದು ತಿಂಗಳಿನಿಂದ ಶೋಧ ಕಾರ್ಯದಲ್ಲಿ ಭಾಗಿಯಾಗಿದ್ದಾರೆ.

ಸಭ್ಯತೆ ಇಲ್ಲದಿದ್ದರೆ ಕ್ರಿಯೆಗೆ ಪ್ರತಿಕ್ರಿಯೆ ಇರುತ್ತದೆ: ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಶಿಂದೆ

'ಕುನಾಲ್ ಮಾತು ಸುಪಾರಿಗೆ ಸಮ'

ಮುಂಬೈ (ಪಿಟಿಐ): ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಅವರು ತಮ್ಮ ವಿರುದ್ಧ ಆಡಿರುವ ಮಾತುಗಳನ್ನು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಏಕನಾಥ ಶಿಂದೆ ಅವರು 'ಸುಪಾರಿ'ಗೆ ಹೋಲಿಸಿದ್ದಾರೆ.



ಏಕನಾಥ ಶಿಂದೆ

'ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ವಿಡಂಬನೆ ನಮಗೆ ಅರ್ಥವಾಗುತ್ತದೆ. ಆದರೆ, ಅದಕ್ಕೆ ಮಿತಿ ಇರಬೇಕು. ಈಗ ಮಾಡಿರುವುದು ಒಬ್ಬರ ವಿರುದ್ಧ ಮಾತನಾಡಲು ಸುಪಾರಿ ಪಡೆದಂತೆ ಇದೆ' ಎಂದು ಶಿಂದೆ ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

'ಯಾರು ಏನು ಹೇಳುತ್ತಾರೆ ಎಂಬುದರ ಬಗ್ಗೆ ನಾನು ಗಮನ ಕೊಡುವುದಿಲ್ಲ. ನಾನು ಮಾಡಿರುವ ಕೆಲಸಗಳೇ ನನ್ನ ಪರವಾಗಿ ಮಾತನಾಡುತ್ತವೆ' ಎಂದು ಕೂಡ ಅವರು ಹೇಳಿದ್ದಾರೆ.

'ದಿಲ್ ತೊ ಪಾಗಲ್ ಹೈ' ಚಿತ್ರದ ಜನಪ್ರಿಯ ಹಾಡೊಂದನ್ನು ತುಸು ಬದಲಿಸಿ ಕಾಮ್ರಾ ಅವರು, ಶಿಂದೆ ಅವರನ್ನು ಗುರಿಯಾಗಿಸಿ 'ವಂಚಕ' ಎಂದಿದ್ದಾರೆ ಎಂಬ ಆರೋಪವು ಮಹಾರಾಷ್ಟ್ರದಲ್ಲಿ ವಿವಾದ ಸೃಷ್ಟಿಸಿದೆ.

ಕುನಾಲ್ ಅವರು ವಿವಾದಿತ ಹಾಸ್ಯ ಕಾರ್ಯಕ್ರಮ ನಡೆಸಿದ ಸ್ಟುಡಿಯೊದಲ್ಲಿ ಶಿವಸೇನಾ ಕಾರ್ಯಕರ್ತರು ದಾಂದಲೆ ನಡೆಸಿದ ಕುರಿತು ಪ್ರತಿಕ್ರಿಯಿಸಿದ ಶಿಂದೆ, ಹಾಸ್ಯ ಮಾಡುವಾಗಲೂ ಸಭ್ಯತೆಯನ್ನು ಪಾಲಿಸಬೇಕು ಎಂದಿದ್ದಾರೆ. 'ಇಲ್ಲವಾದರೆ ಕ್ರಿಯೆಗೆ ಪ್ರತಿಕ್ರಿಯೆ ಎದುರಾಗುತ್ತದೆ' ಎಂದು ಹೇಳಿದ್ದಾರೆ.

'ಇದರ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ದಾಂದಲೆ ನಡೆಸುವುದನ್ನು ನಾನು ಸಮರ್ಥಿಸುವುದಿಲ್ಲ' ಎಂದು ಅವರು ಹೇಳಿದ್ದಾರೆ.

'ಇದೇ ವ್ಯಕ್ತಿ (ಕುನಾಲ್) ದೇಶದ ಸುಪ್ರೀಂ ಕೋರ್ಟ್ ಬಗ್ಗೆ, ಪ್ರಧಾನಿಯ ಬಗ್ಗೆ, (ಪತ್ರಕರ್ತ) ಅರ್ನಬ್ ಗೋಸ್ವಾಮಿ ಮತ್ತು ಕೆಲವು ಉದ್ಯಮಿಗಳ ಬಗ್ಗೆ ಮಾತನಾಡಿದ್ದರು. ಇದು ಅಭಿವ್ಯಕ್ತಿ ಸ್ವಾತಂತ್ರ್ಯ ಅಲ್ಲ; ಇದು ಬೇರೆ ಯಾರೋ ಒಬ್ಬರಿಗಾಗಿ ಕೆಲಸ ಮಾಡುವುದು' ಎಂದು ಶಿಂದೆ ವ್ಯಾಖ್ಯಾನಿಸಿದ್ದಾರೆ.

'ಕ್ಷಮೆ ಕೇಳುವುದಿಲ್ಲ': ವಿವಾದಿತ ಹೇಳಿಕೆಗಾಗಿ ಕ್ಷಮೆ ಯಾಚಿಸುವುದಿಲ್ಲ ಎಂದು ಕುನಾಲ್ ಸ್ಪಷ್ಟಪಡಿಸಿದ್ದಾರೆ. ಹಾಸ್ಯ ಕಾರ್ಯಕ್ರಮ ನಡೆದ ಸ್ಥಳದಲ್ಲಿ ನಡೆದ ಗಲಾಟೆಯನ್ನು ಅವರು ಖಂಡಿಸಿದ್ದಾರೆ.

'ನಾನು ಕ್ಷಮೆ ಹೇಳುವುದಿಲ್ಲ... ಈ ಗುಂಪಿಗೆ ನಾನು ಹೆದರುವುದಿಲ್ಲ. ವಿಷಯ ತಣ್ಣಗಾಗಲಿ ಎಂದು ಅಡಗಿ ಕುಳಿತುಕೊಳ್ಳುವುದಿಲ್ಲ' ಎಂದು ಎಕ್ಸ್ ಮೂಲಕ ಹೇಳಿರುವ ಕುನಾಲ್, 'ನಾನು ಆಡಿರುವ ಮಾತುಗಳು ಅಜಿತ್ ಪವಾರ್ ಅವರು ಏಕನಾಥ ಶಿಂದೆ ಬಗ್ಗೆ ಆಡಿದ್ದ ಮಾತುಗಳೇ ಆಗಿವೆ' ಎಂದಿದ್ದಾರೆ.

ಶಿಂದೆ ವಿರುದ್ಧ ಆಡಿದ ಮಾತುಗಳಿಗೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಕುನಾಲ್ ಅವರಿಗೆ ಪೊಲೀಸರು ನೋಟಿಸ್ ಕಳುಹಿಸಿದ್ದಾರೆ.

ಕಂಗನಾ, ಹನ್ಸಲ್ ಪರಸ್ಪರ ದೂಷಣೆ

ಕುನಾಲ್ ಕಾಮ್ರಾ ಅವರ ಮಾತು ಮತ್ತು ಅದು ಸೃಷ್ಟಿಸಿದ ವಿವಾದದ ವಿಚಾರವಾಗಿ ಸಂಸದೆ ಕಂಗನಾ ರನೌತ್ ಮತ್ತು ಚಿತ್ರ ನಿರ್ದೇಶಕ ಹನ್ಸಲ್ ಮೆಹ್ತಾ ನಡುವೆ 'ಎಕ್ಸ್' ವೇದಿಕೆಯಲ್ಲಿ ವೈಯಕ್ತಿಕ ಮಟ್ಟದ ದೂಷಣೆ ನಡೆದಿದೆ.

ಹನ್ಸಲ್ ಅವರನ್ನು ಉದ್ದೇಶಿಸಿ ಕಂಗನಾ ಅವರು, 'ನನಗೆ ಹಿಂದೆ ಎದುರಾಗಿದ್ದ ಸಂಕಟವು ನೀವು ಮಾಡುವ ಮೂರನೆಯ ದರ್ಜೆಯ ವೆಬ್ ಸಿರೀಸ್‌ನಂತೆ ಅಲ್ಲ' ಎಂದು ಹೇಳಿದ್ದಾರೆ. ಇದಕ್ಕೆ ಪ್ರತಿಯಾಗಿ ಹನ್ಸಲ್ ಅವರು ಕಂಗನಾ ಅವರಿಗೆ 'ಬೇಗ ಹುಷಾರಾಗಿ' ಎಂದು ಪ್ರತಿಕ್ರಿಯೆ ನೀಡಿದ್ದಾರೆ.

ಹಿಂದೆ ಕಂಗನಾ ಅವರು ಹನ್ಸಲ್ ನಿರ್ದೇಶನದ 'ಸಿಮ್ರನ್' ಹಿಂದಿ ಚಿತ್ರದಲ್ಲಿ ಕೆಲಸ ಮಾಡಿದ್ದರು.

ಹಾಸ್ಯದ ಹೆಸರಿನಲ್ಲಿ ಒಬ್ಬರನ್ನು ಅವಮಾನಿಸಿದಾಗ ಅವರು ಮಾಡಿದ ಎಲ್ಲವನ್ನೂ ಅನಾದರದಿಂದ ಕಂಡಂತಾಗುತ್ತದೆ



ಕಂಗನಾ ರನೌತ್, ನಟಿ–ಸಂಸದೆ



ಪ್ರತಿಭಟನೆ

ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಳವನ್ನು ಖಂಡಿಸಿ ಇಂಡಿಯನ್ ಯೂತ್ ಕಾಂಗ್ರೆಸ್ ಸದಸ್ಯರು ನವದೆಹಲಿಯಲ್ಲಿ ಮಂಗಳವಾರ ಕೇಂದ್ರ ಸರ್ಕಾರದ ವಿರುದ್ಧ ನಡೆಸಿದ ಪ್ರತಿಭಟನಾ ಮೆರವಣಿಗೆಯನ್ನು ಪೊಲೀಸರು ತಡೆದರು ಪಿಟಿಐ ಚಿತ್ರ

ದೆಹಲಿ: ₹1 ಲಕ್ಷ ಕೋಟಿ ಮೊತ್ತದ ಬಜೆಟ್ ಮಂಡನೆ

ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು 2025–26ರ ಹಣಕಾಸು ವರ್ಷದ, ₹1 ಲಕ್ಷ ಕೋಟಿ ಮೊತ್ತದ ಬಜೆಟ್‌ಅನ್ನು ಮಂಗಳವಾರ ಮಂಡಿಸಿದರು.

ಯಮುನಾ ನದಿಯ ಸ್ವಚ್ಛತೆ, ಮಹಿಳೆಯರ ಆರ್ಥಿಕ ಸಬಲೀಕರಣ, ಮೂಲಸೌಕರ್ಯ, ನೀರು ಮತ್ತು ಸಂಪರ್ಕ ಸೇರಿದಂತೆ ಪ್ರಮುಖ 10 ಕ್ಷೇತ್ರಗಳಿಗೆ ಒತ್ತು ನೀಡಲಾಗಿದೆ. 'ಈ ಬಜೆಟ್ ರಾಷ್ಟ್ರದ ರಾಜಧಾನಿಯನ್ನು ಸ್ವಾವಲಂಬಿಯನ್ನಾಗಿ ಮಾಡುವ ಮಾರ್ಗಸೂಚಿ' ಎಂದು ಅವರು ಪ್ರತಿಪಾದಿಸಿದರು.

ಹಣಕಾಸು ಖಾತೆಯನ್ನೂ ಹೊಂದಿರುವ ರೇಖಾ ಅವರು ತಮ್ಮ 138 ನಿಮಿಷಗಳ ಭಾಷಣದಲ್ಲಿ, ಬಿಜೆಪಿ ನೇತೃತ್ವದ ಸರ್ಕಾರದ ಚೊಚ್ಚಲ ಬಜೆಟ್‌ಅನ್ನು 'ಐತಿಹಾಸಿಕ' ಎಂದು ಬಣ್ಣಿಸಿದರು. 'ಭ್ರಷ್ಟಾಚಾರ ಮತ್ತು ದುರಾಡಳಿತದ' ಯುಗ ಕೊನೆಗೊಂಡಿದೆ ಎಂದರು. ದೆಹಲಿಯಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಕಳೆದ 26 ವರ್ಷಗಳಲ್ಲಿ ಮಂಡಿಸಿದ ಮೊದಲ ಬಜೆಟ್ ಇದಾಗಿದೆ.

ನಗರದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗಿದ್ದು, ಬಂಡವಾಳ ವೆಚ್ಚವನ್ನು ₹28 ಸಾವಿರ ಕೋಟಿಗೆ ದ್ವಿಗುಣಗೊಳಿಸಲಾಗಿದೆ ಎಂದು ಮುಖ್ಯಮಂತ್ರಿ ರೇಖಾ ಹೇಳಿದರು.

ಪ್ರಮುಖ ಘೋಷಣೆಗಳು

- ನಗರದ ವಿವಿಧ ಭಾಗಗಳಲ್ಲಿ 100 'ಅಟಲ್ ಕ್ಯಾಂಟೀನ್'ಗಳನ್ನು ಆರಂಭಿಸಲು ನಿರ್ಧಾರ
- ಯಮುನಾ ನದಿ ಸ್ವಚ್ಛತೆಗೆ ₹500 ಕೋಟಿ
- ಮಾಲಿನ್ಯ ನಿಯಂತ್ರಣಕ್ಕೆ ₹300 ಕೋಟಿ
- ಅರ್ಹ ಮಹಿಳೆಯರಿಗೆ ಮಾಸಿಕ ₹2,500 ನೀಡಲು ಒಟ್ಟು ₹5,100 ಕೋಟಿ ಮೀಸಲು
- ಮಹಿಳೆಯರ ಸುರಕ್ಷತೆ ಖಾತರಿಪಡಿಸಲು ನಗರದಾದ್ಯಂತ 50 ಸಾವಿರ ಸಿ.ಸಿ.ಟಿ.ವಿ ಕ್ಯಾಮೆರಾಗಳ ಅಳವಡಿಕೆ
- ತಿಹಾರ್ ಜೈಲನ್ನು ಸ್ಥಳಾಂತರಿಸಲು ನಗರದ ಹೊರವಲಯದಲ್ಲಿ ಹೊಸ ಜೈಲು ನಿರ್ಮಾಣ



ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಬಜೆಟ್ ಪ್ರತಿ ತೋರಿಸಿದರು —ಪಿಟಿಐ ಚಿತ್ರ


ನಮಗೂ ಅವರಿಗೂ (ಎಎಪಿ) ಸಾಕಷ್ಟು ವ್ಯತ್ಯಾಸವಿದೆ. ನೀವು (ಎಎಪಿ) ನಿಮಗಾಗಿ 'ಶೀಷಮಹಲ್' ಮಾಡಿದ್ದೀರಿ, ನಾವು ಬಡವರಿಗೆ ಮನೆ ನಿರ್ಮಿಸುತ್ತೇವೆ

ರೇಖಾ ಗುಪ್ತಾ, ದೆಹಲಿ ಸಿ.ಎಂ

ಕಠುವಾ: ಎ.ಕೆ–47 ಹಿಡಿದು ಕಾರ್ಯಾಚರಣೆಗಿಳಿದ ಡಿ.ಜಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಠುವಾದಲ್ಲಿ ನಡೆಯುತ್ತಿರುವ ಭಯೋತ್ಪಾದಕರ ವಿರುದ್ಧ ಎನ್‌ಕೌಂಟರ್ ಕಾರ್ಯಾಚರಣೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಮಹಾ ನಿರ್ದೇಶಕ ನಳಿನ್ ಪ್ರಭಾತ್ ಕೂಡ ಎ.ಕೆ.–47 ಬಂದೂಕು ಹಿಡಿದು ಪಾಲ್ಗೊಂಡಿದ್ದಾರೆ.



ನಳಿನ್ ಪ್ರಭಾತ್

ಹಿರಾನಗರ್ ವಲಯದಲ್ಲಿ ಅಂತರರಾಷ್ಟ್ರೀಯ ಗಡಿಯ ಬಳಿ ಸನ್ಯಾಲ್ ಗ್ರಾಮದಲ್ಲಿ ಭಾನುವಾರ ಭದ್ರತಾ ಪಡೆಗಳು ಶೋಧ ಕಾರ್ಯ ಆರಂಭಿಸಿದಾಗ ಗುಂಡಿನ ಚಕಮಕಿ ಆರಂಭಗೊಂಡಿತ್ತು. ಕಾರ್ಯಾಚರಣೆ ಮಂಗಳವಾರ ಮೂರನೇ ದಿನಕ್ಕೆ ಕಾಲಿಟ್ಟಿದ್ದು, ಹಿರಿಯ ಅಧಿಕಾರಿಗಳು ಕೂಡ ಭಾಗಿಯಾಗಿದ್ದಾರೆ. ದಟ್ಟ ಕಾಡಿನಲ್ಲಿ ಉಗ್ರರನ್ನು ಪತ್ತೆಹಚ್ಚಲು ಮಾನವರಹಿತ ವೈಮಾನಿಕ ವಾಹನ (ಯುಎವಿ), ಶ್ವಾನಪಡೆಗಳನ್ನು ಬಳಸಿಕೊಳ್ಳಲಾಗಿದೆ. ಹಿರಿಯ ಅಧಿಕಾರಿಗಳು ಬಂದೂಕು ಹಿಡಿದು, ಕಾಡಿನಲ್ಲಿ ಉಗ್ರರ ಅಡಗುತಾಣಗಳನ್ನು ಪತ್ತೆಹಚ್ಚುತ್ತಿದ್ದಾರೆ.

'ಭದ್ರತಾ ಪಡೆಗಳು ಸುತ್ತುವರಿದ ಜಾಗದಲ್ಲಿ ಭಯೋತ್ಪಾದಕರು ಸಿಲುಕಿದ್ದಾರೆ. ಆದಷ್ಟು ಬೇಗ ಅವರನ್ನು ಬಂಧಿಸಲಾಗುವುದು' ಎಂದು ಡಿಜಿಪಿ ಅವರು ಮಾಧ್ಯಮಗಳಿಗೆ ಖಚಿತಪಡಿಸಿದ್ದಾರೆ. ಪೊಲೀಸ್ ಇಲಾಖೆಯ ಮುಖ್ಯಸ್ಥರೇ ಕಾರ್ಯಾಚರಣೆ ಯಲ್ಲಿ ಭಾಗಿಯಾಗುವುದು ಅಪರೂಪದ ಬೆಳವಣಿಗೆಯಾಗಿದ್ದು, ಭಯೋತ್ಪಾದನೆ ನಿಗ್ರಹದಲ್ಲಿ ಬದ್ಧತೆಯನ್ನು ವ್ಯಕ್ತಪಡಿಸಿದ್ದಾರೆ.

ಮೂಲಗಳ ಪ್ರಕಾರ, ಅಮೆರಿಕ ನಿರ್ಮಿತ ಎಂ–4 ರೈಫಲ್ ಮ್ಯಾಗಜಿನ್ ಅನ್ನು ವಶಪಡಿಸಿಕೊಳ್ಳಲಾಗಿದೆ.

ಭದ್ರತಾ ಪಡೆಗಳು ಹಾಗೂ ಭಯೋತ್ಪಾದಕರ ನಡುವಿನ ಗುಂಡಿನ ಚಕಮಕಿಯ ಸಂದರ್ಭದಲ್ಲಿ ಏಳು ವರ್ಷ ವಯಸ್ಸಿನ ಬಾಲಕಿಯೊಬ್ಬಳಿಗೆ ಗಾಯಗಳಾಗಿವೆ. ಆಕೆ ಅಪಾಯದಿಂದ ಪಾರಾಗಿದ್ದಾಳೆ ಎಂದು ವೈದ್ಯರು ತಿಳಿಸಿದ್ದಾರೆ.

ನುಸುಳುಕೋರನ ಬಂಧನ

ಜಮ್ಮು (ಪಿಟಿಐ): ಪಾಕಿಸ್ತಾನದ ನುಸುಳುಕೋರನೊಬ್ಬನನ್ನು ಜಮ್ಮು–ಕಾಶ್ಮೀರದ ರಜೌರಿ ಜಿಲ್ಲೆಯಲ್ಲಿನ ಗಡಿ ನಿಯಂತ್ರಣ ರೇಖೆಯ ಬಳಿ ಮಂಗಳವಾರ ಬಂಧಿಸಲಾಗಿದೆ.

ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಕೋಟ್ಲಿ ನಿವಾಸಿ ಮೊಹದ್ ಯಾಕೂಬ್‌ನನ್ನು ಕೇರಿ ಸೆಕ್ಟರ್‌ನಿಂದ ಭಾರತದ ಗಡಿಯೊಳಗೆ ನುಸುಳುತ್ತಿದ್ದಾಗ ಭದ್ರತಾ ಪಡೆಗಳು ಬಂಧಿಸಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಬಂಧಿತನ ಬಳಿ ಯಾವುದೇ ಅಪಾಯಕಾರಿ ವಸ್ತು ಪತ್ತೆಯಾಗಿಲ್ಲ. ಆತ ಮಾದಕ ವಸ್ತುವಿನ ನಶೆಯಲ್ಲಿದ್ದ. ಆತನ ಬಗ್ಗೆ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಪ್ರತ್ಯೇಕತಾವಾದ ಕಿತ್ತೆಸೆದ ಮೋದಿ ಸರ್ಕಾರ'

ನವದೆಹಲಿ (ಪಿಟಿಐ): 'ಹುರಿಯತ್ ಕಾನ್ಫರೆನ್ಸ್‌ನ ಎರಡು ಘಟಕಗಳು ಪ್ರತ್ಯೇಕತಾವಾದದೊಂದಿಗಿನ ಎಲ್ಲ ಸಂಪರ್ಕಗಳನ್ನು ಕಡಿತಗೊಳಿಸುವುದಾಗಿ ತಿಳಿಸಿವೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

'ಈ ನಡೆಯಿಂದ ಭಾರತದ ಏಕತೆಯಲ್ಲಿ ಬಲವರ್ಧನೆಯಾಗಲಿದೆ. ಮೋದಿ ಸರ್ಕಾರದ ಏಕೀಕರಣದ ನೀತಿಯಿಂದ ಜಮ್ಮು ಮತ್ತು ಕಾಶ್ಮೀರದಲ್ಲಿದ್ದ ಪ್ರತ್ಯೇಕತಾವಾದವು ಸಂಪೂರ್ಣವಾಗಿ ನಿರ್ನಾಮವಾಗಿದೆ. ಏಕೀಕರಣದ ಭಾರತ ನಿರ್ಮಾಣದ ನಿಟ್ಟಿನಲ್ಲಿ ಬಹುದೊಡ್ಡ ಗೆಲುವಾಗಿದೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಬಕಾರಿ ಹಗರಣ: ವೈಎಸ್‌ಆರ್‌ಸಿಪಿ ಮಾಜಿ ರಾಜ್ಯಸಭೆ ಸದಸ್ಯ ಭಾಗಿ?

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹಿಂದಿನ ವೈಎಸ್‌ಆರ್‌ಸಿಪಿ ಸರ್ಕಾರದ ಆಡಳಿತಾವಧಿಯಲ್ಲಿನ ಅಬಕಾರಿ ಹಗರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ)ವು ಹಗರಣದಲ್ಲಿ ದೊಡ್ಡ ಮೊತ್ತ ವಿನಿಮಯವಾಗಿದ್ದು, ಇದರಲ್ಲಿ ಹಾಲಿ ಲೋಕಸಭೆ ಸದಸ್ಯ, ವೈಎಸ್ ಆರ್‌ಸಿಪಿಯ ಮಾಜಿ ರಾಜ್ಯಸಭೆ ಸದಸ್ಯ ಭಾಗಿಯಾಗಿದ್ದರು ಎಂದು ಆರೋಪಿಸಿದೆ.

ಈ ಹಗರಣದ ತನಿಖೆಗಾಗಿ ತೆಲುಗು ದೇಶಂ ಪಕ್ಷ ನೇತೃತ್ವದ ಹಾಲಿ ಎನ್‌ಡಿಎ ಸರ್ಕಾರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿತ್ತು. ಹಣದ ವಹಿವಾಟು ಬಹುತೇಕ 2019 ಮತ್ತು 2024ರ ಅವಧಿಯಲ್ಲಿ ನಡೆದಿದ್ದು, ಆಗ ಮದ್ಯ ಮಾರಾಟ ಮಳಿಗೆಗಳಲ್ಲಿ ಡಿಜಿಟಲ್ ಪಾವತಿಗೆ ನಿರ್ಬಂಧ ಇತ್ತು. ಹಣದ ಮೂಲಕವಷ್ಟೇ ವಹಿವಾಟು ನಡೆಯುತ್ತಿತ್ತು ಎಂದು ಹೇಳಿದೆ.

ಎಸ್‌ಐಟಿ ಈ ಸಂಬಂಧ ಮದ್ಯ ಉತ್ಪಾದಕರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿದೆ. ಹಗರಣದ ಮೊತ್ತವು ಅಂದಾಜು ₹4,000 ಕೋಟಿ ಇರಬಹುದು ಎನ್ನಲಾಗಿದೆ. ದೊಡ್ಡ ಮೊತ್ತದ ಅವ್ಯವಹಾರ ಆಗಿರುವ ಕಾರಣ ಜಾರಿ ನಿರ್ದೇಶನಾಲಯ (ಇ.ಡಿ) ಕೂಡ ತನಿಖೆ ನಡೆಸುವ ಸಾಧ್ಯತೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ. 'ಹೆಚ್ಚಿನ ಮದ್ಯ ಉತ್ಪಾದಕರ ಪ್ರಕಾರ, ಮದ್ಯದ ಪ್ರತಿ ಕೇಸ್‌ಗೆ ₹150 ರಿಂದ ₹200 ಸುಲಿಗೆ ಮಾಡಲಾಗಿದೆ. ಈ ಲೆಕ್ಕದಲ್ಲಿ ಮಾಸಿಕ ₹80 ಕೋಟಿವರೆಗೂ ವಸೂಲಿ ಮಾಡಲಾಗಿದೆ' ಎಂದು ಉತ್ಪಾದಕರು ತಿಳಿಸಿದ್ದಾರೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಅಬಕಾರಿ ಹಗರಣ ಆರೋಪದ ತನಿಖೆಗೆ ಎಸ್‌ಐಟಿ ರಚನೆಯಾದ ಹಿಂದೆಯೇ, ಸಿಐಡಿ ಕೂಡ ಈ ಸಂಬಂಧ ತನಿಖೆಯನ್ನು ನಡೆಸಿತ್ತು.

ವಿಚಾರಣೆ ಆರಂಭಿಸಿದ ಸಮಿತಿ

ನ್ಯಾ. ವರ್ಮಾ ಪ್ರಕರಣ

ಪ್ರಯಾಗರಾಜ್/ನವದೆಹಲಿ (ಪಿಟಿಐ): ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ಅಧಿಕೃತ ನಿವಾಸದಲ್ಲಿ ನೋಟುಗಳ ಕಂತೆ ಪತ್ತೆಯಾದ ಪ್ರಕರಣ ಕುರಿತು ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಸಮಿತಿಯು ವಿಚಾರಣೆ ಶುರುಮಾಡಿದೆ ಎಂದು ಮೂಲಗಳು ಹೇಳಿವೆ.



ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು, ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಿ.ಎಸ್. ಸಂಧಾವಾಲಿಯಾ, ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಅನು ಶಿವರಾಮನ್ ಸಮಿತಿಯಲ್ಲಿದ್ದಾರೆ.

ಸಮಿತಿ ಸದಸ್ಯರು ನ್ಯಾಯಮೂರ್ತಿ ವರ್ಮಾ ಅವರ ಮನೆಯಲ್ಲಿ ಅರ್ಧ ಗಂಟೆ ಇದ್ದರು, ಸ್ಥಳವನ್ನು ಪರಿಶೀಲಿಸಿದರು ಎಂದು ಗೊತ್ತಾಗಿದೆ.

ಮುಷ್ಕರ ಆರಂಭ: ನ್ಯಾಯಮೂರ್ತಿ ವರ್ಮಾ ಅವರನ್ನು ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡುವುದನ್ನು ವಿರೋಧಿಸಿ ಅಲಹಾಬಾದ್ ಹೈಕೋರ್ಟ್ ವಕೀಲರ ಸಂಘವು ಮಂಗಳವಾರ ಮುಷ್ಕರ ಆರಂಭಿಸಿದೆ.

'ಈ ಪ್ರತಿಭಟನೆಯು ನ್ಯಾಯಾಲಯ ಅಥವಾ ನ್ಯಾಯಮೂರ್ತಿಯ ವಿರುದ್ಧ ಅಲ್ಲ. ನ್ಯಾಯಾಂಗ ವ್ಯವಸ್ಥೆಗೆ ಮೋಸ ಎಸಗಿರುವವರ ವಿರುದ್ಧ ಈ ಪ್ರತಿಭಟನೆ' ಎಂದು ಸಂಘದ ಅಧ್ಯಕ್ಷ ಅನಿಲ್ ತಿವಾರಿ ಹೇಳಿದರು.

'ಭ್ರಷ್ಟಾಚಾರದಲ್ಲಿ ತೊಡಗಿದವರು ಹಾಗೂ ಪಾರದರ್ಶಕತೆಯ ಕೊರತೆ ಇರುವ ವ್ಯವಸ್ಥೆಯ ವಿರುದ್ಧ ನಮ್ಮ ಪ್ರತಿಭಟನೆ. ವರ್ಗಾವಣೆ ಆದೇಶದ ಮರುಪರಿಶೀಲನೆ ಆಗಬೇಕು ಹಾಗೂ ಅದನ್ನು ಹಿಂಪಡೆಯಬೇಕು ಎಂಬುದು ಈಗ ನಮ್ಮ ಬೇಡಿಕೆಯಾಗಿದೆ' ಎಂದು ಹೇಳಿದರು.

ಲೋಕಸಭೆಯಲ್ಲಿ ಚರ್ಚೆಗೆ ಆಗ್ರಹ

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ಮನೆಯಲ್ಲಿ ಭಾರಿ ಪ್ರಮಾಣದಲ್ಲಿ ನಗದು ಸಿಕ್ಕಿದೆ ಎಂಬ ಆರೋಪದ ಬಗ್ಗೆ ಚರ್ಚೆಗೆ ಅವಕಾಶ ಕಲ್ಪಿಸಬೇಕು ಎಂದು ಕಾಂಗ್ರೆಸ್ ಸದಸ್ಯ ಹಿಬಿ ಈಡನ್ ಅವರು ಲೋಕಸಭೆಯಲ್ಲಿ ಮಂಗಳವಾರ ಒತ್ತಾಯಿಸಿದರು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡಿದ ಅವರು, ನ್ಯಾಯಾಂಗದಲ್ಲಿ ಹೆಚ್ಚಿನ ಮಟ್ಟದಲ್ಲಿ ಉತ್ತರದಾಯಿತ್ವ ಸಾಧ್ಯವಾಗಿಸಲು ತೃಪ್ತಿಕರವಾದ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಚರ್ಚೆ ಆಗಬೇಕು ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಜೇಮ್ಸ್ ಜಾಮೀನು ಷರತ್ತು ಬದಲಾವಣೆ: ಇ.ಡಿಗೆ ನೋಟಿಸ್

ನವದೆಹಲಿ (ಪಿಟಿಐ): ಆಗಸ್ಟಾ ವೆಸ್ಟ್‌ಲ್ಯಾಂಡ್ ಪ್ರಕರಣಕ್ಕೆ ಸಂಬಂಧಿಸಿ ನೀಡಲಾಗಿರುವ ಜಾಮೀನಿನಲ್ಲಿ ವಿಧಿಸಲಾಗಿರುವ ಷರತ್ತಿನಲ್ಲಿ ಬದಲಾವಣೆ ಮಾಡುವಂತೆ ಕೋರಿ ಹಗರಣದ ಮಧ್ಯವರ್ತಿ ಎನ್ನಲಾದ ಕ್ರಿಶ್ಚಿಯನ್ ಮಿಷೆಲ್ ಜೇಮ್ಸ್ ಸಲ್ಲಿಸಿದ್ದ ಅರ್ಜಿಯ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ದೆಹಲಿ ಹೈಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

ಅರ್ಜಿಯ ವಿಚಾರಣೆಯನ್ನು ಏಪ್ರಿಲ್ 22ಕ್ಕೆ ನಿಗದಿ ಪಡಿಸಲಾಗಿದೆ.

ಆಗಸ್ಟಾ ವೆಸ್ಟ್‌ಲ್ಯಾಂಡ್ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಡಿ ಜೇಮ್ಸ್ ಅವರಿಗೆ ಮಾರ್ಚ್ 4ರಂದು ಜಾಮೀನು ನೀಡಿದ್ದ ದೆಹಲಿ ಹೈಕೋರ್ಟ್, ಜೇಮ್ಸ್ ಅವರು ವಿಚಾರಣಾ ನ್ಯಾಯಾಲಯದ ಮುಂದೆ ತಮ್ಮ ಪಾಸ್‌ಪೋರ್ಟ್ ಅನ್ನು ಒಪ್ಪಿಸುವುದರ ಜೊತೆಗೆ ತಲಾ ₹5 ಲಕ್ಷದ ವೈಯಕ್ತಿಕ ಬಾಂಡ್ ಮತ್ತು ಶ್ಯೂರಿಟಿ ನೀಡುವಂತೆ ಷರತ್ತು ವಿಧಿಸಿತ್ತು.

ತಾನು ವಿದೇಶಿ ಪ್ರಜೆ ಆಗಿರುವುದರಿಂದ ತನಗೆ ಭಾರತದಲ್ಲಿ ಬಂಧು–ಮಿತ್ರರಿಲ್ಲ. ಹಾಗಾಗಿ ಶ್ಯೂರಿಟಿ ನೀಡುವುದು ಕಷ್ಟಕರವಾಗಿರುತ್ತದೆ. ಹಳೆಯ ಪಾಸ್‌ಪೋರ್ಟ್‌ನ ಅವಧಿ ಮುಕ್ತಾಯವಾಗಿದ್ದು, ಹೊಸ ಪಾಸ್‌ಪೋರ್ಟ್ ಪಡೆಯಲು 4ರಿಂದ 8 ವಾರ ಬೇಕಾಗುತ್ತದೆ. ಆದ್ದರಿಂದ ಜಾಮೀನು ಷರತ್ತಿನಲ್ಲಿ ಬದಲಾವಣೆ ಮಾಡಬೇಕೆಂದು ಕೋರಿ ಜೇಮ್ಸ್ ಅರ್ಜಿ ಸಲ್ಲಿಸಿದ್ದರು.

ಅಲಹಾಬಾದ್ ಹೈಕೋರ್ಟ್‌ನ ವಿವಾದಿತ ಆದೇಶ 'ಸುಪ್ರೀಂ' ಗಮನಕ್ಕೆ

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್ ಈಚೆಗೆ ನೀಡಿದ್ದ ಒಂದು ಆದೇಶದಲ್ಲಿ 'ಸಂತ್ರಸ್ತ ಬಾಲಕಿಯ ಸ್ತನಗಳನ್ನು ಹಿಡಿದುಕೊಳ್ಳುವುದು, ಆಕೆಯ ಪೈಜಾಮಾದ ದಾರವನ್ನು ಹಿಡಿದು ಎಳೆಯುವುದಷ್ಟೇ' ಅತ್ಯಾಚಾರ ಆಗುವುದಿಲ್ಲ ಎಂದು ಹೇಳಿದ್ದುದನ್ನು ಪರಿಗಣನೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, ಬುಧವಾರ ಈ ಬಗ್ಗೆ ವಿಚಾರಣೆ ನಡೆಸುವ ಸಾಧ್ಯತೆ ಇದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು ಈ ವಿಚಾರವನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವ ನಿರೀಕ್ಷೆ ಇದೆ. ಅಲಹಾಬಾದ್ ಹೈಕೋರ್ಟ್ ಆದೇಶವೊಂದರಲ್ಲಿ ಇದ್ದ ಈ ಮಾತುಗಳನ್ನು ಕಾನೂನು ತಜ್ಞರು ವಿರೋಧಿಸಿದ್ದರು. ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ರಾಮ ಮನೋಹರ ನಾರಾಯಣ ಮಿಶ್ರಾ ಅವರು ನೀಡಿದ್ದ ಆದೇಶದಲ್ಲಿ ಈ ಮಾತು ಇತ್ತು.

ದ್ವಿಭಾಷಾ ಸೂತ್ರ ಅಚಲ: ಸ್ಟಾಲಿನ್

ಚೆನ್ನೈ: 'ತಮಿಳು ಭಾಷೆಯನ್ನು ರಕ್ಷಿಸುವ ಮತ್ತು ರಾಜ್ಯದ ಹಕ್ಕುಗಳನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಸದ್ಯದಲ್ಲಿಯೇ ಮಹತ್ವದ ಘೋಷಣೆ ಮಾಡುತ್ತೇನೆ' ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಮಂಗಳವಾರ ಪ್ರಕಟಿಸಿದರು.

ವಿಧಾನಸಭೆಯಲ್ಲಿ ದ್ವಿಭಾಷಾ ನೀತಿ ಕುರಿತು ಮಾತನಾಡಿದ ಅವರು, 'ತಮಿಳು, ಇಂಗ್ಲಿಷ್ ಒಳಗೊಂಡ ದ್ವಿಭಾಷಾ ಸೂತ್ರದ ಬಗ್ಗೆ ಮರು ಚಿಂತಿಸುವ ಅಗತ್ಯವೇ ಇಲ್ಲ' ಎಂದರು.

'ಎಷ್ಟೇ ಟೀಕೆಗಳು ಬಂದರೂ ದ್ವಿಭಾಷಾ ಸೂತ್ರವನ್ನು ನಾವು ತ್ಯಜಿಸುವುದಿಲ್ಲ. ಈ ವಿಚಾರದಲ್ಲಿ ರಾಜಿ ಇಲ್ಲ. ಕೇಂದ್ರ ಸರ್ಕಾರ ₹10,000 ಕೋಟಿ ಅನುದಾನ ನೀಡಿದರೂ ನಾವು ತ್ರಿಭಾಷಾ ಸೂತ್ರವನ್ನು ಸ್ವೀಕರಿಸುವುದಿಲ್ಲ. ಇದು ಹಣದ ವಿಚಾರ ಅಲ್ಲ; ತಮಿಳು ಜನಾಂಗದ ಹೆಮ್ಮೆಯ ವಿಚಾರ ಮತ್ತು ತಮಿಳುನಾಡಿನ ಯುವ ಪೀಳಿಗೆಯನ್ನು ರಕ್ಷಿಸುವ ವಿಚಾರ' ಎಂದರು.

'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಒಂದೆಡೆ ಭಾಷೆಗಳನ್ನು ಹೇರುತ್ತಿದ್ದರೆ, ಇನ್ನೊಂದೆಡೆ ರಾಜ್ಯಗಳ ವಿರುದ್ಧ ಆರ್ಥಿಕ ಅನ್ಯಾಯ ಎಸಗುತ್ತಿದೆ' ಎಂದು ಅವರು ಆರೋಪಿಸಿದರು.

'ಮಧುಬಲೆ': ಸಚಿವ ರಾಜಣ್ಣ ದೂರು

ಒಂದನೇ ಪುಟದಿಂದ...

ಸಿ.ಎಂ ಜೊತೆ ಚರ್ಚಿಸಿ ತೀರ್ಮಾನ: ಮುಖ್ಯಮಂತ್ರಿಯವರ ಭೇಟಿಗೂ ಮುನ್ನ ರಾಜಣ್ಣ ಅವರೊಂದಿಗೆ ತಮ್ಮ ನಿವಾಸದಲ್ಲಿ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಪರಮೇಶ್ವರ, 'ಪ್ರಕರಣದ ಕುರಿತು ತನಿಖೆ ನಡೆಸುವಂತೆ ದೂರು ಸಲ್ಲಿಸುವುದಾಗಿ ಸಹಕಾರ ಸಚಿವರು ಸದನದಲ್ಲೇ ತಿಳಿಸಿದ್ದರು. ಅದರಂತೆ ಈಗ ಪತ್ರ ನೀಡಿದ್ದಾರೆ. ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ, ಮುಂದಿನ ಕ್ರಮದ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

'ಈ ವಿಚಾರದಲ್ಲಿ ದೂರನ್ನು ನಾನು ಸ್ವೀಕರಿಸಲು ಸಾಧ್ಯವಿಲ್ಲ. ಪೊಲೀಸ್ ಠಾಣೆಯಲ್ಲೇ ದೂರು ಸಲ್ಲಿಸಬೇಕಾಗುತ್ತದೆ. ಈ ಮನವಿಯ ಆಧಾರದ ಮೇಲೆ ಕಾನೂನು ತಜ್ಞರ ಜೊತೆ ಚರ್ಚಿಸಿ, ಅವರ ಸಲಹೆ ಆಧರಿಸಿ ತೀರ್ಮಾನ ಮಾಡುತ್ತೇವೆ' ಎಂದು ಅವರು ತಿಳಿಸಿದರು.

'ಸದನದಲ್ಲಿ ನಡೆದ ಘಟನೆ ಮತ್ತು ಅದರ ಮುಂದುವರಿದ ಭಾಗವಾಗಿ ನನಗೆ ದೂರು ನೀಡುವುದಾಗಿ ತಿಳಿಸಿದ್ದರು. ಕಾನೂನು ವ್ಯಾಪ್ತಿಯಲ್ಲಿ ನಮಗೆ ಇರುವ ಅವಕಾಶಗಳ ಕುರಿತು ಕಾನೂನು ತಜ್ಞರು ಹಾಗೂ ಮುಖ್ಯಮಂತ್ರಿಯವರ ಜೊತೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

'ಸೇಡಿಗಾಗಿ ದೂರು ನೀಡಿಲ್ಲ': 'ನಾನು ಯಾರದ್ದೇ ವಿರುದ್ಧ ರಾಜಕೀಯ ಸೇಡು ತೀರಿಸಿಕೊಳ್ಳಲು ಅಥವಾ ಆರೋಪ ಮಾಡಲು ದೂರು ಸಲ್ಲಿಸಿಲ್ಲ. ಯತ್ನಾಳ ಅವರು ಸದನದಲ್ಲೇ ನನ್ನ ಹೆಸರು ಉಲ್ಲೇಖಿಸಿ ಮಾತನಾಡಿದ್ದರು. ಆಗಲೇ ನಾನು ಪ್ರತಿಕ್ರಿಯಿಸಿದ್ದೆ. ಈಗ ವಿವರಗಳೊಂದಿಗೆ ದೂರು ನೀಡಿದ್ದೇನೆ' ಎಂದು ರಾಜಣ್ಣ ಹೇಳಿದರು.

'ಹನಿಟ್ರ್ಯಾಪ್ ಪ್ರಯತ್ನ ನಡೆದಿರುವುದು ಇದೇ ಮೊದಲಲ್ಲ. ಹಿಂದೆ ಎಷ್ಟು ಮಂದಿಯನ್ನು ಅದರಲ್ಲಿ ಸಿಲುಕಿಸಲಾಗಿತ್ತು? ಎಷ್ಟು ಮಂದಿ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿದ್ದಾರೆ ಎಂಬುದು ನಿಮಗೆ ಗೊತ್ತಿದೆ. ಈ ರೀತಿಯ ಕೆಟ್ಟ ಚಾಳಿ ಸಾರ್ವಜನಿಕ ಜೀವನದಲ್ಲಿ ಮುಂದುವರಿಯಬಾರದು ಎಂಬ ಉದ್ದೇಶದಿಂದ ಈ ಕ್ರಮ ಕೈಗೊಂಡಿದ್ದೇನೆ' ಎಂದರು.

'ತುಮಕೂರಿನ ಸಚಿವರು ಹನಿಟ್ರ್ಯಾಪ್‌ಗೆ ಸಿಲುಕಿದ್ದಾರೆ ಎಂಬ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾಗಿತ್ತು. ಈ ಬಗ್ಗೆ ಸದನದಲ್ಲಿ ಪ್ರಸ್ತಾಪ ಆಗಿತ್ತು. ಆಗ, ನಾನು ಪ್ರತಿಕ್ರಿಯಿಸಿದ್ದೆ. ದೂರು ನೀಡಿದರೆ ತನಿಖೆ ನಡೆಸುವುದಾಗಿ ಗೃಹ ಸಚಿವರು ಭರವಸೆ ನೀಡಿದ್ದರು. ಆ ಕಾರಣದಿಂದ ದೂರು ಸಲ್ಲಿಸಿದ್ದೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಅಮಿತ್ ಶಾ ಭೇಟಿಯಾದ ಪಳನಿಸ್ವಾಮಿ; ಮೈತ್ರಿ ಸಾಧ್ಯತೆ?

ಪ್ರಜಾವಾಣಿ ವಾರ್ತೆ

ಚೆನ್ನೈ: ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರು ಕೇಂದ್ರ ಸಚಿವ ಅಮಿತ್ ಶಾ ಅವರನ್ನು ಮಂಗಳವಾರ ನವದೆಹಲಿಯಲ್ಲಿ ಭೇಟಿ ಮಾಡಿ, ತಮಿಳುನಾಡಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿರುವ ಬಗ್ಗೆ ಚರ್ಚೆ ನಡೆಸಿದ್ದಾರೆ.

2023ರ ಚುನಾವಣೆಯಲ್ಲಿ ಕೆಲವು ಗೊಂದಲಗಳಿಂದ ಮೈತ್ರಿ ಕಡಿದುಕೊಂಡಿದ್ದ ಈ ಎರಡು ಪಕ್ಷಗಳು ಮುಂಬರುವ ಚುನಾವಣೆಗೆ ಮತ್ತೆ ಮೈತ್ರಿ ಮಾಡಿಕೊಳ್ಳಬಹುದು, ಇದಕ್ಕೆ ಎಐಎಡಿಎಂಕೆ ಅಖಾಡ ಸಿದ್ಧಪಡಿಸಿಕೊಳ್ಳುತ್ತಿದೆ ಎನ್ನುವ ಚರ್ಚೆಯನ್ನು ಈ ಬೆಳವಣಿಗೆ ಹುಟ್ಟುಹಾಕಿದೆ.

ವಿಧಾನಸಭಾ ಚುನಾವಣೆಗೆ ಒಂದು ವರ್ಷ ಬಾಕಿ ಇದ್ದು, ಲೋಕಸಭೆ ಕ್ಷೇತ್ರಗಳ ಮರು ವಿಂಗಡಣೆ ಮತ್ತು ದ್ವಿಭಾಷಾ ನೀತಿಯಂತಹ ವಿವಾದಾತ್ಮಕ, ಭಾವನಾತ್ಮಕ ವಿಷಯಗಳನ್ನಿಟ್ಟುಕೊಂಡು ಡಿಎಂಕೆ ಹೋರಾಟ ನಡೆಸಲು ಪ್ರಜ್ಞಾಪೂರ್ವಕ ಪ್ರಯತ್ನ ಮಾಡುತ್ತಿರುವಾಗಲೇ ಪಳನಿಸ್ವಾಮಿ ಅವರು ಶಾ ಅವರನ್ನು ಭೇಟಿ ಮಾಡಿರುವುದು ತಮಿಳುನಾಡಿನಲ್ಲಿ ರಾಜಕೀಯ ಸಂಚಲನ ಮೂಡಿಸಿದೆ.

ಬಾಕಿ ಹಣ ಬಿಡುಗಡೆಗೆ ಆಗ್ರಹ: ಲೋಕಸಭೆಯಲ್ಲಿ ಪ್ರಸ್ತಾಪ

'ನರೇಗಾ' ತಾರತಮ್ಯ: ಕಾಂಗ್ರೆಸ್ ಪ್ರತಿಭಟನೆ

ನವದೆಹಲಿ (ಪಿಟಿಐ): 'ನರೇಗಾ' ಯೋಜನೆಯಡಿ ಕೂಲಿ ಮೊತ್ತ ಹೆಚ್ಚಿಸಬೇಕು ಮತ್ತು ತಾರತಮ್ಯವಿಲ್ಲದೆ ರಾಜ್ಯಗಳಿಗೆ ಬಾಕಿ ಉಳಿದಿರುವ ಮೊತ್ತ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಸಂಸದರು ಮಂಗಳವಾರ ಸಂಸತ್ತಿನ ಹೊರಗಡೆ ಪ್ರತಿಭಟಿಸಿದರು.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸಂಸದೆ ಪ್ರಿಯಾಂಕಾ ಗಾಂಧಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕರಾದ ಕೆ.ಸಿ. ವೇಣುಗೋಪಾಲ್, ಶಶಿ ತರೂರ್ ಹಾಗೂ ಪಕ್ಷದ ಕೇರಳ ಘಟಕದ ಹಲವು ಮುಖಂಡರಿದ್ದರು.

'ಹಣದುಬ್ಬರ ಹೆಚ್ಚಳದ ಹಿನ್ನೆಲೆಯಲ್ಲಿ ಕೂಲಿ ಮೊತ್ತವನ್ನು ಏರಿಸಬೇಕು ಎಂಬ ಒತ್ತಾಯವಿದೆ. ಆದರೆ, ಕೇಂದ್ರ ಸರ್ಕಾರ ಕ್ರಮ ಜರುಗಿಸದೇ ಲಕ್ಷಾಂತರ ಬಡ ಕುಟುಂಬದವರು ನರಳುವಂತೆ ಮಾಡಿದೆ' ಎಂದು ಪ್ರಿಯಾಂಕಾ ಗಾಂಧಿ ಆರೋಪಿಸಿದರು.



ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಮಂಗಳವಾರ ಸಂಸತ್ತಿನ ಹೊರಗೆ ಪ್ರತಿಭಟನೆ ನಡೆಸಿದ ವೇಳೆ ಮುಖಂಡರಾದ ಶಶಿ ತರೂರ್, ಕೆ.ಸಿ.ವೇಣುಗೋಪಾಲ್ ಮತ್ತು ಪಕ್ಷದ ಕೇರಳ ಘಟಕದ ಮುಖಂಡರು ಇದ್ದರು —ಪಿಟಿಐ ಚಿತ್ರ

ರಾಜ್ಯಗಳಿಗೆ ಬಾಕಿ ಇರುವ ಮೊತ್ತವನ್ನು ತಕ್ಷಣ ಬಿಡುಗಡೆ ಮಾಡಬೇಕು ಹಾಗೂ ನರೇಗಾ ಯೋಜನೆಯಡಿ ಕೆಲಸದ ಅವಧಿಯನ್ನು 150 ದಿನಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಲೋಕಸಭೆಯಲ್ಲೂ ಪ್ರಸ್ತಾಪ: ನರೇಗಾ ಯೋಜನೆ ಮೊತ್ತ ಬಾಕಿ ಉಳಿದಿದೆ ಎಂಬ ವಿಷಯ ಲೋಕಸಭೆ ಪ್ರಶ್ನೋತ್ತರ ಅವಧಿಯಲ್ಲೂ ವಾಗ್ವಾದಕ್ಕೆ ಕಾರಣವಾಯಿತು. ಆದರೆ, ತಾರತಮ್ಯ ಎಸಗಲಾಗಿದೆ ಎಂಬ ಪ್ರತಿಪಕ್ಷಗಳ ಆರೋಪವನ್ನು ಕೇಂದ್ರ ಸರ್ಕಾರ ನಿರಾಕರಿಸಿತು.

ಡಿಎಂಕೆ, ತೃಣಮೂಲ ಕಾಂಗ್ರೆಸ್ ಸದಸ್ಯರು ಪ್ರತಿಭಟಿಸಿದರು. ಇದರಿಂದ ಕೆಲ ಹೊತ್ತು ಕಲಾಪವನ್ನು ಮುಂದೂಡಲಾಯಿತು.

ಕೇರಳದ ಸಂಸದ ಅಡೂರ್ ಪ್ರಕಾಶ್ ಅವರು, 'ನರೇಗಾ ಯೋಜನೆಯ ಕೂಲಿ ಮೊತ್ತ ಬಿಡುಗಡೆ ವಿಳಂಬವಾಗಿದೆ. ಕೂಲಿ ಮೊತ್ತವೂ ಕಡಿಮೆ ಇದೆ' ಎಂದು ಗಮನಸೆಳೆದರು.

ಗ್ರಾಮೀಣಾಭಿವೃದ್ಧಿ ಖಾತೆ ರಾಜ್ಯ ಸಚಿವ ಚಂದ್ರಶೇಖರ್ ಪೆಮ್ಮಸಾನಿ ಅವರು, 'ಕೇರಳ ರಾಜ್ಯಕ್ಕೆ ಈ ವರ್ಷ ಈಗಾಗಲೇ ₹3,000 ಕೋಟಿ ಬಿಡುಗಡೆ ಆಗಿದೆ. ಕಳೆದ ವರ್ಷ ₹3,500 ಕೋಟಿ ಬಿಡುಗಡೆ ಆಗಿತ್ತು. ಹಣ ಬಿಡುಗಡೆ ನಿರಂತರ ಪ್ರಕ್ರಿಯೆ. ಬಾಕಿ ಇರುವುದನ್ನು ಕೆಲವು ವಾರಗಳಲ್ಲಿ ಬಿಡುಗಡೆ ಮಾಡಲಿದ್ದೇವೆ' ಎಂದು ಹೇಳಿದರು.

ರಾಜ್ಯಗಳಿಗೆ ಹಣ ಬಿಡುಗಡೆ ಆಗಿಲ್ಲ ಎಂಬ ಆರೋಪಕ್ಕೆ ದನಿಗೂಡಿಸಿದ ಡಿಎಂಕೆ ಸಂಸದೆ ಕನಿಮೊಳಿ, 'ನರೇಗಾ ಯೋಜನೆಯಡಿ ತಮಿಳುನಾಡಿಗೆ ₹4,034 ಕೋಟಿ ಬರಬೇಕಿತ್ತು. ಕಳೆದ ಐದು ತಿಂಗಳಿನಿಂದ ರಾಜ್ಯವು ಮೊತ್ತ ಬಿಡುಗಡೆಯ ನಿರೀಕ್ಷೆಯಲ್ಲಿದೆ' ಎಂದು ತಿಳಿಸಿದರು.

ಇದೇ ವೇಳೆ ಸರ್ಕಾರವನ್ನು ಸಮರ್ಥಿಸಿಕೊಂಡ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು, 'ಕೇಂದ್ರ ಸರ್ಕಾರ ಎಂದಿಗೂ ರಾಜ್ಯಗಳ ನಡುವೆ ತಾರತಮ್ಯವನ್ನು ಎಸಗಿಲ್ಲ' ಎಂದು ಪ್ರತಿಪಾದಿಸಿದರು.

ಚೆನ್ನೈ ವಿಐಟಿ: ವಾರ್ಷಿಕ ವಿಶ್ವವಿದ್ಯಾಲಯ ದಿನ

ಚೆನ್ನೈ: ನಮ್ಮ ದೇಶದಲ್ಲಿ ವೇಗವಾಗಿ ಬೆಳೆಯುತ್ತಿರುವ ಸಮುದಾಯದಲ್ಲಿ ಭಾರತೀಯ ಸಮುದಾಯ ಒಂದಾಗಿದೆ. ಆಸ್ಟ್ರೇಲಿಯಾದಲ್ಲಿ ಒಂದು ಮಿಲಿಯನ್ ಸಂಖ್ಯೆಗೂ ಮೀರಿ ಭಾರತೀಯರಿದ್ದಾರೆ ಎಂದು ಚೆನ್ನೈನಲ್ಲಿರುವ ಆಸ್ಟ್ರೇಲಿಯಾ ಕಾನ್ಸುಲೇಟ್ ಜನರಲ್‌ನ ವೈಸ್ ಕಾನ್ಸುಲ್ ಕತ್ರಿನಾ ಕ್ಯಾಪ್ ಹೇಳಿದ್ದಾರೆ.

ಮಂಗಳವಾರ ಚೆನ್ನೈನ VITಯಲ್ಲಿ ನಡೆದ ವಾರ್ಷಿಕ ವಿಶ್ವವಿದ್ಯಾಲಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೀರ್ಘಾವಧಿಯ ಆರ್ಥಿಕ ಸ್ಥಿತಿಸ್ಥಾಪಕತ್ವ ಮತ್ತು ಬೆಳವಣಿಗೆಗೆ ಅಡಿಪಾಯ ಹಾಕುವ ಮೂಲಕ ಇಲ್ಲಿನ ಕಾರ್ಯಪಡೆಯ ಕೌಶಲ್ಯವನ್ನು ಹೆಚ್ಚಿಸುವಲ್ಲಿ ಆಸ್ಟ್ರೇಲಿಯನ್ನರು ಕೊಡುಗೆ ನೀಡುತ್ತಿದ್ದಾರೆ. ನಮ್ಮ ದೇಶ ಅದರ ಮೇಲೆ ಹೆಚ್ಚು ಕೇಂದ್ರೀಕರಿಸುತ್ತಿದೆ.

ಆಸ್ಟ್ರೇಲಿಯಾ - ಭಾರತ ಸಂಬಂಧಗಳು ಸೇರಿದಂತೆ ಎರಡು ರಾಷ್ಟ್ರಗಳ ನಡುವಿನ ಸಹಯೋಗದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಆಗುತ್ತಿರುವ ಬೆಳವಣಿಗೆಯನ್ನು ಎತ್ತಿ ತೋರಿಸಿದ ಶ್ರೀಮತಿ ನ್ಯಾಪ್, ನಮ್ಮ ನಿಯೋಗದ ಬೆಂಬಲದ ಜತೆ ಸರ್ಕಾರ, ಕೈಗಾರಿಕೆ, ಶೈಕ್ಷಣಿಕ ಕ್ಷೇತ್ರ ಹಾಗೂ ಇಲ್ಲಿನ ಸಮಾಜದಲ್ಲಿ ನಡೆಯುತ್ತಿರುವ ಎಲ್ಲ ಕಾರ್ಯಗಳನ್ನು ಬೆಂಬಲಿಸಲು ಇದೊಂದು ಉತ್ತಮ ವೇದಿಕೆಯಾಗಿದೆ. MAITRI, (MITE-TREE) ಮೂಲಕ ಆಸ್ಟ್ರೇಲಿಯಾ 20 ದಶಲಕ್ಷ (ಆಸ್ಟ್ರೇಲಿಯನ್ ಡಾಲರ್) ಮೌಲ್ಯದ ಫೆಲೋಶಿಪ್‌ಗಳು, ವಿದ್ಯಾರ್ಥಿವೇತನಗಳು ಮತ್ತು ಸಂಶೋಧನಾ ಅನುದಾನಗಳನ್ನು ಘೋಷಿಸಿದೆ. ಎರಡೂ ರಾಷ್ಟ್ರಗಳ ನಡುವಿನ ಪಾಲುದಾರಿಕೆ ನಾವೀನ್ಯತೆಯು ದೇಶದ ಗಡಿ ಅಂತರವನ್ನು ಕಡಿಮೆ ಮಾಡಿದೆ ಎಂದು ವಿವರಿಸಿದರು.



ಆಸ್ಟ್ರೇಲಿಯಾ ಕಾನ್ಸುಲೇಟ್ ಜನರಲ್‌ನ ವೈಸ್ ಕಾನ್ಸುಲ್ ಶ್ರೀಮತಿ ಕತ್ರಿನಾ ಕ್ಯಾಪ್, ಅವರ ಎಡಭಾಗದಲ್ಲಿ ವಿಐಟಿ ಸಂಸ್ಥಾಪಕ ಕುಲಪತಿ ಡಾ. ಜಿ. ವಿಶ್ವನಾಥನ್, ಬಲ ಭಾಗದಲ್ಲಿ ಉಪಾಧ್ಯಕ್ಷ ಡಾ. ಜಿ.ವಿ. ಸೆಲ್ವಮ್ ಇತರರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಸಾಧಕರು ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.


ಆರ್ಥಿಕ ಅಭಿವೃದ್ಧಿಗೆ ಸಾಕ್ಷಿ: ವಿಐಟಿಯ ಸಂಸ್ಥಾಪಕ ಮತ್ತು ಕುಲಪತಿ ಡಾ. ಜಿ. ವಿಶ್ವನಾಥನ್ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಆಸ್ಟ್ರೇಲಿಯಾದ ತಲಾ ಆದಾಯ 68 ಸಾವಿರ ಡಾಲರ್ ಆಗಿರುವುದರಿಂದ, ಅದು ತನ್ನ ಜಿಡಿಪಿಯ ಶೇ 5 ರಷ್ಟು ಪಾಲನ್ನು ಶಿಕ್ಷಣಕ್ಕಾಗಿ ಖರ್ಚು ಮಾಡಲು ಸಾಧ್ಯವಾಗಿದೆ. ಆದ್ದರಿಂದಲೇ "ಉನ್ನತ ಶಿಕ್ಷಣದಲ್ಲಿ ಅವರ ಒಟ್ಟು ದಾಖಲಾತಿಯ ಅನುಪಾತ ದಕ್ಷಿಣ ಕೊರಿಯಾದಂತೆ ಶೇ 100 ರಷ್ಟಾಗಿದೆ. ಅವರಿಂದ ನಾವು ಬಹಳಷ್ಟು ಕಲಿಯಬೇಕಾಗಿದೆ. ಶಿಕ್ಷಣ ಮತ್ತು ಆರೋಗ್ಯದ ಮೇಲೆ ಹೆಚ್ಚು ಖರ್ಚು ಮಾಡುವ ಯಾವುದೇ ದೇಶ ಸರ್ವತೋಮುಖ ಆರ್ಥಿಕ ಅಭಿವೃದ್ಧಿಗೆ ಸಾಕ್ಷಿಯಾಗುತ್ತದೆ. ಶಿಕ್ಷಣದಲ್ಲಿ ಹಿಂದುಳಿದ ರಾಷ್ಟ್ರಗಳು ಉಳಿದೆಲ್ಲದರಲ್ಲೂ ಹಿಂದುಳಿದಿರುತ್ತವೆ".

ಒಟ್ಟು 50 ಲಕ್ಷ ಕೋಟಿಯ ಕೇಂದ್ರದ ಬಜೆಟ್ ಹಣದಲ್ಲಿ ಶಿಕ್ಷಣಕ್ಕೆ ಕೇವಲ 2.5% ಮಾತ್ರ ಹಂಚಿಕೆ ಮಾಡಲಾಗಿದೆ. ನೂತನ ಶಿಕ್ಷಣ ನೀತಿಯು ಜಿಡಿಪಿಯ 6% ಶಿಕ್ಷಣಕ್ಕೆ ಖರ್ಚು ಮಾಡಲು ಶಿಫಾರಸು ಮಾಡುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚಿನ ಅನುದಾನ ಮೀಸಲಿಡುವ ಮೂಲಕ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದರು

ವಿಐಟಿ ಉಪಾಧ್ಯಕ್ಷ ಡಾ. ಜಿ.ವಿ. ಸೆಲ್ವಂ ಅತ್ಯುತ್ತಮ ಕ್ಲಬ್/ವಿಶೇಷ ತಂಡ ಪ್ರಶಸ್ತಿಗಳು ಮತ್ತು ವಿಭಾಗದ ಸಾಧಕರಿಗೆ ಪ್ರಶಸ್ತಿಗಳನ್ನು ವಿತರಿಸಿದರು.

ಟಿಸಿಎಸ್ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ಸುದೀಪ್ ಕುನ್ನುಮಲ್, ಹೆಚ್ಚುವರಿ ರಿಜಿಸ್ಟ್ರಾರ್, ಪ್ರೊ-ವೈಸ್ ಚಾನ್ಸಲರ್ ಡಾ. ಟಿ. ತ್ಯಾಗರಾಜನ್ ಇತರರು ಭಾಗವಹಿಸಿದ್ದರು.

ಷೇರುಪೇಟೆ ವಹಿವಾಟು ▲33



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,658
ಇಂದಿನ ಅಂತ್ಯ	23,668
▲	10
ದಿನದ ಗರಿಷ್ಠ	23,869

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹455
12 ಕ್ಕೆ	₹63
ಮೈಸೂರು	
100ಕ್ಕೆ	₹455

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹295-555
ದ್ವಿತಳಿ (ಬಿ.ವಿ)	₹336-720

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹201
ಆರ್‌ಎಸ್‌ಎಸ್-5	₹195
ಗುಡ್ ಲಾಟ್	₹187

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1390 (1400)
ಸೋಯಾ (ರಿಫೈನ್ಡ್)	₹1275 (1290)
ಸೂರ್ಯಕಾಂತಿ (ರಿಫೈನ್ಡ್)	₹1390 (1395)
ಪಾಮೋಲಿನ್	₹1340 (1345)

ಅಡಿಕೆ ಧಾರಣೆ (₹ಗಳಲ್ಲಿ)

ಶಿವಮೊಗ್ಗ		ಹೊಸಚಾಲಿ	30699-36799	ರಾಶಿ	40909-47089
ಬೆಟ್ಟೆ	45100-56429	ಕೆಂಪುಗೋಟು	20319-21619	ಯಲ್ಲಾಪುರ	
ಗೊರಬಲು	18529-24509	ರಾಶಿ	42099-47099	ಬಿಳಿಗೋಟು	13612-29209
ರಾಶಿ	27000-52509	ತಟ್ಟಿಬೆಟ್ಟೆ	27689-39099	ಚಾಲಿ	30899-38709
ಸರಕು	55019-88696	ಶಿರಸಿ		ಕೋಕ	4609-18295
ಸಿದ್ದಾಪುರ		ಬೆಟ್ಟೆ	25899-39299	ಕೆಂಪುಗೋಟು	14099-26399
ಬಿಳಿಗೋಟು	22699-28299	ಬಿಳಿಗೋಟು	15100-36499	ರಾಶಿ	39509-57129
ಚಾಲಿ	32339-37109	ಚಾಲಿ	33099-38629	ತಟ್ಟಿಬೆಟ್ಟೆ	27519-38819
ಕೋಕ	13099-19099	ಕೆಂಪುಗೋಟು	13299-24369		

ವಿನಿಮಯ ದರ

$ ಡಾಲರ್	85.72
£ ಪೌಂಡ್	110.92
€ ಯುರೊ	92.66
¥ ಯೆನ್ (100ಕ್ಕೆ)	57

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,200-2,200
ಮಧ್ಯಮ	₹800-1,200
ಸಣ್ಣ	₹400-800

ಕೆನರಾ ಬ್ಯಾಂಕ್‌ಗೆ ನೇಮಕ

ಪ್ರಜಾವಾಣಿ ವಾರ್ತೆ



ಎಸ್‌.ಕೆ. ಮಜುಂದಾರ್

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕರಾಗಿ ಎಸ್.ಕೆ. ಮಜುಂದಾರ್ ನೇಮಕವಾಗಿದ್ದಾರೆ.

ಮಾರ್ಚ್ 24ರಿಂದಲೇ ಈ ನೇಮಕವು ಜಾರಿಗೆ ಬಂದಿದೆ. ಈ ಮೊದಲು ಬ್ಯಾಂಕ್‌ನ ಮುಖ್ಯ ಹಣಕಾಸು ಅಧಿಕಾರಿಯಾಗಿದ್ದ ಅವರಿಗೆ ಪದೋನ್ನತಿ ನೀಡಲಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

25 ವರ್ಷದ ಸೇವಾನುಭವ ಹೊಂದಿರುವ ಅವರು, ಬ್ಯಾಂಕ್‌ನ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ ಎಂದು ತಿಳಿಸಿದೆ.

ಟ್ರಂಪ್ ಸುಂಕದ ಒತ್ತಡಕ್ಕೆ ಮಣಿದ ಕೇಂದ್ರ ಸರ್ಕಾರ

ಗೂಗಲ್ ತೆರಿಗೆ ರದ್ದು

ನವದೆಹಲಿ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಏಪ್ರಿಲ್ 2ರಿಂದ ಭಾರತದ ಸರಕುಗಳ ಮೇಲೆ ಪ್ರತಿ ಸುಂಕ ವಿಧಿಸುವುದಾಗಿ ಘೋಷಿಸಿದ್ದಾರೆ. ಈ ಚಾಟಿಯಿಂದ ತಪ್ಪಿಸಿಕೊಳ್ಳಲು ಮುಂದಾಗಿರುವ ಕೇಂದ್ರ ಸರ್ಕಾರವು, ವಿದೇಶಿ ಕಂಪನಿಗಳ ಡಿಜಿಟಲ್ ಜಾಹೀರಾತುಗಳ ಮೇಲೆ ವಿಧಿಸುತ್ತಿದ್ದ ಶೇ 6ರಷ್ಟು ತೆರಿಗೆಯನ್ನು ರದ್ದುಪಡಿಸಿದೆ.

ಲೋಕಸಭೆಯಲ್ಲಿ ಮಂಗಳವಾರ ಅನುಮೋದನೆ ನೀಡಿದ ಹಣಕಾಸು ಮಸೂದೆ 2025ರಲ್ಲಿ ಈ ತೆರಿಗೆ ರದ್ದತಿ ಬಗ್ಗೆ ಪ್ರಸ್ತಾಪಿಸಲಾಗಿದೆ. ಈ ಮಸೂದೆಯು ಒಟ್ಟು 33 ತಿದ್ದುಪಡಿಗಳನ್ನು ಒಳಗೊಂಡಿದೆ.

ಸಮಾನೀಕರಣ ತೆರಿಗೆ ಅಥವಾ ಡಿಜಿಟಲ್ ತೆರಿಗೆಯು ದೇಶದ ತೆರಿಗೆ ವಲಯದಲ್ಲಿ 'ಗೂಗಲ್ ತೆರಿಗೆ' ಎಂದೇ ಜನಪ್ರಿಯವಾಗಿದೆ. ಗೂಗಲ್, ಎಕ್ಸ್ ಮತ್ತು ಮೆಟಾದಲ್ಲಿ ಪ್ರಕಟವಾಗುವ ಆನ್‌ಲೈನ್ ಜಾಹೀರಾತುಗಳ ಮೇಲೆ ಈ ತೆರಿಗೆ ವಿಧಿಸಲಾಗುತ್ತಿತ್ತು.

ಮಸೂದೆ ಮೇಲಿನ ಚರ್ಚೆ ವೇಳೆ ಮಾತನಾಡಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, 'ಜಾಗತಿಕ ಮಟ್ಟದಲ್ಲಿನ ಆರ್ಥಿಕ ಅನಿಶ್ಚಿತ ಸ್ಥಿತಿಯಿಂದಾಗಿ ಈ ತೆರಿಗೆಯನ್ನು ಕೈಬಿಡಲಾಗಿದೆ' ಎಂದು ಸಮರ್ಥಿಸಿಕೊಂಡರು.

ಸಂಸತ್ ಈ ತೆರಿಗೆ ರದ್ದತಿಯನ್ನು ಅನುಮೋದಿಸಿದರೆ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ.

ಯಾರಿಗೆ ಅನುಕೂಲ ಹೆಚ್ಚು?: ಸರ್ಕಾರದ ಈ ನಿರ್ಧಾರದಿಂದ ಗೂಗಲ್, ಮೆಟಾ ಹಾಗೂ ಉದ್ಯಮಿ ಇಲಾನ್ ಮಸ್ಕ್ ಒಡೆತನದ 'ಎಕ್ಸ್'ಗೆ ಹೆಚ್ಚಿನ ಪ್ರಯೋಜನವಾಗಲಿದೆ. ಅಮೆರಿಕವು ವಿಧಿಸಲಿರುವ ಅತಿಹೆಚ್ಚು ಸುಂಕದಿಂದ ತಪ್ಪಿಸಿಕೊಳ್ಳಲು ಕೇಂದ್ರವು ಈ ತೆರಿಗೆ ರದ್ದುಪಡಿಸಿದೆ ಎಂದು ಹೇಳಲಾಗಿದೆ.

ಭಾರತೀಯರಲ್ಲದವರ ಡಿಜಿಟಲ್ ವಹಿವಾಟುಗಳಿಗೆ 2016ರಲ್ಲಿ ಈ ತೆರಿಗೆ ಜಾರಿಗೊಳಿಸಲಾಗಿತ್ತು. ಅದೇ ವರ್ಷದ ಜೂನ್ 1ರಿಂದ ಜಾರಿಗೆ ಬಂದಿತ್ತು.

ಹಣಕಾಸು ಕಾಯ್ದೆಗೆ 2020ರಲ್ಲಿ ತಂದ ತಿದ್ದುಪಡಿಯಲ್ಲಿ ಇ–ಕಾಮರ್ಸ್ ಮಾರಾಟ ಮತ್ತು ಸೇವೆಗಳ ಮೇಲೂ ಶೇ 2ರಷ್ಟು ತೆರಿಗೆ ಹೇರಲಾಗಿತ್ತು. ಈ ತೆರಿಗೆಯನ್ನು ಕಳೆದ ವರ್ಷದ ಆಗಸ್ಟ್ 1ರಂದು ರದ್ದುಪಡಿಸಲಾಗಿತ್ತು.

'ವಿದೇಶಿ ಕಂಪನಿಗಳ ಆನ್‌ಲೈನ್ ಜಾಹೀರಾತು ಆದಾಯಕ್ಕೆ ಈ ಡಿಜಿಟಲ್ ತೆರಿಗೆ ಅನ್ವಯವಾಗುತ್ತದೆ' ಎಂದು ಇವೈ ಇಂಡಿಯಾದ ಪಾಲುದಾರ ರಾಜೇಂದ್ರ ನಾಯಕ್ ಹೇಳಿದ್ದಾರೆ.

ಲೋಕಸಭೆಯಲ್ಲಿ ಅನುಮೋದನೆಗೊಂಡಿರುವ ಈ ಮಸೂದೆಯನ್ನು ರಾಜ್ಯಸಭೆಯ ಒಪ್ಪಿಗೆಗೆ ರವಾನಿಸಲಾಗಿದೆ.

ಹೊಸ ಆದಾಯ ತೆರಿಗೆ ಮಸೂದೆ ಮುಂಗಾರು ಅಧಿವೇಶನದಲ್ಲಿ ಚರ್ಚೆ

ನವದೆಹಲಿ (ಪಿಟಿಐ): 'ಮುಂಗಾರು ಅಧಿವೇಶನದಲ್ಲಿ ಹೊಸ ಆದಾಯ ತೆರಿಗೆ ಮಸೂದೆ ಬಗ್ಗೆ ವಿಸ್ತೃತ ಚರ್ಚೆ ನಡೆಸಲಾಗುವುದು' ಎಂದು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಫೆಬ್ರುವರಿ 13ರಂದು ಲೋಕಸಭೆಯಲ್ಲಿ ಈ ಮಸೂದೆ ಮಂಡಿಸಲಾಗಿದ್ದು, ಸದನದ ಪರಿಶೀಲನಾ ಸಮಿತಿಯ ಪರಾಮರ್ಶೆಗೆ ಒಪ್ಪಿಸಲಾಗಿದೆ. ಮುಂದಿನ ಅಧಿವೇಶನದಲ್ಲಿ ವರದಿ ಮಂಡಿಸಲು ಸಮಿತಿಗೆ ಸೂಚಿಸಲಾಗಿದೆ.



ಹಣಕಾಸು ಮಸೂದೆಯು ದೇಶದ ಮಧ್ಯಮ ವರ್ಗದವರಿಗೆ ಹೆಚ್ಚಿನ ಅನುಕೂಲ ಕಲ್ಪಿಸಿದೆ. ಅಧಿಕ ತೆರಿಗೆ ಹೊರೆಯನ್ನು ಇಳಿಸಿದೆ
ನಿರ್ಮಲಾ ಸೀತಾರಾಮನ್
ಕೇಂದ್ರ ಹಣಕಾಸು ಸಚಿವೆ

ಜುಲೈನಿಂದ ಆರಂಭವಾಗಲಿರುವ ಮುಂಗಾರು ಅಧಿವೇಶನವೂ ಆಗಸ್ಟ್‌ವರೆಗೂ ನಡೆಯಲಿದೆ.

'ಹಳೆಯ ಕಾಯ್ದೆಯಡಿ ಡಿಜಿಟಲ್ ಸ್ವತ್ತುಗಳನ್ನು ತನಿಖೆಗೆ ಒಳಪಡಿಸಲು ಕಾನೂನಿನ ಬಲ ಇರಲಿಲ್ಲ. ಹೊಸ ಮಸೂದೆಯಲ್ಲಿ ಅಧಿಕಾರಿಗಳು ಡಿಜಿಟಲ್ ವಹಿವಾಟುಗಳ ಮೇಲೂ ನಿಗಾ ಇಡಲು ಅವಕಾಶ ಕಲ್ಪಿಸಲಾಗಿದೆ' ಎಂದು ನಿರ್ಮಲಾ ಹೇಳಿದ್ದಾರೆ.

ಚಿನ್ನ ನಗದೀಕರಣ ಯೋಜನೆ ಸ್ಥಗಿತ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಚಿನ್ನದ ನಗದೀಕರಣ ಯೋಜನೆಯನ್ನು (ಜಿಎಂಎಸ್) ಬುಧವಾರದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಆದರೆ, ಬ್ಯಾಂಕ್‌ಗಳು ಅಲ್ಪಾವಧಿಯ ಚಿನ್ನ ಠೇವಣಿಯನ್ನು (1ರಿಂದ 3 ವರ್ಷ) ಮುಂದುವರಿಸಬಹುದಾಗಿದೆ ಎಂದು ಹೇಳಿದೆ.

ಚಿನ್ನದ ಆಮದು ತಗ್ಗಿಸುವ ಉದ್ದೇಶದಿಂದ ಸರ್ಕಾರವು 2015ರ ಸೆಪ್ಟೆಂಬರ್ 15ರಂದು ಈ ಯೋಜನೆಯನ್ನು ಜಾರಿಗೊಳಿಸಿತ್ತು. ವ್ಯಕ್ತಿಗಳು ಮತ್ತು ಸಂಸ್ಥೆಗಳು ಬ್ಯಾಂಕ್‌ಗಳಲ್ಲಿ ಚಿನ್ನವನ್ನು ಠೇವಣಿ ಇಡಬಹುದಾಗಿದೆ. ಇದಕ್ಕೆ ಬಡ್ಡಿ ನೀಡಲಾಗುತ್ತದೆ.

ಕಳೆದ ವರ್ಷದ ನವೆಂಬರ್ ಅಂತ್ಯದವರೆಗೆ ಈ ಯೋಜನೆಯಡಿ ಬ್ಯಾಂಕ್‌ಗಳು ಒಟ್ಟು 31,164 ಕೆ.ಜಿ ಚಿನ್ನವನ್ನು ಠೇವಣಿ ರೂಪದಲ್ಲಿ ಸಂಗ್ರಹಿಸಿವೆ.

ಸುದ್ದಿ 2 ನಿಮಿಷ

ಪಿಎಂ–ಕಿಸಾನ್: ಅನರ್ಹರಿಂದ ₹416 ಕೋಟಿ ವಸೂಲಿ

ನವದೆಹಲಿ (ಪಿಟಿಐ): ಪಿಎಂ-ಕಿಸಾನ್ ಯೋಜನೆಯಡಿ ಅನರ್ಹರಿಗೆ ಇಲ್ಲಿಯವರೆಗೆ ವಿತರಿಸಿದ್ದ ₹416 ಕೋಟಿ ಪ್ರೋತ್ಸಾಹಧನವನ್ನು ವಸೂಲಿ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರವು, ಮಂಗಳವಾರ ಸಂಸತ್‌ಗೆ ತಿಳಿಸಿದೆ.

2019ರಲ್ಲಿ ಈ ಯೋಜನೆ ಜಾರಿಗೊಂಡಿದ್ದು, ಇಲ್ಲಿಯವರೆಗೆ 19 ಕಂತುಗಳಲ್ಲಿ ₹3.68 ಲಕ್ಷ ಕೋಟಿಯನ್ನು ರೈತರಿಗೆ ವಿತರಿಸಲಾಗಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು, ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ವಾರ್ಷಿಕ ₹6 ಸಾವಿರ ಮೊತ್ತವನ್ನು ಮೂರು ಕಂತಿನಲ್ಲಿ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮೆ ಮಾಡಲಾಗುತ್ತದೆ. ನಿಯಮಾವಳಿ ಪಾಲಿಸದವರಿಗೆ ಸೌಲಭ್ಯವನ್ನು ಸ್ಥಗಿತಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಅರ್ಹರ ಭೂ ದಾಖಲೆ ಮತ್ತು ಆಧಾರ್ ನೋಂದಣಿಯನ್ನು ಕಡ್ಡಾಯಗೊಳಿಸಲಾಗಿದೆ. ಇ-ಕೆವೈಸಿ ಪ್ರಕ್ರಿಯೆ ಪೂರ್ಣಗೊಳಿಸಬೇಕಿದೆ. ಈ ನಿಯಮ ಪಾಲನೆ ಮಾಡದವರಿಗೆ ಹಣ ಜಮೆ ಮಾಡಿಲ್ಲ. ಈ ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಬಾಕಿ ಮೊತ್ತವು ಅವರ ಖಾತೆಗಳಿಗೆ ಜಮೆಯಾಗಲಿದೆ ಎಂದು ವಿವರಿಸಿದ್ದಾರೆ.

ಆದಾಯ ತೆರಿಗೆ ಪಾವತಿದಾರರು, ಸಾರ್ವಜನಿಕ ವಲಯದ ಉದ್ದಿಮೆ, ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು, ಸಾಂವಿಧಾನಿಕ ಹುದ್ದೆ ಹೊಂದಿದವರು ಈ ಸೌಲಭ್ಯಕ್ಕೆ ಅರ್ಹರಲ್ಲ. ಅಂತಹವರಿಗೆ ಪಾವತಿಸಿರುವ ಹಣವನ್ನು ವಸೂಲಿ ಮಾಡುವ ಜವಾಬ್ದಾರಿಯನ್ನು ರಾಜ್ಯಗಳಿಗೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.



7.81 ಲಕ್ಷ ಸಿಮ್ ಕಾರ್ಡ್ ಬಳಕೆಗೆ ನಿರ್ಬಂಧ: ಕೇಂದ್ರ

ನವದೆಹಲಿ (ಪಿಟಿಐ): ಡಿಜಿಟಲ್ ವಂಚನೆ ಪ್ರಕರಣಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಪ್ರಸಕ್ತ ವರ್ಷದಲ್ಲಿ ಫೆಬ್ರುವರಿವರೆಗೆ 7.81 ಲಕ್ಷ ಸಿಮ್ ಕಾರ್ಡ್ ಬಳಕೆಗೆ ನಿರ್ಬಂಧ ಹೇರಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಪೊಲೀಸ್ ಅಧಿಕಾರಿಗಳು ನೀಡಿರುವ 2.08 ಲಕ್ಷ ಅಂತರರಾಷ್ಟ್ರೀಯ ಮೊಬೈಲ್ ಸಲಕರಣೆ ಗುರುತು ಸಂಖ್ಯೆಗಳಿಗೂ ನಿರ್ಬಂಧ ವಿಧಿಸಲಾಗಿದೆ ಎಂದು ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಬಂಡಿ ಸಂಜಯ್ ಕುಮಾರ್ ಅವರು, ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಡಿಜಿಟಲ್ ಅರೆಸ್ಟ್ ಕೃತ್ಯಕ್ಕೆ ಬಳಕೆಯಾಗುತ್ತಿದ್ದ 3,962 ಸ್ಕೈಪ್ ಐಡಿ ಹಾಗೂ 83,668 ವಾಟ್ಸ್‌ಆ್ಯಪ್ ಖಾತೆಗಳಿಗೆ ನಿರ್ಬಂಧ ವಿಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೇಂದ್ರ ಹಣಕಾಸು ಕಾರ್ಯದರ್ಶಿಯಾಗಿ ಅಜಯ್ ಸೇಠ್



ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಕಾರ್ಯದರ್ಶಿಯಾಗಿ ಅಜಯ್ ಸೇಠ್ ಅವರು ನೇಮಕಗೊಂಡಿದ್ದಾರೆ.

1987ರ ಬ್ಯಾಚ್‌ನ ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿ ಆಗಿರುವ ಅವರು ಪ್ರಸ್ತುತ ಆರ್ಥಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯಾಗಿದ್ದಾರೆ. ನೇಮಕಾತಿ ಕುರಿತ ಸಂಪುಟ ಸಮಿತಿಯು (ಎಸಿಸಿ) ಸೇಠ್ ಅವರನ್ನು ಹಣಕಾಸು ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಲು ಅನುಮೋದನೆ ನೀಡಿದೆ ಎಂದು ಕೇಂದ್ರ ಸಿಬ್ಬಂದಿ ಸಚಿವಾಲಯ ತಿಳಿಸಿದೆ.

ಹಣಕಾಸು ಕಾರ್ಯದರ್ಶಿಯಾಗಿದ್ದ ತುಹಿನ್ ಕಾಂತ್ ಪಾಂಡೆ ಅವರು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಅವರಿಂದ ತೆರವಾಗಿರುವ ಹುದ್ದೆಯ ಜವಾಬ್ದಾರಿಯನ್ನು ಸೇಠ್ ಅವರಿಗೆ ವಹಿಸಲಾಗಿದೆ. ಕೇಂದ್ರ ಹಣಕಾಸು ಸಚಿವಾಲಯದಲ್ಲಿ ಹಿರಿಯ ಕಾರ್ಯದರ್ಶಿ ಹುದ್ದೆಯಲ್ಲಿ ಇದ್ದವರನ್ನು ಹಣಕಾಸು ಕಾರ್ಯದರ್ಶಿಯನ್ನಾಗಿ ನೇಮಿಸಲಾಗುತ್ತದೆ.

ವಿಮಾನ ಹ್ಯಾಕ್ ಹೇಳಿಕೆ ಅಲ್ಲಗಳೆದ ಭಾರತೀಯ ಸೇನೆ

ನವದೆಹಲಿ (ಪಿಟಿಐ): ಸೇನಾ ಪಡೆಗೆ ಸೇರಿದ ವಿಮಾನವೊಂದನ್ನು (ಆರ್‌ಪಿಎ) ಚೀನಾ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದೆ ಎಂಬ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಸುದ್ದಿಯನ್ನು ಭಾರತೀಯ ಸೇನೆ ತಳ್ಳಿಹಾಕಿದೆ.

ಇಂತಹ ಸುಳ್ಳು ಸುದ್ದಿಗಳನ್ನು ಮಾಧ್ಯಮ ಸಂಸ್ಥೆಗಳು ಮತ್ತು ಸಾಮಾಜಿಕ ಮಾಧ್ಯಮ ಬಳಕೆದಾರರು ಪ್ರಸಾರ ಮಾಡಬಾರದು. ಅಲ್ಲದೆ, ಸೇನೆಯು ತನ್ನ ಎಲ್ಲಾ ಆಸ್ತಿಗಳ ಭದ್ರತೆ ಮತ್ತು ಕಾರ್ಯಾಚರಣೆಯ ಸಮಗ್ರತೆಯನ್ನು ಕಾಯ್ದುಕೊಂಡಿದೆ ಎಂದು ಸೇನಾ ಮೂಲಗಳು ತಿಳಿಸಿವೆ.

ದೇಶದ ಪೂರ್ವದ ಗಡಿಯಲ್ಲಿ ತಾಲೀಮು ಹಾರಾಟ ನಡೆಸುವಾಗ ರಿಮೋಟ್ ನಿಯಂತ್ರಿತ ವಿಮಾನವೊಂದು ಚೀನಾದ ವಾಯು ಗಡಿಯನ್ನು ಪ್ರವೇಶಿಸಿತ್ತು. ಆಗ ಆ ವಿಮಾನವನ್ನು ಚೀನಾ ಸೇನೆ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗಿತ್ತು. ಇದನ್ನು ಅಲ್ಲಗಳೆದಿರುವ ಭಾರತೀಯ ಸೇನೆ 'ಇದು ಸಂಪೂರ್ಣ ಆಧಾರರಹಿತ ಸುದ್ದಿ. ಅಂತಹ ಯಾವುದೇ ಘಟನೆ ನಡೆದಿಲ್ಲ' ಎಂದು ಸೇನಾ ಮೂಲಗಳು ಸ್ಪಷ್ಟಪಡಿಸಿವೆ.

ರಷ್ಯಾ, ಉಕ್ರೇನ್ ಜತೆ ಅಮೆರಿಕ ಮಾತುಕತೆ

ದುಬೈ (ಎಪಿ/ ರಾಯಿಟರ್ಸ್): ಪ್ರಸ್ತಾವಿತ ಭಾಗಶಃ ಕದನ ವಿರಾಮ ಕುರಿತು ರಷ್ಯಾ ಮತ್ತು ಉಕ್ರೇನ್ ಪ್ರತಿನಿಧಿಗಳ ತಂಡದೊಂದಿಗೆ ಅಮೆರಿಕದ ಸಂಧಾನಕಾರರು ಸೌದಿ ಅರೇಬಿಯಾದ ರಾಜಧಾನಿ ರಿಯಾದ್‌ನಲ್ಲಿ ಸೋಮವಾರ ಪ್ರತ್ಯೇಕ ಮಾತುಕತೆ ನಡೆಸಿದರು.

ಉಕ್ರೇನ್ ಮತ್ತು ರಷ್ಯಾ ನಡುವೆ ಮೂರು ವರ್ಷಗಳಿಂದ ನಡೆಯುತ್ತಿರುವ ಯುದ್ಧವನ್ನು ಕೊನೆಗಾಣಿಸಲು ಅಮೆರಿಕ ಈ ಮೂಲಕ ಪ್ರಯತ್ನ ಮುಂದುವರಿಸಿದೆ.

ಕಳೆದ ವಾರ ರಷ್ಯಾ ಮತ್ತು ಉಕ್ರೇನ್ ತಾತ್ವಿಕವಾಗಿ ಒಪ್ಪಿಕೊಂಡಿದ್ದ 30 ದಿನಗಳ ಕದನ ವಿರಾಮ ಪರಿಣಾಮಕಾರಿಯಾಗಿ ಜಾರಿಯಾಗಿಲ್ಲ. ಎರಡೂ ಕಡೆಯವರು ಪರಸ್ಪರರ ವಿರುದ್ಧ ಡ್ರೋನ್ ಮತ್ತು ಕ್ಷಿಪಣಿ ದಾಳಿಗಳನ್ನು ಮುಂದುವರಿಸಿದ್ದಾರೆ.

ವಾಣಿಜ್ಯ ಸಾಗಣೆ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು, ಕಪ್ಪು ಸಮುದ್ರದಲ್ಲಿನ ದಾಳಿಗಳನ್ನು ನಿಲ್ಲಿಸುವ ಕುರಿತು ಸೋಮವಾರ ಮಾತುಕತೆ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಅಮೆರಿಕದ ಸಂಧಾನಕಾರರನ್ನು ಉಕ್ರೇನ್ ಪ್ರತಿನಿಧಿಗಳು ಮತ್ತೆ ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮಾಹಿತಿ ನೀಡಿದ್ದಾರೆ.

ಮಾತುಕತೆಯ ವಿವರಗಳನ್ನು ಬಹಿರಂಗಪಡಿಸಲು ರಷ್ಯಾ ನಿರಾಕರಿಸಿದೆ. ಈ ಮಾತುಕತೆಯ ಫಲಿತಾಂಶಗಳನ್ನು ರಷ್ಯಾ ಮತ್ತು ಅಮೆರಿಕ ಅಧ್ಯಯನ ನಡೆಸಲಿವೆ ಎಂದು ಕ್ರೆಮ್ಲಿನ್ ವಕ್ತಾರ ಡಿಮಿತ್ರಿ ಪೆಸ್ಕೋವ್ ಹೇಳಿದ್ದಾರೆ.

ಇಸ್ರೇಲ್ ದಾಳಿ: 23 ಜನ ಸಾವು

ದೀರ್ ಅಲ್–ಬಲಾಹ್ (ಎಪಿ): ಗಾಜಾಪಟ್ಟಿಯ ಮೇಲೆ ಮಂಗಳವಾರ ರಾತ್ರಿಯಿಡಿ ಇಸ್ರೇಲ್ ನಡೆಸಿದ ದಾಳಿಯಿಂದಾಗಿ 23 ಮಂದಿ ಮೃತಪಟ್ಟಿದ್ದಾರೆ.

ದಕ್ಷಿಣ ನಗರವಾದ ಖಾನ್ ಯೂನಿಸ್‌ನಲ್ಲಿ ಟೆಂಟ್‌ವೊಂದರಲ್ಲಿದ್ದ ಮೂರು ಮಕ್ಕಳು, ಅವರ ಪೋಷಕರು ಸೇರಿದಂತೆ ಹಲವರು ಮೃತಪಟ್ಟಿದ್ದಾರೆ ಎಂದು ನಸೇರ್ ಆಸ್ಪತ್ರೆ ಹೇಳಿದೆ.

ಮೂರು ಪ್ರತ್ಯೇಕ ದಾಳಿಗಳಲ್ಲಿ 6 ಮಂದಿ ಮೃತಪಟ್ಟಿದ್ದಾರೆ ಎಂದು ಅಲ್ ಅಕ್ಸಾ ಆಸ್ಪತ್ರೆ ತಿಳಿಸಿದೆ. ಮತ್ತೊಂದು ದಾಳಿಯಲ್ಲಿ ನುಸೈರತ್ ನಿರಾಶ್ರಿತರ ಶಿಬಿರದಲ್ಲಿದ್ದ ಮೂವರು ಹತ್ಯೆಯಾಗಿದ್ದಾರೆ ಎಂದು ಅವ್ದಾ ಆಸ್ಪತ್ರೆ ಹೇಳಿದೆ. ವಸತಿ ಕಟ್ಟಡವೊಂದರ ಮೇಲೆ ನಡೆದ ದಾಳಿಯಲ್ಲಿ 5 ಮಂದಿ ಮೃತಪಟ್ಟಿದ್ದಾರೆ. 12 ಮಂದಿ ಗಾಯಗೊಂಡಿದ್ದಾರೆ ಎಂದು ಆರೋಗ್ಯ ಇಲಾಖೆಯ ತುರ್ತು ಸೇವೆ ವಿಭಾಗ ತಿಳಿಸಿದೆ.

₹5,150 ಕೋಟಿ ಪಾವತಿಗೆ ಕೇಂದ್ರದಿಂದ ನೋಟಿಸ್

ಸ್ಯಾಮ್ಸಂಗ್‌ಗೆ ತಟ್ಟಿದ ತೆರಿಗೆ ಬಿಸಿ

ನವದೆಹಲಿ (ರಾಯಿಟರ್ಸ್): ಟೆಲಿಕಾಂ ಉಪಕರಣಗಳ ಆಮದು ವೇಳೆ ಸುಂಕ ಪಾವತಿಗೆ ನುಣುಚಿಕೊಂಡಿದ್ದ ದಕ್ಷಿಣ ಕೊರಿಯಾದ ಸ್ಯಾಮ್ಸಂಗ್ ಇಂಡಿಯಾ ಕಂಪನಿಗೆ, ₹5,150 ಕೋಟಿ ತೆರಿಗೆ ಪಾವತಿಸುವಂತೆ ಕೇಂದ್ರ ಸರ್ಕಾರ ನೋಟಿಸ್ ನೀಡಿದೆ.

ಇತ್ತೀಚಿನ ವರ್ಷಗಳಲ್ಲಿ ಬಹುರಾಷ್ಟ್ರೀಯ ಕಂಪನಿಯೊಂದಕ್ಕೆ ಅತಿಹೆಚ್ಚು ಮೊತ್ತದ ತೆರಿಗೆ ಬಾಕಿ ಪಾವತಿಸುವಂತೆ ಆದೇಶಿಸಿರುವ ಪ್ರಕರಣ ಇದಾಗಿದೆ.

2018ರಿಂದ 2021ರ ನಡುವೆ ಈ ಕಂಪನಿಯು ಪ್ರಮುಖ ಉಪಕರಣಗಳನ್ನು ಆಮದು ಮಾಡಿಕೊಂಡ ವೇಳೆ ಕೇಂದ್ರ ಸರ್ಕಾರಕ್ಕೆ ನಿಗದಿತ ಸುಂಕ ಪಾವತಿಸದೆ ತಪ್ಪಿಸಿಕೊಂಡಿತ್ತು. ಹಾಗಾಗಿ, ಸರ್ಕಾರ ಈ ಕ್ರಮ ಕೈಗೊಂಡಿದೆ ಎಂದು ಹೇಳಲಾಗಿದೆ.



ಸ್ಯಾಮ್ಸಂಗ್ ಕಂಪನಿಯು ಒಟ್ಟು ₹4,455 ಕೋಟಿ ಪಾವತಿಸಬೇಕಿದೆ. ಇದರಲ್ಲಿ ತೆರಿಗೆ ಮತ್ತು ದಂಡದ ಮೊತ್ತ ಒಳಗೊಂಡಿದೆ. ಕಂಪನಿಯ ಏಳು ಅಧಿಕಾರಿಗಳಿಗೆ ₹694 ಕೋಟಿ ತೆರಿಗೆ ಪಾವತಿಸುವಂತೆ ನೋಟಿಸ್‌ನಲ್ಲಿ ಸೂಚಿಸಲಾಗಿದೆ.

ಸ್ಯಾಮ್ಸಂಗ್ ಕಂಪನಿಯು ಭಾರತದಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಸ್ಮಾರ್ಟ್‌ಫೋನ್ ಮಾರಾಟ ಮಾಡುವ ಪ್ರಮುಖ ಕಂಪನಿಗಳಲ್ಲಿ ಒಂದಾಗಿದೆ. ಮೊಬೈಲ್ ಟವರ್‌ಗಳಿಗೆ ಅಗತ್ಯವಿರುವ ಉಪಕರಣಗಳನ್ನೂ ಮಾರಾಟ ಮಾಡುತ್ತದೆ. ಕಳೆದ ವರ್ಷ ಕಂಪನಿಯು ₹8,185 ಕೋಟಿ ನಿವ್ವಳ ಲಾಭ ಗಳಿಸಿತ್ತು.

ದೂರಸಂಪರ್ಕ ಉಪಕರಣಗಳ ಆಮದಿನಲ್ಲಿ ಶೇ 10 ಅಥವಾ ಶೇ 20ರಷ್ಟು ಸುಂಕ ಪಾವತಿಸದೆ ನುಣುಚಿಕೊಂಡಿದೆ. ಆಮದು ಮಾಡಿಕೊಂಡ ಉಪಕರಣಗಳನ್ನು ರಿಲಯನ್ಸ್ ಜಿಯೊಗೆ ಮಾರಾಟ ಮಾಡಿದೆ ಎಂದು ಹೇಳಲಾಗಿದೆ.

'ಸ್ಯಾಮ್ಸಂಗ್ ಭಾರತದ ಕಾನೂನುಗಳನ್ನು ಉಲ್ಲಂಘಿಸಿದೆ. ಉದ್ದೇಶಪೂರ್ವಕವಾಗಿ ಕಸ್ಟಮ್ಸ್ ಇಲಾಖೆಗೆ ಸುಳ್ಳು ದಾಖಲೆ ಸಲ್ಲಿಸಿದೆ' ಎಂದು ಕಸ್ಟಮ್ಸ್ ವಿಭಾಗದ ಆಯುಕ್ತ ಸೋನಾಲ್ ಬಜಾಜ್ ಹೇಳಿದ್ದಾರೆ.

'ಆಮದು ಮಾಡಿಕೊಂಡಿರುವ ಉಪಕರಣಗಳಿಗೆ ಸುಂಕ ಅನ್ವಯವಾಗುವುದಿಲ್ಲ. ಸರ್ಕಾರದ ಆದೇಶವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು' ಎಂದು ಕಂಪನಿಯು ತಿಳಿಸಿದೆ.

ಟೋಲ್: ಏ.1ರಿಂದ ಶೇ 5ರಷ್ಟು ಏರಿಕೆ

ಒಂದನೇ ಪುಟದಿಂದ...

2024–25ರಲ್ಲಿ ₹ 64,809 ಕೋಟಿ ಸಂಗ್ರಹವಾಗಿದೆ. ಒಂದೇ ವರ್ಷದಲ್ಲಿ ಶೇ 35ರಷ್ಟು ಹೆಚ್ಚಳವಾಗಿದೆ. ಕರ್ನಾಟಕದಲ್ಲಿ 58 ಟೋಲ್ ಪ್ಲಾಜಾಗಳಿದ್ದು, ಕಳೆದ ಐದು ವರ್ಷಗಳಲ್ಲಿ ₹13,702 ಕೋಟಿ ಸಂಗ್ರಹವಾಗಿದೆ.

'ಈಗಲೇ ಟೋಲ್ ದರ ಹೆಚ್ಚು ಇದೆ. ಉದಾಹರಣೆಗೆ ರಾಷ್ಟ್ರೀಯ ಹೆದ್ದಾರಿ 44ರಲ್ಲಿ ಬಸ್, ಟ್ರಕ್‌ಗಳು ಒಂದು ಸಾರಿ ಹೋಗಬೇಕಿದ್ದರೆ ₹355, ಹೋಗಿ–ವಾಪಸ್ ಬರಲು ₹535 ಟೋಲ್ ನೀಡಬೇಕಿದೆ. ಕಾರುಗಳು, ವ್ಯಾನ್‌ಗಳು ಹೋಗಿ ಬರಲು ₹170 ಪಾವತಿ ಮಾಡಬೇಕು. ಮತ್ತೆ ಟೋಲ್ ದರ ಹೆಚ್ಚಳವಾಗುತ್ತಿರುವುದು ಇನ್ನಷ್ಟು ಹೊರೆಯಾಗಲಿದೆ' ಎಂದು ಕರ್ನಾಟಕ ರಾಜ್ಯ ಟ್ರಾವೆಲ್ ಆಪರೇಟರ್ಸ್ ಅಸೋಸಿಯೇಷನ್ ಅಧ್ಯಕ್ಷ ರಾಧಾಕೃಷ್ಣ ಹೊಳ್ಳ ಬೇಸರ ವ್ಯಕ್ತಪಡಿಸಿದರು.

'ಶೇ 5 ಎಂದು ಹೇಳಿದರೂ ಕೆಲವು ಟೋಲ್‌ಗಳಲ್ಲಿ ಶೇ 12ರವರೆಗೂ ಹೆಚ್ಚಳ ಮಾಡುತ್ತಾರೆ. ಕೇಂದ್ರ ಸರ್ಕಾರವನ್ನು ಯಾರೂ ಪ್ರಶ್ನಿಸುವವರಿಲ್ಲದಂತಾಗಿದೆ. ಟೋಲ್ ಪ್ಲಾಜಾಗಳಲ್ಲಿ ಸುಂಕ ಪಡೆಯಬೇಕಿದ್ದರೆ ಮೂಲಸೌಲಭ್ಯ ಗಳನ್ನು ಕಲ್ಪಿಸಬೇಕು ಎಂದು ನಿಯಮಗಳಿವೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಆಂಬುಲೆನ್ಸ್ ವ್ಯವಸ್ಥೆ ಇಲ್ಲ, ಲಾರಿ ಪಾರ್ಕಿಂಗ್ ಇಲ್ಲ, ವಿಶ್ರಾಂತಿ ಕೊಠಡಿಗಳಿಲ್ಲ. ರಸ್ತೆ ಇದೆ ಎಂಬ ಒಂದೇ ಕಾರಣಕ್ಕೆ ಟೋಲ್ ಪ್ಲಾಜಾ ಮಾಡಿದ್ದಾರೆ. ಪ್ರತಿ ವರ್ಷ ಸುಂಕ ಏರಿಕೆ ಮಾಡುತ್ತಲೇ ಹೋಗುತ್ತಿದ್ದಾರೆ' ಎಂದು ಲಾರಿ ಫೆಡರೇಷನ್ ಅಧ್ಯಕ್ಷ ನವೀನ್ ರೆಡ್ಡಿ ದೂರಿದರು.

ವಿಮಾನ ಟಿಕೆಟ್ ದರ ನಿಯಂತ್ರಣಕ್ಕೆ ಸಮಿತಿ ಸಲಹೆ

ನವದೆಹಲಿ: ವಿಮಾನಯಾನ ಸಂಸ್ಥೆಗಳು ಕೆಲ ಸಂದರ್ಭಗಳಲ್ಲಿ ಮನಸೋಇಚ್ಛೆ ಟಿಕೆಟ್ ದರ ಏರಿಸುತ್ತಿರುವುದಕ್ಕೆ ಕಡಿವಾಣ ಹಾಕಲು ಸಂಸದೀಯ ಸ್ಥಾಯಿ ಸಮಿತಿಯೊಂದು ಹಲವು ಸಲಹೆಗಳನ್ನು ನೀಡಿದೆ.

ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯಕ್ಕೆ (ಡಿಜಿಸಿಎ) ತಾತ್ಕಾಲಿಕ ದರ ನಿಗದಿ ಮಾಡುವ ಅಧಿಕಾರವನ್ನು ನೀಡಬೇಕು, ಟಿಕೆಟ್ ದರದ ಮೇಲೆ ನಿಗಾ ಇಡಲು ಕೃತಕ ಬುದ್ಧಿಮತ್ತೆ ಆಧರಿತ ಮೇಲ್ವಿಚಾರಣಾ ವ್ಯವಸ್ಥೆ ಜಾರಿ ಮಾಡಬೇಕು ಮತ್ತು ಮನಬಂದಂತೆ ಟಿಕೆಟ್ ದರ ಏರಿಸುವುದನ್ನು ರಿಪೋರ್ಟ್ ಮಾಡಲು ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ವಿಮಾನ ಪ್ರಯಾಣ ದರ ಏರಿಕೆ ಬಗ್ಗೆ ದೂರುಗಳು ಕೇಳಿಬರುತ್ತಿರುವ ಕಾರಣ ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಕುರಿತ ಸಮಿತಿಯು ಈ ಶಿಫಾರಸುಗಳನ್ನು ಮಾಡಿದೆ.

ಬೀಜಿಂಗ್‌ನಲ್ಲಿ ಭಾರತ ಚೀನಾ ಮಾತುಕತೆ

ನವದೆಹಲಿ (ಪಿಟಿಐ): ಗಡಿಯ ವಿಚಾರವಾಗಿ ಭಾರತ ಮತ್ತು ಚೀನಾದ ವಿಶೇಷ ಪ್ರತಿನಿಧಿಗಳ ನಡುವೆ ನವದೆಹಲಿಯಲ್ಲಿ ಈ ವರ್ಷ ನಡೆಯಬೇಕಿರುವ ಮುಂದಿನ ಹಂತದ ಸಭೆಗೆ ಗಮನಾರ್ಹವಾದ ಸಿದ್ಧತೆಗಳನ್ನು ಒಟ್ಟಾಗಿ ನಡೆಸಲು ಎರಡೂ ದೇಶಗಳು ಮಂಗಳವಾರ ಒಪ್ಪಿವೆ.

ಬೀಜಿಂಗ್‌ನಲ್ಲಿ ನಡೆದ ಮಾತುಕತೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಬೀಜಿಂಗ್‌ನಲ್ಲಿನ ಮಾತುಕತೆಯು ರಚನಾತ್ಮಕವಾದ, ಪೂರಕವಾದ ವಾತಾವರಣದಲ್ಲಿ ನಡೆಯಿತು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಹೇಳಿದೆ.

ಎರಡೂ ದೇಶಗಳು ವಾಸ್ತವ ಗಡಿ ನಿಯಂತ್ರಣ ರೇಖೆಯಲ್ಲಿನ ಪರಿಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿದವು ಎಂದು ಕೂಡ ಸಚಿವಾಲಯ ತಿಳಿಸಿದೆ.

ಎರಡೂ ದೇಶಗಳ ನಡುವೆ ದ್ವಿಪಕ್ಷೀಯ ಸಂಬಂಧವು ವೃದ್ಧಿಯಾಗಬೇಕು ಎಂದಾದರೆ ಗಡಿಯಲ್ಲಿ ಶಾಂತಿ ನೆಲಸಬೇಕಿರುವುದು ಮಹತ್ವದ್ದು ಎಂದು ಸಚಿವಾಲಯದ ಪ್ರಕಟಣೆಯಲ್ಲಿ ಹೇಳಲಾಗಿದೆ.

ಅಮೆರಿಕದ ಸುಂಕದಿಂದ ಪರಿಹಾರ ಪಡೆಯಲು ಭಾರತದ ಯೋಚನೆ

ಶೇ 55ರಷ್ಟು ಆಮದಿಗೆ ಸುಂಕ ಕಡಿತ?

ನವದೆಹಲಿ (ರಾಯಿಟರ್ಸ್): ಅಮೆರಿಕದಿಂದ ಆಮದಾಗುವ ಅರ್ಧಕ್ಕಿಂತ ಹೆಚ್ಚು (ಶೇ 55) ವಸ್ತುಗಳ ಮೇಲಿನ ಸುಂಕವನ್ನು ಭಾರತ ಕಡಿತಗೊಳಿಸಲು ಮುಕ್ತವಾಗಿದೆ. ಅದರ ಮೌಲ್ಯ ₹1.96 ಲಕ್ಷ ಕೋಟಿ (23 ಶತಕೋಟಿ ಡಾಲರ್) ಎಂದು ಅಂದಾಜಿಸಲಾಗಿದೆ ಎಂದು ಎರಡೂ ದೇಶಗಳ ಸರ್ಕಾರಿ ಮೂಲಗಳು ತಿಳಿಸಿವೆ.

ಭಾರತ ಮತ್ತು ಅಮೆರಿಕದ ನಡುವಿನ ವ್ಯಾಪಾರ ಒಪ್ಪಂದದ ಮೊದಲ ಹಂತದ ಭಾಗವಾಗಿ ಈ ಕ್ರಮ ತೆಗೆದುಕೊಳ್ಳುವ ಸಾಧ್ಯತೆಯಿದೆ. ಪರಸ್ಪರ ಸುಂಕದಿಂದ ಪರಿಹಾರ ಪಡೆಯುವ ಗುರಿಯನ್ನು ಇದು ಹೊಂದಿದೆ. ಇದು ಈ ವರ್ಷದ ಅತಿದೊಡ್ಡ ಸುಂಕ ಕಡಿತವಾಗಬಹುದು ಎಂದು ಅಂದಾಜಿಸಲಾಗಿದೆ.



ಭಾರತ ಸೇರಿದಂತೆ ವಿಶ್ವದ ಹಲವು ದೇಶಗಳು ವಿಧಿಸಲಿರುವ ಸುಂಕಕ್ಕೆ ಅನುಗುಣವಾಗಿ ಅಮೆರಿಕವು ಏ. 2ರಿಂದ ಸುಂಕ ಹೆಚ್ಚಿಸಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಣೆ ಮಾಡಿದ್ದರು. ಇದು ಪಾಶ್ಚಿಮಾತ್ಯ ದೇಶಗಳು ಸೇರಿದಂತೆ ಜಾಗತಿಕ ಮಾರುಕಟ್ಟೆ ಮೇಲೆ ಪರಿಣಾಮ ಬೀರಿದೆ.

ಅಮೆರಿಕದ ಅಧಿಕ ಸುಂಕದ ಪರಿಣಾಮವನ್ನು ತಗ್ಗಿಸಲು ಬಯಸಿರುವ ಭಾರತ, ಅದಕ್ಕೆ ತಕ್ಕಂತೆ ಅಮೆರಿಕದಿಂದ ಆಮದಾಗುವ ವಸ್ತುಗಳ ಮೇಲಿನ ಸುಂಕವನ್ನು ಕಡಿತಗೊಳಿಸಲಿದೆ ಎಂದು ಮೂಲಗಳು ತಿಳಿಸಿವೆ.

ಆಂತರಿಕ ವಿಶ್ಲೇಷಣೆಯ ಪ್ರಕಾರ, ಭಾರತದಿಂದ ಅಮೆರಿಕಕ್ಕೆ ರಫ್ತಾಗುತ್ತಿರುವ ಶೇ 87ರಷ್ಟು ಸರಕುಗಳ ಮೇಲೆ ಪರಸ್ಪರ ಸುಂಕವು ಪರಿಣಾಮ ಬೀರಲಿದೆ. ಅದರ ಮೌಲ್ಯ ₹5.64 ಲಕ್ಷ ಕೋಟಿ (66 ಶತಕೋಟಿ ಡಾಲರ್) ಎಂಬುದಾಗಿ ಅಂದಾಜಿಸಲಾಗಿದೆ ಎಂದು ಉಭಯ ದೇಶಗಳ ಸರ್ಕಾರಿ ಮೂಲಗಳು ತಿಳಿಸಿವೆ.

ಒಪ್ಪಂದದ ಅನ್ವಯ, ಭಾರತವು ಅಮೆರಿಕದಿಂದ ಆಮದು ಮಾಡಿಕೊಳ್ಳುವ ಶೇ 55ರಷ್ಟು ಸರಕುಗಳಿಗೆ ಸುಂಕವನ್ನು ಕಡಿಮೆ ಮಾಡಲಿದೆ. ಕೆಲವು ಸರಕುಗಳ ಮೇಲಿನ ಸುಂಕ ಗಣನೀಯವಾಗಿ ತಗ್ಗಿದರೆ, ಇನ್ನೂ ಕೆಲವು ಸರಕುಗಳ ಮೇಲಿನ ಸುಂಕ ಸಂಪೂರ್ಣವಾಗಿ ರದ್ದಾಗಬಹುದು ಎಂದು ಮೂಲಗಳು ಹೇಳಿವೆ.

ಆದರೆ, ಈ ಸಂಬಂಧ ಭಾರತದ ವ್ಯಾಪಾರ ಸಚಿವಾಲಯವಾಗಲಿ, ಪ್ರಧಾನಿ ಕಚೇರಿಯಾಗಲಿ, ಸರ್ಕಾರದ ವಕ್ತಾರರಾಗಲಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

'ಸುಂಕ ಕಡಿತದ ನಿರ್ಧಾರ ಇನ್ನೂ ಅಂತಿಮವಾಗಿಲ್ಲ. ಈ ಸಂಬಂಧ ಮಾತುಕತೆಗಳು ನಡೆಯುತ್ತಿವೆ' ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಡೊನಾಲ್ಡ್ ಟ್ರಂಪ್ ಎರಡನೇ ಬಾರಿ ಅಮೆರಿಕದ ಅಧ್ಯಕ್ಷರಾದ ಬಳಿಕ ಭಾರತ ಸೇರಿದಂತೆ ಕೆಲ ದೇಶಗಳ ಸುಂಕ ನೀತಿ ವಿರುದ್ಧ ಸಮರ ಸಾರಿದ್ದಾರೆ. ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಸುಂಕ ವಿಧಿಸುವ ರಾಷ್ಟ್ರವಾಗಿದ್ದು, 'ಸುಂಕಗಳ ರಾಜ' ಎಂದೆಲ್ಲ ಜರೆದಿದ್ದಾರೆ.

ಶ್ರೇಯಸ್– ಶಶಾಂಕ್ ಜೊತೆಯಾಟದ ಆರ್ಭಟ • ವೈಶಾಖ ಚಾಣಾಕ್ಷ ಬೌಲಿಂಗ್

ಪಂಜಾಬ್ ಕಿಂಗ್ಸ್‌ಗೆ ರೋಚಕ ಜಯ


ಶಶಾಂಕ್ ಸಿಂಗ್

ಅಹಮದಾಬಾದ್ (ಪಿಟಿಐ): ಕನ್ನಡಿಗ ವೈಶಾಖ ವಿಜಯಕುಮಾರ್ ಹಾಕಿದ ಮೂರು ಓವರ್‌ಗಳು ಪಂಜಾಬ್ ಕಿಂಗ್ಸ್ ತಂಡದ ಸೋಲಿನ ಆತಂಕವನ್ನು ದೂರ ಮಾಡಿದವು. ಅದರೊಂದಿಗೆ ಶ್ರೇಯಸ್ ಅಯ್ಯರ್ ಮತ್ತು ಶಶಾಂಕ್ ಸಿಂಗ್ ಅವರ ಭರ್ಜರಿ ಜೊತೆಯಾಟವೂ ವ್ಯರ್ಥವಾಗಲಿಲ್ಲ.

ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣ ದಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ನಾಯಕತ್ವ ವಹಿಸಿಕೊಂಡ ಮೊದಲ ಪಂದ್ಯದಲ್ಲಿ ಕಿಂಗ್ಸ್ ತಂಡವು 11 ರನ್‌ಗಳಿಂದ ಗುಜರಾತ್ ಟೈಟನ್ಸ್ ಎದುರು ಜಯಿಸಿತು. 244 ರನ್‌ಗಳ ಗುರಿ ಬೆನ್ನಟ್ಟಿದ್ದ ಶುಭಮನ್ ಗಿಲ್ ನಾಯಕತ್ವದ ಗುಜರಾತ್ ಟೈಟನ್ಸ್ ತಂಡವು ಭರ್ಜರಿ ಆರಂಭವನ್ನೇ ಮಾಡಿತ್ತು. 14 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 169 ರನ್ ಗಳಿಸಿತ್ತು. ಕ್ರೀಸ್‌ನಲ್ಲಿ ಜೋಸ್ ಬಟ್ಲರ್ ಮತ್ತು ಶೆರ್ಫೇನ್ ರುದರ್‌ಫೋರ್ಡ್ ಉತ್ತಮ ಲಯದಲ್ಲಿದ್ದರು.

ನಂತರದ ಆರು ಓವರ್‌ಗಳಲ್ಲಿ ನಡೆದ ನಾಟಕೀಯ ಬೆಳವಣಿಗೆ ಗಳಲ್ಲಿ ಆತಿಥೇಯರ ಕೈಯಿಂದ ಗೆಲುವು ಕೈಜಾರಿತು. ಅದುವರೆಗೆ ಆರು ಬೌಲರ್‌ಗಳನ್ನು ಗುಜರಾತ್ ತಂಡದ ಬ್ಯಾಟರ್‌ಗಳು ದಂಡಿಸಿದ್ದರು. ಆದರೆ 15ನೇ ಓವರ್‌ನಲ್ಲಿ ನಾಯಕ ಶ್ರೇಯಸ್ ಅವರು ವೈಶಾಖ ಅವರಿಗೆ ಚೆಂಡು ನೀಡಿದರು. ಪ್ರಿಯಾಂಶ್ ಆರ್ಯ ಬದಲಿಗೆ ಇಂಪ್ಯಾಕ್ಟ್ ಪ್ಲೇಯರ್ ಆಗಿ ಬಂದ ವೈಶಾಖ ಫಲಿತಾಂಶದ ಮೇಲೆ ಪರಿಣಾಮ ಬೀರಿದರು.ತಮ್ಮ ಮೊದಲ 2 ಓವರ್‌ಗಳಲ್ಲಿ ಕೇವಲ 10 ರನ್ ಬಿಟ್ಟುಕೊಟ್ಟರು. ವೈಡ್ ಮಿತಿಯ ಗೆರೆ ಮತ್ತು ಆಫ್‌ಸ್ಟಂಪ್ ಮಧ್ಯೆ ಎಸೆತಗಳನ್ನು ಹದವಾದ ವೇಗದಲ್ಲಿ ಪ್ರಯೋಗಿಸಿದ ವೈಶಾಖ ಉಪಯುಕ್ತ ಕಾಣಿಕೆ ನೀಡಿದರು. ಆದರೆ ತಮ್ಮ ಮೂರನೇ ಓವರ್‌ನಲ್ಲಿ ಎರಡು ಬೌಂಡರಿ ಮತ್ತು ಒಂದು ಸಿಕ್ಸರ್ ಬಿಟ್ಟುಕೊಟ್ಟರು. ತಮ್ಮ ಇಡೀ ಸ್ಪೆಲ್‌ನಲ್ಲಿ 5 ವೈಡ್ ಹಾಕಿದರು.

ಇನ್ನೊಂದು ಬದಿಯಿಂದ ಮಾರ್ಕೊ ಯಾನ್ಸೆನ್ ಮತ್ತು ಅರ್ಷದೀಪ್ ಅವರು ಕೂಡ ಬ್ಯಾಟರ್‌ಗಳಿಗೆ ತಡೆಯೊಡ್ಡುವ ಪ್ರಯತ್ನ ಮಾಡಿದರು. 18ನೇ ಓವರ್‌ನಲ್ಲಿ ಯಾನ್ಸೆನ್ ಎಸೆತದಲ್ಲಿ ಬಟ್ಲರ್ ಔಟಾದರು. ಆದರೆ ರುದರ್‌ಫೋರ್ಡ್ ತಂಡದ ಗೆಲುವಿನ ಆಸೆಯನ್ನು ಜೀವಂತವಾಗಿಟ್ಟರು. ಕೊನೆಯ ಓವರ್‌ನಲ್ಲಿ 27 ರನ್ ಗಳಿಸಬೇಕಿತ್ತು. ಅರ್ಷದೀಪ್ ಸಿಂಗ್ ಅದಕ್ಕೆ ಆಸ್ಪದ ಕೊಡಲಿಲ್ಲ. ಟೈಟನ್ಸ್ ತಂಡ 5 ವಿಕೆಟ್‌ಗೆ 232 ರನ್ ಗಳಿಸಿ ಸವಾಲು ಮುಗಿಸಿತು.

ಇದರಿಂದಾಗಿ ಗುಜರಾತ್ ತಂಡದ ಆರಂಭಿಕರಾದ ಸಾಯಿ ಸುದರ್ಶನ್ (74; 41ಎ), ಶುಭಮನ್ ಗಿಲ್ (33; 14ಎ), ಬಟ್ಲರ್ (54; 33ಎ) ಹಾಗೂ ರುದರ್‌ಫೋರ್ಡ್ (46 ರನ್) ಅವರ ಆಟಕ್ಕೆ ಗೆಲುವಿನ ಫಲ ಸಿಗಲಿಲ್ಲ.

ಶ್ರೇಯಸ್–ಶಶಾಂಕ್ ಆರ್ಭಟ: ಟಾಸ್ ಗೆದ್ದ ಆತಿಥೇಯ ಗುಜರಾತ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪಂಜಾಬ್ ಕಿಂಗ್ಸ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 243 ರನ್ ಗಳಿಸಿತು. ಇದಕ್ಕೆ ಕಾರಣವಾಗಿದ್ದು ಶ್ರೇಯಸ್ (ಅಜೇಯ 97; 42ಎ, 4X5, 6X9) ಮತ್ತು ಶಶಾಂಕ್ ಸಿಂಗ್ (ಅಜೇಯ 44; 16ಎ, 4X6, 6X2) ಅವರ ಅಬ್ಬರದ ಜೊತೆಯಾಟ. ಇನಿಂಗ್ಸ್‌ನ ಕೊನೆಯಲ್ಲಿ ಇವರಿಬ್ಬರೂ ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 81 ರನ್ (28ಎಸೆತ) ಸೂರೆ ಮಾಡಿದರು.

ಆರಂಭಿಕ ಬ್ಯಾಟರ್ ಪ್ರಿಯಾಂಶ್ ಆರ್ಯ (47; 23ಎ, 4X7, 6X2) ಮಿಂಚಿದರು. ನಾಲ್ಕನೇ ಓವರ್‌ನಲ್ಲಿ ಪ್ರಭಸಿಮ್ರನ್ ಸಿಂಗ್ ಔಟಾದಾಗ ಶ್ರೇಯಸ್ ಕ್ರೀಸ್‌ಗೆ ಬಂದರು. ತಾವೆದುರಿಸಿದ ಮೊದಲ ಎಸೆತದಿಂದಲೇ ಬೀಸಾಟವಾಡಿದರು. ಅವರು 30 ಎಸೆತಗಳಲ್ಲಿ 64 ರನ್ ಗಳಿಸುವಷ್ಟರಲ್ಲಿ ತಂಡವು 164 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಶ್ರೇಯಸ್ ಜೊತೆಗೂಡಿದ ಶಶಾಂಕ್ ಸಿಂಗ್ ಇನಿಂಗ್ಸ್ ಚಿತ್ರಣವನ್ನೇ ಬದಲಿಸಿದರು.

ಶ್ರೇಯಸ್ ಕೂಡ ಬೌಂಡರಿ, ಸಿಕ್ಸರ್ ಸಿಡಿಸುತ್ತ ಶತಕದಂಚಿಗೆ ಬಂದು ನಿಂತರು. ಕೊನೆಯ ಓವರ್ ಆರಂಭವಾದಾಗ ಶ್ರೇಯಸ್ (97 ರನ್) ನಾನ್ ಸ್ಟ್ರೈಕರ್ ತುದಿಯಲ್ಲಿದ್ದ-ರು. ಶಶಾಂಕ್ ಒಂದು ರನ್ ಪಡೆದು ಶ್ರೇಯಸ್‌ಗೆ ಬ್ಯಾಟಿಂಗ್ ನೀಡುವ ನಿರೀಕ್ಷೆ ಗರಿಗೆದರಿತ್ತು. ಆದರೆ ಹಾಗಾಗಲಿಲ್ಲ. ಸಿರಾಜ್ ಹಾಕಿದ ಕೊನೆಯ ಓವರ್‌ನಲ್ಲಿ ಐದು ಬೌಂಡರಿಗಳನ್ನು ಚಚ್ಚಿದ ಶಶಾಂಕ್, ಇನ್ನೊಂದು ಎಸೆತದಲ್ಲಿ 2 ರನ್ ಗಳಿಸಿದರು.

ಶ್ರೇಯಸ್ ಅಯ್ಯರ್

ಔಟಾಗದೇ	97
ಎಸೆತ	42
ಬೌಂಡರಿ	5
ಸಿಕ್ಸರ್	9


ಶ್ರೇಯಸ್ ಅಯ್ಯರ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರಗಳು

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್: 5 ವಿಕೆಟ್‌ಗೆ 243 (20 ಓವರುಗಳಲ್ಲಿ)
ಪ್ರಿಯಾಂಶ್ ಸಿ ಸುದರ್ಶನ್ ಬಿ ರಶೀದ್ 47 (23ಎ, 4x7, 6x2)
ಪ್ರಭಸಿಮ್ರನ್ ಸಿ ಅರ್ಷದ್ ಬಿ ರಬಾಡ 5 (8ಎ, 4x1)
ಶ್ರೇಯಸ್ ಅಯ್ಯರ್ ಔಟಾಗದೇ 97 (42ಎ, 4x5, 6x9)
ಒಮರ್‌ಝೈ ಸಿ ಅರ್ಷದ್ ಬಿ ಕಿಶೋರ್ 16 (15ಎ, 4x2, 6x1)
ಮ್ಯಾಕ್ಸ್‌ವೆಲ್ ಎಲ್‌ಬಿಡಬ್ಲ್ಯು ಬಿ ಕಿಶೋರ್ 0 (1ಎ)
ಸ್ಟೊಯಿನಿಸ್ ಸಿ ಅರ್ಷದ್ ಬಿ ಕಿಶೋರ್ 20 (15ಎ, 4x1, 6x2)
ಶಶಾಂಕ್ ಔಟಾಗದೇ 44 (16ಎ, 4x6, 6x2)
ಇತರೆ: 14 (ಲೆಗ್‌ಬೈ 8, ವೈಡ್ 6)
ವಿಕೆಟ್ ಪತನ: 1–28 (ಪ್ರಭಸಿಮ್ರನ್ ಸಿಂಗ್, 3.1), 2–79 (ಪ್ರಿಯಾಂಶ್ ಆರ್ಯ, 6.4), 3–105 (ಅಜ್ಮತ್ ವುಲ್ಲಾ ಒಮರ್‌ಝೈ, 10.3), 4–105 (ಗ್ಲೆನ್ ಮ್ಯಾಕ್ಸ್‌ವೆಲ್, 10.4), 5–162 (ಮಾರ್ಕಸ್ ಸ್ಟೊಯಿನಿಸ್, 15.2)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–54–0; ಕಗಿಸೊ ರಬಾಡ 4–0–41–1; ಅರ್ಷದ್ ಖಾನ್ 1–0–21–0; ರಶೀದ್ ಖಾನ್ 4–0–48–1; ಪ್ರಸಿದ್ಧ ಕೃಷ್ಣ 3–0–41–0; ಸಾಯಿ ಕಿಶೋರ್ 4–0–30–3.

ಗುಜರಾತ್ ಟೈಟನ್ಸ್: 5ಕ್ಕೆ 232 (20 ಓವರ್‌ಗಳಲ್ಲಿ)
ಸುದರ್ಶನ್ ಸಿ ಶಶಾಂಕ್ ಬಿ ಅರ್ಷದೀಪ್ 74 (41ಎ, 4x5, 6x6)
ಗಿಲ್ ಸಿ ಆರ್ಯ ಬಿ ಮ್ಯಾಕ್ಸ್‌ವೆಲ್ 33 (14ಎ, 4x2, 6x3)
ಬಟ್ಲರ್ ಬಿ ಯಾನ್ಸನ್ 54 (33ಎ, 4x4, 6x2)
ರುದರ್‌ಫೋರ್ಡ್ ಬಿ ಅರ್ಷದೀಪ್ 46 (28ಎ, 4x4, 6x3)
ತೆವಾಟಿಯಾ ರನೌಟ್ (ಅರ್ಷದೀಪ್) 6 (2ಎ, 6x1)
ಶಾರೂಕ್ ಖಾನ್ ಔಟಾಗದೇ 6 (1ಎ, 6x1)
ಅರ್ಷದ್ ಖಾನ್ ಔಟಾಗದೇ 1 (1ಎ)
ಇತರೆ: 12 (ಲೆಗ್‌ಬೈ 4, ವೈಡ್ 8)
ವಿಕೆಟ್ ಪತನ: 1–61 (ಶುಭಮನ್ ಗಿಲ್, 5.5), 2–145 (ಸಾಯಿ ಸುದರ್ಶನ್ 12.3), 3–199 (ಜೋಸ್ ಬಟ್ಲರ್ 17.6), 2–217 (ರಾಹುಲ್ ತೆವಾಟಿಯಾ, 19.1), 5–225 (ಶೆರ್ಫೇನ್ ರುದರ್‌ಫೋರ್ಡ್, 19.4)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–36–2, ಅಜ್ಮತ್‌ವುಲ್ಲಾ ಒಮರ್‌ಝೈ 2–0–29–0, ಮಾರ್ಕೊ ಯಾನ್ಸೆನ್ 4–0–44–1, ಗ್ಲೆನ್ ಮ್ಯಾಕ್ಸ್‌ವೆಲ್ 2–0–26–1, ಮಾರ್ಕಸ್ ಸ್ಟೊಯಿನಿಸ್ 2–0–31–0, ಯಜುವೇಂದ್ರ ಚಾಹಲ್ 3–0–34–0, ವೈಶಾಖ ವಿಜಯಕುಮಾರ್ 3–0–28–0
ಪಂದ್ಯದ ಆಟಗಾರ: ಶ್ರೇಯಸ್ ಅಯ್ಯರ್

ಫಲಿತಾಂಶ: ಪಂಜಾಬ್ ಕಿಂಗ್ಸ್ ತಂಡಕ್ಕೆ 11 ರನ್‌ಗಳ ಜಯ


ರಾಜಸ್ಥಾನ ರಾಯಲ್ಸ್ ತಂಡದ ಕೋಚ್ ರಾಹುಲ್ ದ್ರಾವಿಡ್ ಅವರೊಂದಿಗೆ ಮಂಗಳವಾರ ಅಭ್ಯಾಸದ ವೇಳೆ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಟಗಾರರಾದ ಮನೀಷ್ ಪಾಂಡೆ, ವೆಂಕಟೇಶ್ ಅಯ್ಯರ್, ಅಂಗಕ್ರಿಷ್ ರಘುವಂಶಿ ಮತ್ತು ರಿಂಕು ಸಿಂಗ್ ಮಾತುಕತೆ ನಡೆಸಿದರು –ಎಕ್ಸ್ ಚಿತ್ರ

ಮೊದಲ ಜಯದ ಕನವರಿಕೆಯಲ್ಲಿ ಕೋಲ್ಕತ್ತ– ರಾಜಸ್ಥಾನ

ರಹಾನೆ ಪಡೆಗೆ ರಾಯಲ್ಸ್ ಸವಾಲು

ಗುವಾಹಟಿ (ಪಿಟಿಐ): ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ರಾಜಸ್ಥಾನ ರಾಯಲ್ಸ್ ತಂಡಗಳು ಬುಧವಾರ ಬರ್ಸಾಪರ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿವೆ.

ಟೂರ್ನಿಯ ಆರಂಭದಲ್ಲಿಯೇ ಉಭಯ ತಂಡಗಳು ತಮ್ಮ ಮೊದಲ ಪಂದ್ಯಗಳಲ್ಲಿ ಪರಾಭವಗೊಂಡಿವೆ. ಕೋಲ್ಕತ್ತ ತಂಡವು ತನ್ನದೇ ತವರಿನಂಗಳ ದಲ್ಲಿ (ಈಡನ್ ಗಾರ್ಡನ್) ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರು ಪರಾಭವಗೊಂಡಿತ್ತು. ರಾಯಲ್ಸ್ ತಂಡವು ಸನ್‌ರೈಸರ್ಸ್ ಹೈದರಾಬಾದ್ ಎದುರು ಸೋತಿತ್ತು.

ಹೈದರಾಬಾದ್ ತಂಡದ ಬ್ಯಾಟರ್‌ಗಳ ಪ್ರಹಾರಕ್ಕೆ ಬೆಚ್ಚಿದ ರಾಜಸ್ಥಾನ ಬೌಲರ್‌ಗಳು ಗುರಿ ತಪ್ಪಿದರು. ಹೈದರಾಬಾದ್ ಅಂಗಳದಲ್ಲಿ ಇಶಾನ್ ಕಿಶನ್ ಮತ್ತು ಟ್ರಾವಿಸ್ ಹೆಡ್ ಅವರ ಆರ್ಭಟಕ್ಕೆ ಬೌಲರ್‌ಗಳ ಆಟ ನಡೆಯಲಿಲ್ಲ. ಕೋಲ್ಕತ್ತ ತಂಡದ ಬೌಲರ್‌ಗಳು ಆರ್‌ಸಿಬಿಯ ಬ್ಯಾಟರ್‌ಗಳ ಆಟಕ್ಕೆ ತಡೆಯೊಡ್ಡುವಲ್ಲಿ ವಿಫಲರಾದರು. ಸುನೀಲ್ ನಾರಾಯಣ್ ಅವರನ್ನು ಬಿಟ್ಟರೆ ಉಳಿದ ಬೌಲರ್‌ಗಳಿಂದ ಹೆಚ್ಚು ಪ್ರತಿರೋಧವಿರಲಿಲ್ಲ. ಸ್ಪಿನ್ನರ್ ವರುಣ್ ಚಕ್ರವರ್ತಿ ಕೂಡ ನಿಖರವಾಗಿರಲಿಲ್ಲ. ಫಿಲ್ ಸಾಲ್ಟ್ ಮತ್ತು ವಿರಾಟ್ ಕೊಹ್ಲಿ ಅವರ ಆಟಕ್ಕೆ ಚಕ್ರವರ್ತಿ ತಲೆಬಾಗಿದ್ದರು.



ಅಜಿಂಕ್ಯಾ ರಹಾನೆ ರಿಯಾನ್ ಪರಾಗ್

ರಾಜಸ್ಥಾನ ಎದುರಿನ ಪಂದ್ಯದಲ್ಲಿ ಗುವಾಹಟಿ ಪಿಚ್‌ನಲ್ಲಿ ವರುಣ್ ತಮ್ಮ ಲಯಕ್ಕೆ ಮರಳುವ ನಿರೀಕ್ಷೆಯಲ್ಲಿ ಕೋಲ್ಕತ್ತ ತಂಡವಿದೆ.

ವೇಗದ ಬೌಲರ್ ಎನ್ರಿಚ್ ನಾಕಿಯಾ ಅವರು ಗಾಯದಿಂದ ಚೇತರಿಸಿಕೊಂಡು ಕಣಕ್ಕಿಳಿದರೆ ನಾಯಕ ಅಜಿಂಕ್ಯ ರಹಾನೆ ಅವರ ಆತ್ಮವಿಶ್ವಾಸ ಹೆಚ್ಚಲಿದೆ. ಇದೇ ಮೊದಲ ಸಲ ಕೋಲ್ಕತ್ತ ತಂಡವನ್ನು ಮುನ್ನಡೆಸುತ್ತಿರುವ ಅಜಿಂಕ್ಯ ಮೊದಲ ಪಂದ್ಯದಲ್ಲಿ ಚೆಂದದ ಬ್ಯಾಟಿಂಗ್ ಮಾಡಿದ್ದರು. ಆದರೆ ವೆಂಕಟೇಶ್ ಅಯ್ಯರ್, ರಿಂಕು ಸಿಂಗ್ ಮತ್ತು ಆ್ಯಂಡ್ರೆ ರಸೆಲ್ ಅವರು ತಮ್ಮ ನೈಜ ಆಟಕ್ಕೆ ಕುದುರಿಕೊಂಡರೆ ತಂಡದ ಬಲ ಹೆಚ್ಚುತ್ತದೆ.

ರಾಹುಲ್ ದ್ರಾವಿಡ್ ಮಾರ್ಗದರ್ಶನ ನೀಡುತ್ತಿರುವ ರಾಜಸ್ಥಾನ ತಂಡವು ಈ ಪಂದ್ಯದಲ್ಲಿಯೂ ರಿಯಾನ್ ಪರಾಗ್ ಅವರ ಮುಂದಾಳತ್ವದಲ್ಲಿ ಕಣಕ್ಕಿಳಿಯಲಿದೆ. ಸಂಜು ಸ್ಯಾಮ್ಸನ್ ಅವರು ಇನ್ನೂ ಸಂಪೂರ್ಣ ಫಿಟ್ ಆಗದ ಕಾರಣ ವಿಕೆಟ್‌ಕೀಪಿಂಗ್ ಮಾಡುವುದಿಲ್ಲ. ಮತ್ತೊಮ್ಮೆ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿಯುವ ಸಾಧ್ಯತೆ ಇದೆ. ಶುಭಂ ದುಬೆ, ಶಿಮ್ರಾನ್ ಹೆಟ್ಮೆಯರ್, ಧ್ರುವ ಜುರೇಲ್, ನಿತೀಶ್ ರಾಣಾ ಅವರು ಉತ್ತಮ ಲಯದಲ್ಲಿದ್ದಾರೆ. ಯಶಸ್ವಿ ಜೈಸ್ವಾಲ್ ಅವರು ಉತ್ತಮ ಆರಂಭ ನೀಡಿದರೆ ತಂಡಕ್ಕೆ ದೊಡ್ಡ ಮೊತ್ತ ಪೇರಿಸುವುದು ಅಥವಾ ಚೇಸಿಂಗ್ ಮಾಡುವುದು ಸುಲಭವಾಗುತ್ತದೆ.

ಬೌಲರ್‌ಗಳು ತಮ್ಮ ಕೌಶಲಗಳಿಗೆ ಇನ್ನಷ್ಟು ಸಾಣೆ ಹಿಡಿಯಬೇಕಿದೆ. ಅದರಲ್ಲೂ ವೇಗಿ ಜೋಫ್ರಾ ಆರ್ಚರ್, ಫಜಲ್‌ಹಕ್ ಫಾರೂಖಿ, ಸಂದೀಪ್ ಶರ್ಮಾ ಮತ್ತು ಮಹೀಷ ತೀಕ್ಷಣ ಅವರ ಮೇಲೆ ಹೆಚ್ಚಿನ ನಿರೀಕ್ಷೆ ಇದೆ.

ಬಲಾಬಲ

ಪಂದ್ಯ	30
ಫಲಿತಾಂಶವಿಲ್ಲ	2
ರಾಜಸ್ಥಾನ ಜಯ	14
ಕೋಲ್ಕತ್ತ ಜಯ	14

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್


ಮಹೇಂದ್ರ ಸಿಂಗ್ ಧೋನಿ

‘ಇಂಪ್ಯಾಕ್ಟ್ ಪ್ಲೇಯರ್ ನಿಯಮದಿಂದ ಟಿ20 ಕ್ರಿಕೆಟ್ ವಿಕಸನ’

ನವದೆಹಲಿ (ಪಿಟಿಐ): ಐಪಿಎಲ್‌ನಲ್ಲಿ ಮೊದಲ ಬಾರಿ ಇಂಪ್ಯಾಕ್ಟ್ ಪ್ಲೇಯರ್ ನಿಯಮ ಪರಿಚಯಿಸಿದಾಗ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಎಂ.ಎಸ್.ಧೋನಿ ಅವರಿಗೆ ಇದರ ಅಗತ್ಯ ಮನವರಿಕೆಯಾಗಿರಲಿಲ್ಲ. ಆದರೆ ಇದೀಗ ಈ ನಿಯಮವು ಟಿ20 ಕ್ರಿಕೆಟ್ ವಿಕಸನದ ಭಾಗವೆಂಬುದು ಅವರು ಮನಗಂಡಿದ್ದಾರೆ.

43 ವರ್ಷ ವಯಸ್ಸಿನ ಧೋನಿ ಅವರು ಕಳೆದ ವರ್ಷ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕತ್ವ ತ್ಯಜಿಸಿದ್ದರೂ ತಂಡದಲ್ಲಿ ಪ್ರಮುಖ ಶಕ್ತಿಯಾಗಿ-ದ್ದಾರೆ. ತಂಡಕ್ಕೆ ಮೊದಲ ಆಯ್ಕೆಯ ವಿಕೆಟ್ ಕೀಪರ್ ಆಗಿರುವ ಕಾರಣ ತಮ್ಮನ್ನು ಇಂಪ್ಯಾಕ್ಟ್ ಆಟಗಾರ ಎಂದು ಪರಿಗಣಿಸುವುದಿಲ್ಲ ಎಂದು ಅವರು ‘ಜಿಯೊ ಸ್ಟಾರ್’ಗೆ ಹೇಳಿದ್ದಾರೆ.

ಈ ಹಿಂದೆ ಇಂಪ್ಯಾಕ್ಟ್ ಪ್ಲೇಯರ್ ನಿಯಮ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಸೇರಿದಂತೆ ಅನೇಕರು ಟೀಕಿಸಿದ್ದು, ಇದು ಆಲ್‌ರೌಂಡರ್‌ಗಳ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದಿದ್ದರು.

‘ಆಟದಲ್ಲಿ ನನ್ನನ್ನು ತೊಡಗಿಸಿ ಕೊಳ್ಳಬೇಕಾಗುತ್ತದೆ. ಈ ನಿಯಮದಿಂದ ಪಂದ್ಯದಲ್ಲಿ ಹೆಚ್ಚಿನ ರನ್‌ಗಳಿಗೆ ದಾರಿಯಾಗುತ್ತದೆ ಎಂದು ಕೆಲವರು ಹೇಳುತ್ತಿದ್ದಾರೆ. ಇದು ಪರಿಸ್ಥಿತಿ ಮತ್ತು ಆಟಗಾರರ ಅಂದಿನ ಗುಣಧರ್ಮಕ್ಕೆ ಅನುಗುಣವಾಗಿರುತ್ತದೆ’ ಎಂದರು.

ಈ ನಿಯಮದಿಂದ ಎಲ್ಲ ತಂಡಗಳಿಗೆ ನಿರ್ಣಾಯಕ ಸಂದರ್ಭದಲ್ಲಿ ಹೆಚ್ಚುವರಿ ಬ್ಯಾಟರ್‌ಅನ್ನು ಹೊಂದುವ ಅನುಕೂಲ ಸಿಗುತ್ತದೆ ಎಂದು ಧೋನಿ ಹೇಳಿದರು.

ಎಮರ್ಜಿಂಗ್ ಪ್ಯಾನೆಲ್‌ಗೆ ಜೆ.ಮದನಗೋಪಾಲ್

ದುಬೈ (ಪಿಟಿಐ): ಭಾರತದ ನಿತಿನ್ ಮೆನನ್ ಅವರು ಐಸಿಸಿ ಎಲೀಟ್ ಪ್ಯಾನೆಲ್ ಅಂಪೈರ್‌ಗಳ ಪಟ್ಟಿಯಲ್ಲಿ ಉಳಿದುಕೊಂಡಿದ್ದಾರೆ. ದಕ್ಷಿಣ ಆಫ್ರಿಕಾದ ಅಲ್ಲಾವುದ್ದೀನ್ ಪಾಲೆಕರ್ ಮತ್ತು ಇಂಗ್ಲೆಂಡ್‌ನ ಅಲೆಕ್ಸ್ ವಾರ್ಫ್ ಅವರನ್ನು ಈ ಪಟ್ಟಿಗೆ ಸೇರ್ಪಡೆಗೊಳಿಸಲಾಗಿದೆ. ಅವರು ಕ್ರಮವಾಗಿ ಮೈಕೆಲ್ ಗಾಫ್ ಮತ್ತು ಜೊಯೆಲ್ ವಿಲ್ಸನ್ ಬದಲು ಅವಕಾಶ ಪಡೆದುಕೊಂಡಿದ್ದಾರೆ.

ಭಾರತದ ಜಯರಾಮನ್ ಮದನಗೋಪಾಲ್ ಅವರು ‘ಎಮರ್ಜಿಂಗ್ ಪ್ಯಾನೆಲ್’ಗೆ ಬಡ್ತಿ ಪಡೆದಿದ್ದಾರೆ. ಇದರಿಂದಾಗಿ ತಮಿಳುನಾಡಿನ ಈ ಮಾಜಿ ಆಟಗಾರ ಹೊರದೇಶಗಳ ಟೆಸ್ಟ್ ಮತ್ತು ಏಕದಿನ ಪಂದ್ಯಗಳಲ್ಲಿ ಕಾರ್ಯನಿರ್ವಹಿಸುವ ಅರ್ಹತೆ ಪಡೆಯಲಿದ್ದಾರೆ. 50 ವರ್ಷ ವಯಸ್ಸಿನ ಮದನಗೋಪಾಲ್ ಅವರು ಇದುವರೆಗೆ ಒಂದು ಟೆಸ್ಟ್, 22 ಏಕದಿನ ಮತ್ತು 42 ಟಿ20 ಪಂದ್ಯಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಎಲೀಟ್ ಅಂಪೈರ್‌ಗಳ ಪಟ್ಟಿಯಲ್ಲಿ ಮೆನನ್ ಅವರು ರಿಚರ್ಡ್ ಇಲಿಂಗ್‌ವರ್ತ್ ನಂತರ ಎರಡನೇ ರ‍್ಯಾಂಕ್ ಪಡೆದಿದ್ದಾರೆ.

ಎಲೀಟ್ ಪ್ಯಾನೆಲ್ ಅಂಪೈರ್‌ಗಳು: ಕುಮಾರ ಧರ್ಮಸೇನ (ಶ್ರೀಲಂಕಾ), ಕ್ರಿಸ್ಟೋಫರ್ ಗಫಾನಿ (ನ್ಯೂಜಿಲೆಂಡ್), ಅಡ್ರಿಯಾನ್ ಹೋಲ್ಡ್‌ಸ್ಟಾಕ್ (ದಕ್ಷಿಣ ಆಫ್ರಿಕಾ), ರಿಚರ್ಡ್ ಇಲಿಂಗ್‌ವರ್ತ್ (ಇಂಗ್ಲೆಂಡ್), ರಿಚರ್ಡ್ ಕೆಟಲ್‌ಬರೊ (ಇಂಗ್ಲೆಂಡ್) ನಿತಿನ್ ಮೆನನ್ (ಭಾರತ), ಅಲ್ಲಾವುದ್ದೀನ್ ಪಾಲೆಕರ್ (ದಕ್ಷಿಣ ಆಫ್ರಿಕಾ), ಎಹ್ಸಾನ್ ರಾಝಾ (ಪಾಕಿಸ್ತಾನ), ಪಾಲ್ ರೈಫೆಲ್ (ಆಸ್ಟ್ರೇಲಿಯಾ), ಶರ್ಫುದ್ದೌಲಾ ಇಬ್ನ ಶಹೀದ್ (ಬಾಂಗ್ಲಾದೇಶ), ರಾಡ್ನಿ ಟಕ್ಕರ್ (ಆಸ್ಟ್ರೇಲಿಯಾ), ಅಲೆಕ್ಸ್ ವಾರ್ಫ್ (ಇಂಗ್ಲೆಂಡ್)

ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್

ಸುನೀಲ್ ಕುಮಾರ್‌ಗೆ ಕಂಚು

ಅಮಾನ್, ಜೋರ್ಡಾನ್ (ಪಿಟಿಐ): ಭಾರತದ ಕುಸ್ತಿಪಟು ಸುನೀಲ್ ಕುಮಾರ್ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಕಂಚಿನ ಪದಕ ಜಯಿಸಿದರು.

ಗ್ರೀಕೊ ರೋಮನ್ ವಿಭಾಗದ ಪುರುಷರ 87 ಕೆ.ಜಿ ಸೆಮಿಫೈನಲ್‌ನಲ್ಲಿ ಸೋತ ನಂತರ ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಸುನಿಲ್ ಅವರು ಚೀನಾದ ಜಿಯಾಕ್ಸಿನ್ ಹುವಾಂಗ್ ಅವರನ್ನು ಮಣಿಸಿದರು.

ಸುನೀಲ್ ಅವರು ಎಂಟರ ಘಟ್ಟದ ಪಂದ್ಯದಲ್ಲಿ 10–1ರಿಂದ ತಜಕಿಸ್ತಾನದ ಸುಖಾರ್ಬೊ ಅಬ್ದುಲ್‌ಖಯೆವ್ ವಿರುದ್ಧ ಗೆದ್ದರು. ಆದರೆ ಸೆಮಿಫೈನಲ್‌ನಲ್ಲಿ ಸುನೀಲ್ 1–3ರಿಂದ ಇರಾನಿನ ಯಾಸಿನ್ ಯಜ್ದೀ ವಿರುದ್ಧ ಪರಾಭವಗೊಂಡರು. ಇರಾನ್ ಕುಸ್ತಿಪಟು ಫೈನಲ್‌ಗೆ ಲಗ್ಗೆ ಇಟ್ಟರು.

ಭಾರತದ ಸಾಗರ್ ಠಕ್ರಾನ್ 77 ಕೆ.ಜಿ. ಕ್ವಾಲಿಫಿಕೇಷನ್ ಬೌಟ್‌ನಲ್ಲಿ ಗೆದ್ದರು. ಆದರೆ ಕ್ವಾರ್ಟರ್‌ಫೈನಲ್‌ನಲ್ಲಿ ಜೋರ್ಡಾನಿನ ಆಮ್ರೊ ಸದೇಹ್ ವಿರುದ್ಧ ಸೋತರು. ಸದೇಹ್ ಸೆಮಿಫೈನಲ್‌ಗೆ ಪ್ರವೇಶಿಸಿದರು.

63 ಕೆ.ಜಿ. ವಿಭಾಗದಲ್ಲಿ ಉಮೇಶ್ ಕ್ವಾಲಿಫಿಕೇಷನ್‌ನಲ್ಲಿ ಸೋತರು. ಆದರೆ ಅವರನ್ನು ಸೋಲಿಸಿದ ಎದುರಾಳಿಯು ಸೆಮಿಫೈನಲ್ ನಲ್ಲಿ ಗೆದ್ದರೆ ರಿಪೆಷಾಜ್ ಅವಕಾಶ ಲಭಿಸಲಿದೆ.

ನಿತಿನ್ (55 ಕೆ.ಜಿ) ಮತ್ತು ಪ್ರೇಮ್ (130 ಕೆ.ಜಿ) ಅವರು ಅರ್ಹತಾ ಸುತ್ತಿನಲ್ಲಿಯೇ ಸೋತರು.


ಭಾರತದ ಸುನೀಲ್ ಕುಮಾರ್


ಭಾರತ ಎ ತಂಡದಲ್ಲಿ ಕರುಣ್?

ನವದೆಹಲಿ (ಪಿಟಿಐ): ಕರ್ನಾಟಕದ ಕರುಣ್ ನಾಯರ್ ಸೇರಿದಂತೆ ಪ್ರಮುಖ ಆಟಗಾರರನ್ನು ಮೇ, ಜೂನ್ ನಲ್ಲಿ ಇಂಗ್ಲೆಂಡ್ ಪ್ರವಾಸಕ್ಕೆ ತೆರಳಲಿರುವ ಭಾರತ ಎ ತಂಡಕ್ಕೆ ಆಯ್ಕೆ ಮಾಡುವ ಸಾಧ್ಯತೆ ಇದೆ.

ಭಾರತ ಎ ತಂಡವು ಇಂಗ್ಲೆಂಡ್ ಲಯನ್ಸ್ ವಿರುದ್ಧ ಎರಡು ಚತುರ್ದಿನ ಪಂದ್ಯಗಳನ್ನು ಆಡಲಿದೆ. ಅದರ ನಂತರ ಇಂಗ್ಲೆಂಡ್ ಮತ್ತು ಭಾರತ ಸೀನಿಯರ್ ತಂಡಗಳ ಐದು ಟೆಸ್ಟ್‌ಗಳ ಸರಣಿ ನಡೆಯಲಿದೆ.

‘ನಾಲ್ಕು ದಿನಗಳ ಅವಧಿಯ ಮೊದಲ ಪಂದ್ಯವು ಮೇ 30ರಿಂದ ಕ್ಯಾಂಟರ್‌ಬರಿಯಲ್ಲಿರುವ ಸೇಂಟ್ ಲಾರೆನ್ಸ್‌ನ ಸ್ಪಿಟ್‌ಫೈರ್ ಮೈದಾನದಲ್ಲಿ ನಡೆಯಲಿದೆ. ಎರಡನೇ ಪಂದ್ಯವು ಜೂನ್ 6ರಿಂದ ನಾರ್ಥಂಪ್ಟನ್ ಕೌಂಟಿ ಕ್ರೀಡಾಂಗಣ ದಲ್ಲಿ ನಡೆಯಲಿದೆ’ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ತಿಳಿಸಿದೆ. ಭಾರತದ ಕೆಲವು ಪ್ರಮುಖ ಆಟಗಾರರು ಸದ್ಯ ಐಪಿಎಲ್‌ನಲ್ಲಿ ಆಡುತ್ತಿದ್ದಾರೆ. ಮೇ 25ಕ್ಕೆ ಐಪಿಎಲ್ ಫೈನಲ್ ನಡೆಯಲಿದೆ.

2024–25ರ ದೇಶಿ ಕ್ರಿಕೆಟ್ ಋತುವಿನಲ್ಲಿ ಕರುಣ್ ನಾಯರ್ ಅವರು ಅಮೋಘ ಆಟವಾಡಿದ್ದಾರೆ.


ಕರುಣ್ ನಾಯರ್

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟರ್ ಆಗಿದ್ದಾರೆ. ರಣಜಿ ಟ್ರೋಫಿ ಟೂರ್ನಿಯಲ್ಲಿಯೂ ಅವರು ಒಟ್ಟು 863 ರನ್ ಗಳಿಸಿದ್ದರು. ಅದರಲ್ಲಿ ಅವರು ನಾಲ್ಕು ಶತಕ ಮತ್ತು ಎರಡು ಅರ್ಧಶತಕ ಗಳಿಸಿದ್ದರು. ಅವರು ವಿದರ್ಭ ತಂಡದಲ್ಲಿ ಆಡಿದ್ದರು.

‘ತಂಡವನ್ನು ಪ್ರಕಟಿಸಲು ಇನ್ನೂ ಬಹಳಷ್ಟು ಸಮಯ ಇದೆ. ಐಪಿಎಲ್ ನಾಕೌಟ್ ಹೊತ್ತಿನಲ್ಲಿ ಭಾರತ ಎ ತಂಡವನ್ನು ಪ್ರಕಟಿಸಬಹುದು. ಐಪಿಎಲ್‌ನಲ್ಲಿ ಉತ್ತಮವಾಗಿ ಆಡುವವರ ಮೇಲೆ ಕೂಡ ಆಯ್ಕೆಗಾರರು ನಿಗಾ ಇಟ್ಟಿದ್ದು, ಅವರನ್ನು ಆಯ್ಕೆಗೆ ಪರಿಗಣಿಸಬಹುದು’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಹಣಕಾಸು ಅಕ್ರಮ: ಬ್ಲಾಟರ್, ಪ್ಲಾಟಿನಿ ಖುಲಾಸೆ

ಮುಟೆನ್ಜ್ (ಸ್ವಿಟ್ಜರ್ಲೆಂಡ್), (ಎಪಿ): ಫಿಫಾ ಮಾಜಿ ಅಧ್ಯಕ್ಷ ಸೆಪ್ ಬ್ಲಾಟರ್ ಮತ್ತು ಯುರೋಪಿಯನ್ ಫುಟ್‌ಬಾಲ್ ಸಂಸ್ಥೆ ಮಾಜಿ ಮುಖ್ಯಸ್ಥ ಮೈಕೆಲ್ ಪ್ಲಾಟಿನಿ ಅವರನ್ನು ಸ್ವಿಟ್ಜರ್ಲೆಂ-ಡ್‌ನ ನ್ಯಾಯಾಲಯವೊಂದು ಹಣಕಾಸು ಅವ್ಯವಹಾರ, ದುರಾಡಳಿತ, ವಂಚನೆ ಆರೋಪಗಳಿಂದ ಮಂಗಳವಾರ ದೋಷಮುಕ್ತಗೊಳಿಸಿದೆ.

ಸ್ವಿಸ್ ಪ್ರಾಸಿಕ್ಯೂಟರ್‌ಗಳು ಇವರಿಬ್ಬರ ವಿರುದ್ಧ ಹಣಕಾಸು ಅವ್ಯವಹಾರಕ್ಕೆ ಸಂಬಂಧಿಸಿ ದೂರು ಸಲ್ಲಿಸಿದ್ದಾರೆ. 2011ರಲ್ಲಿ ಫಿಫಾದ ಸುಮಾರು ₹17 ಕೋಟಿ ಮೊತ್ತದ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂಬ ದೂರು ಇವರಿಬ್ಬರ ಮೇಲೆ ಇದೆ. ಜೊತೆಗೆ ಫೋರ್ಜರಿ, ವಂಚನೆ ಆರೋಪಗಳೂ ಇವೆ.

ಮೂವರು ಕ್ಯಾಂಟೊನಲ್ (ಪ್ರಾಂತ) ನ್ಯಾಯಾಧೀಶರನ್ನು ಒಳಗೊಂಡಿದ್ದ ಪೀಠದ ತೀರ್ಪನ್ನು ಕೇಳಿದ ನಂತರ, 89 ವರ್ಷ ವಯಸ್ಸಿನ ಬ್ಲಾಟರ್ ಪ್ರತಿಕ್ರಿಯೆ ನೀಡಲಿಲ್ಲ. ಪ್ಲಾಟಿನಿ ಅವರು ಫ್ರಾನ್ಸ್‌ನ ಮಾಜಿ ಅಂತರರಾಷ್ಟ್ರೀಯ ಆಟಗಾರ.

ಜುಲೈ 2022ರಲ್ಲಿ ಮೊದಲ ಬಾರಿ ನ್ಯಾಯಾಲಯ ಇವರಿ-ಬ್ಬರನ್ನು ಆರೋಪಮುಕ್ತಗೊಳಿಸಿದಾಗ, ಅದನ್ನು ಸ್ವಿಸ್ ಅಟಾರ್ನಿ ಜನರಲ್‌ಗಳು ಪ್ರಶ್ನಿಸಿದ್ದರು.

ಯೋಗಿ ಪಟೇಲ್‌ಗೆ ಜೈಲು ಶಿಕ್ಷೆ

ಕೊಲಂಬೊ (ಪಿಟಿಐ): 2024ರ ಲೆಜೆಂಡ್ಸ್ ಲೀಗ್ ಟಿ20 ಟೂರ್ನಿಯಲ್ಲಿ ಮ್ಯಾಚ್ ಫಿಕ್ಸಿಂಗ್‌ಗೆ ಪ್ರಯತ್ನಿಸಿದ ಭಾರತದ ಪ್ರಜೆ ಯೋಗಿ ಪಟೇಲ್ ಎಂಬವರಿಗೆ ಇಲ್ಲಿನ ಮತಾಲೆಯ ಹೈಕೋರ್ಟ್ ಮಂಗಳವಾರ ನಾಲ್ಕು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿದೆ.

ಕ್ಯಾಂಡಿಯಲ್ಲಿ ನಡೆದ ಲೆಜೆಂಡ್ಸ್ ಲೀಗ್ ಟಿ20 ಪಂದ್ಯಗಳಲ್ಲಿ ಫಿಕ್ಸಿಂಗ್ ನಡೆಸುವಂತೆ ಪಟೇಲ್ ಪ್ರಲೋಭನೆ ಒಡ್ಡಿದ್ದಾಗಿ ಲಂಕಾ ಆಯ್ಕೆ ಸಮಿತಿ ಮುಖ್ಯಸ್ಥ ಉಪುಲ್ ತರಂಗ ನೀಡಿದ ದೂರಿನ ಆಧಾರದಲ್ಲಿ ಅವರ ಮೇಲೆ ನ್ಯಾಯಾಲಯ ಕ್ರಮ ಕೈಗೊಂಡಿದೆ.

ದೇಶ ತೊರೆಯದಂತೆ ನಿರ್ಬಂಧವಿದ್ದರೂ, ಅದನ್ನು ಉಲ್ಲಂಘಿಸಿದ ಕಾರಣ ಪಟೇಲ್ ಅವರ ಗೈರಿನಲ್ಲೇ ವಿಚಾರಣೆ ನಡೆದಿತ್ತು. ಅವರನ್ನು ಕಳೆದ ವರ್ಷದ ಮಾರ್ಚ್‌ನಲ್ಲಿ ಬಂಧಿಸಿದ್ದು, ಮೇ ತಿಂಗಳಲ್ಲಿ ಷರತ್ತುಬದ್ಧ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು.

ಶ್ರೀಲಂಕಾ 2019ರಲ್ಲಿ ಕ್ರೀಡೆಯಲ್ಲಿ ಭ್ರಷ್ಟಾಚಾರ ತಡೆ ಕಾಯಿದೆ ಅಂಗೀಕರಿಸಿತ್ತು. ಈ ಕಾಯ್ದೆಯಡಿ ತಪ್ಪಿತಸ್ಥರಿಗೆ 10 ವರ್ಷಗಳ ಜೈಲು ಮತ್ತು ಸುಮಾರು ₹4.5 ಕೋಟಿ ಮೊತ್ತದವರೆಗೆ ದಂಡ ವಿಧಿಸಲು ಅವಕಾಶವಿದೆ.

ಪಟೇಲ್ ಅವರಿಗೆ 2.45 ಕೋಟಿ ದಂಡ ವಿಧಿಸಲಾಗಿದೆ. ಜೊತೆಗೆ ಮಾನನಷ್ಟ ಪರಿಹಾರವಾಗಿ ತರಂಗ ಅವರಿಗೆ ₹5.78 ಲಕ್ಷ ನೀಡುವಂತೆ ನ್ಯಾಯಾಲಯ ಆದೇಶಿಸಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿದೆ.

ಬ್ಲಿಟ್ಜ್ ಎಫ್‌ಸಿ ತಂಡಕ್ಕೆ ಗೆಲುವು

ಬೆಂಗಳೂರು: ಬ್ಲಿಟ್ಜ್ ಎಫ್‌ಸಿ ತಂಡ ಎ ಡಿವಿಷನ್ ಲೀಗ್ ಪಂದ್ಯದಲ್ಲಿ 2–0 ಗೋಲುಗಳಿಂದ ಮಂಗಳವಾರ ಬೆಂಗಳೂರು ಸಿಟಿ ಕ್ಲಬ್ ಎಫ್‌ಸಿ ತಂಡವನ್ನು ಮಣಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣ ದಲ್ಲಿ ನಡೆದ ಪಂದ್ಯದಲ್ಲಿ ಬ್ಲಿಟ್ಜ್ ಎಫ್‌ಸಿ ತಂಡದ ಆಶಾನ್ಸ್ ಪ್ರಸಾದ್ (71ನೇ ನಿ.), ವಿವೇಕ್ ಸಿಂಗ್ (80 + 4ನೇ ನಿ.) ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಬಿಟಿಎಂ ಎಫ್‌ಸಿ ತಂಡ 3–0ರಿಂದ ಆರ್‌ಡಬ್ಲ್ಯುಎಫ್‌ಸಿ ತಂಡದ ವಿರುದ್ಧ ಭರ್ಜರಿ ಗೆಲುವು ಸಾಧಿಸಿತು. ಬಿಟಿಎಂ ತಂಡದ ನಕ್ಷತ್ರ ಜೈನ್ (31ನೇ ನಿ.), ಪುಯಿರಿಂಗ್ ಶಾಂಗ್ (48ನೇ ನಿ.) ಮತ್ತು ರೋಹನ್ ಜೋನಾಥಾನ್ (62 ನೇ ನಿ.) ಗೋಲು ಬಾರಿಸಿದರು.

ಬ್ಯಾಡ್ಮಿಂಟನ್ ಡಬಲ್ಸ್ ಪರಿಣತ ಸುಮೀತ್ ರೆಡ್ಡಿ ವಿದಾಯ



ನವದೆಹಲಿ (ಪಿಟಿಐ): 2022ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದ ಭಾರತ ಮಿಶ್ರ ತಂಡದಲ್ಲಿದ್ದ ಬಿ.ಸುಮೀತ್ ರೆಡ್ಡಿ ಅವರು ಸಕ್ರಿಯ ಬ್ಯಾಡ್ಮಿಂಟನ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಕೋಚಿಂಗ್‌ನತ್ತ ಗಮನ ಹರಿಸಲು ಅನುಭವಿ ಡಬಲ್ಸ್ ಪರಿಣತ ಈ ನಿರ್ಧಾರ ಕೈಗೊಂಡಿದ್ದಾರೆ.

33 ವರ್ಷ ವಯಸ್ಸಿನ ಸುಮೀತ್ ಅವರು ಮನು ಅತ್ರಿ ಅವರೊಂದಿಗೆ 2015ರಲ್ಲಿ ವೃತ್ತಿಜೀವನದ ಶ್ರೇಷ್ಠ 17ನೇ ಕ್ರಮಾಂಕಕ್ಕೆ ಏರಿದ್ದರು. 2016ರ ದಕ್ಷಿಣ ಏಷ್ಯಾ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದ ಈ ಜೋಡಿ, ರಿಯೊ ಒಲಿಂಪಿಕ್ಸ್‌ಗೂ ಅರ್ಹತೆ ಪಡೆದಿತ್ತು. ಹೈದರಾಬಾದ್‌ನಲ್ಲಿ ನಡೆದ ಏಷ್ಯಾ ತಂಡ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದ ಪುರುಷರ ತಂಡದಲ್ಲಿ ಸುಮೀತ್ ಇದ್ದರು.

2014 ಮತ್ತು 2018ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಅವರು, 2015ರ ಮೆಕ್ಸಿಕೊ ಸಿಟಿ ಗ್ರ್ಯಾನ್‌ಪ್ರಿ ಮತ್ತು 2016ರ ಕೆನಡಾ ಓಪನ್‌ನಲ್ಲಿ ಡಬಲ್ಸ್ ಚಾಂಪಿಯನ್ ಆಗಿದ್ದರು. 2015ರಲ್ಲಿ ಅಮೆರಿಕ ಓಪನ್ ಮತ್ತು ಡಚ್ ಓಪನ್‌ನಲ್ಲಿ ರನ್ನರ್ ಅಪ್ ಆಗಿದ್ದರು. 2017ರ ಸೈಯದ್ ಮೋದಿ ಇಂಟರ್ ನ್ಯಾಷನಲ್‌ನಲ್ಲಿ ಅಶ್ವಿನಿ ಪೊನ್ನಪ್ಪ ಜೊತೆಗೆ ಸುಮೀತ್ ರನ್ನರ್ ಅಪ್ ಆಗಿದ್ದರು. ಪತ್ನಿ ಎನ್.ಸಿಕ್ಕಿ ರೆಡ್ಡಿ ಜೊತೆಯೂ ಮಿಶ್ರ ಡಬಲ್ಸ್‌ನಲ್ಲಿ ಹಲವು ಟೂರ್ನಿಗಳಲ್ಲಿ ಸ್ಪರ್ಧಿಸಿದ್ದಾರೆ.

ಫುಟ್‌ಬಾಲ್: ಡ್ರಾ ಮಾಡಿಕೊಂಡ ಭಾರತ, ಬಾಂಗ್ಲಾ

ಶಿಲ್ಲಾಂಗ್ (ಪಿಟಿಐ): ಭಾರತ ಮತ್ತು ಬಾಂಗ್ಲಾದೇಶ ತಂಡಗಳ ನಡುವೆ ಎಎಫ್‌ಸಿ ಏಷ್ಯನ್ ಕಪ್ ಅರ್ಹತಾ ಸುತ್ತಿನ ಪಂದ್ಯ ಮಂಗಳವಾರ ಗೋಲಿಲ್ಲದೇ ಡ್ರಾ ಆಯಿತು. ಎರಡೂ ತಂಡಗಳು ಒಂದೊಂದು ಪಾಯಿಂಟ್ ಪಡೆದವು.

ಬಾಂಗ್ಲಾದೇಶ ಪೂರ್ವಾರ್ಧದಲ್ಲಿ ಸ್ವಲ್ಪ ಮೇಲುಗೈ ಪಡೆದಿದ್ದು, ಹೆಚ್ಚು ಆಕ್ರಮಣಕಾರಿ ನಡೆಗಳನ್ನು ಪ್ರದರ್ಶಿಸಿತು. ಕಾರ್ನರ್‌ಕಿಕ್‌ಗಳೂ ದೊರೆತವು. ಇಷ್ಟರ ನಡುವೆಯೂ ಸುವರ್ಣಾವಕಾಶ ಒಲಿಯಲಿಲ್ಲ. ಆದರೆ ಆತಿಥೇಯರು ಕೊನೆಯ 45 ನಿಮಿಷಗಳಲ್ಲಿ ಸುಧಾರಿತ ಆಟವಾಡಿ ನೆರೆಯ ದೇಶದ ತಂಡದ ಮೇಲೆ ಒತ್ತಡ ಹೇರಿತು. ಆದರೆ ಒಳ್ಳೆಯ ಅವಕಾಶಗಳು ದೊರೆಯಲಿಲ್ಲ.

12ನೇ ನಿಮಿಷ ಭಾರತದ ಗೋಲ್‌ಕೀಪರ್ ವಿಶಾಲ್ ಕೈತ್ ತಪ್ಪಿನಿಂದಾಗಿ ಚೆಂಡು ಎದುರಾಳಿ ಆಟಗಾರ ಮೊಹಮ್ಮದ್ ರಿದೊಯ್ ಅವರತ್ತ ಸಾಗಿತು. ಅವರು ಎಡಗಾಲಿನ ಪ್ರಬಲ ಕಿಕ್‌ನಲ್ಲಿ ಚೆಂಡನ್ನು ಗೋಲಿನತ್ತ ಒದ್ದರೂ, ಸುಭಾಶಿಶ್ ಬೋಸ್ ಗೋಲುಗೆರೆಯಲ್ಲಿ ಸಾಗಹಾಕಿ ಅಪಾಯ ನಿವಾರಿಸಿದರು.


ಭಾರತದ ಲಿಸ್ಟನ್ ಕೊಲಾಕೊ (ಬಲ) ಮತ್ತು ಬಾಂಗ್ಲಾದ ಹಂರ್ಝು ಚೌಧರಿ ನಡುವೆ ಚೆಂಡಿಗಾಗಿ ನಡೆದ ಪೈಪೋಟಿ —ಪಿಟಿಐ ಚಿತ್ರ

31ನೇ ನಿಮಿಷ ಭಾರತಕ್ಕೆ ದೊರೆತ ಅವಕಾಶದಲ್ಲಿ ಉದಾಂತ ಸಿಂಗ್ ಅವರು ಹೆಡ್ ಮಾಡಿದ ಚೆಂಡನ್ನು ಪಡೆದ ಲಿಸ್ಟನ್ ಕೊಲಾಕೊ ಎಡಭಾಗದಿಂದ ಗೋಲಿನತ್ತ ಒದ್ದರು. ಆದರೆ ಎದುರಾಳಿ ಗೋಲಿ ಮಿತುಲ್ ಮರ್ಮ ಅವರನ್ನು ವಂಚಿಸಲಾಗಲಿಲ್ಲ.

ಉತ್ತರಾರ್ಧದಲ್ಲಿ ಭಾರತ ಮೇಲುಗೈ ಪಡೆಯಿತು. 68ನೇ ನಿಮಿಷ ಬೋಸ್ ಅವರು ದೂರದಿಂದ ಒದ್ದ ಚೆಂಡು ಗೋಲಿ ಮಿತುಲ್ ಮರ್ಮ ಅವರನ್ನು ದಾಟಿ ಗೋಲಿನತ್ತ ಸಾಗಿದರೂ, ಕೆಲವೇ ಇಂಚುಗಳಿಂದ ಗುರಿಯಿಂದಾಚೆ ಹೋಯಿತು. ಐದು ನಿಮಿಷ ನಂತರ ಫರೂಕ್ ಚೌಧರಿ ಅವರ ಪ್ರಯತ್ನ ಬಾಂಗ್ಲಾ ರಕ್ಷಣೆ ಆಟಗಾರನ ಕಾಲಿಗೆ ತಾಗಿ ಗುರಿ ತಪ್ಪಿತು.

84ನೇ ನಿಮಿಷ ಅನುಭವಿ ಸುನೀಲ್ ಚೆಟ್ರಿ ಹೆಡ್ ಮಾಡಿದ ಚೆಂಡು ಉದ್ದೇಶಿತ ದಿಕ್ಕಿನಲ್ಲಿ ಸಾಗಲಿಲ್ಲ.

ಬಾಂಗ್ಲಾದೇಶದಲ್ಲಿ ಉಭಯ ತಂಡಗಳು ನವೆಂಬರ್ 18ರಂದು ಮತ್ತೊಮ್ಮೆ ಮುಖಾಮುಖಿಯಾಗಲಿವೆ. ಅದಕ್ಕೆ ಮೊದಲು, ಭಾರತ ತನ್ನ ಮುಂದಿನ ಪಂದ್ಯವನ್ನು ಜೂನ್ 10ರಂದು ಹಾಂಗ್‌ಕಾಂಗ್ ವಿರುದ್ಧ ಕೌಲೂನ್‌ನಲ್ಲಿ ಆಡಲಿದೆ.

29ರಿಂದ ಕ್ಲಾಸಿಕಲ್ ಚೆಸ್ ಟೂರ್ನಿ

ಬೆಂಗಳೂರು: ಎರಿನ್ ಫೌಂಡೇಷನ್ ಮತ್ತು ಬ್ಲ್ಯಾಕ್ ನೈಟ್ಸ್ ಚೆಸ್ ಸೆಂಟರ್ ಜಂಟಿ ಆಶ್ರಯದಲ್ಲಿ ಇದೇ 29 ಮತ್ತು 30 ರಂದು ನಗರದ ಲಾಲ್‌ಬಾಗ್ ಉದ್ಯಾನದ ಮರಿಗೌಡ ಸಭಾಂಗಣದಲ್ಲಿ ಓಪನ್ ಮತ್ತು ವಯೋವರ್ಗ ವಿಭಾಗಗಳಲ್ಲಿ ಕ್ಲಾಸಿಕಲ್ ಮಾದರಿಯ ಚೆಸ್ ಟೂರ್ನಿ ನಡೆಯಲಿದೆ.

ಓಪನ್ ವಿಭಾಗದ ಜೊತೆಗೆ 8, 10, 12 ಮತ್ತು 16 ವರ್ಷದೊಳಗಿನವರ ವಿಭಾಗಗಳಲ್ಲಿ, ವೆಟರನ್ಸ್ (55 ವರ್ಷ ಮೇಲ್ಪಟ್ಟವರ) ವಿಭಾಗದಲ್ಲಿ, ಅಂಗವಿಕಲರ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ. ಒಟ್ಟು ಏಳು ಸುತ್ತುಗಳಿರುತ್ತವೆ. ಪ್ರತಿಯೊಂದು ವಿಭಾಗದಲ್ಲಿ ಟ್ರೋಫಿ ಹಾಗೂ ನಗದು ಬಹುಮಾನ ನೀಡಲಾಗುತ್ತಿದೆ. ಸರ್ಕಾರಿ ಮತ್ತು ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುವುದು ಎಂದು ಆಯೋಜಕರು ತಿಳಿಸಿದ್ದಾರೆ. ವಿವರಗಳಿಗೆ saierin1@gmail.com ಅಥವಾ ಮೊ:9886128808, 9110669280 ಸಂಪರ್ಕಿಸಬಹುದು.

ಸುಧಾ, ಮಯೂರ ಓದಿರಿ

ಶ್ರೀಲಂಕಾ ತ್ರಿಕೋನ ಸರಣಿ ವೇಳಾಪಟ್ಟಿಯಲ್ಲಿ ಬದಲಾವಣೆ

ಕೊಲಂಬೊ (ಪಿಟಿಐ): ಭಾರತ ಮತ್ತು ಶ್ರೀಲಂಕಾ ತಂಡಗಳನ್ನು ಒಳಗೊಂಡಂತೆ ಮಹಿಳಾ ಏಕದಿನ ಕ್ರಿಕೆಟ್ ತ್ರಿಕೋನ ಸರಣಿಯ ವೇಳಾಪಟ್ಟಿಯಲ್ಲಿ ಶ್ರೀಲಂಕಾ ಕ್ರಿಕೆಟ್ (ಎಸ್‌ಎಲ್‌ಸಿ) ಮಂಗಳವಾರ ಬದಲಾವಣೆಗಳನ್ನು ಮಾಡಿದೆ. ಸ್ಥಳೀಯ ಚುನಾವಣೆಗಳ ಕಾರಣ ವೇಳಾಪಟ್ಟಿ ಪರಿಷ್ಕರಿಸಲಾಗಿದೆ.


ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ತಮ್ಮ ಎರಡನೇ ಏಕದಿನ ಪಂದ್ಯವನ್ನು ಮೇ 7ರಂದು ಆಡಲಿದೆ. 6ರಂದು ಕೊಲಂಬೊದಲ್ಲಿ ಚುನಾವಣೆಯಿರುವ ಕಾರಣ ಪಂದ್ಯವನ್ನು ಒಂದು ದಿನ ಮುಂದೂಡಲಾಗಿದೆ.

ಎಲ್ಲ ಪಂದ್ಯಗಳು ಹಗಲು ಹೊತ್ತಿನಲ್ಲಿ ನಡೆಯಲಿದ್ದು, ರಣಸಿಂಘೆ ಪ್ರೇಮದಾಸ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಿಗದಿಯಾಗಿವೆ. ಫೈನಲ್ ಪಂದ್ಯ ಮೇ 11ರಂದು ನಡೆಯಲಿದೆ.

ಪರಿಷ್ಕೃತ ವೇಳಾಪಟ್ಟಿ ಇಂತಿದೆ: ಏ 27: ಶ್ರೀಲಂಕಾ– ಭಾರತ; ಏ. 29: ಭಾರತ–ದಕ್ಷಿಣ ಆಫ್ರಿಕಾ; ಮೇ 2: ಶ್ರೀಲಂಕಾ–ದಕ್ಷಿಣ ಆಫ್ರಿಕಾ; ಮೇ 4: ಶ್ರೀಲಂಕಾ –ಭಾರತ; ಮೇ 7: ಭಾರತ– ದಕ್ಷಿಣ ಆಫ್ರಿಕಾ; ಮೇ 9: ಶ್ರೀಲಂಕಾ–ದಕ್ಷಿಣ ಆಫ್ರಿಕಾ. ಮೇ 11: ಫೈನಲ್.

ರ‍್ಯಾಂಕಿಂಗ್: 3ನೇ ಸ್ಥಾನದಲ್ಲಿ ಮಂದಾನ

ದುಬೈ (ಪಿಟಿಐ): ಭಾರತ ತಂಡದ ಉಪನಾಯಕಿ ಸ್ಮೃತಿ ಮಂದಾನ ಮತ್ತು ದೀಪ್ತಿ ಶರ್ಮಾ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮಂಗಳವಾರ ಬಿಡುಗಡೆ ಮಾಡಿದ ಮಹಿಳಾ ಟಿ20 ರ‍್ಯಾಂಕಿಂಗ್‌ನಲ್ಲಿ ಕ್ರಮವಾಗಿ ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.


ಸ್ಮೃತಿ ಮಂದಾನ

ಬ್ಯಾಟರ್‌ಗಳ ಪಟ್ಟಿಯಲ್ಲಿ ಮಂದಾನ ಹೊರತುಪಡಿಸಿ ಭಾರತದ ಯಾರೂ ಅಗ್ರ 10ರಲ್ಲಿ ಸ್ಥಾನ ಪಡೆದಿಲ್ಲ. ನಾಯಕಿ ಹರ್ಮನ್‌ಪ್ರೀತ್ ಕೌರ್, ಜೆಮಿಮಾ ರಾಡ್ರಿಗಸ್ ಮತ್ತು ಶಫಾಲಿ ವರ್ಮಾ ಕ್ರಮವಾಗಿ 11ನೇ, 15ನೇ ಮತ್ತು 16ನೇ ಸ್ಥಾನದಲ್ಲಿದ್ದಾರೆ. ಆಸ್ಟ್ರೇಲಿಯಾದ ಬೆತ್ ಮೂನಿ ಅಗ್ರಸ್ಥಾನದಲ್ಲಿದ್ದಾರೆ.

27 ವರ್ಷ ವಯಸ್ಸಿನ ಸ್ಪಿನ್ನರ್ ದೀಪ್ತಿ ಅವರು ಬೌಲರ್‌ಗಳ ಪಟ್ಟಿಯಲ್ಲಿ ಇಂಗ್ಲೆಂಡ್‌ನ ಸೋಫಿ ಎಕ್ಲೆಸ್ಟೋನ್ ಮತ್ತು ಪಾಕಿಸ್ತಾನದ ಸಾದಿಯಾ ಇಕ್ಬಾಲ್ ನಂತರ ಮೂರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಆಸ್ಟ್ರೇಲಿಯಾದ ಅನಾಬೆಲ್ ಸದರ್ಲೆಂಡ್ ಎರಡು ಸ್ಥಾನ ಬಡ್ತಿ ಪಡೆದು, ಜೀವನ ಶ್ರೇಷ್ಠ ನಾಲ್ಕನೇ ಸ್ಥಾನಕ್ಕೆ ಏರಿದ್ದಾರೆ.

ಆಲ್‌ರೌಂಡರ್‌ಗಳ ಪಟ್ಟಿಯಲ್ಲೂ ದೀಪ್ತಿ ಮೂರನೇ ಸ್ಥಾನದಲ್ಲಿದ್ದಾರೆ. ವೆಸ್ಟ್ ಇಂಡೀಸ್‌ನ ಹೇಯ್ಲಿ ಮ್ಯಾಥ್ಯೂಸ್ ಮತ್ತು ಆಸ್ಟ್ರೇಲಿಯಾದ ಅಮೆಲಿಯಾ ಕೆರ್ ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿದ್ದಾರೆ.